# ಇತಿಹಾಸ

## ಪ್ರಾಚೀನ ಭಾರತ

## ಪ್ರಾಗೈತಿಹಾಸ ಕಾಲದಿಂದ - ಸಿಂಧೂಕೊಳ್ಳದ ನಾಗರೀಕತೆಯೆಡೆಗೆ

- ಭಾರತದಲ್ಲಿ ಪ್ರಾಚೀನ ಮಾನವನ ಅಸ್ತಿತ್ವವನ್ನು ಕ್ರಿ.ಪೂ. 3 ಲಕ್ಷ ಮತ್ತು ಕ್ರಿ.ಪೂ. 2 ಲಕ್ಷ ವರ್ಷಗಳೆಂದು ಗುರ್ತಿಸಲಾಗಿದೆ. ಇದಕ್ಕೆ ಆಧಾರ ಸೋನ್ ನದಿ ಕಣಿವೆ ಮತ್ತು ದಕ್ಷಿಣ ಭಾರತದಲ್ಲಿ ಕಂಡು ಬರುವಂತಹ ಪುರಾತನ ಶಿಲಾಯುಧಗಳು.
- ಪ್ರಪಂಚದ ಎಲ್ಲಾ ಇಂದಿನ ಆಧುನಿಕ ಮಾನವರು ಹೋಮೋಸೇಪಿಯನ್ (Homosapien) ಪಂಗಡಕ್ಕೆ ಸೇರಿದವರು.
- ಕ್ರಿ.ಪೂ. 36,000 ವರ್ಷಗಳ ಹಿಂದೆ ಮೊದಲ ಬಾರಿಗೆ ಹೋಮೋಸೇಪಿಯನ್ ಮಾನವ ಗೋಚರಿಸಿದ.

### ಭಾರತದಲ್ಲಿ ಮಾನವ ಇತಿಹಾಸದ ಸಂಸ್ಕೃತಿಯ ಯುಗಗಳು

- ಪ್ರಾಚೀನ ಶಿಲಾಯುಗ (Paleolithic Age) ಕ್ರಿ.ಪೂ. 3,00000 - 8000)
- ಮಧ್ಯ ಶಿಲಾಯುಗ (Mesolithic Age) ಕ್ರಿ.ಪೂ. 8000 - 4000)
- ನವ ಶಿಲಾಯುಗ (Neolilithic Age) ಕ್ರಿ.ಪೂ. 4,000 - 1,800)
- ಚಾಲ್ಕೊಲಿಥಿಕ್ ಯುಗ (ತಾಮ್ರ ಶಿಲಾಯುಗ) Chalcolilithic ageಕ್ರಿ.ಪೂ. 1800-1000/800
- ಕಬ್ಬಿಣ ಯುಗ (Iron Age) ಕ್ರಿ.ಪೂ. 800ರ ನಂತರ

## ಪ್ರಾಚೀನ ಶಿಲಾಯುಗ

- ಭಾರತದಲ್ಲಿ ಮೊಟ್ಟ ಮೊದಲು ಪ್ರಾಗಿತಿಹಾಸದ ಅಧ್ಯಯನ ಆರಂಭಿಸದವರು ರಾಬರ್ಟ್ ಬ್ರೂಸ್‌ಪೂಟ್ (Bruce Foote) - ಇವರು ಮದ್ರಾಸ್‌ನ ಪಲ್ಲವರಂನಲ್ಲಿ ಪುರಾತನ ಶಿಲಾಯುಗದ ಮಾನವನ ಕೈಕೊಡಲಿಗಳನ್ನು ಪತ್ತೆ ಹಚ್ಚಿದರು.
- ಕರ್ನಾಟಕದ ಬಿಜಾಪುರ ಜಿಲ್ಲೆಯ ಖ್ಯಾಡ ಮತ್ತು ಮಲಪ್ರಭಾ ನದಿ ದಂಡೆ ಮೇಲೆ 1873ರಲ್ಲಿ ಹಳೆ ಶಿಲಾಯುಗದ ನೆಲೆಗಳನ್ನು ಪತ್ತೆ ಹಚ್ಚಿದವರು - ರಾಬರ್ಟ್‌ಬ್ರೂಸ್‌ಪೂಟ್
- ಭಾರತದಲ್ಲಿ ಪ್ರಾಗಿತಿಹಾಸದ ಪಿತಾಮಹ - ರಾಬರ್ಟ್ ಬ್ರೂಸ್ ಪೂಟ್

**ಪ್ರಾಚೀನ ಶಿಲಾಯುಗದ ನೆಲೆಗಳು :**

- ಛೋಟಾನಾಗಪುರ ಪ್ರಸ್ಥಭೂಮಿ
- ಮಿರ್ಜಾಪುರ (ಉತ್ತರ ಪ್ರದೇಶ)
- ಪಹಲ್ಗಾಂ (ಕಾಶ್ಮೀರ)
- ಬಿಯಸ್, ಸಿರ್ಸ - ಘಗ್ಗರ್ (ಹಿಮಾಚಲ ಪ್ರದೇಶ)

- ದಿದ್ವಾನ್, ಬೇಘೂರ್, (ರಾಜಸ್ಥಾನ)
- ಉಮ್ರರೇತಿ, ಸಮದಿಯಾಲ, ಮದುಬನ್ (ಗುಜರಾತ್)
- ಪೈಸ್ರ (ಬಿಹಾರ)
- ಚಂಬಲ್, ಹಥ್ನೂರ್, ಅದಾಂಘರ್, ಬಿಂಬೆಟ್ಕ (ಮಧ್ಯಪ್ರದೇಶ)
- ಆಂಧ್ರದ ಕರ್ನೋಲ್, ಗೋಧಾವರಿ, ಕೃಷ್ಣ ಗುಂತಕಲ್, ಕಡಪ, ನಾಗರ್ಜುನ ಕೊಂಡ
- ಮಹಾರಾಷ್ಟ್ರದ ಬೋರಿ, ಮಹಾಡ್, ನೇವಾಸ, ಬಿರ್ಕಿ

**ಕರ್ನಾಟಕದ ನೆಲೆಗಳು :**

- ಬ್ಯಾಡ, ಅನಗವಾಡಿ, ಸಿಡಲಪಡಿ, ಡಾಣಕಶಿರೂರು, ಮಣ್ಣೇರಿ (ಬಿಜಾಪುರ)
- ಗೋಕಾಕ್, ಸವದತ್ತಿ (ಬೆಳಗಾಂ)
- ಕಿಬ್ಬನಹಳ್ಳಿ, ಬಿಳಿಗೆರೆ (ತುಮಕೂರು)
- ಲಿಂಗದಹಳ್ಳಿ, ಕಡೂರು (ಚಿಕ್ಕಮಗಳೂರು)
- ನಿಟ್ಟೂರು, ಹೊಳಲುಗುಡಿ (ಬಳ್ಳಾರಿ)
- ಹೊಳೆ ಆಲೂರು, ಚೆನ್ನಾಪುರ (ಧಾರವಾಡ)
- ಕರಡಿಗುಡ್ಡ (ಹಾಸನ),
- ಹುಣಸಿಗೆ (ಗುಲ್ಬರ್ಗ) (ಇಲ್ಲಿ 3 ಲಕ್ಷ ವರ್ಷಗಳ ಹಿಂದಿನ ಕಡಾನೆ ಮತ್ತು ಕಾಡು ಬೆಕ್ಕಿನ ಪಳೆಯುಳಿಕೆಗಳು ಸಿಕ್ಕಿವೆ)
- ರಂಗನಾಥಪುರ (ಮೈಸೂರು)
- ನ್ಯಾಮತಿ (ಶಿವಮೊಗ್ಗ)
- ತಾಳ್ಯ, ಜಾನಕಲ್ (ಚಿತ್ರದುರ್ಗ)

**ಹಳೆಶಿಲಾಯುಗದ ನೆಲೆಗಳನ್ನು ಕರ್ನಾಟಕದಲ್ಲಿ ಸಂಶೋಧಿಸಿದವರು**

- ರಾಬರ್ಟ್ ಬ್ರೂಸ್ ಫೂಟ್
- ಮೆಡೋಸ್ ಟೇಲರ್
- ಆರ್.ವಿ. ಜೋಶಿ
- ಎಂ.ಎಸ್. ನಾಗರಾಜರಾವ್
- ಎಂ. ವ್ಹೀಲರ್
- ಶೇಷಾದ್ರಿ
- ಸಂಪತ್ ಅಯ್ಯಂಗಾರ್
- ಪಿ.ಎಸ್. ಅಯ್ಯಂಗಾರ್

**ಪ್ರಮುಖ ಲಕ್ಷಣಗಳು**

- ಶಿಲೆ, ಮರ, ಮೂಳೆಗಳಿಂದ ಆಯುಧಗಳ ತಯಾರಿಕೆ
- ಗುಹೆ, ಬಂಡೆಗಳ ಆಸರೆಗಳಲ್ಲಿ ವಾಸ

- ಕಾಡುಪ್ರಾಣಿಗಳ ಬೇಟೆ, ಕಾಡು ಸಸ್ಯ, ಗೆಡ್ಡೆ ಗೆಣಸುಗಳಿಂದ ಆಹಾರ ಸಂಗ್ರಹಣೆ
- ವಿವಿಧ ಗಾತ್ರದ ಕೈಕೊಡಲಿಗಳು, ಸೀಳುವ ಕಲ್ಲಿನ ಚೂಪಾದ ಆಯುಧಗಳನ್ನು ಅಗ್ನಿಶಿಲೆ, ಜಲಜ ಮತ್ತು ಬೆಣಚುಕಲ್ಲುಗಳಿಂದ ತಯಾರು
- ಮಾನವನ ಈ ಪುರಾತನ ಸಂಸ್ಕೃತಿಯು ಹಿಮಾಲಯದ ಸಿವಾಲಿಕ್ ಪರ್ವತದಿಂದ ದಕ್ಷಿಣದ ತಮಿಳುನಾಡಿನವರೆಗೂ ಹಬ್ಬಿತ್ತು.
- ಗುಹಾಕಲೆ (Cave Art) ಮತ್ತು ಗೃಹಕಲೆ (Home Art)ಗಳ ಬೆಳವಣಿಗೆ
- ಭಾರತದಲ್ಲಿ ಹಳೆಶಿಲಾಯುಗದ ಸಂಸ್ಕೃತಿಯು ರೂಪಗೊಂಡಿದ್ದು - ಪ್ಲಿಯಸ್ಟೋಸಿನ್ ಮಧ್ಯಬಾಗದಲ್ಲಿ
- ಮಾನವ ಬೆಂಕಿ ಉಪಯೋಗ ಕಲಿತ

## ಮಧ್ಯ ಶಿಲಾಯುಗ

**Mesolithick Age - 8,000-4000 BC**

**ನೆಲೆಗಳು :**

- ಮೊರ್ಹಾನ್‌ಪೆಹರ್, ಲೆಖಾಯ (ಉತ್ತರ ಪ್ರದೇಶ)
- ಹಿರ್‌ಪುರ್, ಅಖಜ್, ವಲಸ್ನ, ಲಾಂಗನಾಜ್ (ಗುಜರಾತ್)
- ಬೆಂಬೆಟ್ಕ, ಪುಟ್ಲಿಕರ್, ಆದಂಗಡ, (ಮಧ್ಯಪ್ರದೇಶ)
- ಕೃಷ್ಣಾನದಿ ಕಣಿವೆ
- ಛೋಟಾನಾಗಪುರ (ಮಧ್ಯಭಾರತ)
- ಪಚಾಡ್, ಪಟ್ನಾ (ಮಹಾರಾಷ್ಟ್ರ)
- ತಿಲ್ವಾರ್, ಬಘೋರ್ (ರಾಜಸ್ತಾನ)

**ಕರ್ನಾಟಕದಲ್ಲಿನ ನೆಲೆಗಳು :**

- ಸಂಗನಕಲ್ಲು (ಬಳ್ಳಾರಿ)
- ಬ್ರಹ್ಮಗಿರಿ (ಚಿತ್ರದುರ್ಗ)
- ಜಾಲಹಳ್ಳಿ, ರಾಗಿಗುಡ್ಡ (ಬೆಂಗಳೂರು) (ಇಲ್ಲಿ ಪತ್ತೆ ಹಚ್ಚಿದವರು. ಎಸ್.ಆರ್.ರಾವ್)

**ಲಕ್ಷಣಗಳು :**

- ಸೂಕ್ಷ್ಮ ಶಿಲಾಯುಧಗಳ ಪೂರ್ಣ ಪ್ರಮಾಣದ ಬಳಕೆ
- ಬೆಣಚು ಕಲ್ಲಿಗೆ ಬದಲು ಚಕಚಕಿ ಕಲ್ಲಿನ ಬಳಕೆ
- ಶಿಲಾ ಆಯುಧಗಳಿಗೆ - ದಂತ ಮತ್ತು ಮರದ ಹಿಡಿಕೆಗಳ ಬಳಕೆ (ಸಂಯುಕ್ತ ಆಯುಧಗಳು)
- ಮಣ್ಣಿನಿಂದ ಮಡಿಕೆ-ಕುಡಿಕೆ ತಯಾರಿಸುವ ಕಲೆ ಆರಂಭ
- ಈ ಯುಗದ ಅಂತ್ಯದಲ್ಲಿ ಶವವನ್ನು ಹೂಳುವ ಪದ್ಧತಿ ಆರಂಭ
- ದೇಶದ ಎಲ್ಲಾ ಭಾಗಗಳಿಗೆ ಮಾನವನ ವಲಸೆ
- ಬಂಡೆ, ಗುಹೆಗಳಲ್ಲಿ ಚಿತ್ರರಚನೆ, ಅರೆಯುವ ಕಲ್ಲಿನ ಬಳಕೆ.

# ನವಶಿಲಾಯುಗ

**Neolithic Age) ಕ್ರಿ.ಪೂ. 4000-1,800**

**ನೆಲೆಗಳು :**

❖ ಮೆಹರ್‌ಘರ್ (ಬಲೂಚಿಸ್ತಾನ್)
❖ ಕಾಶ್ಮೀರ ಕಣಿವೆ
❖ ವಿಂದ್ಯ ಪರ್ವತ
❖ ಪತ್‌ಪಾಡು, ಕೇಸರಪಲ್ಲಿ, ನಾಗಾರ್ಜುನ ಕೊಂಡ (ಆಂಧ್ರಪ್ರದೇಶ)
❖ ಪಯ್ಯಂಪಳ್ಳಿ, ಗೌರಿಮೇಡು, ಮಂಗಲು (ತಮಿಳುನಾಡು)

**ಕರ್ನಾಟಕದಲ್ಲಿನ ನೆಲೆಗಳು :**

❖ ಲಿಂಗಸಗೂರು (ರಾಯಚೂರು ಜಿಲ್ಲೆ) - ಭಾರತದಲ್ಲಿ ಮೊದಲು ಗಮನಿಸಿದ ನೂತನ ಶಿಲಾಯುಗದ ನೆಲೆ ಇದು - 1842ರಲ್ಲಿ ಡಾ. ಪ್ರೈಮ್‌ರೋಸ್ (Primrose)ರವರಿಂದ ಶೋಧನೆಯಾಯಿತು.
❖ ಸಂಗನಕಲ್ಲು, ತೆಕ್ಕಲಕೋಟೆ (ಬಳ್ಳಾರಿ)
❖ ಚಂದ್ರವಳ್ಳಿ, ಬ್ರಹ್ಮಗಿರಿ (ಚಿತ್ರದುರ್ಗ)
❖ ಟಿ. ನರಸೀಪುರ, ಹೆಮ್ಮಿಗೆ (ಮೈಸೂರು)
❖ ಬನಹಳ್ಳಿ (ಕೋಲಾರ)
❖ ಹಳ್ಳೂರು (ಧಾರವಾಡ)

**ಲಕ್ಷಣಗಳು :**

❖ ಹರಿತವಾದ, ನುಣಪಾದ ಹೊಳಪುಳ್ಳ ಆಯುಧಗಳ ಬಳಕೆ
❖ ಮೂಳೆಗಳಿಂದ ಆಯುಧಗಳ ರಚನೆ
❖ ಕೃಷಿ ಆಧಾರಿತ ಬದುಕು ಆರಂಭ (ಸ್ಥಿರಜೀವನ)
❖ ಪ್ರಾಣಿಗಳನ್ನು ಪಳಗಿಸುವ ಕಲೆ ಪ್ರಾರಂಭ, ನಾಯಿ, ಹಸು, ಕುರಿ, ಆಡು ಇತ್ಯಾದಿ
❖ ಕ್ರಿ.ಪೂ. 6000ದ ವೇಳೆಗೆ - ಭಾರತ ಉಪಖಂಡದಲ್ಲಿ ಭತ್ತ ಬಾರ್ಲಿ, ಗೋಧಿ, ಆಹಾರ ಧಾನ್ಯ ಬೆಳೆಯುವ ಕಲೆ ಪ್ರಾರಂಭವಾಯಿತು.
❖ ಸಾಮೂಹಿಕ ವಾಸದಿಂದಾಗಿ ಹಳ್ಳಿಗಳ ರಚನೆ ಪ್ರಾರಂಭ
❖ ಚಕ್ರದ ಸಹಾಯದಿಂದ ಮಣ್ಣಿನಿಂದ ಮಡಕೆ ಮಾಡುವ ಕಲೆ ಆರಂಭ
❖ ಕಪ್ಪು, ಕೆಂಪು, ಬೂದು ಬಣ್ಣದ ಮಣ್ಣಿನ ಮಡಿಕೆಗಳು ದೊರೆತಿವೆ. ಮಡಿಕೆಗಳ ಮೇಲೆ ಚಿತ್ರ ಬಿಡಿಸಲಾಗುತ್ತಿತ್ತು.
❖ ಪುನರ್‌ಜನ್ಮದಲ್ಲಿ ನಂಬಿಕೆ ಬೆಳೆಯಿತು. ಮನುಷ್ಯನೊಡನೆ ಸಾಕು ನಾಯಿಯನ್ನು ಊಳಲಾಗುತ್ತಿತ್ತು.
❖ ತಮಿಳುನಾಡಿನ ತಿರುನಲ್ವೇಲಿಯ ಆದಿಚನ್ನಯೂರಿನಲ್ಲಿ 14 ಎಕರೆ ವಿಸ್ತಾರವಾದ ದೊಡ್ಡದಾದ ನೂತನ ಶಿಲಾಯುಗದ ಸಮಾಧಿ ದೊರೆತಿದೆ.

## ಚಾಲ್ಕೊಲಿಥಿಕ್ ಯುಗ (ತಾಮ್ರ-ಶಿಲಾಯುಗ)

- ❖ ಈ ಸಂಸ್ಕೃತಿಯನ್ನು ಮಹಾರಾಷ್ಟ್ರದ ಜೋರ್ವೆಯಲ್ಲಿ (1950) ಮೊದಲ ಬಾರಿಗೆ ಪತ್ತೆ ಹಚ್ಚಲಾಯಿತು.
- ❖ ಕಲ್ಲಿನ ಬ್ಲೇಡುಗಳು ಮತ್ತು ತಾಮ್ರದ ಉಪಕರಣಗಳ ಬಳಕೆ
- ❖ ಬಣ್ಣದ ಮಡಿಕೆಗಳ ರಚನೆ ಸಾಮಾನ್ಯವಾಯಿತು.
- ❖ ಈ ಸಂಸ್ಕೃತಿಯ ಸ್ಥಳೀಯ ಹೆಸರುಗಳು - ಜೋರ್ವೆ ಸಂಸ್ಕೃತಿ, ಮಾಳ್ವ ಸಂಸ್ಕೃತಿ, ಕಯಾತ ಸಂಸ್ಕೃತಿ, ಆಹಾರ ಸಂಸ್ಕೃತಿ.
- ❖ ಈ ಯುಗದ ತಾಮ್ರದ ಕತ್ತಿಗಳು ಗಂಗಾನದಿ ಬಯಲಿನ ಪತೇಘರ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ.
- ❖ ಕೃಷಿ ಮತ್ತು ಪಶುಸಂಗೋಪನೆ ಮುಖ್ಯ ಕಸುಬು
- ❖ ಹತ್ತಿ ಬೆಳೆಯುವುದನ್ನು ಕಲಿತರು.
- ❖ ನವಡ್‌ತೋಲ ಎಂಬ ಪ್ರದೇಶದಲ್ಲಿನ ದೊರೆತಿರುವ ಅವಶೇಷಗಳಿಂದ ಎಲ್ಲಾ ರೀತಿಯ ಆಹಾರಧಾನ್ಯ ಬೆಳೆಯುತ್ತಿದ್ದರೆಂದು ತಿಳಿದುಬರುತ್ತದೆ.
- ❖ ಹಸಿ ಇಟ್ಟಿಗೆಗಳಿಂದ ಮನೆ ನಿರ್ಮಿಸುತ್ತಿದ್ದರು.

**ನೆಲೆಗಳು :**

- ❖ ಜೋರ್ವೆ, ಇನಾಮಗಾಮ್, ದೈಮಾಬಾದ್ (ಮಹಾರಾಷ್ಟ್ರ)
- ❖ ಆಂಧ್ರಪ್ರದೇಶದ ಉತ್ತರಭಾಗ
- ❖ ಗಂಗಾನದಿ ಬಯಲಿನ ಅಲಹಾಬಾದ್ - ಪಾಟ್ನ
- ❖ ಪಶ್ಚಿಮ ಮಧ್ಯಪ್ರದೇಶ
- ❖ ಆಗ್ನೇಯ ರಾಜಸ್ಥಾನ ಭಾಗಗಳು

## ಸಿಂಧೂನಾಗರಿಕತೆ

- ❖ ಪ್ರಪಂಚದ ಅತಿದೊಡ್ಡ ನಾಗರೀಕತೆ (ಪ್ರಾಚೀನ ಈಜಿಪ್ಟ್ ನಾಗರೀಕತೆಗಿಂತ 20 ಪಟ್ಟು ದೊಡ್ಡದು)
- ❖ ಕ್ರಿ.ಶ. 1826 ಈ ನಾಗರೀಕತೆಯ ಮೊದಲ ಕುರುಹುಗಳನ್ನು (ಪ್ರಾಚೀನ ಸುಟ್ಟ ಇಟ್ಟಿಗೆಗಳು) ಮೊದಲ ಬಾರಿಗೆ ಹರಪ್ಪ ನೆಲೆಯಲ್ಲಿ ಗುರ್ತಿಸಿದವರು - ಬ್ರಿಟಿಷ್ ಪ್ರವಾಸಿಗ ಚಾರ್ಲ್ಸ್ ಮೆರ್ಸನ್
- ❖ ಕ್ರಿ.ಶ. 1831-34 ಪಂಜಾಬಿನ ಮಹಾರಾಜ ರಣಜಿತ್ ಸಿಂಗ್‌ನನ್ನು ಸಂದರ್ಶಿಸಲು ಹೋಗುವಾಗ ಹರಪ್ಪದಲ್ಲಿ ಕೋಟೆಯ ಅವಶೇಷಗಳನ್ನು ಗುರ್ತಿಸಿದವನು - ಕರ್ನಲ್ ಬರ್ನ್ಸ್
- ❖ ಕ್ರಿ.ಶ. 1853 & 54 ಅಲೆಕ್ಸ್ಯಾಂಡರ್ ಕನ್ನಿಂಗ್ ಹ್ಯಾಮ್ ಎರಡು ಬಾರಿ ಹರಪ್ಪ ನೆಲೆಯನ್ನು ಸಂಶೋಧಿಸಿದ.
- ❖ ಕ್ರಿ.ಶ. 1856 ಈ ನಾಗರೀಕತೆಯ ಸುಟ್ಟ ಇಟ್ಟಿಗೆಗಳ ಅವಶೇಷಗಳನ್ನು ಕರಾಚಿಯಿಂದ ಲಾಹೋರ್‌ಗೆ ರೈಲ್ವೆ ಹಳಿ ನಿರ್ಮಾಣದ ವೇಳೆ ಎತೇಚ್ಛವಾಗಿ ಗೋಚರವಾಯಿತು.
- ❖ ಕ್ರಿ.ಶ. 1862 ಪ್ರಾಚ್ಯ ವಸ್ತು ಸಂಶೋಧಕ ಅಲೆಕ್ಸ್ಯಾಂಡರ್ ಕನ್ನಿಂಗ್ ಹ್ಯಾಂ - ಪಶ್ಚಿಮ ಪಂಜಾಬಿನಲ್ಲಿ ಶೋಧನೆ ಕೈಗೊಂಡನು.
- ❖ ಕ್ರಿ.ಶ. 1906 ಪ್ರಥಮ ಡೈರೆಕ್ಟರ್ ಸರ್ ಜಾನ್ ಮಾರ್ಷಲ್ ನೇತೃತ್ವದಲ್ಲಿ ಪ್ರಾಕ್ತನ ಇಲಾಖೆ ಸ್ಥಾಪನೆ.

- ಕ್ರಿ.ಶ. 1921 ದಯಾರಾಂ ಸಹಾನಿಯವರಿಂದ ಪ್ರಥಮ ಬಾರಿಗೆ ಹರಪ್ಪ ನೆಲೆ ಪತ್ತೆ ಹಚ್ಚಲಾಯಿತು.
- ಕ್ರಿ.ಶ. 1922 ಆರ್.ಡಿ. ಬ್ಯಾನರ್ಜಿಯವರಿಂದ ಮೆಹೆಂಜೊದಾರೋ ನೆಲೆ ಸಂಶೋಧನೆ
- ಕ್ರಿ.ಶ. 1924 ಸರ್ ಜಾನ್ ಮಾರ್ಷಲ್‌ರವರು ಸಂಶೋಧನಾ ಪ್ರಬಂಧವನ್ನು ಬರೆದು ಲಂಡನ್ ನ್ಯೂಸ್ ಮತ್ತು ಇಲ್‌ಸ್ಟ್ರೇಟೆಡ್ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಜಗತ್ತಿಗೆ ಸಿಂಧೂ ನಾಗರೀಕತೆಯ ಪರಿಚಯವಾಯಿತು. ಇದುವರೆಗೆ ಪ್ರಾಚೀನ ಭಾರತದ ಇತಿಹಾಸವು ಆರ್ಯರ ಆಗಮನದ ನಂತರವೇ ಪ್ರಾರಂಭವಾಗಿದೆ. ಎಂಬ ನಂಬಿಕೆ ಸುಳ್ಳಾಯಿತು. ಪ್ರಾಚೀನ ಭಾರತದ ಇತಿಹಾಸ ಈ ನಾಗರೀಕತೆಯ ಪರಿಚಯದಿಂದ ಕ್ರಿ.ಪೂ. 3000 ವರ್ಷಗಳ ಹಿಂದಕ್ಕೆ ಹೋಯಿತು.

**ಸಿಂಧೂ ನಾಗರೀಕತೆಯ ಕಾಲ**

**(ಸಾಮಾನ್ಯ ಅಭಿಪ್ರಾಯ ಕ್ರಿ.ಪೂ. 2300-1750)**

| | | |
|---|---|---|
| ❖ ಸರ್ ಜಾನ್ ಮಾರ್ಷಲ್ ಪ್ರಕಾರ | - | ಕ್ರಿ.ಪೂ. 3250-2750 |
| ❖ ಮಾರ್ಟಿಮರ್ ವ್ಹೀಲರ್ ಪ್ರಕಾರ | - | ಕ್ರಿ.ಪೂ. 2500-1700 |
| ❖ ಇ. ಮ್ಯಕೆರವರ ಪ್ರಕಾರ | - | ಕ್ರಿ.ಪೂ. 2800-2500 |
| ❖ ಎಂ.ಎಸ್. ವತ್ಸ ಪ್ರಕಾರ | - | ಕ್ರಿ.ಪೂ. 3500-2500 B.C. |
| ❖ ಜಾರ್ಜ್ ಎಫ್. ಡೇಲ್ಸ್ ಪ್ರಕಾರ | - | ಕ್ರಿ.ಪೂ. 2500-1200 |
| ❖ ರೇಡಿಯೋ ಕಾರ್ಬನ್ ಕಾಲ ನಿರ್ಣಯದ ಪ್ರಕಾರ | - | ಕ್ರಿ.ಪೂ. 2300-1750 |
| ❖ ಎ.ಡಿ. ಪುಸಲ್ಕರ್‌ರವರ ಪ್ರಕಾರ | - | ಕ್ರಿ.ಪೂ. 2800-2200 |
| ❖ ಆರ್.ಎಸ್. ಶರ್ಮಾ ಪ್ರಕಾರ | - | ಕ್ರಿ.ಪೂ. 175 |

**ಸಿಂಧುನಾಗರೀಕತೆಯ ಪ್ರಮುಖ ನಿವೇಶನಗಳು ಮತ್ತು ಸಂಶೋಧಕರು**

| | | | | |
|---|---|---|---|---|
| ❖ 1921 | - | ಹರಪ್ಪ | - | ಡಾ. ದಯರಾಂ ಸಹಾನಿ |
| ❖ 1922 | - | ಮಹೆಂಜೋದಾರೋ | - | ಆರ್.ಡಿ. ಬ್ಯಾನರ್ಜಿ |
| ❖ 1927 | - | ಸೂತ್ಕಜೆಂಡರ್ | - | ಅರ್ವೆಲ್ ಸ್ಪೇನ್ |
| ❖ 1931 | - | ಚಾನ್ಹುದಾರೋ | - | ಎನ್.ಜಿ. ಮಜುಂದಾರ್ ಮತ್ತು ಮ್ಯಾಕೆ |
| ❖ 1953 | - | ರಂಗಪುರ | - | ಎಂ.ಎಸ್. ವತ್ಸ |
| ❖ 1953 | - | ಕಾಲಿಬಂಗನ್ | - | ಬಿ.ಬಿ. ಲಾಲ್ |
| ❖ 1955 | - | ಕೋಟ್‌ಡಿಟಿ | - | ಫಜಲ್ ಅಹ್ಮದ್ |
| ❖ 1955-56 | - | ರೂಪಾರ್ | - | ವೈ.ಡಿ. ಶರ್ಮ |
| ❖ 1957 | - | ಲೋಥಾಲ್ | - | ಎಸ್.ಆರ್. ರಾವ್ |
| ❖ 1958-59 | - | ಅಲಂಗಿರ್‌ಪುರ | - | ವೈ.ಡಿ. ಶರ್ಮ |
| ❖ 1972 | - | ಸುರ್ಕೊತ್ಡಾ | - | ಜಗಪತಿ ಜೋಶಿ |
| ❖ 1973-74 | - | ಬನವಾಲಿ | - | ಆರ್.ಎಸ್. ಬಿಸ್ತ್ |
| ❖ 1973-74 | - | ದೊಲವೀರ | - | ಆರ್.ಎಸ್. ಬಿಸ್ತ್ |

**ಪಾಕಿಸ್ತಾನದಲ್ಲಿರುವ ಪ್ರಮುಖ ನಿವೇಶನಗಳು**

| | |
|---|---|
| ❖ ಹರಪ್ಪ | ಮಹೆಂಜೋದಾರೋ |
| ❖ ಚಾನ್ಹುದಾರೋ | ಕೋಟ್‌ಡಿಜಿ |
| ❖ ಅಮ್ರಿ | ಸೂತ್ಕಜೆಂಡರ್ |
| ❖ ಅಲ್ಲದಿನೋ | ಬಾಲಕೋಟ್ |

**ಭಾರತದಲ್ಲಿರುವ ಸಿಂಧೂ ನಾಗರೀಕತೆಯ ಪ್ರಮುಖ ನಿವೇಶನಗಳು**

| | |
|---|---|
| ❖ ಲೋಥಾಲ್ (ಗುಜರಾತ್) | ರಂಗಪುರ (ಗುಜರಾತ್) |
| ❖ ರೋಜ್ಡಿ (ಗುಜರಾತ್) | ದೆಸಾಲ್ಪುರ (ಗುಜರಾತ್) |
| ❖ ದೊಲವೀರ (ಗುಜರಾತ್) | ಸುತ್ಕೋಟನಾ (ಗುಜರಾತ್) |
| ❖ ಕಾಲಿಬಂಗನ್ (ರಾಜಸ್ತಾನ್) | ರೂಪಾರ್ (ಪಂಜಾಬ್) |
| ❖ ಅಲಂಗಿರ್ ಪುರ (ಉತ್ತರಪ್ರದೇಶ) | ಬನವಾಲಿ (ಹರಿಯಾಣ) |

**ನದಿ ದಂಡೆಯಲ್ಲಿರುವ ಸಿಂಧೂ ಸಂಸ್ಕೃತಿಯ ಪ್ರಮುಖ ನಿವೇಶನಗಳು**

| | | |
|---|---|---|
| ❖ ಹರಪ್ಪ | - | ರಾವಿ ನದಿ ಎಡದಂಡೆ |
| ❖ ಮಹೆಂಜೋದಾರೋ | - | ಸಿಂಧೂ ನದಿ ಬಲದಂಡೆ |
| ❖ ಚಾನ್ಹುದಾರೋ | - | ಸಿಂಧೂ ನದಿ ಎಡದಂಡೆ |
| ❖ ಅಮ್ರಿ | - | ಸಿಂಧೂ ನದಿ ಬಲದಂಡೆ |
| ❖ ಕೋಟ್‌ಡಿಜಿ | - | ಸಿಂಧೂ ನದಿ ಎಡದಂಡೆ |
| ❖ ಮಾಂಡೌ | - | ಚೀನಾಬ್ ನದಿ |
| ❖ ರೂಪಾರ್ | - | ಸಟ್ಲೇಜ್ |
| ❖ ಲೋಥಾಲ್ | - | ಭೋಗಾವ |
| ❖ ರೋಜ್‌ಡಿ | - | ಬಾಥರ್ |
| ❖ ಕಾಲಿಬಂಗನ್ | - | ಗಘ್ಘರ್-ಹಕ್ರ (ಸರಸ್ವತಿ) |
| ❖ ಬನವಾಲಿ | - | ಗಘ್ಘರ್-ಹಕ್ರ |
| ❖ ಅಲಂಗಿರ ಪುರ | - | ಹಿಂದೋನ್ |
| ❖ ರಂಗಪುರ | - | ಮೀದರ್ |

**ಸಿಂಧೂ ನಾಗರೀಕತೆಯ ಪ್ರಮುಖ ಕಟ್ಟಡಗಳು**

| | | |
|---|---|---|
| ❖ ಬೃಹತ್ ಈಜುಕೊಳ | - | ಮಹೆಂಜೋದಾರೋ |
| ❖ ಬೃಹತ್ ಉಗ್ರಾಣಗಳು | - | ಹರಪ್ಪ, ಮಹೆಂಜೋದಾರೋ |
| ❖ ಹಡಗು ಕಟ್ಟೆ | - | ಲೋಥಾಲ್ |

- ಕಾಲೇಜು ಕಟ್ಟಡ ಮತ್ತು ಅಸೆಂಬ್ಲಿ ಹಾಲ್ - ಮಹೆಂಜೋದಾರೋ
- ಅರಮನೆ/ದೇವಸ್ಥಾನದಂತಿರುವ ಕಟ್ಟಡ - ಮೆಹೆಂಜೋದಾರೋ
- ಕಾರ್ಮಿಕರ ವಸತಿಗೃಹ - ಹರಪ್ಪ

**ಸಿಂಧೂ ನಾಗರೀಕತೆಯ ನಿರ್ಮಾಪಕರು - ವಿವಿಧ ಜನಾಂಗಗಳು**

- ಪ್ರೋಟೋ - ಅಸ್ಟ್ರೋಲಾಯ್ಡ್
- ಮೆಡಿಟರೇನಿಯನ್
- ಆಲ್ಪಿನಾಯ್ಡ್
- ಮಂಗೋಲಾಯ್ಡ್

**ಸಿಂಧೂ ನಾಗರೀಕತೆ ವ್ಯಾಪ್ತಿ**

- ವ್ಯಾಪ್ತಿಯಲ್ಲಿ ತ್ರಿಕೋನಕೃತಿಯಲ್ಲಿದೆ.
- ಪಂಜಾಬ್, ಹರಿಯಾಣ, ಸಿಂದ್, ಬಲೂಚಿಸ್ತಾನ, ಗುಜರಾತ್ ರಾಜಸ್ಥಾನ ಪಶ್ಚಿಮ ಉತ್ತರ ಪ್ರದೇಶ, ಮತ್ತು ಉತ್ತರ ಮಹಾರಾಷ್ಟ್ರದ ಭಾಗಗಳು ಇದರ ವ್ಯಾಪ್ತಿಗೆ ಒಳಪಟ್ಟಿದೆ.
- ಪಶ್ಚಿಮತುದಿ-ಸೂಕ್ತ ಜೆಂಡೂರ್ (ಬಲುಚಿಸ್ಥಾನ)
- ಪೂರ್ವದತುದಿ-ಅಲಂಗಿರ್‌ಪರ (ಮೀರತ್ ಉತ್ತರ ಪ್ರದೇಶ)
- ಉತ್ತರದ ತುದಿ-ಮಾಂಡ (ಜಮ್ಮುವಿನ ಅಖಿನೂರು ಜಿಲ್ಲೆ)
- ದಕ್ಷಿಣ ತುದಿ-ದೈಮಾಬಾದ್ (ಮಹಾರಾಷ್ಟ್ರ)
- ಈಜಿಪ್ಟ ನಾಗರೀಕತೆಗಿಂತ ಇಪ್ಪತ್ತು ಪಟ್ಟು ಹಾಗೂ ಮೆಸಪಟೋಮಿಯ ಮತ್ತು ಈಜಿಪ್ಟ್‌ಗಳೆರಡು ಹನ್ನೆರಡುಪಟ್ಟು ವಿಸ್ತಾರವಾದುದು.

  ಒಟ್ಟು ವಿಸ್ತೀರ್ಣ 12,99,600 ಚ.ಕಿ.ಮೀ.

  ಪೂರ್ವ-ಪಶ್ಚಿಮ ಅಂತರ 1600 ಕಿ.ಮೀ.

  ಉತ್ತರ-ದಕ್ಷಿಣ ಅಂತರ 1,100 ಕಿ.ಮೀ.

**ಪ್ರಮುಖ ನಿವೇಶನಗಳು ಮತ್ತು ಅವುಗಳ ಮಹತ್ವ :**

- 1500ಕ್ಕೂ ಹೆಚ್ಚು ನಿವೇಶನಗಳು ಪತ್ತೆಯಾಗಿದೆ.

**1. ಹರಪ್ಪ :**

- ಪಾಕಿಸ್ತಾನದ ಪಂಜಾಬ್‌ನ ಮಾಂಟಿಗೊಮರಿ ಜಿಲ್ಲೆಯಲ್ಲಿ ರಾವಿನದಿ ಎಡದಂಡೆ ಮೇಲಿದೆ.
- ಮೊದಲಬಾರಿಗೆ ಪತ್ತೆಯಾದ ನಿವೇಶನ (1921 ದಯರಾಂ ಸಹಾನಿ)
- ಹರಪ್ಪ ನೆಲೆಯ ಇತರೆ ಸಂಶೋಧಕರು - ಎಂ.ಎಸ್. ವತ್ಸ, ಕೆ.ಎನ್. ದೀಕ್ಷಿತ್, ಮಾರ್ಟಿಮರ್ ವ್ಹೀಲರ್, ಆರ್.ಎಚ್. ಮೆಡೋ.
- ಹೆಚ್. ಮಾದರಿ ಸಮಾದಿಗಳು ಕಂಡು ಬರುತ್ತದೆ.
- ಬೃಹತ್ ಉಗ್ರಾಣಗಳು ಕಂಡುಬರುತ್ತದೆ.
- ಕಾರ್ಮಿಕ ವಸತಿ ಗೃಹಗಳು ಕಂಡು ಬರುತ್ತದೆ.

**2. ಮೆಹೆಂಜೋದಾರೋ :**

- ❖ ಪಾಕಿಸ್ತಾನದ ಸಿಂದ್ ಪ್ರಾಂತ್ಯದ ಲರ್ಕಾನ ಜಿಲ್ಲೆಯಲ್ಲಿ ಸಿಂಧೂನದಿ ಬಲದಂಡೆ ಮೇಲಿದೆ.
- ❖ ಆರ್.ಡಿ. ಬ್ಯಾನರ್ಜಿಯಿಂದ 1922ರಲ್ಲಿ ಸಂಶೋಧನೆ, ಇತರೆ ಸಂಶೋಧಕರು, ಸರ್ ಜಾನ್-ಮಾರ್ಷಲ್, ಮ್ಯಾಕೆ. ಮಾ. ವ್ಹೀಲರ್, ಜಾರ್ಜ್ ಎಫ್ ಡೇಲ್ಸ್
- ❖ ಸಿಂಧೂ ನಾಗರಿಕತೆಯ ಬೃಹತ್ ನಿವೇಶನ.
- ❖ ಅತಿ ಹೆಚ್ಚು ಜನಸಂಖ್ಯೆಯ ನಗರ ಇದಾಗಿದೆ. (35-40ಸಾವಿರ)
- ❖ ಬೃಹತ್ ಸ್ನಾನ ಕೊಳ ಕಂಡು ಬರುವುದು.
- ❖ ಕಂಚಿನ ನೃತ್ಯ ಭಂಗಿಯ ಮೂರ್ತಿ ಕಂಡುಬರುವುದು.
- ❖ ಹತ್ತಿಯ ಅವಶೇಷ ದೊರೆತಿದೆ.
- ❖ ಅತ್ಯುತ್ತಮ ಒಳಚರಂಡಿ ವ್ಯವಸ್ಥೆ ಕಂಡು ಬರುವುದು.
- ❖ ಸೈನಿಕರ ದಾಳಿಯಿಂದ ಜನರು ಸತ್ತಂತಹ ಅವಶೇಷಗಳು ದೊರೆತಿದೆ.
- ❖ ಪೀಪಾಯಿ ಆಕಾರದ ಮೂರು ಮೆಸಪೊಟೋಮಿಯ ಮುದ್ರೆಗಳು ದೊರೆತಿದೆ.
- ❖ ಇದರ ಅರ್ಥ ಸತ್ತವರ ದಿಬ್ಬ
- ❖ ಬೃಹತ್ ಉಗ್ರಾಣ ಕಂಡು ಬರುವುದು

**3. ಲೋಥಾಲ್ :**

- ❖ ಗುಜರಾತಿನಲ್ಲಿ ಬೋಗಾವ ನದಿಯ ದಂಡೆ ಮೇಲಿದೆ.
- ❖ ಎಸ್.ಆರ್. ರಾವ್‌ರವರಿಂದ 1957ರಲ್ಲಿ ಶೋಧನೆ.
- ❖ ಬೃಹತ್ ಹಡಗು ಕಟ್ಟೆ (Dark Yard) ಕಂಡು ಬರುವುದು.
- ❖ ಮನೆಯ ದ್ವಾರಗಳು ಮುಖ್ಯ ಬೀದಿಯ ಕಡೆ ತೆರೆದಿದೆ.
- ❖ ಯಜ್ಞ ಕುಂಡಗಳು ದೊರೆತಿದೆ.
- ❖ ಭತ್ತದ ಹೊಟ್ಟು ದೊರೆತಿದೆ.
- ❖ ಕಂಚಿನ ಸರಳು ಮತ್ತು ಅಳತೆ ಗುರುತಿನ ವಸ್ತು ದೊರೆತಿದೆ.
- ❖ ಲೋಥಾಲ್ ಕೂಡ ಸತ್ತವರ ದಿಬ್ಬ ಎಂಬ ಅರ್ಥವನ್ನು ಕೊಡುತ್ತದೆ.
- ❖ ಪಂಚತಂತ್ರ ಕಥೆಯನ್ನು ಹೇಳುವ ನದಿಯ ಚಿತ್ರವಿರುವ ಮಡಿಕೆ ದೊರೆತಿದೆ.
- ❖ ಸತಿ-ಪದ್ಧತಿ ನೆನಪಿಸುವ ಗಂಡ ಹೆಂಡತಿ ಜೋಡಿ ಸಮಾಧಿ ಇಲ್ಲಿದೆ.

**4. ಚೌನ್ಹುದಾರೋ :**

- ❖ ಸಿಂಧೂ ನದಿ ಎಡದಂಡೆ ಮೇಲಿರುವ ಇದನ್ನು 1931ರಲ್ಲಿ ಎನ್. ಮಜುಂದಾರ್ ಶೋಧಿಸಿದರು.
- ❖ ಮಸಿಕುಡಿಕೆ ದೊರೆತಿದೆ.
- ❖ ಇದು ಕೋಟೆಯಿಂದ ಆವೃತ್ತವಾಗದೇ ಇರುವ ಏಕೈಕನಗರ.
- ❖ ನಟರಾಜನ ವಿಗ್ರಹದಂತಹ ನಗ್ನ ಪುರುಷನ ಚಿತ್ರದ ಅವಶೇಷ ದೊರೆತಿದೆ.

**5. ಕಾಲಿಬಂಗನ್ :**

- ರಾಜಸ್ಥಾನದಲ್ಲಿ ಕಂಡು ಬರುವುದು
- ಒಂಟೆಯ ಎಲುಬುಗಳು ದೊರೆತಿದೆ.
- ನೇಗಿಲಿನಿಂದ ಉಳುಮೆ ಮಾಡಿರುವ ಪ್ರಥಮನಿದರ್ಶನ
- ಯಜ್ಞ ಕುಂಡಗಳಿವೆ.
- ಮಾತೃದೇವತೆಯ 'ಟೆರ್ರಾಕೋಟ' ಪ್ರತಿಮೆಗಳು ಇಲ್ಲಿ ಕಂಡುಬರುತ್ತದೆ.

## ವೇದಗಳ ಕಾಲದ ನಾಗರೀಕತೆ

- ನಿರ್ಮಾಪಕರು - ಆರ್ಯರು

**ಆರ್ಯರ ಮೂಲದ ಬಗೆಗಿನ ವಿಭಿನ್ನ ಹೇಳಿಕೆಗಳು :**

- **ಫಿಲಿಪ್ಪೋಸ ಶೆಟ್ಟಿ ಪ್ರಕಾರ** - ಯುರೋಪ್ ಆರ್ಯರ ಮೂಲಸ್ಥಾನ
- **ಡಾ. ಪಿ. ಗೈಲ್ಸ್ ಮತ್ತು ಪ್ರೊ. ಮ್ಯಾಕ್‌ಡೊನೆಲ್ ಪ್ರಕಾರ** - ಹಂಗೇರಿ ಮೂಲಸ್ಥಾನ
- **ಬಾಲಗಂಗಾಧರ ತಿಲಕ್ ಪ್ರಕಾರ** - ಉತ್ತರ ಧ್ರುವ ಪ್ರದೇಶ ಅಥವಾ ಆರ್ಕ್ಟಿಕ್ ಪ್ರದೇಶ
- **ಸ್ವಾಮಿ ದಯಾನಂದ ಸರಸ್ವತಿ ಪ್ರಕಾರ** - ಟಿಬೆಟ್ ಆರ್ಯರ ಮೂಲ
- **ನೆಹರಿಂಗ್, ಬ್ರಾಂಡೆನ್ ಸ್ಟೈನ್, ಮೊಲ್ಲಾರ್, ಪೊಪರ್ನೈನ್, ಷ್ಕೋಯೆಡರ್ - ಡಾ. ಬಿ.ಕೆ. ಘೋಷ್ ಮುಂತಾದವರ ಪ್ರಕಾರ** - ದಕ್ಷಿಣ ರಷ್ಯಾದ ಸ್ಟೆಪ್ಪಿ ಹುಲ್ಲುಗಾವಲು ಪ್ರದೇಶ
- **ಜರ್ಮನಿಯ ಹೆಸರಾಂತ ವಿದ್ವಾಂಸ ಮ್ಯಾಕ್ಸ್ ಮುಲ್ಲರ್ ಪ್ರಕಾರ** - ಮಧ್ಯ ಏಷ್ಯಾ ಆರ್ಯರ ಮೂಲಸ್ಥಾನ

**ಕಾಲ :**

- ಕ್ರಿ.ಪೂ. 2000-1500 ಭಾರತಕ್ಕೆ ಆರ್ಯರು ಆಗಮಿಸಿದ್ದು.
- ಋಗ್ವೇದದ ಕಾಲ (ಪೂರ್ವ ವೇದಗಳ ಕಾಲ) - ಕ್ರಿ.ಪೂ. 1500-1000
- ನಂತರ ವೇದಗಳ ಕಾಲ (ಉತ್ತರ ವೇದಗಳ ಕಾಲ) - ಕ್ರಿ.ಪೂ. 1000-600
- ರಾಮಾಯಣ ಕಾಲ - ಕ್ರಿ.ಪೂ. 1500-600 (ಡಾ. ಆರ್.ಕೆ. ಮುಖರ್ಜಿ ಪ್ರಕಾರ)

**ಮುಖ್ಯಾಂಶಗಳು :**

- ಇದೊಂದು ಗ್ರಾಮೀಣ ನಾಗರೀಕತೆ
- ಆರ್ಯರು ಬಂದು ಮೊದಲು ನೆಲೆಸಿದ ಪ್ರದೇಶ - ಬ್ರಹ್ಮಾವರ್ತ ಅಥವಾ ಸಪ್ತಸಿಂಧು ಪ್ರದೇಶ (ಪಂಜಾಬ್, ಕಾಶ್ಮೀರ, ಸಿಂಧ್, ಕಾಬೂಲ್, ಗಾಂಧಾರ)
- ಆರ್ಯರ ಸಂಸ್ಕೃತಿಯನ್ನು ಬೂದು ಬಣ್ಣದ ಮಡಿಕೆಗಳ ಸಂಸ್ಕೃತಿ (PGW) ಎನ್ನುವರು.
- PGW ಸಂಸ್ಕೃತಿಯ ನಿವೇಶನಗಳು ಗಂಗಾ ಕಣಿವೆಯ ಪಶ್ಚಿಮಾರ್ಧ ಭಾಗದಲ್ಲಿ ಸಿಕ್ಕಿವೆ.

- ಏಷ್ಯಾ ಮೈನರ್‌ನಲ್ಲಿರುವ ಬೋಗಜ್‌ಕಾಯ್ ಶಾಸನ (ಕ್ರಿ.ಪೂ. 1400)ರಲ್ಲಿ ಉಲ್ಲೇಖಿಸಲಾಗಿರುವ ಆರ್ಯರ ದೇವತೆಗಳು - ಇಂದ್ರ, ಮಿತ್ರ, ವರುಣ ಹಾಗೂ ನಾಸತ್ಯ

**ರಾಜಕೀಯ ವ್ಯವಸ್ಥೆ :**

- ಐತರೇಯ ಬ್ರಾಹ್ಮಣವು "ಮನುಷ್ಯನ ದಿನ ನಿತ್ಯದ ಅವಶ್ಯಕತೆ ಮತ್ತು ಸೈನಿಕ ರಕ್ಷಣಾ ಅವಶ್ಯಕತೆಗಾಗಿ ರಾಜತ್ವ ಉದಯವಾಯಿತು" ಎಂದು ತಿಳಿಸುತ್ತದೆ.
- ರಾಜನನ್ನು 'ರಾಜನ್' ಎಂದು ಕರೆಯಲಾಗಿತ್ತು.
- ಅರಸೊತ್ತಿಗೆ ಕ್ರಮೇಣ ವಂಶಪಾರಂಪರ್ಯವಾಯಿತು.
- ಪುರು ಹಾಗೂ ತಿಸ್ಸು ಬಣಗಳ ಸಂತತಿಯವರು ರಾಜ ಪದವಿಗೆ ಆಯ್ಕೆಯಾಗುತ್ತಿದ್ದರು.
- ರಾಜ ಪ್ರಭುತ್ವವಿಲ್ಲದ ಗಣಗಳು ಈ ಕಾಲದಲ್ಲಿ ಇದ್ದವೆಂದು ಋಗ್ವೇದದಲ್ಲಿ ಉಲ್ಲೇಖಿಸಲಾಗಿದೆ. - ಇಂತಹ ಗಣಗಳ ನಾಯಕನನ್ನು ಗಣಪತಿ ಅಥವಾ ಜ್ಯೇಷ್ಠ ಎನ್ನಲಾಗುತ್ತಿತ್ತು.
- ಪ್ರಪಂಚದಲ್ಲೇ ಗಣರಾಜ್ಯಗಳ ಬಗೆಗಿನ ಪ್ರಥಮ ದಾಖಲೆ ಋಗ್ವೇದದಲ್ಲಿದೆ.
- ರಾಜನ ಪ್ರಮುಖ ಕರ್ತವ್ಯವೆಂದರೆ - ತನ್ನ ರಾಜ್ಯದ ಜನರ ಭೂಮಿಯ ಮತ್ತು ಪಶುಗಳ ರಕ್ಷಣೆ ಮಾಡುವುದು.
- ರಾಜ ತನ್ನ ಸೇವೆಗೆ ಪ್ರತಿಫಲವಾಗಿ 'ಬಲಿ' ಅಂದ್ರೆ ಜನರು ಸ್ವಯಂ ಪ್ರೇರಣೆಯಿಂದ ನೀಡುತ್ತಿದ್ದ ತೆರಿಗೆಯನ್ನು ಪಡೆಯುತ್ತಿದ್ದ.
- ಆಡಳಿತದ ಘಟಕಗಳು ಏರಿಕೆ ಕ್ರಮದಲ್ಲಿ, ಕುಲ, ಗ್ರಾಮ, ವಿಶ್ ಮತ್ತು ಜನ.
- ಋಗ್ವೇದದಲ್ಲಿ 275 ಬಾರಿ 'ಜನ' ಪದದ ಉಲ್ಲೇಖವಿದೆ. ಹಾಗೆಯೇ 'ವಿಶ್'ನ ಉಲ್ಲೇಖ 170 ಬಾರಿ ಕಂಡುಬರುತ್ತದೆ.

**ಪ್ರಮುಖ ಆಡಳಿತಗಾರರು**

- ಭಗದುಗ - ಕಂದಾಯ ಸಂಗ್ರಹಣಾಧಿಕಾರಿ
- ಸಂಘಹಿತ್ರಿ - ಬೊಕ್ಕಸ ಅಧಿಕಾರಿ
- ಅಕ್ಷನಪ - ಮುಖ್ಯ ಲೆಕ್ಕಾಧಿಕಾರಿ
- ಗೋವಿಕೃತ - ಅರಣ್ಯದ ಮುಖ್ಯಸ್ಥ
- ಸುತ - ರಾಜನ ಕಾಗದ ಪತ್ರಗಳ ಸಂರಕ್ಷಕ

**ರಾಜಕೀಯ ಸಂಸ್ಥೆಗಳು - ಸಭಾ, ಸಮಿತಿ, ಮತ್ತು ವಿದಾತ**

**ವಿದಾತ :**

- ಅತ್ಯಂತ ಪ್ರಾಚೀನವಾದ ಪ್ರಬಲ ರಾಜಕೀಯ ಸಂಸ್ಥೆಯೆಂದರೆ ವಿದಾತ
- ಸ್ತ್ರೀಯರಿಗೆ ಪ್ರವೇಶ ನೀಡಲಾಗಿತ್ತು.
- ಹಿರಿಯ ಸದಸ್ಯರಿಗೆ ಪ್ರಾಮುಖ್ಯತೆ
- ವಿದಾತ ಸಂಸ್ಥೆಯ ಮುಖ್ಯ ದೇವತೆ - ಅಗ್ನಿ

**ಸಭಾ :**

- ಇದು ಪುರೋಹಿತರು ಮತ್ತು ಶ್ರೀಮಂತರಿಂದ ಕೂಡಿದ ಹಿರಿಯರ ಸಭೆ
- ಇದರ ಸದಸ್ಯರನ್ನು ಸಭ್ಯ ಎನ್ನುತ್ತಿದ್ದರು.
- ಸ್ತ್ರೀಯರಿಗೆ ಪ್ರವೇಶವಿಲ್ಲ.
- ನಾಗರೀಕ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಿಸಿ ನ್ಯಾಯ ತೀರ್ಪು ನೀಡುತ್ತಿತ್ತು.

**ಸಮಿತಿ :**

- ಇದು ಸಾಮಾನ್ಯ ಜನರ ಸಭೆ
- ಇದರ ಸದಸ್ಯರನ್ನು 'ವಿಷ್' ಎನ್ನುತ್ತಿದ್ದರು.
- ಸಮಿತಿಯ ಅಧ್ಯಕ್ಷತೆಯನ್ನು ರಾಜ ವಹಿಸುತ್ತಿದ್ದ
- ಇದು ಅತ್ಯುನ್ನತ ಸಂವಿಧಾನಕ ಸಂಸ್ಥೆಯಾಗಿದ್ದು ರಾಜನನ್ನು ಆಯ್ಕೆ ಮಾಡುವ ಮತ್ತು ಉಚ್ಚಾಟಿಸುವ ಅಧಿಕಾರ ಹೊಂದಿತ್ತು.
- ಸಭಾ ಮತ್ತು ಸಮಿತಿಗಳನ್ನು ಪ್ರಜಾಪತಿಯ ಅವಳಿ ಮಕ್ಕಳು ಎನ್ನಲಾಗುತ್ತಿತ್ತು.

**ಸೈನಿಕ ವ್ಯವಸ್ಥೆ :**

- ಪದಾತಿ ದಳ, ಅಶ್ವದಳ ಮತ್ತು ರಥದಳಗಳಿದ್ದವು (ಆನೆದಳ ಇರಲಿಲ್ಲ)
- ಪದಾತಿ ದಳವನ್ನು - ಪತ್ತಿ ಎಂದು ಕರೆಯಲಾಗುತ್ತಿತ್ತು.
- ಶ್ರದ್ಧಾ, ವ್ರಾತ ಮತ್ತು ಗಣ ಇವು ಸೈನ್ಯದ ಮೂರು ತುಕಡಿಗಳು.
- ಪುರಚರಿಷ್ಣು (ಚಲಿಸುವ ಕೋಟೆ) - ಕೋಟೆಗಳ ಮೇಲೆ ದಾಳಿ ಮಾಡುವ ಆಯುಧ.
- ಕೋಟೆಗಳು / ಖಿಲ್ಲೆಗಳು - ಪುರಪತಿಯ ಆಡಳಿತದಲ್ಲಿದ್ದವು.

**ಸಮಾಜ :**

- ಪಿತೃ ಪ್ರಧಾನ ಕುಟುಂಬ ಮತ್ತು ಅವಿಭಕ್ತ ಕುಟುಂಬದ ವ್ಯವಸ್ಥೆ ರೂಢಿಯಲ್ಲಿತ್ತು.
- ಮನೆ ಯಜಮಾನನನ್ನು ಗೃಹಪತಿ ಎನ್ನಲಾಗುತ್ತಿತ್ತು.
- ಕುಟುಂಬವನ್ನು 'ಕುಲ' ಎನ್ನುತ್ತಿದ್ದರು.
- ಉತ್ತರಾಧಿಕಾರತ್ವದ ಹಕ್ಕು ಗಂಡು ಮಕ್ಕಳಿಗೆ ಮಾತ್ರ ಇತ್ತು.
- ಅಗಮ್ಯಗಮನ (ಹಾದರ) ಅಂದರೆ ತಂದೆ ಮಗಳ ಮತ್ತು ಅಣ್ಣ ತಂಗಿ ವಿವಾಹಗಳು ಕೆಲ ಸಮಯ ಜಾರಿಯಲ್ಲಿತ್ತು.
- ವಯಕ್ತಿಕ ಭೂಮಿಯ ಹಕ್ಕನ್ನು ಊರ್ವರ / ಕ್ಷೇತ್ರ ಎನ್ನುತ್ತಿದ್ದರು.
- ಸ್ತ್ರೀಯರಿಗೆ ಉನ್ನತ ಸ್ಥಾನಮಾನವಿತ್ತು.
- ಈ ಕಾಲದ ಸ್ತ್ರೀ ವಿದ್ವಾಂಸರುಗಳೆಂದರೆ - ವಿಶ್ವಾವರ, ಘೋಷ, ಅಪಾಲ, ಗಾರ್ಗಿ, ಕಾತ್ಯಾಯಿನಿ, ಲೋಪಮುದ್ರಾ, ಮುದ್ಯಾಲಿನಿ ಮುಂತಾದವರು
- ಬಾಲ್ಯ ವಿವಾಹ ಪದ್ಧತಿ ಇರಲಿಲ್ಲ.
- ವರದಕ್ಷಿಣೆ ಪದ್ಧತಿ ಇರಲಿಲ್ಲ.

- ದಸ್ಯುಗಳನ್ನು ಹೊರತು ಪಡಿಸಿ ಅಂತರ್ ಜಾತಿ ವಿವಾಹಗಳು ರೂಢಿಯಲ್ಲಿದ್ದವು.
- ಏಕಪತ್ನಿತ್ವ ಅಸ್ತಿತ್ವ, ಉನ್ನತ ವರ್ಗದಲ್ಲಿ ಮಾತ್ರ ಬಹುಪತ್ನಿತ್ವ ರೂಢಿಯಲ್ಲಿತ್ತು.
- ವಿದವಾ ಪುನರ್ ವಿವಾಹಕ್ಕೆ ಆದ್ಯತೆ ನೀಡಲಾಗಿತ್ತು.
- ನಿಯೋಗ ಪದ್ಧತಿ (ಪತಿ ತೀರಿಕೊಂಡಾಗ ಗಂಡು ಸಂತಾನಕ್ಕಾಗಿ ಮೈದುನನೊಂದಿಗೆ ಬಾಳ್ವೆ ಮಾಡುವ ಪದ್ಧತಿ) ರೂಢಿಯಲ್ಲಿತ್ತು.
- ಸ್ತ್ರೀ ಗುಲಾಮರಿದ್ದು ಗೃಹಕಾರ್ಯಗಳಲ್ಲಿ ತೊಡಗುತ್ತಿದ್ದರು.
- ಹತ್ತಿ, ಉಣ್ಣೆ ಮತ್ತು ಜಿಂಕೆ ಚರ್ಮಗಳಿಂದ ಉಡುಪು ತಯಾರಿಸುತಿದ್ದರು.
- ಉಡುಪುಗಳಿಗೆ ಚಿನ್ನದ ಕಸೂತಿ ಕೆಲಸ ಮಾಡುತ್ತಿದ್ದರು.
- ಸೋಮ ಮತ್ತು ಸುರಾ ಎಂಬ ಪಾನೀಯಗಳ ಬಳಕೆಯಿತ್ತು.
- ಸೋಮ ಎಂಬುದು ಹಿಮಾಲಯದ 'ಮುಜಾವಂತ್' ಶಿಖರದಲ್ಲಿ ಬೆಳೆಯುತ್ತಿದ್ದ ಗಿಡವೊಂದರ ರಸ.
- ಸುರಾವು ಸಾಮಾನ್ಯ ಮಾದಕ ಪಾನೀಯವಾಗಿದ್ದು ಧಾನ್ಯಗಳಿಂದ ತಯಾರಿಸುತ್ತಿದ್ದರು. ನಂತರದಲ್ಲಿ ಇದನ್ನು ನಿಷೇಧಿಸಲಾಯಿತು.
- ಋಗ್ವೇದದ 9ನೇ ಮಂಡಲವು ಒಂದೇ ಕುಟುಂಬದ ಜನರು ವಿವಿಧ ವೃತ್ತಿಗಳನ್ನು ಮಾಡುತ್ತಿದ್ದರ ಬಗ್ಗೆ ತಿಳಿಸುತ್ತದೆ.
- ಋಗ್ವೇದದ 10ನೇ ಮಂಡಲದ 'ಪುರುಷಸೂಕ್ತ'ವು ಮೊಟ್ಟ ಮೊದಲ ಬಾರಿಗೆ ಚಾತುರ್ವಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಉಗಮದ ಬಗ್ಗೆ ಉಲ್ಲೇಖಿಸಿದೆ.

**ಋಗ್ವೇದ ಕಾಲದ ಕೆಲವು ಪದಗಳ ಅರ್ಥಗಳು**

1. ಉತ್ಸ -ಚಿಲುಮೆ
2. ಚರ್ಷಾಣಿ - ಕೃಷಿ
3. ಯವ-ಅಕ್ಕಿ /ಬಾರ್ಲಿ
4. ಅವತಸ್ - ತೋಡುಬಾವಿಗಳು
5. ಗವಿಷ್ಟಿ - ಅಪಹರಣಕ್ಕೊಳಗಾದ ಗೋವು ಪಡೆಯಲು ಮಾಡುತ್ತಿದ್ದ ಯುದ್ಧಗಳು.
6. ಗೋಘ್ನ- ಅತಿಥಿಗಳಿಗೆ ನೀಡುತ್ತಿದ್ದ ಗೋಮಾಂಸ
7. ಅಯಸ್ - ಕಂಚು / ತಾಮ್ರ
8. ಸೀತ-ನೇಗಿಲಿನ ಸಾಲು (ಭೂಮಿ)
9. ಸಿರಾ - ನೇಗಿಲು
10. ಸುತ - ಆಸ್ಥಾನದ ಲಾವಣಿಕಾರ

- ಯಮುನಾ ಕಣಿವೆಯು ಗೋಸಂಪತ್ತಿಗೆ ಪ್ರಸಿದ್ಧಿಯಾಗಿತ್ತು.
- ಋಗ್ವೇದದಲ್ಲಿ 176 ಬಾರಿ 'ಗೋವು' ಪದದ ಉಲ್ಲೇಖವಿದೆ.
- ಗಾಂಧಾರ ದೇಶದ ಹೆಣ್ಣು ಕುರಿಗಳು - ಉಣ್ಣೆಗೆ ಪ್ರಸಿದ್ಧಿಯಾಗಿದ್ದವು.
- ಶಸ್ತ್ರಚಿಕಿತ್ಸೆ ಜ್ಞಾನವಿತ್ತು, ಕಬ್ಬಿಣದ ಕೃತಕ ಕಾಲುಗಳ ಜೋಡಣೆಯನ್ನು ಕಲಿತಿದ್ದರು.
- ಈ ಕಾಲದ ವೈದ್ಯನನ್ನು 'ಭೀಷಕ' ಎನ್ನುತ್ತಿದ್ದರು.

## ಋಗ್ವೇದ ಕಾಲದ ಸಾಹಿತ್ಯ

**ಚತುರ್ವೇದಗಳು :**

**1. ಋಗ್ವೇದ**

- ❖ ಅತ್ಯಂತ ಪ್ರಾಚೀನ ವೇದ
- ❖ ಒಟ್ಟು 1028 ಶ್ಲೋಕಗಳು (ಸೂಕ್ತಗಳು) 10,580 ಮಂತ್ರಗಳಿವೆ.
- ❖ 10 ಮಂಡಲಗಳಾಗಿ ವಿಭಾಗಿಸಲಾಗಿದೆ.
- ❖ 1 ಮತ್ತು 10ನೇ ಮಂಡಲಗಳು ನಂತರದಲ್ಲಿ ಅನೇಕ ಕುಟುಂಬಗಳ ಋಷಿಗಳಿಂದ ರಚಿತವಾಗಿವೆ.
- ❖ 2 ರಿಂದ 7ನೇ ಮಂಡಲಗಳು ಋಗ್ವೇದದ ಅತ್ಯಂತ ಪ್ರಾಚೀನ ಭಾಗಗಳಾಗಿದ್ದು ಇವು ಒಂದೇ ಕುಟುಂಬದ ಋಷಿಗಳಿಂದ ರಚಿತವಾದವುಗಳು. ಅವರುಗಳೆಂದರೆ :

| | **ಮಂಡಲಗಳು** | | **ಋಷಿಗಳು** |
|---|---|---|---|
| ❖ | 2ನೇ ಮಂಡಲ | - | ಗೃತ್ಸ್ನಮದ |
| ❖ | 3ನೇ ಮಂಡಲ | - | ವಿಶ್ವಾಮಿತ್ರ |
| ❖ | 4ನೇ ಮಂಡಲ | - | ವಾಸುದೇವ |
| ❖ | 5ನೇ ಮಂಡಲ | - | ಅತ್ರಿ |
| ❖ | 6ನೇ ಮಂಡಲ | - | ಭಾರದ್ವಾಜ |
| ❖ | 7ನೇ ಮಂಡಲ | - | ವಸಿಷ್ಠ |

- ❖ 8ನೇ ಮಂಡಲವು ಆಂಗೀರಸ ಗೋತ್ರದ ಋಷಿಗಳಿಂದ ರಚಿತವಾಯಿತು.
- ❖ ವಿಶ್ವಾಮಿತ್ರ ಋಷಿಗಳಿಂದ ರಚಿತವಾದ ಋಗ್ವೇದದ 3ನೇ ಮಂಡಲದಲ್ಲಿ ಪ್ರಸಿದ್ಧವಾದ "ಗಾಯಿತ್ರಿ ಮಂತ್ರ" ಅಡಕವಾಗಿದೆ.
- ❖ 10ನೇ ಮಂಡಲದಲ್ಲಿ "ಪುರುಷಸೂಕ್ತ" ವಿಭಾಗ ಕಂಡು ಬರುವುದು. (ಇದರಲ್ಲಿ ಚತುರ್ವಣ ವ್ಯವಸ್ಥೆಯ ಪ್ರಥಮ ಉಲ್ಲೇಖ ಕಂಡುಬರುವುದು).
- ❖ ಋಗ್ವೇದದ ಶ್ಲೋಕಗಳನ್ನು "ಹೋತ್ರಿ" ಎಂದು ಕರೆಯುತ್ತಿದ್ದ ಪುರೋಹಿತರು ಪಠಿಸುತ್ತಿದ್ದರು.

**2. ಸಾಮವೇದ**

- ❖ 1603 ಸ್ತೋತ್ರಗಳಿವೆ. (99 ಸ್ತೋತ್ರಗಳನ್ನು ಬಿಟ್ಟು ಉಳಿದೆಲ್ಲವೂ ಋಗ್ವೇದದಿಂದ ಆಯ್ಕೆಯಾದವು.)
- ❖ ಇದರ ಸ್ತೋತ್ರಗಳನ್ನು ಸೋಮ ಯಜ್ಞ ಮಾಡುವಾಗ ಹಾಡಲಾಗುತ್ತಿತ್ತು.
- ❖ ಸೋಮ ಯಾಗಗಳ ಸಮಯದಲ್ಲಿ "ಉದ್ಗಾತೃ" ಎಂಬ ವಿಶೇಷ ದರ್ಜೆಯ ಪುರೋಹಿತರು ಇದರ ಸ್ತೋತ್ರಗಳನ್ನು ಹಾಡುತ್ತಿದ್ದರು.
- ❖ ಸಾಮವೇದದಿಂದ ಸಂಗೀತ ಶಾಸ್ತ್ರ ರೂಪುಗೊಂಡಿತೆಂದು ನಂಬಲಾಗಿದೆ.

**3. ಯಜುರ್ವೇದ**

- ❖ ಇದು 40 ಅಧ್ಯಾಯಗಳನ್ನು ಮತ್ತು 101 ಶಾಖೆಗಳಿಂದ ಕೂಡಿದೆ.
- ❖ ಇದನ್ನು ಕೃಷ್ಣ ಯಜುರ್ವೇದ ಮತ್ತು ಶುಕ್ಲ ಯಜುರ್ವೇದ ಎಂದು ವಿಂಗಡಿಸಲಾಗಿದೆ.
- ❖ ಇದು ಅಶ್ವಮೇಧ ಮೊದಲಾದ ಯಜ್ಞಯಾಗಗಳ ವಿಧಾನಗಳನ್ನು ಕುರಿತು ಚರ್ಚಿಸುತ್ತದೆ.

- ಇದರ ಶ್ಲೋಕಗಳನ್ನು ಯಜ್ಞಯಾಗಾದಿಗಳಲ್ಲಿ 'ಅಧ್ವರ್ಯು' ಎಂಬ ಪುರೋಹಿತರು ಪಠಿಸುತ್ತಿದ್ದರು.
  (ಇದರಲ್ಲಿ 5 ಶಾಖೆಗಳು ಮಾತ್ರ ಲಭ್ಯವಾಗಿವೆ. ಅವುಗಳೆಂದರೆ ಕಾಠಕ, ಕಪಿಸ್ಥಲ ಮೈತ್ರಾಯಣಿ, ತೈತ್ತರೀಯ, ವಾಜಸನೇಯ)
  (ಕೃಷ್ಣ ಯಜುರ್ವೇದದಲ್ಲಿ ಯಾಗಗಳನ್ನು ಮಾಡುವ ವರ್ಣನೆ ಕಂಡು ಬಂದರೆ ಶುಕ್ಲ ಯಜುರ್ವೇದವು ಮಂತ್ರಗಳು, ಪ್ರಾರ್ಥನೆಗಳು ಮತ್ತು ಯಾಗದ ನಿಯಮಗಳನ್ನು ಒಳಗೊಂಡಿದೆ.)

**4. ಅಥರ್ವಣ ವೇದ**

- ಮೇಲಿನ ಮೂರು ವೇದಗಳಿಗಿಂತ ನಂತರದಲ್ಲಿ ರಚಿತವಾದ ವೇದ.
- ಇದರ ಮತ್ತೊಂದು ಹೆಸರು - ಮಾಯಸೂತ್ರ ಗ್ರಂಥ.
- 731 ಶ್ಲೋಕಗಳನ್ನು ಇದು ಒಳಗೊಂಡಿದೆ ಮತ್ತು 20 ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.
- ಯಂತ್ರ - ತಂತ್ರ, ಮಾಟ-ಮೋಡಿ, ಯಕ್ಷಿಣಿ ವಿದ್ಯೆ ಮೊದಲಾದವುಗಳನ್ನು ಕುರಿತು ಇದು ತಿಳಿಸುತ್ತದೆ.
- ಮೇಲಿನ 4 ವೇದಗಳನ್ನು ಸಂಹಿತಗಳು ಎನ್ನುವರು.
- ಮೊದಲ 3 ವೇದಗಳನ್ನು "ತ್ರಯಿ" ಎನ್ನುವರು.

**ಬ್ರಾಹ್ಮಣಕಗಳು :**

- ವೇದಗಳ ಶ್ಲೋಕಗಳನ್ನು ಜನಸಾಮಾನ್ಯರಿಗೆ ಅರ್ಥವಾಗಲೆಂದು ಗದ್ಯರೂಪದಲ್ಲಿ ರಚಿಸಲಾಗಿದೆ. ಅವುಗಳೇ ಬ್ರಾಹ್ಮಣಕಗಳು. ಪ್ರತಿ ವೇದವು ಹೊಂದಿರುವ ಬ್ರಾಹ್ಮಣಕಗಳ ಪಟ್ಟಿ ಈ ರೀತಿಯಿದೆ.
- ಋಗ್ವೇದ - ಐತರೇಯ, ಕೌಷೀತಕಿ ಬ್ರಾಹ್ಮಣಕಗಳು
- ಸಾಮವೇದ-ತಾಂಡ್ಯ ಮಹಾ ಅಥವಾ ಪಂಚವಿಂಶ, ಷಡ್ವಿಂಶ, ಜೈಮಿನಿಯ ಬ್ರಾಹ್ಮಣಕಗಳು
- ಯಜುರ್ವೇದ - ತೈತರೀಯ ಮತ್ತು ಶತಪಥ ಬ್ರಾಹ್ಮಣ
- ಅಥರ್ವಣ ವೇದ - ಗೋಪಥ ಬ್ರಾಹ್ಮಣ

**ಅರಣ್ಯಕಗಳು :**

- ಇವುಗಳು ಬ್ರಾಹ್ಮಣಕಗಳ ಅಂತಿಮ ಭಾಗ
- ಅರಣ್ಯಗಳಲ್ಲಿ ವಾಸಿಸುತ್ತಿದ್ದ ಋಷಿಗಳಿಂದ ರಚಿತವಾದವುಗಳು
- ಇವುಗಳು ಧ್ಯಾನಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿವೆ.

**ಉಪನಿಷತ್ತುಗಳು :**

- ಅರಣ್ಯಕಗಳ ಕೊನೆಯ ಭಾಗಗಳನ್ನು ಉಪನಿಷತ್ತುಗಳೆನ್ನುವರು.
- ವೈದಿಕ ಸಾಹಿತ್ಯದ ಕಡೆಯ ಭಾಗಗಳು ಇವಾಗಿವೆ. ಆದ್ದರಿಂದ ಇವುಗಳನ್ನು ವೇದಾಂತ ಅಥವಾ ವೇದದ ಕೊನೆ ಎನ್ನುವರು.

- ಉಪನಿಷತ್ ಎಂಬ ಶಬ್ದವು ನಿಗೂಢ ಜ್ಞಾನ ಎಂಬ ಅರ್ಥ ನೀಡುತ್ತದೆ.
- "ಉಪ" ಎಂದರೆ ಹತ್ತಿರ ಮತ್ತು "ನಿಷತ್" ಎಂದರೆ ಕುಳಿತು ಕಲಿಯುವುದು ಎಂದು ಅರ್ಥ.
- ಛಾಂದೋಗ್ಯ, ಕೇನ, ಮಂಡೂಕ, ಬೃಹದಾರಣ್ಯಕ, ಈಶ, ಪ್ರಶ್ನ, ತೈತರೀಯ, ಕೌಶಿತಕ, ಮೈತ್ರಿ, ಮಾಂಡೂಕ್ಯ, ಉಪನಿಷತ್‌ಗಳು ಪ್ರಮುಖವಾದವು.
- ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸೆ ಮತ್ತು ಉತ್ತರ ಮೀಮಾಂಸೆ ಎಂಬ ಆರು ದರ್ಶನಗಳಿಗೆ ಉಪನಿಷತ್ತುಗಳೇ ಆಧಾರ.

**ವೇದಾಂಗಗಳು**

- ಶಿಕ್ಷಾ (ಧ್ವನಿಶಾಸ್ತ್ರ)
- ಕಲ್ಪ (ಸಂಸ್ಕಾರ ಶಾಸ್ತ್ರ)
- ವ್ಯಾಕರಣ
- ನಿರುಕ್ತ (ವ್ಯುತ್ಪತ್ತಿ ಶಾಸ್ತ್ರ)
- ಛಾಂದ (ಛಂದಸ್ಸು)
- ಜ್ಯೋತಿಷ್ಯ

**ಉಪವೇದಗಳು (4)**

- ಧನುರ್ವೇದ
- ಗಂಧರ್ವವೇದ
- ಶಿಲ್ಪವೇದ
- ಆಯುರ್ವೇದ

**ವೇದಕಾಲದ ದೇವತೆಗಳು**

- ಪ್ರಜಾಪತಿ (ಜೀವರಾಶಿಗಳ ಅಧಿಪತಿ)
- ವಿಶ್ವ ಕರ್ಮನ್ (ಸೃಷ್ಟಿಕರ್ತ)
- ಧಾತೃ (ಸ್ಥಾಪಕ)
- ವಿಧಾತೃ (ನಿಯಾಮಕ)
- ಮನ್ಯು (ಕ್ರೋಧ)
- ಶ್ರದ್ಧಾ (ನಿಷ್ಠೆ / ನಂಬಿಕೆ)
- ದ್ಯಯುಸ (ಸ್ವರ್ಗಾಧಿಪತಿ)
- ಪೃಥ್ವಿ (ಭೂಮಾತೆ)
- ಮಿತ್ರ
- ಸೂರ್ಯ, ಪೂಷನ್ (ಪಾಲಕ), ಅಶ್ವಿನಿ, ನಾಸತ್ಯ (ಸಂಜೆಯ ತಾರೆಗಳು)
- ರುದ್ರ (ಮಿಂಚು ಗುಡುಗಿನ ದೇವತೆ), ಪರ್ಜನ್ಯ (ಮಳೆಯ ದೇವತೆ).
- ಇಂದ್ರ
- ಅಧಿತಿ, ಉಸಸ್ - ಸ್ತ್ರೀ ದೇವತೆಗಳು.

## ಧಾರ್ಮಿಕ ಸುಧಾರಣ ಯುಗ (ಕ್ರಿ.ಪೂ. 6ನೇ ಶತಮಾನ)

### ಜೈನ ಧರ್ಮ

- ಜೈನ ಧರ್ಮ ಸ್ಥಾಪಕ - ವರ್ಧಮಾನ ಮಹಾವೀರ (540-468 ಕ್ರಿ.ಪೂ.)
- ಜನನ - ಕ್ರಿ.ಪೂ. / 599 - ವೈಶಾಲಿ ರಾಜ್ಯದ ಕುಂಡಲೀವನ ಪುರದಲ್ಲಿ
- ತಂದೆ, ತಾಯಿ - ಸಿದ್ಧಾರ್ಥ, ತ್ರಿಶಲಾ
- ಹೆಂಡತಿ - ಯಶೋಧಾ
- 30ನೇ ವಯಸ್ಸಿನಲ್ಲಿ - ಸಂಸಾರ ತ್ಯಾಗ
- 12 ವರ್ಷಗಳ ಕಾಲ - ನಗ್ನ ತಪಸ್ಸು - ತಪಸ್ಸಿನ 13ನೇ ವರ್ಷದಲ್ಲಿ ಜೃಂಬಿಕ ಗ್ರಾಮದ ಬಳಿಯಿರುವ ಋಜುಪಾಲಕಾ ನದಿ ದಂಡೆಯ ಮೇಲೆ 43ನೇ ವಯಸ್ಸಿನಲ್ಲಿ "ಕೇವಲ ಜ್ಞಾನ" ಪಡೆದನು. (ಜ್ಞಾನಪರಾಕಾಷ್ಠೆ)
- ಕ್ರಿ.ಪೂ. 527ರಲ್ಲಿ ತನ್ನ 72ನೇ ವಯಸ್ಸಿನಲ್ಲಿ - ರಾಜಗೃಹದ ಬಳಿಯ "ಪಾವಾ" ಎಂಬಲ್ಲಿ ನಿಧನ.

**ಜೈನ ಧರ್ಮದ ಪ್ರಮುಖ ತತ್ವಗಳು**

- ಅಹಿಂಸಾ
- ಸತ್ಯ
- ಆಸ್ತೇಯ (ಕಳ್ಳತನ ಮಾಡದಿರುವುದು)
- ಅಪರಿಗ್ರಹ (ಸಂಪತ್ತಿನ ವ್ಯಾಮೋಹ ತ್ಯಜಿಸುವುದು)
- ಬ್ರಹ್ಮಚರ್ಯ
  (ಮೇಲಿನ ನಾಲ್ಕು 23ನೇ ತೀರ್ಥಂಕರನಾದ ಪಾರ್ಶ್ವನಾಥನವು, ಕೊನೆಯ ಬ್ರಹ್ಮಚರ್ಯ ತತ್ವವನ್ನು ಮಹಾವೀರ ಬೋಧಿಸಿದನು).

**ಜೈನ ತ್ರಿರತ್ನಗಳು**

- ಸಂಯಕ್ ದರ್ಶನ
- ಸಂಯಕ್ ಜ್ಞಾನ
- ಸಂಯಕ್ ಚಾರಿತ್ರ್ಯ

**ಜೈನಧರ್ಮದ 24 ತೀರ್ಥಂಕರರು**

| | |
|---|---|
| 1. ಆದಿನಾಥ (ವೃಷಭದೇವ) | 13. ವಿಮಳನಾಥ |
| 2. ಅಜಿತನಾಥ | 14. ಅನಂತನಾಥ |
| 3. ಸಂಭವನಾಥ | 15. ಧರ್ಮನಾಥ |
| 4. ಅಭಿನಂದ | 16. ಶಾಂತಿನಾಥ |
| 5. ಸಮತಿನಾಥ | 17. ಕುಂತನಾಥ |

6. ಪದ್ಮಪ್ರಭ
7. ಸುಪಾರ್ಶ್ವನಾಥ
8. ಚಂದ್ರ ಪ್ರಭ
9. ಸುವಿದಿನಾಥ
10. ಶೀತಳನಾಥ
11. ಶ್ರೇಯಾಂಶನಾಥ
12. ವಾಸುಪೂಜ್ಯ
18. ಅರನಾಥ
19. ಮಲ್ಲಿನಾಥ
20. ಮುನಸುವ್ರತ
21. ನಮಿನಾಥ
22. ನೇಮಿನಾಥ
23. ಪಾರ್ಶ್ವನಾಥ
24. ವರ್ಧಮಾನ ಮಹಾವೀರ

**ಜೈನಧರ್ಮ ಪೋಷಿಸಿದ ರಾಜರು**

- ಅಜಾತ ಶತ್ರು
- ಬಿಂಬಸಾರ
- ಚಂದ್ರಗುಪ್ತ ಮೌರ್ಯ
- ಸಂಪ್ರಾತಿ ಚಂದ್ರಗುಪ್ತ (ಅಶೋಕನ ಮೊಮ್ಮಗ)
- ಕಳಿಂಗದ ರಾಜ ಖಾರವೇಲ
- ಅಮೋಘವರ್ಷ ನೃಪತುಂಗ (ರಾಷ್ಟ್ರಕೂಟ ದೊರೆ)
- ದ್ವಾರಸಮುದ್ರದ ಹೊಯ್ಸಳರು

**ಜೈನ ಮಹಾಸಭೆಗಳು**

- ಮೊದಲ ಜೈನ ಮಹಾಸಭೆ ಪಾಟಲೀಪುತ್ರದಲ್ಲಿ ಕ್ರಿ.ಪೂ. 300ರಲ್ಲಿ ಜೈನಯತಿ - ಸ್ಥೂಲಭದ್ರನ ಅಧ್ಯಕ್ಷತೆಯಲ್ಲಿ, (ದ್ವಾದಶಾಂಶಗಳ ರಚನೆ)
- ಎರಡನೇ ಜೈನ ಮಹಾಸಭೆ ಕ್ರಿ.ಶ. 512ರಲ್ಲಿ ಗುಜರಾತಿನ ವಲ್ಲಭಿಯಲ್ಲಿ, ದೇವರ್ದಿ ಕಶ್ಮಶರ್ಮನ ಅಧ್ಯಕ್ಷತೆಯಲ್ಲಿ

**ಜೈನ ಪಂಥಗಳು / ಜೈನ ಪಂಗಡಗಳು**

- **ಶ್ವೇತಾಂಬರರು :** 23ನೇ ತೀರ್ಥಂಕರನಾದ ಪಾರ್ಶ್ವನಾಥನ ಅನುಯಾಯಿಗಳು. ಬಿಳಿಯ ವಸ್ತ್ರವನ್ನು ಧರಿಸುತ್ತಿದ್ದರು.
- **ದಿಗಂಬರರು :** ಮಹಾವೀರನ ಅನುಯಾಯಿಗಳನ್ನು ದಿಗಂಬರರು ಎನ್ನುವರು. ಅಂದರೆ ವಸ್ತ್ರವನ್ನು ಧರಿಸದ ಅನುಯಾಯಿಗಳು.

  (ಮಹಾವೀರ ಕಾಲವಾದ 200 ವರ್ಷಗಳ ನಂತರ ಮಗದದಲ್ಲಿ ಭೀಕರ ಬರಗಾಲ ಉಂಟಾದಾಗ ಅನೇಕ ಜೈನರು ಮತ್ತು ಮೌರ್ಯ ಸಾಮ್ರಾಜ್ಯ ಸ್ಥಾಪಕ ಚಂದ್ರಗುಪ್ತ ಮೌರ್ಯ ಭದ್ರಬಾಹುವಿನೊಂದಿಗೆ ದಕ್ಷಿಣಕ್ಕೆ ಬಂದು ಕಾಥವ ಪುರಿ ಅಥವಾ ಶ್ರವಣಬೆಳಗೊಳದಲ್ಲಿ ನೆಲಸಿ ಧರ್ಮ ಪ್ರಸಾರ ಮಾಡಿದರು. ಇನ್ನುಳಿದ ಜೈನರು (ಸ್ಥಳಬಾಹುವಿನ ನೇತೃತ್ವದಲ್ಲಿ) ಮಗದದಲ್ಲೇ ಉಳಿದರು. ಬರಗಾಲ ಮುಕ್ತಾಯವಾದ ಮೇಲೆ ದಕ್ಷಿಣದ ಜೈನರು ಉತ್ತರದ ಮಗದಕ್ಕೆ ಹೋದಾಗ ಅಲ್ಲಿ ನಡೆದ ಜೈನ ಸಮ್ಮೇಳನದಲ್ಲಿ ಅವರಿಬ್ಬರ ನಡುವೆ ಮತಭೇದ ತಲೆದೋರಿತು. ಪರಿಣಾಮ ಕಠಿಣ ವ್ರತಾಚಾರಿಗಳಾದ ದಕ್ಷಿಣದ ಮಹಾವೀರನ ಅನುಯಾಯಿಗಳು ದಿಗಂಬರರಾಗಿ ಉಳಿದರು. ಬಿಳಿಯ ವಸ್ತ್ರಧಾರಿಗಳಾದ ಪಾರ್ಶ್ವನಾಥನ ಅನುಯಾಯಿಗಳು ಶ್ವೇತಾಂಬರರಾಗಿ ಉಳಿದರು.)

**ಜೈನಧರ್ಮದ 2 ಉಪ ಪಂಗಡಗಳು :**

1. ಥೇರಾ ಪಂಥಿಗಳು - ಜೈನಧರ್ಮದ ಪವಿತ್ರ ಕೃತಿ ಆಗಮಗಳನ್ನು ಪೂಜಿಸುತ್ತಿದ್ದರು.
2. ಸಮ ಇಯಾಗಳು - ದಿಗಂಬರ ಪಂಗಡದಲ್ಲಿನ ಮೂರ್ತಿ ಪೂಜಕರು.

**ಮುಖ್ಯಾಂಶಗಳು**

❖ ಜೈನರನ್ನು ನಿಗ್ರಂಥರೆಂದು ಬೌದ್ಧರು ಕರೆಯುತ್ತಿದ್ದರು.

❖ ಜೈನ ಧರ್ಮ (ಮಹಾವೀರ) ದೇವರ ಅಸ್ತಿತ್ವವನ್ನು ಒಪ್ಪಿಕೊಂಡಿತ್ತಾದರೂ ದೇವರು ಜನರಿಗಿಂತ ದೊಡ್ಡವರಾಗಿರಲಿಲ್ಲ.

❖ ಜೈನಧರ್ಮ ವರ್ಣವ್ಯವಸ್ಥೆಯನ್ನು ತಿರಸ್ಕರಿಸಲಿಲ್ಲ - ಮಾನವನು ತನ್ನ ಪೂರ್ವ ಜನ್ಮದ ಕರ್ಮಗಳ ಅನುಸಾರ ಮೇಲು-ಕೀಳು ವರ್ಣದಲ್ಲಿ ಜನಿಸುತ್ತಾನೆ. ಎಂದು ಜೈನರು ನಂಬಿದ್ದರು, ಆದರೂ ಜಾತಿವ್ಯವಸ್ಥೆಯನ್ನು ವಿರೋಧಿಸಿತು.

❖ ತಪಶ್ಚರ್ಯ, ದೇಹ ದಂಡನೆಗೆ ಜೈನಧರ್ಮ ಹೆಚ್ಚು ಒತ್ತು ನೀಡಿತು.

❖ ಗಿಡಮರಗಳಿಗೂ ಜೀವವಿದೆ ಎಂದು ಭಾವಿಸಿದ ಜೈನಧರ್ಮ ಅವುಗಳನ್ನು ಹಿಂಸಿಸುವುದನ್ನು ನಿಷೇಧಿಸಿತು, ಅದಕ್ಕಾಗಿ ಜೈನರು ಕೃಷಿಕಸುಬು ಬಿಟ್ಟು ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿದರು.

❖ ತಾವು ಉಸಿರಾಡುವ ಗಾಳಿಯ ಮೂಲಕ ಕ್ರಿಮಿಕೀಟಗಳು ಸಾಯುತ್ತವೆ ಎಂಬ ಕಾರಣಕ್ಕಾಗಿ ಬಾಯಿಗೆ ಬಟ್ಟೆಯನ್ನು ಕಟ್ಟಿಕೊಳ್ಳುತ್ತಿದ್ದರು.

❖ ಮಹಾವೀರನ ನಿಷ್ಠ 11 ಮಂದಿ ಅನುಯಾಯಿಗಳನ್ನು "ಗಾಂಧಾರರು" ಎನ್ನಲಾಗುತ್ತಿತ್ತು.

❖ ಮಹಾವೀರನಿಂದ ಸ್ಥಾಪಿತವಾದ ಜೈನಸಂಘದಲ್ಲಿ ಸ್ತ್ರೀಯರಿಗೂ ಪ್ರವೇಶವಕಾಶವಿತ್ತು.

❖ ಜೈನಧರ್ಮದಲ್ಲಿ - ಸರ್ಮಿಣಿ ಮತ್ತು ಸರವಿಕರು ಎಂಬ ಎರಡು ಗುಂಪಿನ ಸ್ತ್ರೀ ಸದಸ್ಯರಿದ್ದರು.

❖ ಸ್ತ್ರೀ ಜೈನಸನ್ಯಾಸಿನಿಯರು ಮಹಾವೀರನ ಸಂಬಂಧಿ "ಕಂಡನಾ"ಳ ನೇತೃತ್ವದಲ್ಲಿದ್ದರು.

❖ ಮಹಾವೀರನ ಮರಣದ ನಂತರ ಜೈನಸಂಘದ ಮುಖ್ಯಸ್ಥನಾದವನು ಸುಧರ್ಮ ನಂತರ ಜಂಬೂ ಎಂಬುವವನು ಮುಖ್ಯಸ್ಥನಾದ.

❖ ಭದ್ರಬಾಹು, ಶಂಭೂತ ವಿಜಯ ಮತ್ತು ಸ್ಥೂಲ ಭದ್ರಬಾಹು ನಂತರದ ಕಾಲದಲ್ಲಿ ಜೈನ ಸಂಘದ ಮುಖ್ಯಸ್ಥರಾಗಿದ್ದರು.

❖ ಕರ್ನಾಟಕದಲ್ಲಿ ಜೈನಧರ್ಮ ಹರಡಲು ಕಾರಣ ಭದ್ರಬಾಹು ಮತ್ತು ಚಂದ್ರಗುಪ್ತ ಮೌರ್ಯ.

❖ ಜೈನಧರ್ಮದ ಪ್ರಮುಖ ಕೊಡುಗೆಯೆಂದರೆ - ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಕಾರಣವಾದುದು. ಜನಸಾಮಾನ್ಯರ ಭಾಷೆಯಾದ ಅರ್ಧಮಾಗಧಿಯಲ್ಲಿ ಧರ್ಮ ಪ್ರಚಾರ ಮಾಡಲಾಯಿತು. ಹಾಗೂ ಜೈನ ಸಾಹಿತ್ಯವು ದೇಶೀಯ ಭಾಷೆಗಳಾದ ಹಿಂದಿ, ಗುಜರಾತಿ, ಮರಾಠಿ, ತಮಿಳು, ಕನ್ನಡ ಭಾಷೆಗಳಲ್ಲಿ ಬೆಳೆಯಲ್ಪಟ್ಟು ಪ್ರಾದೇಶಿಕ ಭಾಷೆಗಳು ಬೆಳೆಯಲು ಸಹಾಯಕವಾಯಿತು.

❖ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಜೈನರ ಕೊಡುಗೆ ಅಪಾರವಾದುದು. ಒರಿಸ್ಸಾದ ಹಾಥಿಗುಂಪಾ ಗುಂಹಾಂತರ ದೇವಾಲಯಗಳು ಉದಯಗಿರಿ ಬೆಟ್ಟಗಳ ಹುಲಿಗುಹೆ, ಎಲ್ಲೋರದ ಇಂದ್ರಸಭಾ, ಶ್ರವಣಬೆಳಗೊಳದ ಗೊಮ್ಮಟ ಮೂರ್ತಿ, ಬುಂದೇಲ್‌ಖಂಡದ ಖಜರಾಹೋ ಇತ್ಯಾದಿ. ಜೈನರ ವಾಸ್ತುಶಿಲ್ಪ ಕೊಡುಗೆಗಳು.

❖ ಶತ್ರುಂಜಯ, ಅಭುಪರ್ವತ, (ಮೌಂಟ್ ಅಬು) ಗೋಕರ್ಣ, ಶ್ರವಣಬೆಳಗೊಳ ಪ್ರಸಿದ್ಧ ಜೈನ ಯಾತ್ರಾ ಸ್ಥಳಗಳು.

❖ ಕನ್ನಡದ ಪಂಪ, ರನ್ನ, ಪೊನ್ನ, ಜನ್ನ, ಪ್ರಭಾನಂದಿ, ವಿದ್ಯಾನಂದಿ, ಜಿನಸೇನ, ಅಜಿತಸೇನಾಚಾರ್ಯ, ಗುಣಭದ್ರ ಮೊದಲಾದವರು ಜೈನ ಕವಿಗಳಾಗಿದ್ದರು.

# ಬೌದ್ಧ ಧರ್ಮ

- ಬೌದ್ಧ ಧರ್ಮ ಸ್ಥಾಪಕ - ಗೌತಮ ಬುದ್ಧ
- ಮೊದಲ ಹೆಸರು - ಸಿದ್ಧಾರ್ಥ
- ತಂದೆ - ಶುದ್ಧೋದನ - ಕಪಿಲ ವಸ್ತುವಿನ ಶಾಕ್ಯ ಕುಲಕ್ಕೆ ಸೇರಿದವನು
- ತಾಯಿ - ಮಾಯಾದೇವಿ - ಶಾಕ್ಯ ಪ್ರಾಂತ್ಯದಲ್ಲಿನ ದೇವದಹ ಪಟ್ಟಣದ ರಾಜಕುಮಾರಿ
- ಹೆಂಡತಿ - ಯಶೋಧರಾ (ಸೋದರ ಮಾವನ ಮಗಳು)
- ಮಗ - ರಾಹುಲ
- ಚಿಕ್ಕಮ್ಮ - (ಮಲತಾಯಿ) ಮಹಾಪ್ರಜಾಪತಿ ಗೌತಮಿ
- ಸೇವಕ - ಚೆನ್ನ
- ಕುದುರೆ - ಕಂತಕ
- ತನ್ನ 29ನೇ ವಯಸ್ಸಿನಲ್ಲಿ ಸಂಸಾರ ತ್ಯಾಗ - (ಮಹಾ ಪರಿತ್ಯಾಗ.)
- ಗೌತಮ ಬುದ್ಧನ ಮೊದಲ ಗುರು - ವೈಶಾಲಿಯ ಆದಾರ ಕಲಮನಿಂದ ಸಾಂಖ್ಯ ಸಿದ್ಧಾಂತದ ಬಗ್ಗೆ ಪರಿಚಯ.
- ರಾಜಗೃಹದ ಉದ್ರಕ ಎಂಬ ಗುರುವಿನಿಂದ ಧ್ಯಾನಕ್ಕೆ ಬೇಕಾದ ಏಕಾಗ್ರಚಿತ್ತತೆ ಕಲಿತನು.
- ಗಯಾ ಬಳಿಯ ಉರುವಿಲ್ವದಲ್ಲಿ - ಕಠಿಣ ತಪಸ್ಸು ಪ್ರಯೋಜನವಾಗಲಿಲ್ಲ.
- ಲೀಲಾಜನ / ನೈರಂಜನಾ ನದಿ ದಂಡೆಯ ಮೇಲೆ ಬೋದಗಯಾ ಬಳಿ ಅಶ್ವತ್ಥ ವೃಕ್ಷದ ಕೆಳಗೆ ಜ್ಞಾನ ಮಗ್ನನಾಗಿದ್ದಾಗ ವೈಶಾಖ ಶುದ್ಧ ಪೂರ್ಣಿಮೆಯಂದು ಜ್ಞಾನೋದಯವಾಯಿತು. ಅಂದಿನಿಂದ ಬುದ್ಧ ತಥಾಗತ ಅಂದರೆ ಸತ್ಯವನ್ನು ಅರಿತವನಾದ ಈ ಸ್ಥಳ ಬೋದಗಯಾ ಆಯಿತು. ಆ ಅರಳೀವೃಕ್ಷ ಬೋಧಿವೃಕ್ಷ ಎಂಬ ಹೆಸರು ಪಡೆಯಿತು.
- ಬುದ್ಧನು ಪ್ರಥಮ ಬಾರಿಗೆ ತನ್ನ 5 ಮಂದಿ ಶಿಷ್ಯಂದಿರಿಗೆ ಬೋಧಿಸಿದ್ದು ವಾರಣಾಸಿಯ ಸಾರನಾಥದಲ್ಲಿ, ಅವರುಗಳೆಂದರೆ - ಕೊಂಡಣ್ಣ, ಏಪ್ಪ, ಭವ್ವಾಜಿ, ಆನ್ನಾಜಿ, ಮಹಾನಾಮ.
- ಬುದ್ಧ - ಜನಸಾಮಾನ್ಯರ ಭಾಷೆಯಾದ "ಪಾಳಿ"ಯಲ್ಲಿ ಬೋಧಿಸಿದ.
- ಬುದ್ಧನ ಪ್ರಸಿದ್ಧ ಶಿಷ್ಯಂದಿರು - ಮೊಗ್ಗಲನ (ಮಾಯಾ ವಿದ್ಯೆ ಪ್ರವೀಣ), ಆನಂದ (ಧರ್ಮದಲ್ಲಿ ನಿಪುಣ) ಅನಿರುದ್ಧ, ಉಪಾಲಿ, (ಕ್ಷೌರಿಕ) ಮಹಾ ಕಶ್ಯಪ, (ಕಠೋರ ತಪಸ್ವಿ) ಮಹಾ ಪಜ್ಜಯನ, ಮಹಾತಪ್ಪಿನ ಸಾರಿಪುತ್ರ ಮುಂತಾದವರು.
- ಬೌದ್ಧ ಸಂಗದಲ್ಲಿನ ಸಪ್ತ ಸ್ತ್ರೀಯರು ಖೇಮ, ಉಪ್ಪಾಲವನ್ನ, ಪಟಾಚಾರ, ಭದಧ ಕುಂಡಲಕೇಶ, ಕಿಸಾಗೋತಮಿ, ಧಮದಿನ್ನಾ ಮತ್ತು ವಿಶಾಖ.
- ವೈಶಾಲಿಯ ಜನಪ್ರಿಯ ವೇಶ್ಯೆ ಆಮ್ರಪಾಲಿ ತನ್ನ ಆಮಂತ್ರಣ ಸ್ವೀಕರಿಸಿದ ಬುದ್ಧನ ಪ್ರಭಾವಕ್ಕೆ ಒಳಗಾಗಿ ಬುದ್ಧನ ಶಿಷ್ಯೆಯಾದಳು.
- ಬುದ್ಧನ ಸಾಮಾನ್ಯ ಶಿಷ್ಯರಲ್ಲಿ ಅತ್ಯಂತ ಪ್ರಸಿದ್ಧನಾದವನು - ಶ್ರೀಮಂತ ವ್ಯಾಪಾರಿ, ಅನಾಥ ಪಿಂಡಕ.
- ವಿಶಾಖ ಮತ್ತೊಬ್ಬ ಪ್ರಸಿದ್ಧ ಶ್ರಾವಸ್ಥಿಯಲ್ಲಿನ ಶಿಷ್ಯೆ. ಈಕೆ ತನ್ನ ಮಾವ ಮಿಗಾರ ಎಂಬುವನನ್ನು ಬೌದ್ಧ ಧರ್ಮಕ್ಕೆ ಮತಾಂತರಿಸಿದಳು.
- ತನ್ನ 80ನೇ ವಯಸ್ಸಿನಲ್ಲಿ - ಉತ್ತರ ಪ್ರದೇಶದ ಗೋರಕ್ಪುರದ ಕುಶೀನಗರ / ಕುಶೀನಾರದಲ್ಲಿ ನಿಧನ (ನಿರ್ವಾಣ)

### ಗೌತಮ ಬುದ್ಧನ ನಾಲ್ಕು ಸತ್ಯಗಳು (ತತ್ವಗಳು)

- ಜೀವನವು ದುಃಖಮಯ
- ಆಸೆ, ಲೋಭವೇ ದುಃಖಕ್ಕೆ ಕಾರಣ
- ಆಸೆ, ಲೋಭ ತೊರೆದರೆ ದುಃಖದ ನಿವಾರಣೆಯಾಗುತ್ತದೆ.
- ಆಸೆ, ಲೋಭ ತೊರೆಯಲು ಅಷ್ಟಾಂಗ ಮಾರ್ಗಗಳನ್ನು ಅನುಸರಿಸಬೇಕು.

### ಅಷ್ಟಾಂಗ ಮಾರ್ಗಗಳು (ಮಧ್ಯಮ ಮಾರ್ಗಗಳು)

- ಒಳ್ಳೆಯಯೋಚನೆ
- ಒಳ್ಳೆಯ ಮಾತು
- ಉತ್ತಮ ಜೀವನ
- ಉತ್ತಮ ವಿಚಾರಗಳು ನೆನಪು
- ಒಳ್ಳೆಯನಂಬಿಕೆ
- ಒಳ್ಳೆಯ ಪ್ರಯತ್ನ
- ಉತ್ತಮನಡತೆ
- ಯೋಗ್ಯ ರೀತಿಯ ಧ್ಯಾನ

### ಬೌದ್ಧ ಧರ್ಮ ಪೋಷಿಸಿದ ಪ್ರಮುಖ ರಾಜರು

- ಬಿಂಬಸಾರ
- ಅಜಾತಶತ್ರು
- ಪ್ರಸೇನಜಿತ್ (ಕೋಸಲ)
- ಅಶೋಕ
- ಕಾನಿಷ್ಕ
- ಹರ್ಷವರ್ಧನ, ಮೊದಲಾದವರು

### ಮೊದಲನೇ ಬೌದ್ಧ ಸಮ್ಮೇಳನ

- ಬುದ್ಧನ ನಿಧನಾನಂತರ ಕ್ರಿ.ಪೂ. 487ರಲ್ಲಿ ರಾಜಗೃಹದಲ್ಲಿ ನಡೆಯಿತು.
- ದೇಶ ವಿದೇಶಗಳಿಂದ ಸುಮಾರು 500 ಬೌದ್ಧ ಸನ್ಯಾಸಿಗಳು ಭಾಗವಹಿಸಿದ್ದರು.
- ಆನಂದ, ಉಪಾಲಿ, ಸುಬಂಧು ಮೊದಲಾದ ಬುದ್ಧನ ಶಿಷ್ಯಂದಿರು ಭಾಗವಹಿಸಿದ್ದರು.
- ಮಹಾ ಕಸ್ಸಪನ ಅಧ್ಯಕ್ಷತೆಯಲ್ಲಿ ನಡೆಯಿತು.
- ಈ ಸಮ್ಮೇಳನದ ಉದ್ದೇಶ ಬುದ್ಧನ ಉಪದೇಶಗಳನ್ನು ಸಂಕಲಿಸುವುದಾಗಿತ್ತು.
- ಸುತ್ತ ಪೀಟಕ ಮತ್ತು ವಿನಯ ಪೀಟಕಗಳ ಸಂಕಲನ ಆರಂಭವಾಯಿತು.

### 2ನೇ ಬೌದ್ಧ ಸಮ್ಮೇಳನ

- ಕ್ರಿ.ಪೂ. 387ರಲ್ಲಿ ಮಗದದ ವೈಶಾಲಿಯಲ್ಲಿ ರೇವತರ ಅಧ್ಯಕ್ಷತೆಯಲ್ಲಿ ನಡೆಯಿತು.
- ವೈಶಾಲಿಯ ಸನ್ಯಾಸಿಗಳು ವಿನಯ ಪೀಟಕದಲ್ಲಿನ 10 ಅಂಶಗಳ ನಿಯಮಗಳ ಸಡಿಲಿಕೆಗೆ ಆಗ್ರಹಿಸಿದರು. ಆದರೆ ಕೆಲವರು ಇದನ್ನು ವಿರೋಧಿಸಿದರು. ಪರಿಣಾಮ ಬೌದ್ಧ ಸಂಘವು ಮೊದಲ ಬಾರಿಗೆ ಮಹಾಸಂಘಿಕರು (ನಿಯಮಗಳ ಸಡಿಲಿಕೆಗೆ ಆಗ್ರಹಿಸಿದವರು) ಮತ್ತು ಸ್ಥವಿರವಾದಿಗಳು (ಸಡಿಲಿಕೆ ವಿರೋಧಿಸಿದವರು) ಎಂದು ವಿಭಾಗವಾಯಿತು.

### 3ನೇ ಬೌದ್ಧ ಸಮ್ಮೇಳನ

- ಅಶೋಕನ ಆಶ್ರಯದಲ್ಲಿ ಪಾಟಲೀಪುತ್ರದಲ್ಲಿ ಕ್ರಿ.ಪೂ. 234ರಲ್ಲಿ ನಡೆಯಿತು.
- ಬೌದ್ಧ ಧರ್ಮದ ವಿವಿಧ ಪಂಥಗಳಲ್ಲಿ ಏಕತೆ ತರುವ ಉದ್ದೇಶದಿಂದ ನಡೆಸಲಾಯಿತು.
- ಇದರ ಅಧ್ಯಕ್ಷ ಮೊಗ್ಗಲಿ ಪುತ್ರತಿಸ್ಸ.
- ಅಭಿದಮ್ಮ ಪೀಟಕ ರಚಿತವಾಯಿತು.

### 4ನೇ ಬೌದ್ಧ ಸಮ್ಮೇಳನ

- ಕ್ರಿ.ಶ. 1ನೇ ಶತಮಾನದಲ್ಲಿ ಕಾನಿಷ್ಕನ ಕಾಲದಲ್ಲಿ ಕಾಶ್ಮೀರದ ಶ್ರೀನಗರದ ಬಳಿ ಕುಂಡಲಿವನದಲ್ಲಿ ನಡೆಯಿತು.
- ಉದ್ದೇಶ - ಕಾಶ್ಮೀರ ಮತ್ತು ಗಾಂಧಾರದ ಸರ್ವಸ್ತಿವಾದಿಗಳ ಗುರುಗಳಲ್ಲಿದ್ದ ಭಿನ್ನಾಭಿಪ್ರಾಯ ಚರ್ಚಿಸಲು ಸೇರಿದ್ದಿತು.
- ಹೀನಯಾನ ಮತ್ತು ಮಹಾಯಾನ ಎಂಬ ಎರಡು ಪಂಥಗಳಾಗಿ ಬೌದ್ಧ ಧರ್ಮ ವಿಭಜನೆಯಾಯಿತು.
- ತ್ರಿಪಿಟಕಗಳ ಮೇಲೆ ಮಹಾವಿಭಾಷ ಅಥವಾ ಮಹಾಭಾಷ್ಯ ರಚಿಸಲಾಯಿತು.

### ಬೌದ್ಧ ಧರ್ಮದ 2 ಪಂಥಗಳು

**1. ಹೀನಯಾನ**

- ಬುದ್ಧನು ಬೋಧಿಸಿದ ತತ್ವಗಳನ್ನು ಚಾಚು ತಪ್ಪದೆ ಪಾಲಿಸಿಕೊಂಡು ಹೋಗುತ್ತಿದ್ದ ಪಂಥ.
- ಬುದ್ಧನನ್ನು ವಿಗ್ರಹ ರೂಪದಲ್ಲಿ ಆರಾಧಿಸುತ್ತಿರಲಿಲ್ಲ. ಬದಲಾಗಿ ಬುದ್ಧನ ಅವಶೇಷಗಳನ್ನು ಮಾತ್ರ ಪೂಜಿಸುತ್ತಿದ್ದರು.
- ಪಾಳಿಯು ಹೀನಾಯಾನಿಗಳ ಪ್ರಧಾನ ಭಾಷೆಯಾಗಿತ್ತು.

**2. ಮಹಾಯಾನ :**

- ಇವರು ಬುದ್ಧನನ್ನು ದೇವರೆಂದು ಪರಿಗಣಿಸಿ ವಿಗ್ರಹ ರೂಪದಲ್ಲಿ ಪೂಜಿಸಲಾರಂಭಿಸಿದರು.
- ಕಾನಿಷ್ಕನ ಕಾಲದಲ್ಲಿ ಈ ಪಂಥ ಜನಪ್ರಿಯವಾಯಿತು.
- ಮಹಾಯಾನಿಗಳು ಪಾಳಿ ಭಾಷೆಗೆ ಬದಲು ಸಂಸ್ಕೃತದಲ್ಲಿ ಕೃತಿ ರಚಿಸಿದರು.

### ಸಂಘಟಕರು

- ಅಜಾತಶತ್ರು (1ನೇ ಬೌದ್ಧ ಧರ್ಮದ ಸಮ್ಮೇಳನ)
- ಕಾಲಾಶೋಕ (2ನೇ ಬೌದ್ಧ ಧರ್ಮದ ಸಮ್ಮೇಳನ)
- ಅಶೋಕ (3ನೇ ಬೌದ್ಧ ಧರ್ಮದ ಸಮ್ಮೇಳನ)
- ಕಾನಿಷ್ಕ (4ನೇ ಬೌದ್ಧ ಧರ್ಮದ ಸಮ್ಮೇಳನ)

### ಇತರೆ ಅಂಶಗಳು

- ಬೌದ್ಧ ಧರ್ಮ (ಗೌತಮಬುದ್ಧ) ದೇವರ ಅಸ್ತಿತ್ವದ ಬಗ್ಗೆ ಏನನ್ನೂ ಹೇಳಿಲ್ಲ.
- ಬೌದ್ಧ ಧರ್ಮವು ಪುನರ್ ಜನ್ಮದಲ್ಲಿ ನಂಬಿಕೆ ಇಟ್ಟಿತ್ತು.

- ಅಶೋಕನು ಬೌದ್ಧ ಧರ್ಮದ ಸಾರಾಂಶಗಳನ್ನು ಶಿಲಾಶಾಸನಗಳಲ್ಲಿ ಕೆತ್ತಿಸಿ, ದೇಶದ ವಿವಿಧ ಮೂಲೆಗಳಲ್ಲಿ ನಡೆಸಿದ್ದರಿಂದ ದೇಶಾದ್ಯಂತ ಈ ಧರ್ಮವು ಹಬ್ಬಿತು. ಹಾಗೆಯೇ ವಿದೇಶಗಳಲ್ಲಿ ಹಬ್ಬಲು ಅಶೋಕ ಕಾರಣಕರ್ತನಾದ.
- ಕಾನಿಷ್ಕನ ಕಾಲದಲ್ಲಿ ಈ ಧರ್ಮವಾಯುವ್ಯ ಭಾರತ, ಅಫ್‌ಘಾನಿಸ್ಥಾನದಲ್ಲಿ ಪ್ರಸಾರವಾಯಿತು.
- ಕಾಶ್ಯಪ ಮಾತಂಗನು ಬೌದ್ಧ ಗ್ರಂಥಗಳನ್ನು ಚೀನಿ ಭಾಷೆಗೆ ಭಾಷಾಂತರಿಸುವುದರ ಮೂಲಕ ಕ್ರಿ.ಶ. 1ನೇ ಶತಮಾನದಲ್ಲಿ ಚೀನಾದಲ್ಲಿ ಬೌದ್ಧ ಧರ್ಮಪ್ರಸಾರವಾಗಲು ಕಾರಣವಾದನು.
- ಕ್ರಿ.ಶ. 6ನೇ ಶತಮಾನದಲ್ಲಿ ಜಪಾನ್ ಮತ್ತು ಕ್ರಿ.ಶ. 7ನೇ ಶತಮಾನದಲ್ಲಿ ಟಿಬೆಟ್‌ಗೆ ಬೌದ್ಧ ಮತ ಪ್ರಸಾರವಾಯಿತು.
- ನಳಂದ, ವಿಕ್ರಮಶೀಲ, ಓದಂತಪುರಿ ಇವು ಬೌದ್ಧ ವಿ.ವಿ.ಗಳು.
- ಸರ್ ಎಡ್ವಿನ್ ಅರ್ನಾಲ್ಡ್‌ರವರು ಬುದ್ಧನನ್ನು "ಏಷ್ಯಾದ ಜ್ಯೋತಿ" ಎಂದು ವರ್ಣಿಸಿದ್ದಾರೆ.

## ಮಹಾಜನ ಪದಗಳು ಮತ್ತು ಗಣರಾಜ್ಯಗಳು

- 16. ಮಹಾಜನ ಪದಗಳು ಮತ್ತು ಅವುಗಳ ರಾಜಧಾನಿಗಳು
- ಕಾಶಿ-ಬನಾರಸ್ (ವಾರಣಾಸಿ)
- ಕೋಸಲ - ಅಯೋಧ್ಯೆ ನಂತರ ಶ್ರಾವಸ್ಥಿ
- ಅಂಗ - ಚಂಪಾ
- ಮಗಧ - ಗಿರಿವಜ್ರ / ರಾಜಗೃಹ ನಂತರ ಪಾಟಲಿಪುತ್ರ
- ಮಲ್ಲ - (ಮಾಳವ) - ಕುಶಿನಾರ ಮತ್ತು ಪವ
- ವೃಜ್ಜಿ (ವಜ್ಜಿ) - ವೈಶಾಲಿ
- ಚೇದಿ - ಸುಕ್ತಿಮತಿ
- ವತ್ಸ (ವಮ್ಸ) - ಕೋಸಂಬಿ
- ಕುರು - ಇಂದ್ರಪ್ರಸ್ಥ
- ಪಾಂಚಾಲ - ಕಾಂಪಿಲ್ಯ
- ಮತ್ಸ್ಯ - ವಿರಾಟನಗರ
- ಶುರಸೇನಿ - ಮಥುರ
- ಅಸ್ಮಾಕ - ಪೊತಾಲಿ / ಪೊತಾನ್
- ಆವಂತಿ - ಉಜ್ಜೆಯಿನಿ ಮತ್ತು ಮಹಿಸ್ಮತಿ
- ಗಾಂಧಾರ - ತಕ್ಷಶಿಲ
- ಕಾಂಬೋಜ - ರಾಜಪುರ

**ಬೌದ್ಧ ಸಾಹಿತ್ಯದಲ್ಲಿ ಕಂಡುಬರುವ 10 ಗಣರಾಜ್ಯಗಳು**

- ಕಪಿಲವಸ್ತುವಿನ ಶಾಕ್ಯರು
- ಪವದ ಮಲ್ಲರು
- ವಸಾಲಿಯ ನಾಯರು / ಜ್ಞಾತ್ರಿಕರು
- ಮಿಥಿಲದ ವಿದೇಹರು
- ಹುಸಿನಾರದ ಮಲ್ಲರು
- ಸಮ ಸುಮಾ ಬೆಟ್ಟಗಳ ಭಗ್ಗರು

- ಕೆಸಪಟ್ಟದ ಕೆಳಮಾರುಗಳು
- ಅಲ್ಲಕಪ್ಪದ ಬುಲ್ಲಿಯರು
- ವೈಶಾಲಿಯ ಲಿಚ್ಛವಿಗಳು
- ಪಿಪ್ಪಲಿವನದ ಮೌರ್ಯರು

**ಮಗದ ಸಾಮ್ರಾಜ್ಯದ ಏಳಿಗೆ**

- ಮಗಧ ರಾಜ್ಯದ ಸ್ಥಾಪಕರು - ಜರಾಸಂಧ ಮತ್ತು ಬೃಹದ್ರತ

**ಪುರಾಣಗಳ ಪ್ರಕಾರ ಮಗಧ ರಾಜ್ಯವನ್ನಾಳಿದ ರಾಜರ ಪಟ್ಟಿ :**

- ಶಿಶುನಾಗ
- ಕಾಕವರ್ಣ
- ಕ್ಷೇಮವರ್ಧನ್
- ಕ್ಷಾತ್ರರಾಜ
- ಬಿಂಬಸಾರ (547 ಕ್ರಿ.ಪೂ. -495)
- ಅಜಾತಶತ್ರು (491-462 ಕ್ರಿ.ಪೂ.)
- ದರ್ಸಕ
- ಉದಯನ
- ನಂದಿವರ್ಧನ
- ಮಹಾನಂದಿನ್

**ಮಗದದಲ್ಲಿ ನಂದರು (ನವ ನಂದರು)**

1. ಮಹಾ ಪದ್ಮನಂದ (ಸ್ಥಾಪಕ)
2. ಪಾಂಡುಕ
3. ಪಾಂಡುಗತಿ
4. ಭೂತಪಾಲ
5. ರಾಷ್ಟ್ರಪಾಲ
6. ಗೋವಿಶಾಂಕ
7. ದಶಸಿದ್ಧಕ
8. ಕೈವಾರ್ತ
9. ಧನನಂದ

## ಮೌರ್ಯ ಸಾಮ್ರಾಜ್ಯ

**ಚಂದ್ರಗುಪ್ತ ಮೌರ್ಯ (ಕ್ರಿ.ಪೂ. 324-300)**

- ಮೌರ್ಯ ಸಾಮ್ರಾಜ್ಯದ ಸ್ಥಾಪಕ
- ನಂದರ ಕೊನೆಯ ದೊರೆ ಧನನಂದನನ್ನು ಸೋಲಿಸಿ, ಮಗದದಲ್ಲಿ ಮೌರ್ಯಸಾಮ್ರಾಜ್ಯ ಸ್ಥಾಪಿಸಿದ.
- ಧನನಂದನನ್ನು ಸೋಲಿಸಲು ಚಂದ್ರಗುಪ್ತ ಮೌರ್ಯನಿಗೆ ನೆರವು ನೀಡಿದವನು ಕೌಟಿಲ್ಯ / ಚಾಣಿಕ್ಯ
- ಕ್ರಿ.ಪೂ. 305ರಲ್ಲಿ - ಸಿರಿಯಾ ರಾಜ ಸೆಲ್ಯುಕಸ್ ನಿಕೆಟರ್‌ನೊಡನೆ ಯುದ್ಧ.
- ಸೋತ ಸೆಲ್ಯುಕಸ್ ತನ್ನ ಮಗಳನ್ನು ಚಂದ್ರಗುಪ್ತ ಮೌರ್ಯನಿಗೆ ಕೊಟ್ಟು ವಿವಾಹ ಮಾಡಿದ.
- ಸೆಲ್ಯುಕಸ್ - ಚಂದ್ರಗುಪ್ತನ ಆಸ್ಥಾನಕ್ಕೆ ಮೆಗಸ್ತನೀಸ್ ಎಂಬ ರಾಯಭಾರಿಯನ್ನು ಕಳುಹಿಸಿದ.
- ತನ್ನ ಕೊನೆಯ ದಿನಗಳಲ್ಲಿ ಸಿಂಹಾಸನ ತ್ಯಜಿಸಿ ಜೈನಸನ್ಯಾಸಿ, ಭದ್ರಬಾಹುವಿನೊಡನೆ ಶ್ರವಣಬೆಳಗೊಳಕ್ಕೆ ಆಗಮಿಸಿ, ಸಲ್ಲೇಖನ ವ್ರತ ಕೈಗೊಂಡ.
- ರುದ್ರಧಾಮನ್‌ನ ಜುನಾಗಢ ಶಾಸನದ ಪ್ರಕಾರ ಇವನು ಗುಜರಾತ್ ಪ್ರದೇಶವನ್ನು ಆಕ್ರಮಿಸಿದ್ದ ಹಾಗೂ ಅಲ್ಲಿ ವೈಶ್ಯ ಪುಷ್ಯ ಗುಪ್ತನನ್ನು ರಾಜ್ಯಪಾಲನನ್ನಾಗಿ ನೇಮಿಸಿದ್ದ. ಈತ ನೀರಾವರಿಗಾಗಿ ಸುದರ್ಶನ ಕೆರೆಯನ್ನು ನಿರ್ಮಿಸಿದ. ಮುಂದೆ ಅಶೋಕನ ಕಾಲದಲ್ಲಿ ಗುಜರಾತಿ / ಸೌರಷ್ಟ್ರದ ರಾಜ್ಯಪಾಲನನ್ನಾಗಿ ಗ್ರೀಕ್‌ನ ತುಶಸ್ಪನನ್ನು ನೇಮಿಸಲಾಯಿತು. ಈತ ಇದೇ ಕೆರೆಗೆ ನಾಲೆಗಳನ್ನು ನಿರ್ಮಿಸಿದ.
- ಚಂದ್ರಗುಪ್ತ ಮೌರ್ಯನ ಅಮಾತ್ಯ, ಕೌಟಿಲ್ಯ (ಅರ್ಥಶಾಸ್ತ್ರದ ಕರ್ತೃ)

**ಬಿಂದುಸಾರ (ಕ್ರಿ.ಪೂ. 299/300-273)**

- ಚಂದ್ರಗುಪ್ತ ಮೌರ್ಯನ ಮಗ
- ಚಂದ್ರಗುಪ್ತ ನೆಲೆಗೊಳಿಸಿದ ಸಾಮ್ರಾಜ್ಯವನ್ನು ಪ್ರಬಲಗೊಳಿಸಿದ ಶ್ರೇಯಸ್ಸು ಇವನದು.
- ತಕ್ಷಶಿಲೆಯಲ್ಲಿ ಸಂಭವಿಸಿದ ದಂಗೆ ಅಡಗಿಸಲು ತನ್ನ ಪುತ್ರ ಅಶೋಕನನ್ನು ನೇಮಿಸಿದ.
- ಕರ್ನಾಟಕ ರಾಜ್ಯದ ಚಿತ್ರದುರ್ಗದವರೆಗಿನ ಇವನ ಸಾಮ್ರಾಜ್ಯ ವ್ಯಾಪಿಸಿತ್ತು.
- ಅಮಿತ್ರಘಾತ (ಶತ್ರುನಾಶಕ) ಅಥವಾ ಅಮಿತ್ರಖಾಡ ಎಂದು ಗ್ರೀಕ್ ಲೇಖಕರು ಇವನನ್ನು ಸಂಬೋಧಿಸಿದ್ದಾರೆ.
- ಗ್ರೀಕ್ ದೇಶದ ಡೈಮಾಕಸ್ ಇವನ ಆಸ್ಥಾನಕ್ಕೆ ರಾಯಭಾರಿಯಾಗಿ ಭೇಟಿ ನೀಡಿದ್ದ.

**ಅಶೋಕ ಮಹಾಶಯ (ಕ್ರಿ.ಪೂ. 273-232)**

- ತಂದೆ ಬಿಂದುಸಾರನ ಕಾಲದಲ್ಲಿ ತಕ್ಷಶಿಲೆ ಮತ್ತು ಉಜ್ಜಯಿನಿ ರಾಜ್ಯಪಾಲನಾಗಿ ಕಾರ್ಯ.
- ಬಿಂದುಸಾರ ಮೃತನಾದ (273 ಕ್ರಿ.ಪೂ.) 4 ವರ್ಷಗಳ ತರುವಾಯ - ಪಾಟಲಿಪುತ್ರದಲ್ಲಿ ಪಟ್ಟಾಭಿಷೇಕ (ಕ್ರಿ.ಪೂ. 269)
- ಬೌದ್ಧ ಮಹಾವಂಶದ ಪ್ರಕಾರ ತನ್ನ 99 ಸೋದರರನ್ನು ಕೊಲೆ ಮಾಡಿ ಚಕ್ರವರ್ತಿಯಾದ.
- ಅಶೋಕ ತನ್ನ ಸೋದರನನ್ನು ಕೊಂದ ಎಂಬುದಕ್ಕೆ ಬೌದ್ಧ ಮಹಾವಂಶ ಬಿಟ್ಟು ಮತ್ತೆ ಯಾವುದೇ ಆಧಾರವಿಲ್ಲ.
- ಕ್ರಿ.ಪೂ. 261ರಲ್ಲಿ ಕಳಿಂಗ ಯುದ್ಧದಲ್ಲಿ ಜಯ.
- ಕಳಿಂಗ ಯುದ್ಧದ ನಂತರ - ಯುದ್ಧ ತ್ಯಜಿಸಿ ಧರ್ಮಾಶೋಕನಾದ. (ಬೌದ್ಧ ಧರ್ಮ ಸ್ವೀಕಾರ)
- ಬೌದ್ಧ ಧರ್ಮದ ಪ್ರಚಾರಕ್ಕಾಗಿ - ವಿವಿಧ ದೇಶಗಳಿಗೆ ಧರ್ಮ ಪ್ರಚಾರಕರನ್ನು ಕಳುಹಿಸಿದ.

**ಅಶೋಕನ ಧರ್ಮಪ್ರಚಾರಕರು**

| ಧರ್ಮ ಪ್ರಚಾರಕರು | | ಸ್ಥಳಗಳು |
|---|---|---|
| ❖ ಮಜ್ಜಮ | - | ಹಿಮಾಲಯ ದೇಶ |
| ❖ ಮಜ್ಜಂತಿಕ | - | ಕಾಶ್ಮೀರ ಮತ್ತು ಗಾಂಧಾರ |
| ❖ ಮಹಾರಕ್ಷಿತ | - | ಗ್ರೀಕ್ ದೇಶ |
| ❖ ಮಹಾಧರ್ಮರಕ್ಷಿತ | - | ಮಹಾರಾಷ್ಟ್ರ |
| ❖ ರಕ್ಷಿತ | - | ವನವಾಸಿ / ಬನವಾಸಿ (ಉತ್ತರ ಕನ್ನಡ) |
| ❖ ಮಹಾದೇವ | - | ಮಹಿಷಮಂಡಲ (ಮೈಸೂರು) |
| ❖ ಸೋನ ಮತ್ತು ಉತ್ತರ | - | ಬರ್ಮಾ (ದೂರ ಪ್ರಾಚ್ಯ) |
| ❖ ಮಹೇಂದ್ರ ಮತ್ತು ಸಂಘಮಿತ್ರೆ | - | ಶ್ರೀಲಂಕ / ಸಿಂಹಳ |
| ❖ ಧರ್ಮ ರಕ್ಷಿತ | - | ಅಪರಾಂತ. |

**ಶಾಸನಗಳು**

- ಶಾಸನಗಳ ಲಿಪಿ - ಬ್ರಾಹ್ಮಿ, ಖರೋಷ್ಟಿ, ಗ್ರೀಕ್ ಮತ್ತು ಅರಾಮಿಕ್
- ಕಾಂದ್‌ಹಾರ್ (ಶರ್-ಐ-ಕುನ್ ಶಾಸನ) ವು ಗ್ರೀಕ್ ಮತ್ತು ಅರಾಮಿಕ್ ದ್ವಿಭಾಷೆಯಲ್ಲಿದೆ.
- ಜಲಾಲಬಾದ್ (ಲಂಪಕ) ಶಾಸನ ಅರಾಮಿಕ್ ಲಿಪಿಯಲ್ಲಿದೆ.
- ಮನ್ಸೇರಾ, ಷಹಬಾಜ್ಘರಿಗಳು (ಪಾಕಿಸ್ತಾನ) ಖರೋಷ್ಠಿ ಲಿಪಿಯಲ್ಲಿವೆ.
- ಅಶೋಕನ ಶಿಲಾಶಾಸನಗಳು - 1825ರಿಂದ ಈಚೆಗೆ ಪತ್ತೆಯಾದವು.
- ಅಶೋಕನ ಶಾಸನಗಳನ್ನು ಮೊದಲಿಗೆ ಓದಿದ ವಿದ್ವಾಂಸ - ಜೇಮ್ಸ್ ಪ್ರಿನ್ಸೆಪ್ (1837)

**ಅಶೋಕನ ಶಿಲಾಶಾಸನಗಳ ವರ್ಗೀಕರಣ**

- ❖ ಮುಖ್ಯ ಶಿಲಾಶಾಸನಗಳು
- ❖ ಗೌಣ ಶಿಲಾಶಾಸನಗಳು
- ❖ ಮುಖ್ಯಸ್ತಂಭ ಶಾಸನಗಳು
- ❖ ಗೌಣಸ್ತಂಭ ಶಾಸನಗಳು
- ❖ ಸ್ಮರಣಾರ್ಥ ಸ್ತಂಭ ಶಾಸನಗಳು

**1. ಮುಖ್ಯ ಶಿಲಾಶಾಸನಗಳು**

- ❖ ಗಿರ್ನಾರ್ ಶಾಸನ
- ❖ ಸಹಬಾಜ್‌ಘುರಿ ಶಾಸನ
- ❖ ದೌಲಿ ಶಿಲಾಶಾಸನ
- ❖ ಬಾಂಬೆ-ಸೋಪಾರ
- ❖ ಕಾಲ್ಸ ಶಾಸನ
- ❖ ಮುನ್ಷೇರಾ ಶಿಲಾಶಾಸನ
- ❖ ಜೌಗಡ ಶಿಲಾಶಾಸನ
- ❖ ಯರ್ರಗುಡಿ ಶಿಲಾಶಾಸನ ಇತ್ಯಾದಿ.

**2. ಗೌಣ ಶಿಲಾಶಾಸನ**

- ❖ ರೂಪನಾಥ್ ಶಿಲಾಶಾಸನ
- ❖ ಸಹಸ್ರಾಮ್ ಶಿಲಾಶಾಸನ
- ❖ ಮಸ್ಕಿ ಶಿಲಾಶಾಸನ
- ❖ ಸಿದ್ಧಾಪುರ
- ❖ ಗವಿಮಠ
- ❖ ರಜುಲಮಂಡಗಿರಿ ಶಿಲಾಶಾಸನ
- ❖ ಅಹ್ರೌರ ಶಿಲಾಶಾಸನ - ಇತ್ಯಾದಿ.
- ❖ ಬೈರತ್ ಶಿಲಾಶಾಸನ
- ❖ ಕಲ್ಕತ್ತಾ - ಬೈರತ್ (ಬಬ್ರು ಶಾಸನ)
- ❖ ಬ್ರಹ್ಮಗಿರಿ
- ❖ ಜಟಿಂಗ ರಾಮೇಶ್ವರ ಶಿಲಾಶಾಸನ
- ❖ ಪೌಲ್ಕಿಗುಂಡು
- ❖ ಗುಜರ್ರಾ ಶಾಸನ

**3. ಮುಖ್ಯ ಸ್ತಂಭಶಾಸನಗಳು**

- ❖ ದೆಹಲಿ - ತೋಪ್ರಾ ಸ್ತಂಭಶಾಸನ
- ❖ ರಾಮ್‌ಪೂರ್ವ - ಸ್ತಂಭ ಶಾಸನ
- ❖ ದೆಹಲಿ - ಮೀರತ್ ಸ್ತಂಭಶಾಸನ
- ❖ ಅಲಹಾಬಾದ್ - ಕೋಸಂಬಿ ಸ್ತಂಭಶಾಸನ
- ❖ ಲೌರಿಯಾ ಆರಾರಜ್ ಮತ್ತು ಲೌರಿಯ ನಂದನ್ ಘರ್

**4. ಗೌಣ ಸ್ತಂಭ ಶಾಸನಗಳು**

- ❖ ರಾಂಚಿ ಸ್ತಂಭಶಾಸನ
- ❖ ಸಾರನಾಥ್ ಸ್ತಂಭಶಾಸನ
- ❖ ಅಲಹಾಬಾದ್ ಕೋಸಂಬಿ ಸ್ತಂಭಶಾಸನ

**5. ಸ್ಮರಣಾರ್ಥ ಸ್ತಂಭಶಾಸನಗಳು**

- ❖ ರುಮ್ಮಿಂಡೈ ಸ್ತಂಭಶಾಸನ
- ❖ ನಿಗಾಲಿಸಾಗರ್ ಸ್ತಂಭಶಾಸನ

**ಪ್ರಮುಖ ಶಾಸನಗಳ ಮಹತ್ವ**

- ❖ **1ನೇ ಮುಖ್ಯ ಬಂಡೆಗಲ್ಲು ಶಾಸನ :** ಹಬ್ಬ ಹರಿದಿನಗಳಲ್ಲಿ ಪ್ರಾಣಿ ಬಲಿ ಆಚರಣೆಗಳನ್ನು ನಿಷೇಧಿಸುವ ಬಗ್ಗೆ ತಿಳಿಸಿದೆ.
- ❖ **2ನೇ ಮುಖ್ಯ ಬಂಡೆಗಲ್ಲು ಶಾಸನ :** ಮನುಷ್ಯರು ಮತ್ತು ಪ್ರಾಣಿಗಳಿಗಾಗಿ ದೇಶಾದ್ಯಂತ ಆಸ್ಪತ್ರೆಗಳನ್ನು ಕಟ್ಟಲಾಯಿತೆಂದು ಸಂಪರ್ಕವಿದ್ದ ಪಾಶ್ಚಿಮಾತ್ಯ ದೇಶಗಳಲ್ಲಿ ಚಿಕಿತ್ಸಾಲಯ ಕಟ್ಟಿಸಿದ ಬಗ್ಗೆ ವಿವರಣೆ ಇದೆ.

- **3ನೇ ಬಂಡೆಗಲ್ಲು ಶಾಸನ :** ತಂದೆ, ತಾಯಿ, ಗುರುಹಿರಿಯರಿಗೆ ವಿಧೇಯತೆ, ಪ್ರಾಣಿಗಳಿಗೆ ದಯೆ ತೋರಬೇಕು. ಸತ್ಯವನ್ನೇ ನುಡಿಯಬೇಕು - ಇಂತಹ ಕಾರ್ಯಗಳ ಮೂಲಕ ಸ್ವರ್ಗ ಪಡೆಯಬಹುದು.
- **6ನೇ ಮುಖ್ಯ ಬಂಡೆಗಲ್ಲು ಶಾಸನ :** 'ನಾನು ಭೋಜನ ಮಾಡುತ್ತಿರಲಿ, ಅಂತಃಪುರದಲ್ಲಿರಲಿ, ಗೋಶಾಲೆಯಲ್ಲಿರಲಿ, ಉದ್ಯಾನವನದಲ್ಲಿರಲಿ ಯಾವುದೇ ಸಮಯದಲ್ಲಿ ಪ್ರಜೆಗಳು ತಮ್ಮ ಕುಂದುಕೊರತೆಗಳನ್ನು ತಿಳಿಸತಕ್ಕದ್ದು.
- **7 ಮತ್ತು 12ನೇ ಮುಖ್ಯ ಶಿಲಾಶಾಸನಗಳು :** ಪರಮತ ಸಹಿಷ್ಣುತೆ ಬಗ್ಗೆ ತಿಳಿಸುತ್ತದೆ.
- **11ನೇ ಶಿಲಾಶಾಸನ :** ಮಂಗಳ ಕಾರ್ಯ ಮಾಡುವುದು ನಿಷ್ಪ್ರಯೋಜಕ, ದಯೆ ದಾನ, ಸತ್ಯ, ಶೌಚ ಮಾರ್ದವ ಸಂಪನ್ನತೆ ಇವುಗಳ ಆಚರಣೆಯಿಂದ ಲೋಕ ಅಭಿವೃದ್ಧಿ ಹೊಂದುತ್ತದೆ. ಇಹಲೋಕದಲ್ಲಿ ಸುಖ, ಪರಲೋಕದಲ್ಲಿ ಸದ್ಗತಿ.
- **9ನೇ ಶಿಲಾಶಾಸನ :** ಕೆಲವೊಂದು ಸಂಸ್ಕಾರಗಳು ಕ್ಷುಲ್ಲಕವಾದವುಗಳು.
- **5ನೇ ಸ್ತಂಭ ಶಾಸನ :** ಈ ಶಾಸನದ ಮೂಲಕ ಸುಗ್ರೀವಾಜ್ಞೆ ಹೊರಡಿಸಿ ಗಿಳಿ, ಹೆಬ್ಬಾವು, ಮಂಗಗಳು, ಮುಳ್ಳುಹಂದಿ, ಖಡ್ಗಮೃಗ ಮುಂತಾದ ಪ್ರಾಣಿಗಳನ್ನು ಯಾವುದೇ ಸಂದರ್ಭದಲ್ಲಿ ಕೊಲ್ಲಬಾರದು. ವರ್ಷದ ಕೆಲವು ದಿನಗಳ ಕಾಲ ಮೀನು ಹಿಡಿಯಬಾರದು ಮತ್ತು ಪ್ರಾಣಿವಧೆ ಮಾಡಬಾರದು.
- **4ನೇ ಸ್ತಂಭ ಶಾಸನ :** ರಾಜ್ಯಪಾಲರುಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿರುವ ಬಗ್ಗೆ ವಿವರಣೆ.
- **7ನೇ ಸ್ತಂಭ ಶಾಸನ :** ಕಲ್ಯಾಣಕಾರ್ಯಗಳು ಅಂದರೆ ರಸ್ತೆಗಳುದ್ದಕ್ಕೂ ಮರಗಳನ್ನು ನೆಡೆಸಿದ್ದೇನೆ, ಮಾವಿನ ತೋಪುಗಳನ್ನು ನೆಡೆಸಿದ್ದೇನೆ, ಪ್ರತಿ 9 ಮೈಲಿಗಳಿಗೆ ಬಾವಿಗಳನ್ನು ಮತ್ತು ವಿಶ್ರಾಂತಿ ಗೃಹಗಳನ್ನು ನಿರ್ಮಿಸಿದ್ದೇನೆ ಎಂದು ಕೆತ್ತಿಸಿದ್ದಾನೆ.
- **1ನೇ ಕಳಿಂಗ ಶಾಸನ (1ನೇ ಪ್ರತ್ಯೇಕ ಬಂಡೆಗಲ್ಲು ಶಾಸನ) :** "ಎಲ್ಲಾ ಮನುಷ್ಯರು ನನ್ನ ಮಕ್ಕಳೇ ಸರಿ" ನನ್ನ ಮಕ್ಕಳಿಗೋಸ್ಕರ ಇಹಲೋಕ ಹಾಗೂ ಪರಲೋಕದಲ್ಲಿ ಹೇಗೆ ಸಮೃದ್ಧಿ ಹಾಗೂ ಸಂತೋಷವನ್ನು ಬಯಸುತ್ತೇವೆಯೋ ಹಾಗೆಯೇ ತನ್ನ ಪ್ರಜೆಗಳಿಗಾಗಿ ಅದನ್ನೇ ಬಯಸುತ್ತೇನೆ ಎಂದು ತಿಳಿಸಿದ್ದಾನೆ.
- **13ನೇ ಬಂಡೆಗಲ್ಲು ಶಾಸನ :** ಕ್ರಿ.ಪೂ. 261ರ ಕಳಿಂಗ ಯುದ್ಧದ ಬಗ್ಗೆ ವರ್ಣನೆ ಮಾಡಿದ. ಹಾಗೂ ಧರ್ಮದ ಮಹಾಮಾತ್ರರ ನೇಮಕದ ಬಗ್ಗೆಯು ವಿಚಾರವಿದೆ.

**ಇತರೆ ಪ್ರಮುಖ ಅಂಶಗಳು**

1. ಅಶೋಕ ತನ್ನ ಆಡಳಿತದ 12ನೇ ವರ್ಷದಲ್ಲಿ ಬಾರಾಬರ್ ಬೆಟ್ಟದಲ್ಲಿ ಸುಧಾಮ ಗುಹಾಲಯವನ್ನು 19ನೇ ವರ್ಷದಲ್ಲಿ ಕರ್ಣಚೌಪಾರ ಗುಹಾಲಯವನ್ನು ಅಜೀವಿಕ ಪಂಥದವರಿಗಾಗಿ ನಿರ್ಮಿಸಿದ.
2. ಅಶೋಕನ ಶಿಲಾಸ್ತಂಭ ಶಾಸನಗಳನ್ನು ಚುನಾರ್ ಸಮೀಪದ ಕಣಿವೆಯಲ್ಲಿ ಕೆತ್ತಿಸಲಾಗುತ್ತಿತ್ತು.
3. ಜನಗಣತಿ ಆರಂಭಿಸಿದವರಲ್ಲಿ ಮೌರ್ಯರು ಪ್ರಪಂಚದಲ್ಲೇ ಎರಡನೆಯವರು (ಮೊದಲಿಗರು ಚೀನಾದವರು)
4. ಅಶೋಕನ ಸಮಕಾಲೀನ ವಿದೇಶಿ ರಾಜರುಗಳು (13ನೇ ಬಂಡೆಗಲ್ಲು ಶಾಸನದಲ್ಲಿ ಉಲ್ಲೇಖಿಸಲಾಗಿದೆ.)
   - ಸಿರಿಯಾದ - 2ನೇ ಆಂಟಿಯೋಗಸ್ ಥಿಯೋಸ್.
   - ಈಜಿಪ್ಟಿನ - 2ನೇ ಟಾಲೆಮಿ ಫಿಲಿಡೆಲ್ಫಿಸ್
   - ಮ್ಯಾಸಿಡೋನಿಯಾದ - ಆಂಟಿಗೋನಾ ಗೋನಟಸ್
   - ಎಪಿರಸನ - ಅಲೆಕ್ಸಾಂಡರ್
   - ಸಿರಿನ್‌ನ - ಮಾಗಾಸ್

**ಮೌರ್ಯರ ಕಾಲದಲ್ಲಿ ಬಂದ ವಿದೇಶಿ ರಾಯಭಾರಿಗಳು**

- ಮೆಗಸ್ತನೀಸ್ - ಚಂದ್ರಗುಪ್ತ ಮೌರ್ಯನ ಆಸ್ಥಾನ. (ಸಿರಿಯಾದ ಸೆಲ್ಯುಕಸ್ ರಾಯಭಾರಿ)

- ಡಯಮೇಖಸ್ - ಬಿಂದುಸಾರ ಆಸ್ಥಾನಕ್ಕೆ (ಸಿರಿಯಾದ 1ನೇ ಆಂಟಿಯೊಕಸ್ ರಾಯಭಾರಿ)
- ಡಯೋನೀಸಿಯಸ್ - ಬಿಂದುಸಾರನ (ಈಜಿಪ್ಟ್‌ನ 2ನೇ ಟಾಲೆಮಿಫಿಲಿಡೆಲ್ಫಿಸ್ ರಾಯಭಾರಿ)
- ಮೊದಲ ಬಾರಿಗೆ 'ದೇವನಾಂಪ್ರಿಯ ಪಿಯದಸಿ' ಎಂಬ ರಾಜನ ಹೆಸರನ್ನು ಗುರ್ತಿಸಿದವನು ಜೇಮ್ಸ್ ಪ್ರಿನ್ಸಪ್, 1837ರಲ್ಲಿ.
- ದೇವನಾಂಪ್ರಿಯ ಪ್ರಿಯದರ್ಶಿ ಅಶೋಕನೇ ಎಂದು ಮೊದಲ ಬಾರಿಗೆ ತಿಳಿಯಪಡಿಸಿದ ಶಾಸನ. ರಾಯಚೂರು ಜಿಲ್ಲೆಯ ಮಾಸ್ಕಿ ಶಾಸನ.
- ಕೌಟಿಲ್ಯನು ಗೂಢಾಚಾರರನ್ನು "ಗುದಪುರುಷ" ಎಂದು ಉಲ್ಲೇಖಿಸಿದ್ದಾರೆ.

**ಮೌರ್ಯರ ಕಾಲದ ನ್ಯಾಯಾಲಯಗಳು**

- ಧರ್ಮಸ್ತೇಯ (ಸಿವಿಲ್ ನ್ಯಾಯಲಯ)
- ಕಂಟಕಶೋಧನ (ಕ್ರಿಮಿನಲ್ ನ್ಯಾಯಲಯ)
- ಇತರೆ ಪ್ರಾಂತ್ಯಗಳ ನ್ಯಾಯಾಲಯಗಳೆಂದರೆ - ಜನಪದ ಸಂಧಿ, ದ್ರೋಣಮುಖ ಸಂಗ್ರಹ.

**ಭಾರತದ ಮೇಲೆ ವಿದೇಶಿಯರ ದಾಳಿ**

**ಪರ್ಶಿಯನ್ನರು**

- ಭಾರತದ ಮೇಲೆ ದಾಳಿಯಿಟ್ಟ ಪ್ರಥಮ ವಿದೇಶಿಯರು - ಪರ್ಶಿಯನ್ನರು.
- ವಾಯುವ್ಯ ಭಾರತದ ಮೇಲೆ ದಾಳಿಯಿಟ್ಟ ಪ್ರಥಮ ಪರ್ಶಿಯನ್ ರಾಜ (ಅಕಮೇನಿಯನ್ ಸಾಮ್ರಾಟ)
- ಸೈರಸ್ (ಕ್ರಿ.ಪೂ. 558-530)
- ಪರ್ಶಿಯನ್ ರಾಜ ಸೈರಸ್ - ಗಾಂಧಾರ ರಾಜ್ಯದ ಹಿಂದೂ ರಾಜ್ಯ ಪಕ್ಕುಸಾತಿಯನ್ನು ಸೋಲಿಸಿದ.
- ಮೆಗಸ್ತನೀಸ್ ಪ್ರಕಾರ - ಭಾರತದ ದಾಳಿಯಯೋಜನೆಯನ್ನು ಸಿದ್ಧಗೊಳಿಸಿದ್ದವಳು - ಆಸ್ಸೀರಿಯಾದ ರಾಣಿ ಸೆಮಿನರೆಸ್.
- ಸೈರಸ್‌ನ ಉತ್ತರಾಧಿಕಾರಿಗಳಲ್ಲೆಲ್ಲಾ ಪ್ರಸಿದ್ಧನಾದ ಪರ್ಶಿಯನ್ ಚಕ್ರವರ್ತಿ - 1ನೇ ಡೇರಿಯಸ್
- 1ನೇ ಡೇರಿಯಸ್‌ನ ಮತ್ತೊಂದು ಹೆಸರು - ದಾರ
- ಭಾರತದ ವಾಯುವ್ಯ ಭಾಗವನ್ನು ಗೆದ್ದು, ಅದನ್ನು ತನ್ನ ಸಾಮ್ರಾಜ್ಯದ ಒಂದು ಪ್ರಾಂತ್ಯವನ್ನಾಗಿ ಮಾಡಿಕೊಂಡ ಪರ್ಶಿಯನ್ ರಾಜ - 1ನೇ ಡೇರಿಯಸ್.
- ಭಾರತದ ಸಿಂಧೂಭಾಗ (ವಾಯುವ್ಯ ಭಾಗ) ಡೇರಿಯಸ್ 20ನೇ ಪ್ರಾಂತ್ಯ (ಸತ್ರಪಿ)ಯಾಗಿತ್ತು.
- ಗ್ರೀಕ್ ಭೂ ಅನ್ವೇಷಕನಾದ ಸ್ಕೈಲಾಕ್ಸ್‌ನನ್ನು ಸಿಂಧೂ ಪ್ರಾಂತ್ಯದ ಭೌಗೋಳಿಕ ನಕ್ಷೆಯನ್ನು ತಯಾರಿಸಲು ಕಳುಹಿಸಿದ ರಾಜ - 1ನೇ ಡೇರಿಯಸ್
- ಪರ್ಶಿಯನ್ ಮತ್ತು ಗ್ರೀಕ್ ನಡುವಣ ಯುದ್ಧದಲ್ಲಿ ಭಾರತೀಯ ಸೈನಿಕರನ್ನು ಮೊದಲಿಗೆ ಬಳಸಿದ ಪರ್ಶಿಯನ್ ರಾಜ್ - 1ನೇ ಡೇರಿಯಸ್.
- ಭಾರತೀಯ ಅರಸರು ಶಿಲೆಗಳ ಮೇಲೆ ಶಾಸನ ಕೊರೆಸುವುದನ್ನು ಕಲಿತದ್ದು - ಪರ್ಶಿಯನ್ನರಿಂದ.
- ಭಾರತೀಯರು ಖರೋಷ್ಠಿ ಲಿಪಿ ಕಲಿತದ್ದು ಪರ್ಶಿಯನ್ನರಿಂದ.
- ಭಾರತೀಯರು ತಮ್ಮ ನಾಣ್ಯಗಳಲ್ಲಿ ಚಿನ್ನ-ಬೆಳ್ಳಿ ಪದ್ಧತಿ ಅಳವಡಿಸಿಕೊಳ್ಳಲು ಕಾರಣ - ಪರ್ಶಿಯನ್ನರು.
- ಸ್ತ್ರೀ ಅಂಗರಕ್ಷಣಾ ಪಡೆಯನ್ನು ಭಾರತೀಯ ರಾಜರು ಅಳವಡಿಸಿಕೊಳ್ಳುವುದನ್ನು ಕಲಿತದ್ದು - ಪರ್ಶಿಯನ್ನರಿಂದ
- 1ನೇ ಡೇರಿಯಸ್‌ನ ಮಗನ ಹೆಸರು ಕ್ಸರಕ್ಸಸ್

**ಮ್ಯಾಸಿಡೋನಿಯನ್ನರು (ಗ್ರೀಕರು)**

- ❖ ಪ್ರಾಚೀನ ಭಾರತದ ಮೇಲೆ ದಾಳಿಯಿಟ್ಟ ಎರಡನೇ ವಿದೇಶಿಯರು - ಮ್ಯಾಸಿಡೋನಿಯನ್ನರು
- ❖ ಗ್ರೀಕ್ ನಗರ ರಾಜ್ಯಗಳನ್ನು ಒಂದುಗೂಡಿಸಿ ಮ್ಯಾಸಿಡೋನಿಯ ಸಾಮ್ರಾಜ್ಯ ಸ್ಥಾಪಿಸಿದವರು - 2ನೇ ಫಿಲಿಪ್.
- ❖ 2ನೇ ಫಿಲಿಪ್ಪನ ಮಗ - ಅಲೆಗ್ಸಾಂಡರ್ (ಸಿಕಂದರ್)
- ❖ ಮ್ಯಾಸಿಡೋನಿಯ (ಗ್ರೀಕ್) ರಾಜನಾದ ಅಲೆಗ್ಸಾಂಡರ್ ಭಾರತದ ಮೇಲೆ ದಾಳಿ ಮಾಡಿದ ಇಸವಿ - ಕ್ರಿ.ಪೂ. 327.
- ❖ ಭಾರತದ ಮೇಲೆ ಅಲೆಗ್ಸಾಂಡರ್ ದಾಳಿ ಮಾಡಿದ ಮಾರ್ಗ - ಹಿಂದೂಕುಸ್ ಪರ್ವತ ಮತ್ತು ಖೈಬರ್ ಕಣಿವೆ ಮೂಲಕ.
- ❖ ಅಲೆಗ್ಸಾಂಡರ್‌ನ ದಾಳಿಯ ಸಂದರ್ಭ ತಕ್ಷಶಿಲೆಯ ರಾಜ ಅಂಬಿ ಅಲೆಕ್ಸಾಂಡರ್ ದಾಳಿಯ ಸಂದರ್ಭದಲ್ಲಿ ಪಂಜಾಬ್ ಪ್ರಾಂತ್ಯ (ಜೀಲಂ ಚೀನಾಬ್ ಪ್ರದೇಶ)ದ ರಾಜ ಪುರೂರವ (ಪೂರಸ್)
- ❖ ಅಲೆಗ್ಸಾಂಡರ್‌ನ ವಿರುದ್ಧ ಸಮರ್ಥವಾಗಿ ಶೌರ್ಯದಿಂದ ಹೈಡಾಸ್ಪಸ್ ಯುದ್ಧದಲ್ಲಿ ಹೋರಾಡಿದ ಭಾರತೀಯ ರಾಜ - ಪೌರವ (ಪುರೂರವ)
- ❖ ಅಲೆಗ್ಸಾಂಡರ್ ದಾಳಿಯಿಂದಾಗಿ ಭಾರತ ಮತ್ತು ಯೂರೋಪಿನ ರಾಷ್ಟ್ರಗಳೊಡನೆ ಪ್ರಥಮ ಬಾರಿಗೆ ಮೂರು ಭೂಮಾರ್ಗ ಮತ್ತು ಒಂದು ನೌಕಾಮಾರ್ಗ ಸ್ಥಾಪಿತವಾದವು.

**ಮೌರ್ಯರ ಪತನದ ನಂತರ ಭಾರತದ ಮೇಲೆ ದಾಳಿಯಿಟ್ಟ ವಿದೇಶಿಯರು**

1. ಬ್ಯಾಕ್ಟೀರಿಯನ್ ಗ್ರೀಕರು
2. ಶಕರು
3. ಪಾರ್ಥಿಯನ್ನರು ಮತ್ತು ಕುಶಾನರು

**1. ಬ್ಯಾಕ್ಟ್ರಿಯನ್ ಗ್ರೀಕರು**

- ❖ ಭಾರತದಲ್ಲಿ ಇಂಡೋಗ್ರೀಕ್ ಸಾಮ್ರಾಜ್ಯಕ್ಕೆ ತಳಹದಿ ಹಾಕಿಡ ಬ್ಯಾಕ್ಟ್ರಿಯನ್ ಅರಸ - ಡೆಮಿಟ್ರಿಯಸ್
- ❖ ಡೆಮಿಟ್ರಿಯಸ್‌ನ ಸೇನಾನಿ - ಮೆನಾಂಡರ್
- ❖ ಮೆನಾಂಡರ್ - ಡೆಮಿಟ್ರಿಯಸ್ ಗೆದ್ದ ಭಾರತದ ಪ್ರದೇಶಗಳ ರಾಜ ಪ್ರತಿನಿಧಿಯಾಗಿ ಬಂದನು.
- ❖ ಡೆಮಿಟ್ರಿಯಸ್‌ನ ಮಗಳನ್ನು ವಿವಾಹವಾದ ಮೆನಾಂಡರ್ ಭಾರತೀಯ ರಾಜನಾಗಿ ಶಾಕಲ (ಇಂದಿನ ಸಿಯಾಲ್‌ಕೋಟ್)ನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ವೈಭವದಿಂದ ಆಳಿದ.
- ❖ ಬೌದ್ಧ ಪಾಳಿ ಗ್ರಂಥ "ಮಿಲಿಂದ ಪನ್ಹ" ಕೃತಿಯು ಮೆನಾಂಡರ್‌ನ ಬಗ್ಗೆ ತಿಳಿಸುತ್ತದೆ.
- ❖ "ಮಿಲಿಂದಪನ್ಹ"ವು ಮೆನಾಂಡರ್ ಮತ್ತು ಬೌದ್ಧ ಸನ್ಯಾಸಿ ನಾಗಸೇನರ ನಡುವಿನ ಧಾರ್ಮಿಕ ಚರ್ಚೆಯ ಸಾರಾಂಶವನ್ನು ಒಳಗೊಂಡಿದೆ.
- ❖ ಬ್ಯಾಕ್ಟ್ರಿಯನ್ ಗ್ರೀಕರ ಕೊನೆಯ ಅರಸ - ಹರ್ಮೈಯಸ್
- ❖ ಹರ್ಮೈಯಸ್‌ನನ್ನು ಸೋಲಿಸಿದ ಕುಶಾನರ ಅರಸ -1ನೇ ಕಾಡ್‌ಫೈಸಸ್

**2. ಶಕರು**

- ❖ ಶಕರು ಮಧ್ಯ ಏಷ್ಯಾದವರು
- ❖ ಶಕರ ಪ್ರಥಮ ದೊರೆ - ಮೌಯೆಸ್ ಇವನು ತಕ್ಷಶಿಲೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಗಾಂಧಾರದ ಸುತ್ತಲಿನ ಪ್ರದೇಶವನ್ನು ಆಳಿದ.
- ❖ ಶಕ ದೊರೆ ಮೌಯೆಸ್ - ರಾಜಾಧಿರಾಜ ಎಂಬ ಬಿರುದು ಹೊಂದಿದ್ದನು.
- ❖ ಮೌಯೆಸ್‌ನ ಉತ್ತರಾಧಿಕಾರಿ - 1ನೇ ಎಜೆಸ್

- ಶಕರಾಜರ ಪ್ರಾಂತ್ಯಗಳ ಹೆಸರು - ಸತ್ರಪಿ
- ಸತ್ರಪಿಗಳ ಮುಖ್ಯಸ್ಥರನ್ನು - ಕ್ಷತ್ರಪ ಎನ್ನುತ್ತಿದ್ದರು.

**ಸ್ವತಂತ್ರ ಕ್ಷತ್ರಪ ರಾಜ್ಯಗಳು :**

1. ತಕ್ಷಶಿಲಾ 2. ಮಥುರಾ 3. ಉಜ್ಜಯಿನಿ 4. ನಾಸಿಕ್

- ನಾಸಿಕ ಕ್ಷತ್ರಪರಲ್ಲಿ ಪ್ರಸಿದ್ಧ ರಾಜ - ನಹಪಾನ / ನಹಪಣ
- ನಹಪಣನ ಅಳಿಯ - ಉಷವದತ್ತ
- ವ್ಯಾಪಾರಿ ಸಂಘಗಳಲ್ಲಿ ಹಣವನ್ನು ಠೇವಣಿಯಾಗಿಟ್ಟು ಅದರ ಬಡ್ಡಿಯನ್ನು ಬೌದ್ಧ ಯತಿಗಳ ಜೀವನ ನಿರ್ವಹಣೆಗಾಗಿ ನೀಡುತ್ತಿದ್ದ ಕ್ಷತ್ರಪ ರಾಜ-ನಹಪಣ.
- ಮಾಳ್ವದ ಉಜ್ಜಯಿನಿಯಲ್ಲಿ ಕ್ಷತ್ರಪ ಶಾಖೆ ಸ್ಥಾಪಿಸಿದವನು - ಚಸ್ತನ
- ಉಜ್ಜಯಿನಿ ಕ್ಷತ್ರಪರಲ್ಲಿ ಹೆಸರಾಂತ ರಾಜ - 1ನೇ ರುದ್ರ ಧಾಮನ್
- 1ನೇ ರುದ್ರ ಧಾಮನ್ ಕಾಲ - ಕ್ರಿ.ಶ. 120 - 150
- 1ನೇ ರುದ್ರ ಧಾಮನ್ ಶಾಸನ - ಜುನಾಘಡ್ (ಗಿರ್ನಾರ್ ಶಾಸನ)
- ಭಾರತದ ಮೊದಲ ಸಂಸ್ಕೃತ ಶಾಸನ - ಜುನಾಘಡ್ (ಗಿರ್ನಾರ್ ಶಾಸನ)

**3. ಪಾರ್ಥಿಯನ್ನರು**

- ಪಾರ್ಥಿಯನ್ನರ ಪ್ರಮುಖ ದೊರೆ 1ನೇ ಮಿತ್ರಡೇಟಸ್.
- ಇವನ ಕಾಲ - ಕ್ರಿ.ಪೂ. 171-136
- ಪಾರ್ಥಿಯನ್ನರ ಮತ್ತೊಬ್ಬ ಪ್ರಬಲ ದೊರೆ - ಗೊಂಡೆಪೆರ್ನಸ್
- ಗೊಂಡೆಪೆರ್ನಸ್ ಕ್ರಿ.ಶ. 19-45ರವರೆಗೆ ಆಫ್ಘಾನಿಸ್ಥಾನ ಮತ್ತು ತಕ್ಷಶಿಲೆಯನ್ನು ಆಳಿದನು.
- ಗೊಂಡೆಫೆರ್ನೆಸನ ಸಮಕಾಲೀನ ಕ್ರೈಸ್ತಧರ್ಮದ ಪ್ರವರ್ತಕ - ಸಂತ ಥಾಮಸ್.
- ಪಾರ್ಥಿಯನ್ನರನ್ನು ಸೋಲಿಸಿ ಅಧಿಕಾರಕ್ಕೆ ಬಂದವರು - ಕುಶಾನರು.

**4. ಕುಶಾನರು**

- ಕುಶಾನರು - ಚೀನಿ ಟರ್ಕಿಸ್ತಾನದಲ್ಲಿ ವಾಸಿಸುತ್ತಿದ್ದು - ಯೂ.ಚಿ. ಎಂಬ ಬುಡಕಟ್ಟಿನ ಜನಾಂಗಕ್ಕೆ ಸೇರಿದವರು.
- ಕುಶಾನರ ಪ್ರಸಿದ್ಧ ರಾಜ - ಕಾನಿಷ್ಕ (ಕ್ರಿ.ಶ. 78-120)
- ಕ್ರಿ.ಶ. 78 ರಿಂದ ಪ್ರಾರಂಭವಾಗುವ ಶಾಲಿವಾಹನ ಶಕೆಯ ಸ್ಥಾಪಕ - ಕಾನಿಷ್ಕ
- ಕಾನಿಷ್ಕನ ಸಾಮ್ರಾಜ್ಯದ ರಾಜಧಾನಿ - ಪುರುಷಪುರ / ಪೇಶಾವರ್
- ಮಗದದ ರಾಜಧಾನಿ ಪಾಟಲೀಪುತ್ರವನ್ನು ಆಕ್ರಮಿಸಿದ ಕುಶಾನರ ರಾಜ ಕಾನಿಷ್ಕ
- ಪಾಟಲೀಪುತ್ರದ ದಂಡಯಾತ್ರೆಯಸಮಯದಲ್ಲಿ ಕಾನಿಷ್ಕನ ಜೊತೆಗೂಡಿದ ಬೌದ್ಧ ವಿದ್ವಾಂಸ - ಅಶ್ವಘೋಷ
- ಕಾನಿಷ್ಕನ ದಿಗ್ವಿಜಯದಲ್ಲಿ ಅತಿ ಮುಖ್ಯವಾದದ್ದು - ಚೀನ ದಂಡಯಾತ್ರೆ
- ಕಾನಿಷ್ಕ ಮೊದಲು ವೈಧಿಕ ಧರ್ಮದ ಶೈವ ಪಂಥದ ಅನುಯಾಯಿ.
- ಬೌದ್ಧ ಭಿಕ್ಷು ಅಶ್ವಘೋಷನಿಂದ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ಕುಶಾನರ ರಾಜ - ಕಾನಿಷ್ಕ.
- ಕಾನಿಷ್ಕ ಬೌದ್ಧ ಧರ್ಮದ ಮಹಾ ಪೋಷಕನಾಗಿದ್ದು ಇವನನ್ನು 2ನೇ ಅಶೋಕ ಎಂದು ಕರೆಯಲಾಗುತ್ತದೆ.
- ಅಶೋಕನು ಕೈಗೊಂಡ ಬೌದ್ಧ ಧರ್ಮದ ಪ್ರಚಾರ ಕಾರ್ಯವನ್ನು ಮುಂದುವರಿಸಿದ ಕುಶಾನರ ರಾಜ - ಕಾನಿಷ್ಕ
- ಕಾಶ್ಮೀರದ ಕುಂಡಲವನ ಎಂಬಲ್ಲಿ 4ನೇ ಬೌದ್ಧ ಮಹಾಸಮ್ಮೇಳನವನ್ನು ಸಂಘಟಿಸಿದ ರಾಜ - ಕಾನಿಷ್ಕ

- ಕಾನಿಷ್ಕನು ಮಹಾಯಾನ ಬೌದ್ಧ ಪಂಥದ ಅನುಯಾಯಿ,
- ಕಾನಿಷ್ಕನ ಆಸ್ಥಾನದಲ್ಲಿದ್ದ ಪ್ರಮುಖ ವಿದ್ವಾಂಸರು - ಅಶ್ವಘೋಷ, ವಸುಮಿತ್ರ, ನಾಗಾರ್ಜುನ, ಸಂಘರಕ್ಷ, ಚರಕ, ಮಾಥುರ

**ಕಾನಿಷ್ಕನ ಕಾಲದಲ್ಲಿ ರಚಿತವಾದ ಕೃತಿಗಳು ಮತ್ತು ಕರ್ತೃಗಳು**

- ಬುದ್ಧಚರಿತ - ಅಶ್ವಘೋಷ
- ಸುಂದರನಂದ - ಅಶ್ವಘೋಷ
- ಸಾರಿಪುತ್ರ ಪ್ರಕರಣ - ಅಶ್ವಘೋಷ
- ವಜ್ರಸೂಚಿ - ಅಶ್ವಘೋಷ
- ಸೂತ್ರಾಲಂಕಾರ - ಅಶ್ವಘೋಷ
- ಮಹಾಯಾನ ಶ್ರದ್ಧೋತ್ಪಾದ - ಅಶ್ವಘೋಷ
- ಮಹಾವಿಭಾಶ - ವಸುಮಿತ್ರ
- ಮಾಧ್ಯಮಿಕ ಸೂತ್ರ - ನಾಗಾರ್ಜುನ (ಭಾರತದ ಐನ್‌ಸ್ಟೀನ್)
- ಚರಕಸಂಹಿತೆ - ಚರಕ
- ಕಾನಿಷ್ಕನ ಆಸ್ಥಾನದಲ್ಲಿದ್ದ ಶ್ರೇಷ್ಠ ಗ್ರೀಕ್ ಶಿಲ್ಪಿ - ಎಜಿಸಿಲಾಸ್
- ಕಾಶ್ಮೀರದಲ್ಲಿ 'ಕಾನಿಷ್ಕಪುರ' ನಗರ ನಿರ್ಮಿಸಿದವನು - ಕಾನಿಷ್ಕ
- ಭಾರತದ ಕಲಾ ಇತಿಹಾಸದಲ್ಲಿ - ಗಾಂಧಾರ ಕಲೆ ಬೆಳೆದದ್ದು ಕುಶಾನರ ಕಾಲದಲ್ಲಿ (ಕಾನಿಷ್ಕನ ಕಾಲದಲ್ಲಿ)
- ಕುಶಾನ ಅರಸರನ್ನು 'ದೇವಪುತ್ರ'ರು ಎಂದು ಕರೆಯಲಾಗುತ್ತದೆ.
- ಕಾನಿಷ್ಕನ ಉತ್ತರಾಧಿಕಾರಿ - ಹುವಿಸ್ಕ
- ಯಮುನಾ ಕಣಿವೆಯ ಭಾಗದಲ್ಲಿ ಕುಶಾನರ ಆಳ್ವಿಕೆಯನ್ನು ಮೂಲೆಗುಂಪು ಮಾಡಿದವರು - ನಾಗಾ ಜನರು.

## ಗುಪ್ತ ಸಾಮ್ರಾಜ್ಯ

**ಗುಪ್ತ ಸಾಮ್ರಾಜ್ಯವನ್ನಾಳಿದ ಗುಪ್ತ ಅರಸರುಗಳು**

- ಶ್ರೀಗುಪ್ತ
- ಘಟೋತ್ಕ ಗುಪ್ತ (ಕ್ರಿ.ಶ. 280-319)
- 1ನೇ ಚಂದ್ರಗುಪ್ತ (ಕ್ರಿ.ಶ. 320-335)
- ಸಮುದ್ರ ಗುಪ್ತ (ಕ್ರಿ.ಶ. 335-375)
- ರಾಮಗುಪ್ತ (375)
- 2ನೇ ಚಂದ್ರಗುಪ್ತ ವಿಕ್ರಮಾದಿತ್ಯ (ಕ್ರಿ.ಶ. 385-414)
- ಕುಮಾರ ಗುಪ್ತ ( ಕ್ರಿ.ಶ. 415-455)
- ಸ್ಕಂದಗುಪ್ತ (ಕ್ರಿ.ಶ. 455-467)
- ಪುರುಗುಪ್ತ
- ನರಸಿಂಹ ಗುಪ್ತ
- ಬಲಾದಿತ್ಯ
- 2ನೇ ಕುಮಾರ ಗುಪ್ತ
- ಬುದ್ಧ ಗುಪ್ತ
- ತಥಗುಪ್ತ
- 3ನೇ ಕುಮಾರಗುಪ್ತ
- ವಿಷ್ಣುಗುಪ್ತ ಇತ್ಯಾದಿ

**ಶ್ರೀಗುಪ್ತ**

- ಗುಪ್ತ ಸಾಮ್ರಾಜ್ಯದ ಸ್ಥಾಪಕ - ಶ್ರೀಗುಪ್ತ
- ಮೃಗಶಿಖವನ ಎಂಬಲ್ಲಿ ಬೌದ್ಧ ಭಿಕ್ಷುಗಳಿಗಾಗಿ ಒಂದು ಸಂಘರಾಮ ಕಟ್ಟಿಸಿಕೊಟ್ಟ ಗುಪ್ತರಾಜ - ಶ್ರೀಗುಪ್ತ
- ಶ್ರೀಗುಪ್ತನ ಉತ್ತರಾಧಿಕಾರಿ - ಘಟೋತ್ಕಚಗುಪ್ತ

## 1ನೇ ಚಂದ್ರಗುಪ್ತ

- ಅಧಿಕಾರದ ಅವಧಿ - ಕ್ರಿ.ಶ. 320-335
- ಕ್ರಿ.ಶ. 320ರಲ್ಲಿ ಗುಪ್ತಯುಗ ಆರಂಭಿಸಿದ ಗುಪ್ತರಾಜ -1 ನೇ ಚಂದ್ರಗುಪ್ತ
- ಮಹಾರಾಜಾಧಿರಾಜ ಎಂಬ ಬಿರುದು ಧರಿಸಿದ ಮೊದಲ ಗುಪ್ತರ ರಾಜ - 1ನೇ ಚಂದ್ರಗುಪ್ತ
- ಲಿಚ್ಛವಿ ರಾಜಕುಮಾರಿ ಕುಮಾರಿ ದೇವಿಯನ್ನು ವಿವಾಹವಾದ ಗುಪ್ತರ ಅರಸ - 1ನೇ ಚಂದ್ರಗುಪ್ತ

## ಸಮುದ್ರಗುಪ್ತ

- ಅಧಿಕಾರದ ಅವಧಿ - ಕ್ರಿ.ಶ. 330-375
- 1ನೇ ಚಂದ್ರಗುಪ್ತ ಮತ್ತು ಕುಮಾರದೇವಿಯವರ ಮಗ - ಸಮುದ್ರಗುಪ್ತ
- ಸಮುದ್ರಗುಪ್ತನ ಮತ್ತೊಂದು ಹೆಸರು - ಕಚ
- ಸಮುದ್ರಗುಪ್ತನ ಕಾಲದಲ್ಲಿ ಬೋಧಗಯಾಕ್ಕೆ ಬೌದ್ಧ ಭಿಕ್ಷುಗಳನ್ನು ಕಳುಹಿಸಿದ ಸಿಂಹಳ / ಶ್ರೀಲಂಕಾದ ರಾಜ - ಮೇಘವರ್ಣ
- ಬೋಧಗಯಾದಲ್ಲಿ ಬೌದ್ಧ ಭಿಕ್ಷುಗಳಿಗಾಗಿ ವಿಹಾರ ಕಟ್ಟಿಸಿದ - ಗುಪ್ತರ ರಾಜ - ಸಮುದ್ರಗುಪ್ತ
- ಸಮುದ್ರಗುಪ್ತನು ಅನುಸರಿಸಿದ ಧರ್ಮ - ವೈಧಿಕ ಧರ್ಮ
- 'ಕವಿರಾಜ' ಎಂಬ ಬಿರುದು ಧರಿಸಿದ ಗುಪ್ತರ ರಾಜ - ಸಮುದ್ರಗುಪ್ತ
- ಸಂಸ್ಕೃತದಲ್ಲಿ 'ಕೃಷ್ಣಚರಿತ' ಎಂಬ ಕೃತಿ ಬರೆದ ಗುಪ್ತರ ರಾಜ - ಸಮುದ್ರ ಗುಪ್ತ
- ಭಾರತದ ನೆಪೋಲಿಯನ್ - ಸಮುದ್ರ ಗುಪ್ತ (ವಿ.ಎ. ಸ್ಮಿತ್ ಹೇಳಿಕೆ)
- ಸಮುದ್ರಗುಪ್ತನ ದಿಗ್ವಿಜಯವನ್ನು ತಿಳಿಸುವ ಶಾಸನ - ಅಲಹಾಬಾದ್ ಸ್ತಂಭಶಾಸನ.

### ಅಲಹಾಬಾದ್ ಸ್ತಂಭಶಾಸನ :

- ಅಲಹಾಬಾದ್ ಸ್ತಂಭಶಾಸನ ರಚಿಸಿದವನು - ಸಮುದ್ರಗುಪ್ತನ ದಂಡನಾಯಕ ಹರಿಸೇನ
- ಅಲಹಾಬಾದ್ ಸ್ತಂಭಶಾಸನದಲ್ಲಿ ಬಳಸಿರುವ ಭಾಷೆ - ಸಂಸ್ಕೃತ
- ಅಲಹಾಬಾದ್ ಸ್ತಂಭಶಾಸನದಲ್ಲಿ ಬರೆದಿರುವ ವಾಕ್ಯಗಳ ಒಟ್ಟು ಸಾಲು - 33
- ಅಲಹಾಬಾದ್ ಸ್ತಂಭಶಾಸನವು ಮೂಲತಃ ಅಶೋಕನಿಂದ ಕೌಸಂಬಿಯಲ್ಲಿ ಸ್ಥಾಪಿತವಾದ ಸ್ತಂಭಶಾಸನ.

**ಅಲಹಾಬಾದ್ ಸ್ತಂಭಶಾಸನದಲ್ಲಿ ಉಲ್ಲೇಖಿಸಿರುವಂತೆ ಸಮುದ್ರಗುಪ್ತನಿಂದ ಸೋತ ದಕ್ಷಿಣದ 12 ಮತ್ತು ಉತ್ತರ ಭಾರತದ 9 ರಾಜರುಗಳೆಂದರೆ :**

- ದಕ್ಷಿಣದ ಅರಸರು
- ಕೌರಾಲದ ಮಾಂತರಾಜ
- ಕಂಚಿಯ ವಿಷ್ಣುಗೋಪ
- ಪಿಷ್ಟಪುರದ ಮಹೇಂದ್ರಗಿರಿ
- ಅವಮುಕ್ತದ ನೀಲರಾಜ
- ಪಲಕ್ಕಾದ ಉಗ್ರಸೇನ
- ಕೌಸ್ಥಲಾಪುರದ ಧನಂಜಯ
- ಕೋಸಲದ ಮಹೇಂದ್ರ
- ಕೊಟ್ಟೂರದ ಸ್ವಾಮಿದತ್ತ
- ಮಹಾಕಾಂತಾರದ ವ್ಯಾಘ್ರರಾಜ
- ಎರಂಡಪಲ್ಲದ ದಮನ
- ದೇವರಾಷ್ಟ್ರದ ಕುಬೇರ
- ವೆಂಗಿಯ ಹಸ್ತಿವರ್ಮನ್

### ಆರ್ಯಾವರ್ತ / ಉತ್ತರದ ಅರಸರು

- ರುದ್ರದೇವ
- ನಾಗದತ್ತ

- ಗಣಪತಿನಾಗ
- ಮತ್ತಿಲ
- ನಾಗಸೇನ
- ಚಂದ್ರವರ್ಮ
- ಅಚ್ಯುತದ
- ನಂದಿ
- ಬಲವರ್ಮನ್

**2ನೇ ಚಂದ್ರಗುಪ್ತ ವಿಕ್ರಮಾದಿತ್ಯ**

- ಅಧಿಕಾರದ ಅವಧಿ - ಕ್ರಿ.ಶ. 375-414
- ಸಮುದ್ರಗುಪ್ತ ಮತ್ತು ದತ್ತಾದೇವಿಯವರ ಮಗ - 2ನೇ ಚಂದ್ರಗುಪ್ತ
- 2ನೇ ಚಂದ್ರಗುಪ್ತನ ಅಡ್ಡ ಹೆಸರು - ವಿಕ್ರಮಾದಿತ್ಯ
- ದೇವಗುಪ್ತ, ದೇವಶ್ರೀ ಎಂಬ ಹೆಸರುಳ್ಳ ಗುಪ್ತರ ರಾಜ - 2ನೇ ಚಂದ್ರಗುಪ್ತ ವಿಕ್ರಮಾದಿತ್ಯ
- 2ನೇ ಚಂದ್ರಗುಪ್ತನ ಕಾಲದಲ್ಲಿ - ಭಾರತಕ್ಕೆ ಭೇಟಿ ನೀಡಿದ ಪ್ರಥಮ ಚೀನಿ ಪ್ರವಾಸಿಗ - ಫಾಹಿಯಾನ್
- ಮೆಹ್ರಾಲಿ ಕಬ್ಬಿಣ ಸ್ತಂಭಶಾಸನದ ಕರ್ತೃ - 2ನೇ ಚಂದ್ರಗುಪ್ತ
- ಮೆಹ್ರಾಲಿ ಕಬ್ಬಿಣ ಸ್ತಂಭಶಾಸನ ಇರುವುದು - ದೆಹಲಿಯ ಕುತುಬ್‌ಮಿನಾರ್ ಬಳಿ
- 2ನೇ ಚಂದ್ರಗುಪ್ತನ ಇತರೆ ಬಿರುದುಗಳು - ಶಕಾರಿ, ಸಾಹಸಾಂಕ, ವಿಕ್ರಮಾಂಕ, ನರೇಂದ್ರ ಚಂದ್ರ, ಸಿಂಹವಿಕ್ರಮ, ದೇವರಾಜ, ಸ್ವಯಂಪತ್ನಿರತ್ನ ಇತ್ಯಾದಿ
- ಗುಪ್ತರ ಯುಗ - ಸುವರ್ಣಯುಗವನ್ನು ಕಂಡಿದ್ದು -2ನೇ ಚಂದ್ರಗುಪ್ತ
- ಕವಿರತ್ನ ಕಾಳಿದಾಸನಿಗೆ ಆಶ್ರಯ ನೀಡಿದ ಗುಪ್ತ ಅರಸ - 2ನೇ ಚಂದ್ರಗುಪ್ತ
- 2ನೇ ಚಂದ್ರಗುಪ್ತನ ರಾಣಿಯರು ಕುಬೇರನಾಗ ಮತ್ತು ಧೃವದೇವಿ
- 2ನೇ ಚಂದ್ರಗುಪ್ತನ ಮಕ್ಕಳು - ಕುಮಾರಗುಪ್ತ ಮತ್ತು ಗೋವಿಂದ ಗುಪ್ತ

**1ನೇ ಕುಮಾರ ಗುಪ್ತ (ಕ್ರಿ.ಶ. 415-455)**

- ಪುಷ್ಯಮಿತ್ರ ಜನಾಂಗದವರನ್ನು ಸೋಲಿಸಲು ತನ್ನ ಮಗ ಸ್ಕಂದಗುಪ್ತನನ್ನು ಕಳುಹಿಸಿದ.
- ನಳಂದ ವಿಶ್ವವಿದ್ಯಾಲಯದ ಸ್ಥಾಪಕ.

**ಸ್ಕಂದಗುಪ್ತ (ಕ್ರಿ.ಶ. 455-467)**

- ಪುಷ್ಯಮಿತ್ರ ಜನಾಂಗವನ್ನು ಸೋಲಿಸಿದ.
- ಗುಪ್ತಸಂತತಿಯಲ್ಲಿ ಕೊನೆಯ ಪ್ರಸಿದ್ಧ ರಾಜ.
- ಮೊದಲ ಬಾರಿಗೆ ಹೂಣರ ದಾಳಿಯಿಂದ ಸಾಮ್ರಾಜ್ಯ ರಕ್ಷಿಸಿದ.
- ಬಿರುದುಗಳು - ಕ್ರಮಾದಿತ್ಯ, ವಿಕ್ರಮಾದಿತ್ಯ
- ಸುದರ್ಶನ ಸರೋವರವನ್ನು ದುರಸ್ಥಿಗೊಳಿಸಿದ (ಗಿರ್ನಾರ್ ಶಾಸನದ ಪ್ರಕಾರ) ಸ್ಕಂದಗುಪ್ತನ ಸೌರಾಷ್ಟ್ರದ ರಾಜ್ಯಪಾಲ ಪರ್ಣದತ್ತನ ಮಗ ಚಕ್ರಪಲಿತ

**ಗುಪ್ತರ ಕಾಲದ ಸಾಹಿತ್ಯ ಕೃತಿಗಳು ಮತ್ತು ಕರ್ತೃಗಳು**

- ಕಾಳಿದಾಸ - ಮಾಳವಿಕಾಗ್ನಿಮಿತ್ರ
- ವಿಕ್ರಮೋರ್ವಶೀಯ (ನಾಟಕಗಳು)
- ರಘುವಂಶ, ಕುಮಾರಸಂಭವ (ಮಹಾಕಾವ್ಯಗಳು)
- ಋತುಸಂಹಾರ, ಮೇಘದೂತ (ಕಾವ್ಯಗಳು)
- ವಿಶಾಖದತ್ತ - ಮುದ್ರರಾಕ್ಷಸ (ನಾಟಕ)
- ಶೂದ್ರಕ - ಮೃಚ್ಛಕಟಿಕ

- ❖ ದಂಡಿನ್ - ದಶಕುಮಾರ ಚರಿತ, ಕಾವ್ಯಾದರ್ಶ
- ❖ ಭಾರವಿ - ಕಿರಿತಾರ್ಜುನೀಯ
- ❖ ವಿಷ್ಣುಶರ್ಮ - ಪಂಚತಂತ್ರ
- ❖ ಮಾಘು - ಶಿಶುಪಾಲವಧೆ
- ❖ ವಾತ್ಸಾಯನ - ಕಾಮಸೂತ್ರ
- ❖ ಅಮರಸಿಂಹ - ಅಮರಕೋಶ
- ❖ ಸುಬಂಧು - ವಾಸವದತ್ತಾ
- ❖ ಭಟ್ಟಿ - ಭಟ್ಟಿ ಕಾವ್ಯ
- ❖ ಶ್ರೀಹರ್ಷ - ನೈಸದ ಚರಿತ

## ಗುಪ್ತರ ಕಾಲದ ವಿಜ್ಞಾನಿಗಳು ಮತ್ತು ಕೃತಿಗಳು

- ❖ ಆರ್ಯಭಟ - ಆರ್ಯಭಟ್ಟೀಯಂ ಸೂತ್ರ
- ❖ ವರಾಹಮಿಹಿರ - ಬೃಹತ್ ಸಂಹಿತೆ ಮತ್ತು ಪಂಚಸಿದ್ಧಾಂತಿಕ
- ❖ ಬ್ರಹ್ಮಗುಪ್ತ - ಬ್ರಹ್ಮಸ್ಫುಟ ಸಿದ್ಧಾಂತ ಮತ್ತು ಖಂಡಖಾದ್ಯಕ
- ❖ ವಾಗ್ಭಟ - ಅಷ್ಟಾಂಗ ಸಂಗ್ರಹ

## ಗುಪ್ತ ಅರಸರ ಪ್ರಮುಖ ಶಾಸನಗಳು

- ❖ ಅಲಹಾಬಾದ್ ಸ್ತಂಭಶಾಸನ - ಸಮುದ್ರಗುಪ್ತ
- ❖ ಎರಾನ್ ಸ್ತಂಭಶಾಸನ - ಸಮುದ್ರಗುಪ್ತ
- ❖ ನಳಂದಶಾಸನ - ಸಮುದ್ರಗುಪ್ತ
- ❖ ಗಯ ತಾಮ್ರಶಾಸನ - ಸಮುದ್ರಗುಪ್ತ
- ❖ ಮೆಹ್ರೌಲಿ ಕಬ್ಬಿಣ ಸ್ತಂಭಶಾಸನ - 2ನೇ ಚಂದ್ರಗುಪ್ತ
- ❖ ಉದಯಗಿರಿಯ 2 ಗುಹಾಶಾಸನಗಳು - 2ನೇ ಚಂದ್ರಗುಪ್ತ
- ❖ ಸಾಂಚಿ ಕಲ್ಲಿನ ಶಾಸನ - 2ನೇ ಚಂದ್ರಗುಪ್ತ
- ❖ ಗದ್ವಾ ಕಲ್ಲಿನ ಶಾಸನ -2ನೇ ಚಂದ್ರಗುಪ್ತ
- ❖ ಬಿಲ್ಸಾದ್ ಕಲ್ಲಿನ ಶಾಸನ -1ನೇ ಕುಮಾರಗುಪ್ತ
- ❖ ದಾಂಡೇಹ ತಾಮ್ರಶಾಸನ -1ನೇ ಕುಮಾರಗುಪ್ತ
- ❖ ಮಾಂಡ್ಸರ್ ಕಲ್ಲಿನ ಶಾಸನ - 1ನೇ ಕುಮಾರಗುಪ್ತ
- ❖ ಬೆಗ್ರಾಮ್ ತಾಮ್ರಶಾಸನ - 1ನೇ ಕುಮಾರಗುಪ್ತ
- ❖ ಜುನಾಘುಡ್ ಶಾಸನ - ಸ್ಕಂದಗುಪ್ತ
- ❖ ಬಿಟಾರಿ ಶಾಸನ - ಸ್ಕಂದಗುಪ್ತ
- ❖ ಇಂದೋರ್ ತಾಮ್ರಶಾಸನ - ಸ್ಕಂದಗುಪ್ತ
- ❖ ಸುಪಿಯ ಸ್ತಂಭಶಾಸನ - ಸ್ಕಂದಗುಪ್ತ

## ಗುಪ್ತರ ಕಾಲದ ಪ್ರಮುಖ ದೇವಾಲಯಗಳು

- ❖ ದಿಯೋಘುರ್ನ ದಶಾವತಾರ ದೇವಾಲಯ - ಮಧ್ಯಪ್ರದೇಶ
- ❖ ಚಿತ್ರಗಾಂವ್‌ನ ಇಟ್ಟಿಗೆ ದೇವಾಲಯ - ಮಧ್ಯಪ್ರದೇಶ
- ❖ ನಾಚ್ನ ಕುತಾರದ ಪಾರ್ವತಿ ದೇವಾಲಯ - ಮಧ್ಯಪ್ರದೇಶ
- ❖ ಸಾಂಚಿಯ ಶಿವ ದೇವಾಲಯ - ಮಧ್ಯಪ್ರದೇಶ
- ❖ ಭೂಮಾರದ ಶಿವ ದೇವಾಲಯ

- ❖ ಉದಯಪುರ ದೇವಾಲಯ
- ❖ ಪ್ರಭಾವತಿ ಬಳಿಯ ಗಂಗಾ - ಯಮುನಾ ದೇವಾಲಯ
- ❖ ಕುಂಡದ ಶಿವ ದೇವಾಲಯ
- ❖ ಅಹಿಚ್ಛತ್ರದ ಶಿವ ದೇವಾಲಯ
- ❖ ತಿಗಾವ ದೇವಾಲಯ
- ❖ ಬಿಲ್‌ಸಾದ್‌ನಲ್ಲಿನ ದೇವಾಲಯ
- ❖ ಕುಂಡದ ಗುಡಿಯ ದೇವಾಲಯ
- ❖ ಬೈಲಗ್ರಾಮದ - ಗೋವಿಂದ ಸ್ವಾಮಿ ದೇವಾಲಯ
- ❖ ಎರಾನ್‌ನಲ್ಲಿನ ದೇವಾಲಯ
- ❖ ಕುಶಿನಾರದ ಬುದ್ಧ ದೇವಾಲಯ
- ❖ ಮಹಾಬೋಧಿ ದೇವಾಲಯ (ಬೋಧಗಯಾ)
- ❖ ನಳಂದದ ಬುದ್ಧ ದೇವಾಲಯ
- ❖ ಮೆಗುತಿಯಲ್ಲಿನ ಜೈನ ದೇವಾಲಯ
- ❖ ಪಾವಯದ ವಿಷ್ಣು ದೇವಾಲಯ
- ❖ ವರಹ ದೇವಾಲಯ ಇತ್ಯಾದಿ.

**ಗುಪ್ತರ ಕಾಲದ ತೆರಿಗೆಗಳು**

| | | | |
|---|---|---|---|
| ❖ ಬಲಿ | ❖ ಭಾಗ | ❖ ಭೋಗ | ❖ ಹಿರಣ್ಯ |
| ❖ ಹಳಿವಾಕರ | ❖ ಕರ | ❖ ಕ್ಲಿಪ್ತ | ❖ ಶುಲ್ಕ |
| ❖ ಉಪರಿಕರ | ❖ ಉಪಕ್ಲಿಪ್ತ | ❖ ಉದಿಯಂಗ | |

## ವರ್ಧನ ಸಾಮ್ರಾಜ್ಯ

- ❖ ರಾಜಧಾನಿ - ಥಾಣೇಶ್ವರ ನಂತರ ಕನೂಜ್
- ❖ ಸ್ಥಾಪಕ - ಪ್ರಭಾಕರ ವರ್ಧನ (ಕ್ರಿ.ಶ. 583-605)
- ❖ ಮೊದಲಿಗೆ ಮಹಾರಾಜಾಧಿರಾಜ ಮತ್ತು ಪರಮಭಟ್ಟಾರಕ ಎಂಬ ಬಿರುದು ಧರಿಸಿದವನು - ಪ್ರಭಾಕರ ವರ್ಧನ
- ❖ ಪ್ರಭಾಕರ ವರ್ಧನನ ತಾಯಿಯ ಹೆಸರು - ಮಹಾಸೇನ ಗುಪ್ತ.
- ❖ 'ಹೂಣರೆಂಬ ಜಿಂಕೆಗೆ ಸಿಂಹ, ಸಿಂದೂ ಅರಸರಿಗೆ ಉರಿಯುವ ಅಗ್ನಿ, ಗುಜರಾತ್ ಅರಸನಿಗೆ ನಿದ್ರಾಭಂಜಕ, ಗಾಂಧಾರದ ರಾಜನಿಗೆ ಭಯಂಕರ ಪ್ಲೇಗಿನಂತೆ' ಎಂದು ಬಾಣ ತನ್ನ ಹರ್ಷಚರಿತದಲ್ಲಿ ವರ್ಣಿಸಿರುವ ವರ್ಧನ ಸಾಮ್ರಾಟ - ಪ್ರಭಾಕರ ವರ್ಧನ.
- ❖ ಪ್ರಭಾಕರ ವರ್ಧನನ ಮಕ್ಕಳು - ರಾಜವರ್ಧನ, ಹರ್ಷವರ್ಧನ ಮತ್ತು ಮಗಳು ರಾಜಶ್ರೀ
- ❖ ಪ್ರಭಾಕರ ವರ್ಧನನ ಅಳಿಯ - ಕನೂಜಿನ ಗೃಹವರ್ಮ

**ಹರ್ಷವರ್ಧನ (ಕ್ರಿ.ಶ. 605-646)**

- ❖ ಹರ್ಷವರ್ಧನನ ಸೋದರಿ ರಾಜಶ್ರೀಯ ಪತಿ ಕನೂಜಿನ ಗೃಹವರ್ಮನನ್ನು ಕೊಂದವನು - ಮಾಳ್ವದ ದೇವಗುಪ್ತ.
- ❖ ಹರ್ಷವರ್ಧನನ ಸೋದರಿ ರಾಜಶ್ರೀಯನನ್ನು ಸೆರೆಯಲ್ಲಿಟ್ಟವನು - ಮಾಳ್ವದ ದೇವಗುಪ್ತ

- ಮಾಳ್ವದ ದೇವಗುಪ್ತನನ್ನು ಸೋಲಿಸಿದ ಹರ್ಷವರ್ಧನನ ಸೋದರ - ರಾಜವರ್ಧನ
- ರಾಜವರ್ಧನನ್ನು ಮೋಸದಿಂದ ಕೊಂದ ಬಂಗಾಳದ ಗೌಡ ದೇಶದ ರಾಜ - ಶಶಾಂಕ
- ಪ್ರಭಾಕರ ವರ್ಧನನ ಕಿರಿಯ ಮಗ ಹರ್ಷವರ್ಧನನು - ಥಾಣೇಶ್ವರದ ಅರಸನಾದದ್ದು - 16ನೇ ವಯಸ್ಸಿನಲ್ಲಿ.
- ತನ್ನ ಸೋದರಿ ರಾಜಶ್ರೀಯನ್ನು ಬಂಧನದಿಂದ ಬಿಡಿಸಿ ಕನೋಜಿನ ಸಿಂಹಾಸನವೇರಿದ ವರ್ಧನ ಅರಸ - ಹರ್ಷವರ್ಧನ.
- ಬಂಗಾಳದ ಗೌಡದೇಶದ ಶಶಾಂಕನನ್ನು ಸೋಲಿಸಲು ಅಸ್ಸಾಂನ ಕಾಮರೂಪದ ಭಾಸ್ಕರವರ್ಮನೊಡನೆ ಮೈತ್ರಿ ಬೆಳೆಸಿದ ರಾಜ - ಹರ್ಷವರ್ಧನ
- 'ಶಿಲಾದಿತ್ಯ', 'ಪರಮಭಟ್ಟಾರಕ' ಎಂಬ ಬಿರುದು ಧರಿಸಿದ ರಾಜ - ಹರ್ಷವರ್ಧನ
- ದಕ್ಷಿಣ ಭಾರತದ ರಾಜ ಇಮ್ಮಡಿ ಪುಲಿಕೇಶಿಯಿಂದ (ದಕ್ಷಿಣ ಪಥೇಶ್ವರ) ಸೋಲನ್ನನುಭವಿಸಿದ ಉತ್ತರ ಪಥೇಶ್ವರ - ಹರ್ಷವರ್ಧನ.
- ಹರ್ಷವರ್ಧನನ ಆಸ್ಥಾನಕ್ಕೆ ಭೇಟಿ ನೀಡಿದ ಚೀನಾ ಪ್ರವಾಸಿ - ಹ್ಯುಯೇನ್‌ತ್ಸಾಂಗ್
- ಕ್ರಿ.ಶ. 643ರಲ್ಲಿ ಕನೋಜಿನಲ್ಲಿ ಧಾರ್ಮಿಕ ಮಹಾಸಭೆ ನಡೆಸಿದ ರಾಜ - ಹರ್ಷವರ್ಧನ
- ಕನೋಜಿನಲ್ಲಿ ನಡೆಸಿದ ಧಾರ್ಮಿಕ ಮಹಾಸಭೆಯ ಉದ್ದೇಶ ಹುಯೇನ್‌ತ್ಸಾಂಗ್‌ನನ್ನು ಸತ್ಕರಿಸುವುದಾಗಿತ್ತು.
- ಕ್ರಿ.ಶ. 643ರಲ್ಲಿ ಅಲಹಾಬಾದ್ (ಪ್ರಯಾಗ್)ನಲ್ಲಿ ತಮ್ಮ 6ನೆಯ ಪಂಚವಾರ್ಷಿಕ ಮಹಾಸಭೆಯನ್ನು ಸಮಾವೇಶಗೊಳಿಸಿದವನು - ಹರ್ಷವರ್ಧನ.
- ಹರ್ಷವರ್ಧನನಿಂದ ರಚಿತವಾದ ಮೂರು ಸಂಸ್ಕೃತ ನಾಟಕಗಳು - ರತ್ನಾವಳಿ, ಪ್ರಿಯದರ್ಶಿಕಾ, ನಾಗಾನಂದ
- ಹರ್ಷವರ್ಧನನ ಹಸ್ತಾಕ್ಷರದ ಪ್ರತಿರೂಪವನ್ನು ಹೊಂದಿರುವ ಅವನ ಶಾಸನಗಳು - ಬನ್ಸ್‌ಖೇರಾ ಮತ್ತು ಮಧುಬನ್ ತಾಮ್ರಶಾಸನಗಳು
- ಹರ್ಷನ ಆಸ್ಥಾನದ ವಿದ್ವಾಂಸರಲ್ಲಿ ಶ್ರೇಷ್ಠನಾದ ಬಾಣನ ಕೃತಿಗಳು - ಹರ್ಷಚರಿತ, ಕಾದಂಬರಿ, ಪಾರ್ವತೀ ಪರಿಣಯ, ಚಂಡೀಶತಕ.
- ಹರ್ಷನ ಆಸ್ಥಾನದಲ್ಲಿನ ಇತರೆ ವಿದ್ವಾಂಸರು - ಮಯೂರ, ಮಾತಂಗ, ಸಿದ್ದಸೇನ, ದಿವಾಕರ, ಹರಿದತ್ತ.
- ನಳಂದ ವಿಶ್ವವಿದ್ಯಾಲಯಕ್ಕೆ ಅನೇಕ ಕಟ್ಟಡಗಳನ್ನು ನಿರ್ಮಿಸಿಕೊಟ್ಟು ಇದರ ನಿರ್ವಹಣೆಗೆ ಸುಮಾರು 100 ಹಳ್ಳಿಗಳ ಭೂಕಂದಾಯವನ್ನು ದಾನವಾಗಿ ನೀಡಿದವನು - ಹರ್ಷವರ್ಧನ.

## 77 ದಕ್ಷಿಣ ಭಾರತದ ರಾಜ್ಯಗಳು

**ಸಂಘಂ ಯುಗ**

- ಪ್ರಾಚೀನ ತಮಿಳುನಾಡಿನ ಚೇರ, ಚೋಳ, ಪಾಂಡ್ಯರಾಜ್ಯಗಳ ಕಾಲದಲ್ಲಿ ವಿಶಿಷ್ಟವಾದ ವಿನೂತನವಾದ ಸಂಸ್ಕೃತಿಯೊಂದರ ಉದಯವಾಯಿತು - ಅದೇ ಸಂಘಂಸಂಸ್ಕೃತಿ.
- ಸಂಗಂ ಕಾಲ ಕ್ರಿ.ಪೂ. 500- ಕ್ರಿ.ಶ. 500
- ಸಂಗಂ ಎಂಬುದು - ದಾರ್ಶನಿಕರ ಮತ್ತು ಸಾಹಿತಿಗಳ ಒಂದು ಸಂಸ್ಥೆ.
- ಸಂಘಂ ಸಾಹಿತ್ಯ ಎಂದರೆ - ವಿದ್ವತ್‌ಪೂರ್ಣ ವಿದ್ವಾಂಸರಿಂದ ರಚಿತವಾದ ಸಾಹಿತ್ಯ ಎಂದರ್ಥ.
- ತಮಿಳು ಭಾಷೆಯ ಪ್ರಾರಂಭದ ಕಾಲವನ್ನು ಸಾಮಾನ್ಯವಾಗಿ ಸಂಗಂ ಎನ್ನುವರು.
- ನಂಬಿಕೆ ಪ್ರಕಾರ - ಪ್ರಾಚೀನ ಕಾಲದಲ್ಲಿ ತಮಿಳುನಾಡಿನಲ್ಲಿ ಒಂದರ ನಂತರ ಮತ್ತೊಂದು ಮೂರು ಸಂಘಗಳು ಅಸ್ತಿತ್ವದಲ್ಲಿದ್ದವು. ಇವುಗಳನ್ನು ಪಾಂಡ್ಯ ಅರಸರು ಘೋಷಿಸಿದರು.
- 3 ಸಂಘಂಗಳ ಒಟ್ಟು ಕಾಲಾವಧಿ - 9990 ವರ್ಷಗಳು.

| | ಸ್ಥಳ | ಅಧ್ಯಕ್ಷರು | ಸದಸ್ಯರ ಸಂಖ್ಯೆ | ಆಶ್ರಿತ ಅರಸರು |
|---|---|---|---|---|
| 1. ಮೊದಲಸಂಘಂ | ಹಳೆ ಮಧುರೈ | ಅಗಸ್ತ್ಯ | 549 | 89 ಪಾಂಡ್ಯ ಅರಸರು |
| 2. ಎರಡನೇ ಸಂಘಂ | ಕಪಾಟಪುರಂ | ತೊಲ್ಕಾಪ್ಪಿಯರ್ | 49 | 59 ಪಾಂಡ್ಯ ಅರಸರು |
| 3. ಮೂರನೇ ಸಂಘಂ | ಇಂದಿನ ಮಧುರೈ | ನೆಕ್ಕಿರಾರ್ | 49 | 59 ಪಾಂಡ್ಯ ಅರಸರು |

**ಸಂಘಂ ಯುಗದ ರಾಜ್ಯಗಳು ಮತ್ತು ರಾಜಧಾನಿಗಳು**

- ❖ ಪಾಂಡ್ಯರು - ಮಧುರೈ (ಹಳೆಯ ತೀನ್ ಮಧುರೈ ಮತ್ತು ಕಪಾಟಪುರಂ)
- ❖ ಚೇರರು - ತಿರುವಂಜಿಪಟ್ಟಣ ಅಥವಾ ಕರೂರು
- ❖ ಚೋಳರು - ಉರೈಯೂರು ನಂತರ ಪುಹರ್ / ಕಾವೇರಿಪಟ್ಟಣ

**ಸಂಗಂ ಕಾಲದ ಪ್ರಮುಖ ಅರಸರುಗಳು**

- ❖ ಉದಿಯೆಂಜರಲ್ - ಚೇರ ರಾಜ
- ❖ ಪೆರುಂಚೆರಲ್ ಅದನ್ - ಚೇರ ರಾಜ
- ❖ ಉಗ್ರಪೆರವಲೂಟ - ಪಾಂಡ್ಯ ರಾಜ
- ❖ ಇಮಯವಂಬನ್ - ಚೇರ ರಾಜ್ಯ
- ❖ ಎಲರ - ಮೊದಲ ಚೋಳದೊರೆ
- ❖ ಕುತ್ತುವನ್ - ಚೇರ ರಾಜ
- ❖ ಸೇಂಗುತ್ತವನ್ - ಚೇರ ರಾಜ
- ❖ ನೆಡಿಯನ್ ಪಾಂಡ್ಯ - ಪಾಂಡ್ಯ ರಾಜ
- ❖ ನೆಡುಂಜಳಿಯನ್ ಪಾಂಡ್ಯ - ಪಾಂಡ್ಯ ರಾಜ
- ❖ ಕರಿಕಾರ - ಚೋಳ ಪ್ರಮುಖ ದೊರೆ
- ❖ ಒಳ್ಳೈಯಾರತಂದ ಭೂತಪಾಂಡ್ಯನ್ - ಪಾಂಡ್ಯ ರಾಜ

**ಸಂಘಂ ರಾಜ್ಯಗಳು ಲಾಂಛನಗಳು**

- ❖ ಪಾಂಡ್ಯ - ಮೀನು
- ❖ ಚೋಳ - ಹುಲಿ
- ❖ ಚೇರ - ಬಿಲ್ಲು

**ಸಂಗಂ ಕಾಲದ ಪ್ರಮುಖ ಕೃತಿಗಳು :**

- ❖ ತೋಲ್ಕಾಪ್ಪಿಯಂ (ತಮಿಳಿನ ಅತ್ಯಂತ ಪ್ರಾಚೀನ ಕೃತಿ / ವ್ಯಾಕರಣ ಗ್ರಂಥ) - ತೊಳ್ಕಾಪ್ಪಿಯಾರ್ (ಕರ್ತೃ)
- ❖ ಅಗತ್ತೀಯಂ - ಅಗಸ್ತ್ಯ (ಕರ್ತೃ)
- ❖ ಪನ್ನೀರುಪದಲಂ - ಅಗಸ್ತ್ಯನ 12 ಅನುಯಾಯಿಗಳಿಂದ ರಚನೆ
- ❖ ಕಕ್ಕಪಾಡಿನಿಯಂ - ಅನಾಮಧೇಯ
- ❖ ಎಟ್ಟುತೊಕ್ಕೈ - (8 ಕವನ ಸಂಕಲನಗಳು)
  1. ಅಕನಾನೂರು
  2. ಪುರನಾನೂರು
  3. ಮಧುರೈ ಕಾಂಚಿ
  4. ನರ್ರಿನ್ನೈ
  5. ಶಿರುಪಾಣಾಟ್ಟೂ ಪಾಡೈ
  6. ಪೆರುಂಬಾಣಾಟ್ಟು ಪಾಡೈ
  7. ನೆಡುನಿಲ್ಲ ವಾಡೈ
  8. ತಿರುಮುಡುಗಾಟ್ಟು ಪಾಡೈ
- ❖ ಪತ್ತುಪಾಟ್ಟು (10 ಕಾವ್ಯ ಸಂಕಲನಗಳು)
- ❖ ಪದಿರ್ರುಪಟ್ಟು
- ❖ ಪಡಿನೆಂಕಿಲಕನಕ್ಕು (18 ಸಣ್ಣ ಗ್ರಂಥಗಳು)

**ತಮಿಳಿನ 2 ಮಹಾಕಾವ್ಯಗಳು**

- ❖ ಶಿಲಪ್ಪದಿಕಾರಂ - ಇಳಂಗೋ ಅಡಿಗಳ್ (ಕರ್ತೃ)
- ❖ ಮಣಿಮೇಖಲೈ - ಸತ್ತನಾರ್ (ಕರ್ತೃ)

## ಪಲ್ಲವರು (ಕ್ರಿ.ಶ. 3 ರಿಂದ 6ನೇ ಶತಮಾನ)

- ❖ ಪಲ್ಲವ ಮನೆತನದ ಸ್ಥಾಪಕ - ಬಪ್ಪದೇವ
- ❖ ಪಲ್ಲವರ ರಾಜಧಾನಿ - ಕಂಚಿ
- ❖ ಪಲ್ಲವರ ರಾಜಲಾಂಛನ - ವೃಷಭ

**ಪಲ್ಲವರ ರಾಜವಂಶ**

- ❖ ಬಪ್ಪ
- ❖ ಶಿವಸ್ಕಂದ ವರ್ಮನ್
- ❖ ವಿಷ್ಣುಗೋಪ (ಕ್ರಿ.ಶ. 350-375) (ಸಮುದ್ರಗುಪ್ತನಿಂದ ಸೋತ ಪಲ್ಲವ ದೊರೆ)
- ❖ ಸಿಂಹವಿಷ್ಣು (ಕ್ರಿ.ಶ. 575-600) (ಕಿರಿತಾರ್ಜುನೀಯ ಕರ್ತೃ - ಭಾರವಿಯ ಆಶ್ರಯದಾತ)
- ❖ 1ನೇ ಮಹೇಂದ್ರವರ್ಮನ್ (ಕ್ರಿ.ಶ. 600-630)
- ❖ 1ನೇ ನರಸಿಂಹವರ್ಮನ್ (ಕ್ರಿ.ಶ. 630-668)
- ❖ 2ನೇ ಮಹೇಂದ್ರವರ್ಮನ್ (ಕ್ರಿ.ಶ. 668-670)
- ❖ 1ನೇ ಪರಮೇಶ್ವರ ವರ್ಮನ್ (ಕ್ರಿ.ಶ. 675-695)
- ❖ 2ನೇ ನರಸಿಂಹವರ್ಮನ್ (ಕ್ರಿ.ಶ. 695-722)
- ❖ 2ನೇ ಪರಮೇಶ್ವರ ವರ್ಮನ್ (ಕ್ರಿ.ಶ. 722-730)
- ❖ 2ನೇ ನಂದಿವರ್ಮನ್ (ಕ್ರಿ.ಶ. 730-795)
- ❖ ದಂತಿವರ್ಮನ್
- ❖ 3ನೇ ನಂದಿವರ್ಮನ್
- ❖ ಅಪರಾಜಿತ ವರ್ಮನ್ (ಕೊನೆಯ ಪಲ್ಲವ ರಾಜ)

**1ನೇ ಮಹೇಂದ್ರ ವರ್ಮ (ಕ್ರಿ.ಶ. 600-630)**

- ❖ ಪಲ್ಲವರ ಪ್ರಸಿದ್ಧ ರಾಜ
- ❖ ಪಲ್ಲವ ಮತ್ತು ಚಾಲುಕ್ಯ ಮನೆತನಗಳ ನಡುವೆ ದ್ವೇಷ ಇವನ ಕಾಲದಿಂದ ಆರಂಭ.
- ❖ ಬಾದಾಮಿ ಚಾಲುಕ್ಯ ಇಮ್ಮಡಿ ಪುಲಿಕೇಶಿಯಿಂದ ಸೋತ ಪಲ್ಲವ ದೊರೆ ಈತ.
- ❖ ಮಹೇಂದ್ರವರ್ಮ ಮೊದಲು ಜೈನ ಮತಾವಲಂಬಿಯಾಗಿದ್ದ.
- ❖ ಶೈವ ಸಂತನಾದ ಅಪ್ಪಾರ್ ಎಂಬುವವರಿಂದ ನಂತರದಲ್ಲಿ ಶೈವ ಮತಾವಲಂಬಿಯಾದ.
- ❖ ತಿರುಚನಾಪಳ್ಳಿ, ಮಹೇಂದ್ರ ವಾಡಿ, ದಳವಾನೂರು ಮತ್ತು ಎಲ್ಲಂಗಳಲ್ಲಿ ಶಿವ ದೇವಾಲಯ ನಿರ್ಮಿಸಿದ.
- ❖ ತಟಾಕದ ಬಳಿ ವಿಷ್ಣುಗೃಹ ಎಂಬ ವಿಷ್ಣು ದೇವಾಲಯ ನಿರ್ಮಿಸಿದ.
- ❖ 1ನೇ ಮಹೇಂದ್ರವರ್ಮನಿಂದ ರಚಿತವಾದ ಕೃತಿಗಳು - ಮತ್ತವಿಲಾಸ ಪ್ರಹಸನ ಮತ್ತು ಭಗವದಜ್ಜುಕೀಯ
- ❖ ಸಂಗೀತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಇವನು 'ಪರಿವೀಣಾ' ಎಂಬ ವಾದ್ಯ ನುಡಿಸುವಲ್ಲಿ ಪರಿಣಿತನಾಗಿದ್ದ.

- ಇವನ ಸಂಗೀತ ಮತ್ತು ಕಲೆಗಳಲ್ಲಿದ್ದ ಅಭಿರುಚಿಯನ್ನು ತಿಳಿಸುವ ಶಾಸನ - ಕುಡಿಮಿಯಾ ಮಲೈ
- ಇಟ್ಟಿಗೆ ಮರಗಳಿಗೆ ಬದಲಾಗಿ ಪ್ರಥಮ ಬಾರಿಗೆ ಕಲ್ಲಿನಿಂದ ದೇವಾಲಯ ನಿರ್ಮಿಸುವ ಆಚರಣೆಯನ್ನು ಜಾರಿಗೆ ತಂದ.
- 1ನೇ ಮಹೇಂದ್ರವರ್ಮನ ಕಾಲದಲ್ಲಿ ನಿರ್ಮಿಸಿದ ಊರುಗಳು - ಮಹೇಂದ್ರಮಂಗಲ ಮತ್ತು ಮಹೇಂದ್ರವಾಡಿ.
- ಮಾಮಂದೂರಿನ ಬಳಿ ಚಿತ್ರಜೀಕತಟಾಕ ಎಂಬ ಕೆರೆ ನಿರ್ಮಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟ.
- **ಬಿರುದುಗಳು :** ಮತ್ತ ವಿಲಾಸ, ಪರಮ ಮಹೇಶ್ವರ, ವಿಚಿತ್ರ ಚಿತ್ತ, ಮಹೇಂದ್ರ ವಿಕ್ರಮ, ಗುಣಭಾರ, ಚಿತ್ರಕಾರಪುಲಿ, ಸತ್ಯಸಂದ - ಇತ್ಯಾದಿ.

### 1ನೇ ನರಸಿಂಹ ವರ್ಮನ್ (ಕ್ರಿ.ಶ. 630-655)

- ಪಲ್ಲವ ರಾಜರುಗಳಲ್ಲಿ - ಸರ್ವಶ್ರೇಷ್ಠ ರಾಜ.
- ಕ್ರಿ.ಶ. 642ರಲ್ಲಿ ಚಾಲುಕ್ಯ ದೊರೆ ಇಮ್ಮಡಿ ಪುಲಿಕೇಶಿಯನ್ನು ಪೆರಿಯಾಲ, ಮಣಿಮಂಗಲ ಮತ್ತು ಸುರಮಾರ ಯುದ್ಧಗಳಲ್ಲಿ ಸೋಲಿಸಿ ಚಾಲುಕ್ಯ ರಾಜಧಾನಿ ಬಾದಾಮಿಯನ್ನು ವಶಪಡಿಸಿಕೊಂಡ.
- ಚಾಲುಕ್ಯನ ಮೇಲಿನ ದಿಗ್ವಿಜಯದ ನೆನಪಿಗಾಗಿ ವಾತಾಪಿಕೊಂಡ ಎಂಬ ಬಿರುದು ಧರಿಸಿದ.
- ಬಾದಾಮಿಯ ಮಲ್ಲಿಕಾರ್ಜುನ ದೇವಾಲಯದ ಹಿಂಭಾಗದ ಬಂಡೆಗಲ್ಲಿನ ಮೇಲೆ ಚಾಲುಕ್ಯರ ಮೇಲೆ ಸಾಧಿಸಿದ ವಿಜಯದ ವಿವರಣೆಯನ್ನು ಕೆತ್ತಿಸಿದ.
- 1ನೇ ನರಸಿಂಹವರ್ಮನ ಜಯಕ್ಕೆ ಕಾರಣನಾದ ದಳಪತಿ - ಪರಂಜ್ಯೋತಿ.
- ಕ್ರಿ.ಶ. 642-655ರವರೆಗೆ ಬಾದಾಮಿ ಇವನ ವಶದಲ್ಲಿ ಇತ್ತು.
- 1ನೇ ನರಸಿಂಹವರ್ಮನ ಸಿಂಹಳದ ಮೇಲಿನ ದಂಡಯಾತ್ರೆ ತಿಳಿಸುವ ಶಾಸನ - ಕಾಸಕ್ಕುಡಿ ಶಾಸನ
- ಈತನ ಸಿಂಹಳದ ಮೇಲಿನ ದಂಡಯಾತ್ರೆಯನ್ನು - ಶ್ರೀ ರಾಮಚಂದ್ರನ ಲಂಕಾ ವಿಜಯಯಾತ್ರೆಗೆ ಹೋಲಿಸಲಾಗಿದೆ.
- ತನ್ನ ದಿಗ್ವಿಜಯಗಳ ನೆನಪಿಗಾಗಿ ಮಾಮಲ್ಲಪುರಂ / ಮಹಾಬಲಿಪುರ ನಿರ್ಮಿಸಿದ.
- ಸಮುದ್ರತಟದಲ್ಲಿನ ಮಹಾಬಲಿಪುರವನ್ನು ತನ್ನ 2ನೇ ರಾಜಧಾನಿಯನ್ನಾಗಿ ಮಾಡಿಕೊಂಡ.
- ಚೀನಾ ಪ್ರವಾಸಿ ಹ್ಯೂಯನ್ ತ್ಸಾಂಗ್ ಇವನ ಕಾಲದಲ್ಲಿ ಕಂಚಿಗೆ ಭೇಟಿ ನೀಡಿದ. (ಕ್ರಿ.ಶ. 639)
- ಮಹಾಬಲಿಪುರಂನಲ್ಲಿ ಜಗತ್ಪ್ರಸಿದ್ಧ ಶಿಲಾರಥಗಳನ್ನು ಕೆತ್ತಿಸಿದ.

### 2ನೇ ನರಸಿಂಹವರ್ಮ (ಕ್ರಿ.ಶ. 681-700)

- ಇವನ ಕಾಲದಲ್ಲಿ ರಾಜ್ಯ ಹೆಚ್ಚು ಶಾಂತಿ ಸುಭಿಕ್ಷತೆಯಿಂದ ಕೂಡಿತ್ತು.
- ಕಂಚಿಯಲ್ಲಿ ಕೈಲಾಸನಾಥ (ರಾಜಸಿಂಹೇಶ್ವರ) ದೇವಾಲಯ ನಿರ್ಮಿಸಿದ.
- ಇವನ ಪ್ರಮುಖ ಬಿರುದುಗಳು - ವೃಷಭ ಲಾಂಛನ, ಶ್ರೀ ವಾದ್ಯ ವಿದ್ಯಾದರ, ಶ್ರೀ ಆಗಮಪ್ರಿಯ, ಶ್ರೀ ಶಿವ ಚೂಡಾಮಣಿ, ಶ್ರೀ ಶಂಕರಭಕ್ತ.
- "ಕಾವ್ಯದರ್ಶ" ಬರೆದ ಕವಿದಂಡಿಯು ಇವನ ಆಸ್ಥಾನದಲ್ಲಿದ್ದನು.

### ಪಲ್ಲವರ ಕಲೆ ಮತ್ತು ವಾಸ್ತುಶಿಲ್ಪ

- ದಕ್ಷಿಣ ಭಾರತದಲ್ಲಿ ವಿಶಿಷ್ಟ ಕಲೆ ಮತ್ತು ವಾಸ್ತುಶೈಲಿ ಇವರ ಕಾಲದಲ್ಲಿ ಆರಂಭವಾಯಿತು.
- ಪಲ್ಲವರ ಕಾಲದಲ್ಲಿ ರೂಪುಗೊಂಡ ಕಲಾಶೈಲಿಯನ್ನು ದ್ರಾವಿಡ ಶೈಲಿ ಎನ್ನುವರು.
- 1ನೇ ಮಹೇಂದ್ರವರ್ಮನ ಕಾಲದಿಂದ - ವಾಸ್ತುಶಿಲ್ಪಕ್ಕೆ (ದೇವಾಲಯಗಳಿಗೆ) ಕಲ್ಲನ್ನು ಬಳಸಲಾಯಿತು.

**ಕಂಚಿಯಲ್ಲಿನ ದೇವಾಲಯಗಳು :**

- ❖ ಕೈಲಾಸನಾಥ, ಕಾಮಕೊಟ್ಟಂ, ಏಕಂಬರನಾಥ, ಕಾಮಾಕ್ಷಿ, ವರದರಾಜ, ಮಹಾಕಾಳೇಶ್ವರ, ಪುಣ್ಯಕೋಟೇಶ್ವರ, ಕಶ್ಯಪೇಶ್ವರ, ಸರ್ವತೀರ್ಥೇಶ್ವರ, ಚೊಕ್ಕನಾಥೇಶ್ವರ, ತ್ರೈಲೋಕ್ಯನಾಥ, ಮುತ್ತೀಶ್ವರ, ಗಣಪತಿ, ಸುಬ್ರಹ್ಮಣ್ಯ ಮುಂತಾದವು.
- ❖ ಮಹಾಬಲಿಪುರಂ : ಚೆನ್ನೈನಿಂದ 32 ಮೈಲಿ ದೂರದಲ್ಲಿರುವ ಇದು ಸಮುದ್ರ ತೀರದಲ್ಲಿದ್ದು ಪಲ್ಲವರ ಶಿಲ್ಪಕಲೆಯ ಕೇಂದ್ರವಾಗಿದೆ.
- ❖ 1ನೇ ನರಸಿಂಹವರ್ಮನ ಕಾಲದಲ್ಲಿ - ಶಿಲಾರಥಗಳು ಪಗೋಡಾಗಳು, ಕಲ್ಲಿನ ದೇವಾಲಯಗಳು, ಮಂಟಪಗಳು - ಇಲ್ಲಿ ನಿರ್ಮಿತವಾದವು.
- ❖ ಇಲ್ಲಿನ ವರಾಹ ಮಂಟಪ, ಮಹಿಷಾಸುರ ಮರ್ದಿನಿ ಮಂಟಪಗಳು ಶಿಲ್ಪಗಳು ಅತ್ಯಂತ ವೈಭವವಾಗಿವೆ.
- ❖ ಸಿಂಹವಿಷ್ಣು, 1ನೇ ಮಹೇಂದ್ರವರ್ಮ ಮತ್ತು ಅವನ ರಾಣಿಯರ ಆಳೆತ್ತರದ ಪ್ರಮಾಣದ ಆಕೃತಿಗಳನ್ನು ವರಾಹಮಂಟಪದಲ್ಲಿ ಬಿಡಿಸಲಾಗಿದೆ.
- ❖ ಈ ಮಂಟಪಗಳ ಸಮೀಪದಲ್ಲಿ 'ಅರ್ಜುನನ ತಪಸ್ಸು' ಅಥವಾ 'ದೇವಗಂಗೆ ಧರೆಗೆ' ಇಳಿದು ಬರುತ್ತಿರುವ ದೃಶ್ಯ ಎಂದು ಕರೆಯಲ್ಪಡುವ ಶಿಲ್ಪಕಲಾಗುಚ್ಛವು ಪಲ್ಲವರ ಕಾಲದ ಶಿಲ್ಪಕಲಾ ನೈಪುಣ್ಯಕ್ಕೆ ನಿದರ್ಶನವಾಗಿದೆ.

## ತಂಜಾವೂರಿನ ಚೋಳರು

- ❖ ಪಲ್ಲವರ ಪತನದ ನಂತರ ದಕ್ಷಿಣದಲ್ಲಿ ಅಧಿಕಾರಕ್ಕೆ ಬಂದ ಚೋಳರು ಕ್ರಿ.ಶ. 9 ರಿಂದ 13ನೇ ಶತಮಾನದವರೆಗೆ ಆಳಿದರು.
- ❖ ವಿಜಯಾಲಯ ಚೋಳನು ಕ್ರಿ.ಶ. 850-871
- ❖ ತನ್ನ ಮಗ 1ನೇ ಆದಿತ್ಯನೊಡಗೂಡಿ ಪಲ್ಲವರನ್ನು ನಿರ್ಮೂಲನೆ ಮಾಡಿ ಕ್ರಿ.ಶ. 850ರಲ್ಲಿ ತಂಜಾವೂರಿನಲ್ಲಿ ಚೋಳ ಸಾಮ್ರಾಜ್ಯ ಸ್ಥಾಪಿಸಿದ.
- ❖ ಒಂದನೇ ಪರಾಂತಕ ಕ್ರಿ.ಶ. 907-955
- ❖ ಪಾಂಡ್ಯ ರಾಜಧಾನಿ ಮಧುರೈ ವಶಪಡಿಸಿಕೊಂಡು ಮಧುರೈ ಕೊಂಡ ಎಂಬ ಬಿರುದು ಧರಿಸಿದ.
- ❖ ಸಿಂಹಳದ ಮೇಲೆ ದಾಳಿ ಮಾಡಿ ಇಲ್ಲಮಂ ಕೊಂಡ ಎಂಬ ಬಿರುದು ಧರಿಸಿದ.
- ❖ ಕ್ರಿ.ಶ. 940ರಲ್ಲಿ ತಕ್ಕೊಲಂ ಕದನದಲ್ಲಿ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನಿಂದ ಪರಾಜಿತನಾದ.
- ❖ ಶಿಭಕ್ತನಾದ ಈತ ಕಂಚಿಯ ಚಿದಂಬರಂ ದೇವಾಲಯಕ್ಕೆ ಚಿನ್ನದ ತಗಡು ಹೊದಿಸಿದ.
- ❖ ಇವನ ಉತ್ತರ ಮೇರೂರು ಶಾಸನವು ಚೋಳರ ಸ್ಥಳೀಯ ಸ್ವಯಂ ಆಡಳಿತದ ಬಗ್ಗೆ ಮಾಹಿತಿ ನೀಡುತ್ತದೆ.

**ಒಂದನೇ ರಾಜರಾಜ ಚೋಳ (ಕ್ರಿ.ಶ. 975-1015)**

- ❖ 2ನೇ ಪರಾಂತಕ ಮತ್ತು ದಾನವನ್ ಮಹಾದೇವಿಯರ ಮಗ.
- ❖ ಕೇರಳದ ಚೇರರನ್ನು ಸೋಲಿಸಿ ಕನ್ನೂಳುರ್ಶಾಲೈಕ್ಕಳ ಮರತ ಎಂಬ ಬಿರುದು ಪಡೆದ.
- ❖ ಸಿಂಹಳದ ಮೇಲೆ ದಾಳಿ ಮಾಡಿ ರಾಜ 5ನೇ ಮಹೇಂದ್ರನನ್ನು ಸೋಲಿಸಿ ರಾಜಧಾನಿ ಅನುರಾಧಪುರವನ್ನು ನಾಶ ಮಾಡಿ ಪೊಲೆನಾರು ಪಟ್ಟಣವನ್ನು ಹೊಸ ರಾಜಧಾನಿಯನ್ನಾಗಿ ಮಾಡಿಕೊಂಡ. ಈ ವಿಜಯದ ನೆನಪಿಗಾಗಿ ಶಿವ ದೇವಾಲಯ ನಿರ್ಮಿಸಿದ.
- ❖ ತಲಕಾಡನ್ನು ರಾಜರಾಜಪುರ ಎಂಬ ಹೆಸರನ್ನಿಟ್ಟನ್ನು.
- ❖ ಮಾಲ್ಡೀವ್‌ನ 12 ಸಾವಿರ ದ್ವೀಪಗಳನ್ನು ವಶಪಡಿಸಿಕೊಂಡನು.
- ❖ ಕ್ರಿ.ಶ. 1000 ದಲ್ಲಿ ಭೂಮಾಪನಾ ಕಾರ್ಯ ಕೈಗೊಂಡನು.
- ❖ ತಂಜಾವೂರಿನಲ್ಲಿ ಬೃಹದೇಶ್ವರ ದೇವಾಲಯ (ರಾಜರಾಜೇಶ್ವರ ದೇವಾಲಯ) ನಿರ್ಮಿಸಿದ.
- ❖ **ಬಿರುದುಗಳು :** ಚೋಳೇಂದ್ರ ಸಿಂಹ, ಶಿವಪಾದ ಶೇಖರ, ಮುಮ್ಮಡಿ ಚೋಳ, ಚೋಳ ಮಾರ್ತಾಂಡ, ಪಾಂಡ್ಯಕುಲಸಾನಿ, ಕೇರಳಾಂತಕ, ಸಿಂಹಳಾಂತಕ ಇತ್ಯಾದಿ.

### ಒಂದನೇ ರಾಜೇಂದ್ರ ಚೋಳ (ಕ್ರಿ.ಶ. 1012-1044)

- ಒಂದನೇ ರಾಜರಾಜನ ಮಗನಾದ ಇವನು ಕ್ರಿ.ಶ. 1018ರಲ್ಲಿ ಸಿಂಹಳದ 5ನೇ ಮಹೇಂದ್ರನನ್ನು ಸೋಲಿಸಿ ಸಂಪೂರ್ಣ ಸಿಂಹಳ (ಶ್ರೀಲಂಕಾ)ವನ್ನು ವಶಪಡಿಸಿಕೊಂಡನು ಮತ್ತು ಸಿಂಹಳರಾಜನ ವಶದಲ್ಲಿದ್ದ ಪಾಂಡ್ಯ ರಾಜನ ಕಿರೀಟ ಹಾಗೂ ರಾಜಮುದ್ರೆಗಳನ್ನು ವಶಪಡಿಸಿಕೊಂಡು ಒಂದನೇ ಪರಾಂತಕನ ಆಸೆ ಪೂರೈಸಿದ.
- ಇವನು ಉತ್ತರದ ಗಂಗಾನದಿವರೆಗೂ ದಿಗ್ವಿಜಯ ಕೈಗೊಂಡು ಅಲ್ಲಿಂದ ಪವಿತ್ರ ಗಂಗಾ ಜಲವನ್ನು ತೆಗೆದುಕೊಂಡು ಹಿಂದುರುಗಿದ್ದರಿಂದ ಗಂಗೈಕೊಂಡ ಚೋಳ ಎಂಬ ಬಿರುದು ಧರಿಸಿದ ಮತ್ತು ಗಂಗೈಕೊಂಡ ಚೋಳಪುರ ಎಂಬ ಹೊಸ ರಾಜಧಾನಿ ನಿರ್ಮಿಸಿದ ಹಾಗೂ ಅಲ್ಲಿ ಶಿವಾಲಯವನ್ನು ಹಾಗೂ ಚೋಳಗಂಗಾ ಎಂಬ ಕೆರೆಯನ್ನು ನಿರ್ಮಿಸಿದ.
- ತನ್ನ ನೌಕಾಸೈನ್ಯದಿಂದ ಶೈಲೇಂದ್ರ ಸಾಮ್ರಾಜ್ಯದ ಮೇಲೆ ದಾಳಿ ಅಲ್ಲಿನ ರಾಜ ಸಂಗ್ರಾಮ ವಿಜಯೋತ್ತುಂಗ ವರ್ಮನನ್ನು ಸೋಲಿಸಿ ಜಾವಾ ಸುಮಾತ್ರಗಳ ಮೇಲೆ ತನ್ನ ಅಧಿಪತ್ಯ ಸ್ಥಾಪಿಸಿದ.
- ಕ್ರಿ.ಶ. 1025ರಲ್ಲಿ ದಕ್ಷಿಣ ಆರ್ಕಾಟ್ ಜಿಲ್ಲೆಯ ಎನ್ನಾಯಿರಾಮ್‌ನಲ್ಲಿ ಪ್ರೌಢ ವಿದ್ಯಾಸಂಸ್ಥೆ ಸ್ಥಾಪಿಸಿದ.
- **ಬಿರುದುಗಳು :** ಗಂಗೈಕೊಂಡ ಚೋಳ, ಪಂಡಿತಚೋಳ, ಕೇದಾರಂ ಕೊಂಡ ಮುಂತಾದವು.

### ವೀರರಾಜೇಂದ್ರ (ಕ್ರಿ.ಶ. 1064-1069)

- ಚಂಗಲ್ ಪೇಟೆ ಜಿಲ್ಲೆಯ ತಿರುಮುಕ್ಕುಡಲ್ ಎಂಬಲ್ಲಿ ವೈದಿಕ ಕಾಲೇಜು ಮತ್ತು ಆಸ್ಪತ್ರೆ ನಿರ್ಮಿಸಿದ.
- ತನ್ನ ಮಗಳನ್ನು ಕಲ್ಯಾಣಿ ಚಾಲುಕ್ಯ ದೊರೆ 6ನೇ ವಿಕ್ರಮಾದಿತ್ಯನಿಗೆ ಕೊಟ್ಟು ವಿವಾಹ ಮಾಡಿದ.
- **ಬಿರುದುಗಳು :** ಅಹವಮಲ್ಲ ಕುಲಕಾಲ, ವಲ್ಲಭ ವಲ್ಲಭ.

### ಒಂದನೇ ಕುಲೋತ್ತುಂಗ ಚೋಳ (ಕ್ರಿ.ಶ. 1070-1120)

- ಇವನು ರಾಜ ರಾಜನ ಮಗಳು ಕುಂದವ್ವೆ ಮತ್ತು ವೆಂಗಿಚಾಲುಕ್ಯರ ವಿಮಲಾಧಿತ್ಯ ಮಗ
- ಇವನ ಕಾಲದಲ್ಲಿ ಸಿಂಹಳವು ಸ್ವತಂತ್ರಗೊಂಡಿತು (ಕ್ರಿ.ಶ. 1075)
- ಇವನ ಕಾಲದಲ್ಲಿ ಹೊಯ್ಸಳ ವಿಷ್ಣುವರ್ಧನನು ಚೋಳ ಪ್ರಾಂತ್ರಧಿಕಾರಿಯಾದ ಆದಿಯಮನನ್ನು ಸೋಲಿಸಿ ಗಂಗವಾಡಿ, ಕೊಂಗುನಾಡು ಮತ್ತು ನೊಳಂಬವಾಡಿಗಳನ್ನು ವಶಪಡಿಸಿಕೊಂಡನು,
- ಶಿವಭಕ್ತನಾದ ಈತನು ವೈಷ್ಣವ ಶ್ರೀರಾಮಾನುಜಾಚಾರ್ಯರಿಗೆ ಕಿರುಕುಳ ನೀಡಿದ್ದರಿಂದ ರಾಮಾನುಜರು ರಾಜ್ಯ ತೊರೆದು ಹೊಯ್ಸಳ ರಾಜ್ಯಕ್ಕೆ ಪಲಾಯನ ಮಾಡಿದರು.
- **ಬಿರುದುಗಳು :** ತ್ರಿಭುವನ ಚಕ್ರವರ್ತಿ, ವಿದರ್ಭರಾಜ ಭಯಂಕರ, ಸುಗಂಧವೃತ್ತ, ಇತ್ಯಾದಿ.

## ತಂಜಾವೂರು ಚೋಳ ರಾಜವಂಶ

- ವಿಜಯಾಲಯ ಚೋಳ - ಕ್ರಿ.ಶ. 850-871
- 1ನೇ ಆದಿತ್ಯ - ಕ್ರಿ.ಶ. 871-907
- 1ನೇ ಪರಾಂತಕ - ಕ್ರಿ.ಶ. 907-995 (955-985 ಗೊಂದಲದ ರಾಜಕೀಯ)
- 1ನೇ ರಾಜರಾಜ ಚೋಳ - ಕ್ರಿ.ಶ. 985-1014/15
- 1ನೇ ರಾಜೇಂದ್ರ ಚೋಳ - ಕ್ರಿ.ಶ. 1012-1044
- 1ನೇ ರಾಜಾಧಿರಾಜ - ಕ್ರಿ.ಶ. 1044-1054
- 2ನೇ ರಾಜೇಂದ್ರ - ಕ್ರಿ.ಶ. 1054-1063-64
- ವೀರ ರಾಜೇಂದ್ರ ಚೋಳ - ಕ್ರಿ.ಶ. 1063-64-1069

- ಆದಿರಾಜೇಂದ್ರ - ಕ್ರಿ.ಶ. 1069-1070
- 1ನೇ ಕುಲೋತ್ತುಂಗ - ಕ್ರಿ.ಶ. 1070-1118
- ವಿಕ್ರಮಚೋಳ - ಕ್ರಿ.ಶ. 1118-1135
- 2ನೇ ಕುಲೋತ್ತುಂಗ - ಕ್ರಿ.ಶ. 1135-1150
- 2ನೇ ರಾಜರಾಜ - ಕ್ರಿ.ಶ. 1150-1173
- 2ನೇ ರಾಜಾಧಿರಾಜ - ಕ್ರಿ.ಶ. 1173 ರಿಂದ
- 3ನೇ ಕುಲೋತ್ತುಂಗ 1246 ರವರೆಗೆ
- 3ನೇ ರಾಜಾಧಿರಾಜ
- 3ನೇ ರಾಜೇಂದ್ರ - ಕ್ರಿ.ಶ. 1246-1279 (ಕೊನೆಯ ರಾಜ)

## ಮಧ್ಯಕಾಲೀನ ಭಾರತದ ಇತಿಹಾಸ

- ಭಾರತದ ಮೇಲೆ ಮುಸ್ಲಿಂರ ದಾಳಿ (ಅರಬ್ಬರು)
- ಭಾರತದ ಮೇಲೆ ದಾಳಿಯಿಟ್ಟ ಪ್ರಥಮ ಮುಸಲ್ಮಾನರು ಅರಬ್ಬರು.
- ಕ್ರಿ.ಶ. 711ರಲ್ಲಿ ವಾಯುವ್ಯ ಭಾರತದಲ್ಲಿನ ಸಿಂಧ್ ಪ್ರದೇಶದ ಮೇಲೆ ಪ್ರಥಮ ದಾಳಿ ಉಬೇದುಲ್ಲನ ನೇತೃತ್ವದಲ್ಲಿ ನಡೆಯಿತು. ಆದರೆ ಈ ದಾಳಿ ವಿಫಲವಾಯಿತು.
- ಕ್ರಿ.ಶ. 712ರಲ್ಲಿ ಭಾರತದ ಮೇಲೆ ಯಶಸ್ವಿ ದಾಳಿ ನಡೆಸಿದ ಪ್ರಥಮ ಮುಸ್ಲಿಂ ವ್ಯಕ್ತಿ ಮಹಮ್ಮದ್ ಬಿನ್ ಖಾಸಿಂ

### ಮಹಮ್ಮದ್ ಘಜ್ನಿ (ಕ್ರಿ.ಶ. 997-1030)

- ಕ್ರಿ.ಶ. 11ನೇ ಶತಮಾನದಲ್ಲಿ ಅರಬ್ಬರ ಭಾರತೀಯ ಪ್ರದೇಶಗಳನ್ನು ಗೆದ್ದು ಅರಬ್ಬರ ಅಂತ್ಯಕ್ಕೆ ಕಾರಣನಾದ.
- ಮಹಮ್ಮದ್ ಘಜ್ನಿಯು - ಭಾರತದ ಮೇಲೆ 17 ಬಾರಿ ದಂಡಯಾತ್ರೆ ಮಾಡಿದನು.
- ಇವನ ದಾಳಿಯ ಉದ್ದೇಶ ಮೂಲತಃ ಸಂಪತ್ತನ್ನು ಲೂಟಿ ಮಾಡುವುದೇ ಆಗಿತ್ತು.
- ಕ್ರಿ.ಶ. 1000ರಲ್ಲಿ ಇವನ ಪ್ರಥಮ ದಾಳಿ ಭಾರತದ ಗಡಿಪ್ರದೇಶಗಳ ಮೇಲಾಗಿತ್ತು.
- ಇವನ 2ನೇ ದಂಡಯಾತ್ರೆ ಪಂಜಾಬ್‌ನ ಹಿಂದೂ ಶಾಹಿ ರಾಜನಾದ ಜಯಪಾಲನ ಮೇಲೆ (ಕ್ರಿ.ಶ. 1001).
- ಇವನ ದಾಳಿಗಳಲ್ಲಿ ಅತಿ ಪ್ರಮುಖವಾದುದು. 1026 ಜನವರಿ 6ರಲ್ಲಿ ಸೋಮನಾಥ ದೇವಾಲಯದ ಮೇಲೆ ಮಾಡಿದ ದಾಳಿ. (ಈ ದೇವಾಲಯವನ್ನು ವಲ್ಲಭಿಯ ಅರಸರು ನಿರ್ಮಿಸಿದ್ದರು.)
- ಘಜ್ನಿ ಮಹಮ್ಮದನ 17ನೆಯ ಮತ್ತು ಕೊನೆಯ ದಾಳಿ ಪಂಜಾಬಿನ ಜಾಟರ ವಿರುದ್ಧ.
- ಮಹಮ್ಮದ್ ಘಜ್ನಿಯ ಆಸ್ಥಾನದಲ್ಲಿದ್ದ ಪ್ರಸಿದ್ಧ ವಿದ್ವಾಂಸರುಗಳು ಆಲ್ಬೆರೂನಿ, ಉತ್ಬಿ, ಫಿರ್ದೂಶಿ (ಷಹನಾಮದ ಕರ್ತೃ) ಫರೂಕಿ, ಭೈಯಾಕಿ, ಫರಭಿ, ಉಜಾರಿ, ತುಷಿ, ಅಸ್ಜಾದಿ, ಅನ್ಸೂರಿ.
- ಆಲ್ಬರೂನಿಯ ಅರಬಿಕ್ ಭಾಷೆಯ ಕೃತಿ ತಹ್ಕಿಕ ಐ-ಹಿಂದ್.
- ಘಜ್ನಿಯೊಂದಿಗೆ ಭಾರತಕ್ಕೆ ಬಂದ ಆಲ್ಬರೂನಿಯು ಸಂಸ್ಕೃತ, ಖಗೋಳ, ವೇದಾಂತಗಳನ್ನು ಆಳವಾಗಿ ಅಧ್ಯಯನ ಮಾಡಿದ.

### ಘೋರಿ ಮಹಮ್ಮದ್

- ಮಹಮ್ಮದ್ ಘೋರಿಯ ಭಾರತದ ದಾಳಿಯ ಉದ್ದೇಶ ಸಾಮ್ರಾಜ್ಯ ಸ್ಥಾಪಿಸುವುದಾಗಿತ್ತು.
- ಘೋರಿ ಮಹಮ್ಮದನ ಪ್ರಥಮ ದಾಳಿ - ಕ್ರಿ.ಶ. 1175ರಲ್ಲಿ ಮುಲ್ತಾನ್ ಮೇಲೆ.

❖ ಕ್ರಿ.ಶ. 1178ರಲ್ಲಿ ಗುಜರಾತಿನ ಅನಿಲ್‌ವಾಡದ ಅರಸ 2ನೇ ಭೀಮನಿಂದ ಸೋತು. ಘಜ್ನಿಗೆ ವಾಪಸ್ಸಾದನು ಇದು ಭಾರತದಲ್ಲಿ ಇವನ ಮೊದಲ ಸೋಲಾಗಿತ್ತು.

**ತರೈನ್ ಯುದ್ಧಗಳು**

❖ ಕ್ರಿ.ಶ. 1191ರಲ್ಲಿ ಪ್ರಥಮ ತರೈನ್ ಯುದ್ಧ, ಮಹಮ್ಮದ್ ಘೋರಿ ಮತ್ತು ಪೃಥ್ವಿರಾಜ್ ಚೌಹಾನ್ ನಡುವೆ ನಡೆಯಿತು. ದೆಹಲಿ ಮತ್ತು ಅಜ್ಮೀರ್‌ನ ರಾಜನಾದ ಪೃಥ್ವಿರಾಜ್ ಚೌಹಾನ್ ಈ ಯುದ್ಧದಲ್ಲಿ ಜಯಗಳಿಸಿದ.

❖ ಕ್ರಿ.ಶ. 1192 ರಲ್ಲಿ ಎರಡನೇ ತರೈನ್ ಯುದ್ಧದಲ್ಲಿ ಮಹಮ್ಮದ್ ಘೋರಿ - ಪೃಥ್ವಿರಾಜ್‌ನನ್ನು ಸೋಲಿಸಿ, ದೆಹಲಿ ಮತ್ತು ಅಜ್ಮೀರಗಳನ್ನು ವಶಪಡಿಸಿಕೊಂಡ.

❖ ದೆಹಲಿ, ಅಜ್ಮೀರಗಳ ರಾಜ್ಯಪಾಲನನ್ನಾಗಿ ಕುತುಬ್ ದಿನ್ ಐಬಕ್‌ನನ್ನು ನೇಮಿಸಿ ಘೋರಿಯು ಘಜ್ನಿಗೆ ಹಿಂತಿರುಗಿಸಿದ

❖ ಘೋರಿ ಸಾವಿನ ನಂತರ ಕುತುಬ್ ದಿನ್ ಐಬಕ್ ದೆಹಲಿ ಸುಲ್ತಾನರ ಸಾಮ್ರಾಜ್ಯವನ್ನು ಸ್ಥಾಪಿಸಿದ.

## ದೆಹಲಿ ಸುಲ್ತಾನರು 1206-1526

**ದೆಹಲಿಯನ್ನು ಆಳಿದ ಐದು ಸಂತತಿಗಳು**

❖ ಗುಲಾಮಿ ಸಂತತಿ - ಕ್ರಿ.ಶ. 1206-1290

❖ ಖಿಲ್ಜಿ ಸಂತತಿ - ಕ್ರಿ.ಶ. 1290-1320

❖ ತುಘಲಕ್ ಸಂತತಿ - ಕ್ರಿ.ಶ. 1320-1414

❖ ಸೈಯದ್ ಸಂತತಿ - ಕ್ರಿ.ಶ. 1414-1451

❖ ಲೂದಿ ಸಂತತಿ - ಕ್ರಿ.ಶ. 1451-1526

**ಗುಲಾಮಿ ಸಂತತಿ : ಕುತ್ಬುದಿನ್ ಐಬಕ್**

❖ ಗುಲಾಮಿ ಸಂತತಿಯ ಪ್ರಥಮ ದೊರೆ ಕುತುಬ್ ದಿನ್ ಐಬಕ್ ದೆಹಲಿ ಸುಲ್ತಾನರ ಸಾಮ್ರಾಜ್ಯದ ಸ್ಥಾಪಕ.

❖ ಲಾಕ್ ಭಕ್ಷ ಅಥವಾ ಲಕ್ಷಗಳ ದಾನಿ ಎಂದು ಹೆಸರಾದ ದೆಹಲಿ ಸುಲ್ತಾನ ಕುತುಬ್ ದಿನ್ ಐಬಕ್.

❖ ದೆಹಲಿಯಲ್ಲಿ ಖುವಾತ್-ಉಲ್-ಇಸ್ಲಾಂ ಮತ್ತು ಅಜ್ಮೀರ್‌ನಲ್ಲಿ ದೈ-ದಿನ್-ಕ ಜೋನ್‌ಪುರ ಮಸೀದಿ ಕಟ್ಟಿಸಿದವನು ಐಬಕ್

❖ ಕುತುಬ್ ದಿನ್ ಐಬಕ್‌ನ ರಾಜಧಾನಿ -ಲಾಹೋರ್

❖ ಕುತುಬ್ ಮಿನಾರ್ ನಿರ್ಮಾಣ ಕಾರ್ಯ ಆರಂಭಿಸಿದವನು ಕುತುಬ್ ದಿನ್ ಐಬಕ್.

❖ ಚೌಹಾನ್ ಅಥವಾ ಪೋಲೋ ಆಟವಾಡುತ್ತಿದ್ದಾಗ ಕುದುರೆ ಮೇಲಿಂದ ಬಿದ್ದು ಕುತುಬ್ ದಿನ್ ಐಬಕ್ ಸಾವನ್ನಪ್ಪಿದನು. (ಕ್ರಿ.ಶ. 1210 ನವೆಂಬರ್ ಲಾಹೋರ್‌ನಲ್ಲಿ).

**ಇಲ್ತುಮಷ್**

❖ ಕುತುಬ್ ದಿನ್ ಐಬಕ್‌ನ ಅಳಿಯ ಇಲ್ತುಮಷ್ ಕಾಲದಲ್ಲಿ ಕುತುಬ್ ಮಿನಾರ್ ನಿರ್ಮಾಣ ಕಾರ್ಯ ಪೂರ್ಣಗೊಂಡಿತು.

❖ ದೆಹಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಸುಲ್ತಾನ ಇಲ್ತುಮಷ್.

❖ ಆಡಳಿತದಲ್ಲಿ ಇಖ್ತಾ ವ್ಯವಸ್ಥೆಯನ್ನು ಜಾರಿಗೆ ತಂದವನು ಇಲ್ತುಮಷ್

❖ ಅರಾಬಿಕ್ ಮಾದರಿಯ ನಾಣ್ಯವ್ಯವಸ್ಥೆಯನ್ನು ಜಾರಿಗೆ ತಂದ ಪ್ರಥಮ ದೆಹಲಿ ಸುಲ್ತಾನ ಇಲ್ತುಮಸ್

❖ ದೆಹಲಿ ಸುಲ್ತಾನರಲ್ಲಿ ಪ್ರಥಮ ಮಹಿಳಾ ಸುಲ್ತಾನಳಾಗಿ ಆಳಿದವಳು. ಇಲ್ತುಮಷ್‌ನ ಮಗಳು ರಜಿಯಾ ಸುಲ್ತಾನ (ಕ್ರಿ.ಶ. 1236-40)

- ತುರ್ಕನ್ ಐ ಚಹಲ್ಗಾನಿ (ನಲ್ವತ್ತು ಮಂದಿ ಗುಲಾಮರ ಗುಂಪು) ಸ್ಥಾಪಿಸಿದವನು ಇಲ್ತುಮಷ್
- ಮಂಗೋಲರ ನಾಯಕ ಚಂಗೇಸ್ ಕಾನ್ ಪ್ರಥಮ ಬಾರಿಗೆ ಭಾರತದ ಮೇಲೆ ದಾಳಿ ಮಾಡಿದ್ದು ಇಲ್ತುಮಷ್ ಕಾಲದಲ್ಲಿ.

**ಬಲ್ಬನ್ (ಕ್ರಿ.ಶ.1266-86) :**

- ಗುಲಾಮಿ ಸಂತತಿಯಲ್ಲಿ ಅತ್ಯಂತ ಪ್ರಸಿದ್ಧನಾದವನು ಘಿಯಾಸುದ್ದೀನ್ ಬಲ್ಬನ್
- 'ತುರ್ಕನ್ ಐ ಚಹಲ್ಗಾನಿ'ಯನ್ನು ನಾಶ ಮಾಡಿದ ದೆಹಲಿ ಸುಲ್ತಾನ-ಬಲ್ಬನ್
- ಸುಲ್ತಾನ ಪದವಿಗೆ ದೈವತ್ವ ಸಿದ್ಧಾಂತವನ್ನು ಲೇಪಿಸಿದ ಸುಲ್ತಾನ ಬಲ್ಬನ್.
- ಭಾರತದಲ್ಲಿ ಪರ್ಶಿಯನ್ನರ ನವರೌಜ್ / ನೌರೋಜ್ ಹಬ್ಬವನ್ನು ಆಚರಣೆಗೆ ತಂದ ದೆಹಲಿ ಸುಲ್ತಾನ - ಬಲ್ಬನ್.
- ಗುಲಾಮಿ ಸಂತತಿಯ ಕೊನೆಯ ದೊರೆ ಕೈಖುಬಾದ್

**ಖಿಲ್ಜಿ ಸಂತತಿ (1290-1320)**

- ಗುಲಾಮಿ ಸಂತತಿಯ ಕೊನೆಯ ಸುಲ್ತಾನ ಕೈಕುಬಾದನನ್ನು ಕೊಲೆಗೈದು, ದೆಹಲಿಯಲ್ಲಿ ಖಿಲ್ಜಿ ಸಂತತಿಯನ್ನು ಸ್ಥಾಪಿಸಿದವನು ಜಲಾಲುದ್ದೀನ್ ಖಿಲ್ಜಿ.
- ಇವನ ಕಾಲದಲ್ಲಿ ಪ್ರಥಮ ಬಾರಿಗೆ ದಕ್ಷಿಣ ಭಾರತದ ಮೇಲೆ ಮುಸ್ಲಿಮರ ದಾಳಿ ನಡೆಯಿತು.
  (ಅಲ್ಲಾವುದ್ದೀನನ ಪ್ರಥಮ ದೇವಗಿರಿ ದಂಡಯಾತ್ರೆ - ಕ್ರಿ.ಶ. 1296.)

**ಅಲ್ಲಾವುದ್ದೀನ್ ಖಿಲ್ಜಿ (ಕ್ರಿ.ಶ. 1296-1316) :**

- ಖಿಲ್ಜಿ ಸಂತತಿಯಲ್ಲಿ ಅತ್ಯಂತ ಪ್ರಸಿದ್ಧನಾದ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ
- ಅಲ್ಲಾವುದ್ದೀನ್ ಖಿಲ್ಜಿಯ ಮೂಲ ಹೆಸರು ಅಲಿಗುರ್ಷಸ್ಪ್
- ತನ್ನ ಚಿಕ್ಕಪ್ಪ ಜಲಾಲುದ್ದೀನ್ ಖಿಲ್ಜಿಯನ್ನು ಕೊಂದು ಅಧಿಕಾರಕ್ಕೆ ಬಂದ. ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ.

## ಅಲ್ಲಾವುದ್ದೀನ್‌ನ ಸೈನಿಕ ಸಾಧನೆಗಳು

**ಉತ್ತರ ಭಾರತದ ದಿಗ್ವಿಜಯಗಳು :**

- ಗುಜರಾತ್ - ಅನಿಲ್‌ವಾಡದ ರಾಜಕರ್ಣ ದೇವನ ವಿರುದ್ಧ. (ಕ್ರಿ.ಶ. 1298-99)
- ರಣಥಂಬೂರ್ - ರಜಪೂತ ದೊರೆ ರಾಣಾ ಹಮ್ಮೀರದೇವನ ವಿರುದ್ಧ (ಕ್ರಿ.ಶ. 1300-01)
- ಚಿತ್ತೂರು - ರಾಣಾ ರತನ್‌ಸಿಂಗ್ ವಿರುದ್ಧ (ಕ್ರಿ.ಶ. 1303-ರಾಣಿ ಪದ್ಮಿನಿ ಪಡೆಯಲು)
- ಮಾಳ್ವ - ಮಹಲಕ್‌ದೇವನ ವಿರುದ್ಧ (ಕ್ರಿ.ಶ. 1305)
- ಸಿವಾನ - ಶೀತಲ್ ದೇವನ ವಿರುದ್ಧ (ಕ್ರಿ.ಶ. 1308)
- ಜವಳಿಪುರ / ಜಲಾರ್ ರಾಜ ಕನೇರದೇವನ ವಿರುದ್ಧ. (ಕ್ರಿ.ಶ. 1311)

**ದಕ್ಷಿಣ ಭಾರತದ ದಿಗ್ವಿಜಯಗಳು :**

- ದೇವಗಿರಿ - ರಾಮಚಂದ್ರದೇವನ ವಿರುದ್ಧ (ಕ್ರಿ.ಶ. 1307)
- ವಾರಂಗಲ್ ಕಾಕತೀಯ ದೊರೆ ಪ್ರತಾಪ ರುದ್ರ ದೇವನ ವಿರುದ್ಧ (ಕ್ರಿ.ಶ. 1309-10)
- ದ್ವಾರ ಸಮುದ್ರ - ಹೊಯ್ಸಳ ದೊರೆ 3ನೇ ಬಲ್ಲಾಳನ ವಿರುದ್ಧ. (ಕ್ರಿ.ಶ. 1311)
- ಪಾಂಡ್ಯರಾಜ್ಯ - ವೀರಪಾಂಡ್ಯನ ವಿರುದ್ಧ. (ಕ್ರಿ.ಶ. 1311)

- ❖ ಅಲ್ಲಾವುದ್ದೀನ್ ಖಿಲ್ಜಿಯ ದಕ್ಷಿಣ ಭಾರತದ ದಾಳಿಯ ಉದ್ದೇಶ ಸಾಮಂತರನ್ನಾಗಿ ಮಾಡಿಕೊಂಡು ಕಪ್ಪವನ್ನು ವಸೂಲಿ ಮಾಡುವುದಾಗಿತ್ತು.
- ❖ ಅತಿ ಹೆಚ್ಚು ಬಾರಿ ಮಂಗೋಲರು ದಾಳಿ ಮಾಡಿದ್ದು ಅಲ್ಲಾವುದ್ದೀನ್ ಖಿಲ್ಜಿಯ ಕಾಲದಲ್ಲಿ.
- ❖ ನವ ಮುಸ್ಲಿಮರನ್ನು (ಮತಾಂತರಗೊಂಡ ಮಂಗೋಲರು) ಕಗ್ಗೊಲೆ ಮಾಡಿಸಿದ ಸುಲ್ತಾನ್ ಅಲ್ಲಾವುದ್ದೀನ್ ಖಿಲ್ಜಿ.
- ❖ ಅಲ್ಲಾವುದ್ದೀನನ ಶ್ರೇಷ್ಠ ಆಡಳಿತ ಸುಧಾರಣೆ ಬೆಲೆ ಮತ್ತು ಮಾರುಕಟ್ಟೆ ನಿಯಂತ್ರಣ ವ್ಯವಸ್ಥೆ.
- ❖ ಅಲ್ಲಾವುದ್ದೀನ್ ಖಿಲ್ಜಿಯ ಪ್ರಸಿದ್ಧ ದಂಡನಾಯಕ - ಮಲ್ಲಿಕಾಫರ್ (ಮೂಲ ಹೆಸರು ಕಾಫುರ್ ಅಜರ್ದಿನಾರಿ, ಇವನನ್ನು ಗುಜರಾತ್ ದಾಳಿಯ ಸಂದರ್ಭದಲ್ಲಿ ಗುಲಾಮನಾಗಿ ಖರೀದಿಸಲಾಗಿತ್ತು.
- ❖ ರಾಣಿ ಪದ್ಮನಿ ವೃತ್ತಾಂತ ಅಲ್ಲಾವುದ್ದೀನ್ ಖಿಲ್ಜಿಗೆ ಸಂಬಂಧಿಸಿದ್ದು.
- ❖ ಇವನ ಕಾಲದ ಮುಖ್ಯ ಸ್ಮಾರಕಗಳು ಜಮಾಯತ್ ಖಾನಾ ಮಸೀದಿ ಮತ್ತು ಕುತುಬ್ ಮಿನಾರ್ ಬಳಿ ಇರುವ ಅಲೈದರ್ವಾಜಾ.

## ತುಘಲಕ್ ಸಂತತಿ (ಕ್ರಿ.ಶ. 1320-1414)

**ಘಿಯಾಸುದ್ದೀನ್ ತುಘಲಕ್ :**

- ❖ ತುಘಲಕ್ ಸಂತತಿ ಸ್ಥಾಪಕ.
- ❖ ದೆಹಲಿ ಬಳಿ ತುಘಲಕಾಬಾದ್ ನಗರ ಸ್ಥಾಪಿಸಿದ.
- ❖ ತನ್ನ ಮಗ ಮಹಮ್ಮದ್ ಬಿನ್ ತುಘಲಕ್ ಕಟ್ಟಿಸಿದ ಮರದ ಅಟ್ಟಣಿಕೆ ಕುಸಿದು ಸಾವನ್ನಪ್ಪಿದ.

**ಮಹಮ್ಮದ್ ಬಿನ್ ತುಘಲಕ್**

- ❖ ಇವನ ಮೊದಲ ಹೆಸರು ಜೌನಾಖಾನ್.
- ❖ ತುಘಲಕ್ ಸಂತತಿಯ ಪ್ರಸಿದ್ಧ ಸುಲ್ತಾನ ಮಹಮ್ಮದ್ ಬಿನ್ ತೊಘಲಕ್ (ಕ್ರಿ.ಶ. 1325-51)
- ❖ ದೆಹಲಿಯಿಂದ ದೇವಗಿರಿಗೆ ರಾಜಧಾನಿ ಬದಲಾವಣೆ ಮಾಡಿದ ದೆಹಲಿ ಸುಲ್ತಾನ ಮಹಮ್ಮದ್ ಬಿನ್ ತೊಘಲಕ್.
- ❖ ದೋ-ಅಬ್ ಪ್ರಾಂತ್ಯ (ಗಂಗಾ-ಯಮುನಾ ನಡುವಣ ಪ್ರದೇಶ)ದಲ್ಲಿ ಆರ್ಥಿಕ ಪ್ರಯೋಗ ಮಾಡಿ ವಿಫಲನಾದ ದೆಹಲಿ ಸುಲ್ತಾನ್-ಮಹಮ್ಮದ್ ಬಿನ್ ತೊಘಲಕ್.
- ❖ ಮಹಮ್ಮದ್ ಬಿನ್ ತುಘಲಕ್‌ನ ಆಸ್ಥಾನಕ್ಕೆ ಭೇಟಿ ನೀಡಿದ್ದ ಆಫ್ರಿಕಾ ಮೂಲದ ಪ್ರವಾಸಿ - ಇಬನ್ ಬಟೂಟ. (ಇವನ ಕೃತಿ ರೆಹ್ಲಾ)
- ❖ 'ವೈರುಧ್ಯಗಳ ಸಂಮಿಶ್ರಣ', 'ಹುಚ್ಚು ದೊರೆ', 'ಐಲು ದೊರೆ' ಎಂದು ಹೆಸರಾದ ದೆಹಲಿ ಸುಲ್ತಾನ ಮಹಮ್ಮದ್ ಬಿನ್ ತೊಘಲಕ್.
- ❖ ಟೋಕನ್ ನಾಣ್ಯ ವ್ಯವಸ್ಥೆ ಜಾರಿಗೆ ತಂದ ಸುಲ್ತಾನ ಮಹಮ್ಮದ್ ಬಿನ್ ತೊಘಲಕ್.
- ❖ ಮಂಗೋಲರ ರೀತಿಯಲ್ಲಿ ಸೈನ್ಯದಲ್ಲಿ ದಶಮಾನ ಪದ್ಧತಿ ಜಾರಿಗೆ ತಂದವನು - ಮಹಮ್ಮದ್ ಬಿನ್ ತುಘಲಕ್.
- ❖ "ದಿವಾನ್ ಇ-ಕೋಹಿ" ಎಂಬ ಕೃಷಿ ಇಲಾಖೆಯನ್ನು ಸ್ಥಾಪಿಸಿದವನು - ಮಹಮ್ಮದ್ ಬಿನ್ ತುಘಲಕ್.
- ❖ ಬೌದ್ಧ ದೇವಾಲಯಗಳ ಸಂದರ್ಶನಕ್ಕಾಗಿ ಅನುಮತಿ ಪಡೆಯಲು ಚೀನಾದಿಂದ ಬಂದ ರಾಯಭಾರಿಯು ಯಾವ ಸುಲ್ತಾನನನ್ನು ಸಂದರ್ಶಿಸಿದನು ? - ಮಹಮ್ಮದ್ ಬಿನ್ ತುಘಲಕ್.
- ❖ ಚೀನಾದ ಚಕ್ರವರ್ತಿ ಆಸ್ಥಾನಕ್ಕೆ ಇಬನ್ ಬತೂತನನ್ನು ರಾಯಭಾರಿಯಾಗಿ ಕಳುಹಿಸಿದ ಸುಲ್ತಾನ - ಮಹಮ್ಮದ್ ಬಿನ್ ತುಘಲಕ್
- ❖ ಖಗೋಳ, ಗಣಿತ, ತತ್ವಶಾಸ್ತ್ರ ವೈದ್ಯಕೀಯ, ಕ್ಷೇತ್ರಗಳಲ್ಲಿ ಮಹಾವಿದ್ವಾಂಸನಾಗಿದ್ದ ಸುಲ್ತಾನ - ಮಹಮ್ಮದ್ ಬಿನ್ ತುಘಲಕ್.

**ಫಿರೋಜ್ ಷಾ ತುಘಲಕ್ :**

- ಬ್ರಾಹ್ಮಣರ ಮೇಲೂ ಜೆಜಿಯಾ ಧಾರ್ಮಿಕ ತೆರಿಗೆ ವಿಧಿಸಿದ ಸುಲ್ತಾನ - ಫಿರೋಜ್ ಷಾ ತುಘಲಕ್.
- ಪುರಿಯ ಜಗನ್ನಾಥ ದೇವಾಲಯವನ್ನು ನಾಶ ಮಾಡಿದವನು - ಫಿರೋಜ್ ಷಾ ತುಘಲಕ್.
- ಹಿಂದೂ ತಾಯಂದಿರಲ್ಲಿ ಜನಿಸಿದ ಈ ಸಂತತಿಯ ಸುಲ್ತಾನರು ಘಿಯಾಸುದ್ದೀನ್ ತುಘಲಕ್ ಮತ್ತು ಫಿರೋಜ್ ಷಾ ತುಘಲಕ್.
- ಜ್ವಾಲಾಮುಖಿ ದೇವಾಲಯದಲ್ಲಿ ಸಂರಕ್ಷಿಸಲ್ಪಟ್ಟಿದ್ದ 300ಕ್ಕೂ ಅಧಿಕ ಕೃತಿಗಳನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದ ಸುಲ್ತಾನ - ಫಿರೋಜ್ ಷಾ ತುಘಲಕ್.
- ದಿವಾನ್ ಇ-ಖೈರಾತ್ ಎಂಬ ಇಲಾಖೆಯನ್ನು ಸ್ಥಾಪಿಸಿ, ಬಡ ಮುಸ್ಲಿಂ ಮಹಿಳೆಯರ ವಿವಾಹಕ್ಕೆ ಆರ್ಥಿಕ ಸಹಾಯ ಮಾಡಿದ ಸುಲ್ತಾನ - ಫಿರೋಜ್ ಷಾ ತುಘಲಕ್.
- ದಾರ್-ಉಲ್-ಷಪಾ ಎಂಬ ಧರ್ಮದ ಆಸ್ಪತ್ರೆಗಳನ್ನು ಸ್ಥಾಪಿಸಿದ ಸುಲ್ತಾನ - ಫಿರೋಜ್ ಷಾ ತುಘಲಕ್.
- ಮಹಮ್ಮದ್ ಬಿನ್ ತುಘಲಕ್‌ನ ಜ್ಞಾಪಕಾರ್ಥವಾಗಿ ಜೌನ್ ಪುರ ನಗರವನ್ನು ಕಟ್ಟಿಸಿದವನು ಫಿರೋಜ್ ಷಾ ತುಘಲಕ್.
- ಮಲ್ಲಿಕ್ ಷಾಜಿಷಹನ ಮತ್ತು ಅಬ್ದುಲ್ ಹಕ್‌ರು ಇವನ ಕಾಲದ ಪ್ರಮುಖ ಶಿಲ್ಪಶಾಸ್ತ್ರಜ್ಞರು.
- 1200 ಉದ್ಯಾನಗಳು, 300 ಪಟ್ಟಣಗಳನ್ನು ನಿರ್ಮಿಸಿದ.
- ಅಶೋಕನಿಂದ ನಿರ್ಮಿತವಾದ ಅಂಬಾಲದ ತೋಪಾರ ಮತ್ತು ಮೀರತ್‌ನ ಶಿಲಾಶಾಸನಗಳನ್ನು ತನ್ನ ಹೊಸ ರಾಜಧಾನಿ ಫಿರೋಜಾಬಾದ್‌ನಲ್ಲಿ ಪ್ರತಿಷ್ಠಾಪಿಸಿದ.
- ಸಟ್ಲೇಜ್ ಮತ್ತು ಯಮುನಾ ನದಿಯಿಂದ ನೀರಾವರಿಗಾಗಿ ಕಾಲುವೆ ನಿರ್ಮಿಸಿದ.
- ಶೇ. 10 ಭಾಗ ನೀರಾವರಿ ತೆರಿಗೆ (ಷರ್ಬ) ವಿಧಿಸಿದ.
- ಹಿಂದಿನ 23 ತೆರಿಗೆಗಳನ್ನು ರದ್ದು ಮಾಡಿ ಕುರಾನಿನ ಪ್ರಕಾರ 4 ತೆರಿಗೆಗಳನ್ನು ವಿಧಿಸಿದ. ಅವುಗಳೆಂದರೆ :
  1. ಖರಾಜ್ - ಸಾಗುವಳಿ ತೆರಿಗೆ 1/10 ಭಾಗ.
  2. ಖಮ್ಸ್ ಯುದ್ಧಸೂರೆ ಮತ್ತು ಗಣಿ ತೆರಿಗೆ 1/5 ಭಾಗ
  3. ಜಕಾತ್ - ಮುಸ್ಲೀಮರ ಮೇಲಿನ ಧಾರ್ಮಿಕ ತೆರಿಗೆ 2.5% ಭಾಗ.
  4. ಜಜಿಯಾ - ಹಿಂದೂಗಳ ಮೇಲಿನ ತೆರಿಗೆ.
- ನಾಸಿರುದ್ದೀನ್ ಮಹಮ್ಮದ್ ತೊಘಲಕ್ ಕಾಲದಲ್ಲಿ ಭಾರತದ ಮೇಲೆ ತೈಮೂರ್ ದಾಳಿ ಮಾಡಿದ. (ಕ್ರಿ.ಶ. 1398)
- ತೈಮೂರನ ದಾಳಿಯಿಂದ ನಾಶವಾದ ಸಂತತಿ ತುಘಲಕ್ ಸಂತತಿ.

**ಸಯ್ಯದ್ ಸಂತತಿ (ಕ್ರಿ.ಶ. 1414-1451)**

- ಸಯ್ಯದ್ ಸಂತತಿಯಸ್ಥಾಪಕ ಖಿಜರ್ ಖಾನ್.
- ಖಿಜರ್ ಖಾನ್ ಪ್ರವಾದಿ ಮಹಮ್ಮದ್ ಪೈಗಂಬರ್‌ನ ವಂಶಸ್ಥ.
- ಹಿಂದೂಗಳಿಗೆ ಪ್ರಥಮ ಬಾರಿ ಉನ್ನತ ಅಧಿಕಾರ ಸ್ಥಾನ ನೀಡಿದ ಸುಲ್ತಾನ ಮುಬಾರಕ್ ಷಾ.

**ಲೋದಿ ಸಂತತಿ (ಕ್ರಿ.ಶ. 1451-1526)**

- ಈ ಸಂತತಿಯವರು ಆಫ್ಘನ್ / ಪಠಾಣ ಜನಾಂಗಕ್ಕೆ ಸೇರದವರು.
- ಬಹಲೂಲ್ ಲೋದಿ - ಲೋದಿ ಸಂತತಿಯ ಸ್ಥಾಪಕ.

❖ ಜೌನ್‌ಪುರ ರಾಜ್ಯವನ್ನು ಗೆದ್ದ ಸುಲ್ತಾನ ಬಹಲೂಲ್ ಲೂದಿ.
❖ ಆಗ್ರಾ ನಗರ ನಿರ್ಮಾಣ ಮಾಡಿ ದೆಹಲಿಯಿಂದ ಆಗ್ರಾಕ್ಕೆ ರಾಜಧಾನಿ ಬದಲಾವಣೆ ಮಾಡಿದವನು - ಸಿಕಂದರ್‌ಲೋದಿ
❖ ದೆಹಲಿ ಸುಲ್ತಾನರ ಕೊನೆಯ ದೊರೆ ಇಬ್ರಾಹಿಂ ಲೋದಿ
❖ ಇಬ್ರಾಹಿಂ ಲೋದಿಯನ್ನು 1526 ಏಪ್ರಿಲ್ 21 ರಂದು ನಡೆದ ಮೊದಲನೇ ಪಾಣಿಪತ್ ಕದನದಲ್ಲಿ ಸೋಲಿಸುವ ಮೂಲಕ ಬಾಬರ್ ದೆಹಲಿ ಸುಲ್ತಾನರನ್ನು ನಿರ್ಮೂಲನೆ ಮಾಡಿ ಭಾರತದಲ್ಲಿ ಮೊಗಲ್ ಸಾಮ್ರಾಜ್ಯ ಸ್ಥಾಪಿಸಿದ.

## ಮೊಗಲರು

### ಬಾಬರ್ (ಕ್ರಿ.ಶ. 1526-1530)

❖ ಮೊಗಲ್ ಸಾಮ್ರಾಜ್ಯದ ಸ್ಥಾಪಕ - ಬಾಬರ್.
❖ ಬಾಬರನ ಹುಟ್ಟು ಹೆಸರು ಜಹೀರುದ್ದೀನ್ ಮಹಮ್ಮದ್.
❖ ಬಾಬರ್ ಎಂಬುದು ಬಿರುದಾಗಿದ್ದು, ಹುಲಿ ಎಂಬುದು ಅದರ ಅರ್ಥ. ಇವನು ಮೂಲತಃ ತುರ್ಕ ಬಣಕ್ಕೆ ಸೇರಿದವನು.
❖ ಭಾರತದ ಮೇಲೆ ದಾಳಿ ಮಾಡಲು ಬಾಬರ್‌ನನ್ನು ಆಹ್ವಾನಿಸಿದವರು ಪಂಜಾಬಿನ ದೌಲತ್ ಖಾನ್, ಇಬ್ರಾಹಿಂ ಲೂದಿಯ ಚಿಕ್ಕಪ್ಪ ಆಲಂಖಾನ್ ಮತ್ತು ಮೇವಾರದ ರಾಣಾ ಸಿಂಗ.

### ಬಾಬರನ ಕೃತಿಗಳು :

❖ ತುಜುಕ್-ಐ-ಬಾಬರಿ / ಬಾಬರ್ ನಾಮ (ತುರ್ಕಿ ಭಾಷೆಯಲ್ಲಿನ ಆತ್ಮ ಕಥನ)
❖ ಖಾತ್-ಇ-ಬಾಬುರಿ.
❖ ಮಸ್ನವಿಗಳ ಸಂಗ್ರಹ
❖ ದಿವಾನ್ (ತುರ್ಕಿಭಾಷೆಯ ಪದ್ಯಗಳ ಸಂಗ್ರಹ)
❖ ಖ್ವಾಜಾ-ಉಬೆದುಲ್ಲಾ ರಚಿಸಿದ ರಿಸಾಲ್-ಇ-ವಾಲಿಯ ಕೃತಿಯನ್ನು ತುರ್ಕಿ ಭಾಷೆಗೆ ಭಾಷಾಂತರಿಸಿದ.

### ಬಾಬರನ ಯುದ್ಧಗಳು

❖ ಒಂದನೇ ಪಾಣಿಪತ್ - ಕ್ರಿ.ಶ. 1526 ಏಪ್ರಿಲ್ 21 (ಇಬ್ರಾಹಿಂ ಲೂದಿ ವಿರುದ್ಧ)
❖ ಕಣ್ವಾ ಕದನ ಕ್ರಿ.ಶ. 1527 ಮಾರ್ಚ್ 16 (ರಾಣಾಸಂಗನ ವಿರುದ್ಧ)
❖ ಚಂದೇರಿಯ ಆಕ್ರಮಣ 1528 ಜನವರಿ 29 (ಮೇದಿನಿ ರಾಯ್ ವಿರುದ್ಧ)
❖ ಘಾಗ್ರ ಕದನ 1529 ಮೇ 6 (ಆಫಘನ್ನರ ವಿರುದ್ಧ)
❖ ಬಾಬರನ ಬೃಹತ್ ಭವನಗಳು ಕಣ್ಮರೆಯಾಗಿದ್ದು 3 ಸಣ್ಣ ರಚನೆಗಳು ಉಳಿದುಕೊಂಡಿವೆ.
   1. ಪಣಿಪತ್‌ನ ಕಾಬೂಲ್‌ಬಾಗ್‌ನಲ್ಲಿ ಬಂದು ಸ್ಮರಣಾರ್ಥ ಮಸೀದಿ.
   2. ರೋಹಿಲ ಖಂಡದ ಸಂಬಾಲ್‌ನಲ್ಲಿನ ಜಾಮೀ ಮಸೀದಿ.
   3. ಆಗ್ರಾದ ಹಳೆಯ ಲೋದಿ ಕೋಟೆಯೊಳಗಿನ ಮಸೀದಿ.
❖ ಬಾಬರನ ಕಾಲದ ಪ್ರಮುಖ ಪರ್ಷಿಯನ್ ವಿದ್ವಾಂಸರು ಷೇಕ್ ಜೈನುದ್ದೀನ್, ಮುಲ್ಲಾ ಸಿಹಾಬ, ಖ್ವಾಂದಮೀರ್.
❖ ಬಾಬರನ ಮಗಳು ಗುಲ್ಬದನ್ ಬೇಗಂ- ಹುಮಾಯುನ್ ನಾಮ ರಚಿಸಿದಳು

### ಹುಮಾಯೂನ್ (ಕ್ರಿ.ಶ. 1530-1556)

❖ ಬಾಬರನ ಮಗನಾದ ಹುಮಾಯೂನ್ ಕೈಗೊಂಡ ಯುದ್ಧಗಳು

- ಕಾಲಿಂಜರ್ ದಾಳಿ - 1531 (ಪ್ರತಾಪ ರುದ್ರ ದೇವನ ವಿರುದ್ಧ)
- ದೌರಾ ಕದನ 1532 (ಮಹಮ್ಮದ್ ಲೋಧಿ ನೇತೃತ್ವದ ಆಫಘನ್ನರ ವಿರುದ್ಧ)
- ಚುನಾರ್ ಮುತ್ತಿಗೆ 1532 (ಷೇರ್‌ಖಾನ್ ವಿರುದ್ಧ)
- ಗುಜರಾತಿನ ಬಹದ್ದೂರ್ ಶಾನೊಂದಿಗೆ ಯುದ್ಧಗಳು 1535-36
- ಚೌಸಾ ಕದನ 1539 ಜೂನ್ 26-ಷೇರ್ ಖಾನ್ (ಷೇರ್‌ಷಾ) ವಿರುದ್ಧ
- ಕನೂಜ್ / ಬಿಲ್ಗ್ರಾಮ್ ಕದನ 1540 ಮೇ 17 ಷೇರ್ ಷಾ ವಿರುದ್ಧ.
- ಹುಮಾಯೂನ್ ಸ್ವತಃ ಗದ್ಯ ಮತ್ತು ಪದ್ಯದ ಲೇಖಕನಾಗಿದ್ದು, ಮಾಸ್ನವಿ, ರುಬಯ, ದಿವಾನ್ ಮತ್ತು ಗಜಲಾಗಳನ್ನು ರಚಿಸಿದನು.
- ತಾನು ನಿರ್ಮಿಸಿದ ದಿನ್‌ಪನ್ಹಾ ಎಂಬ ನಗರದಲ್ಲಿನ ತನ್ನ ಗ್ರಂಥಾಲಯ ಮಹಡಿಯ ಮೆಟ್ಟಿಲುಗಳಿಂದ ಇಳಿಯುವಾಗ ಆಕಸ್ಮಿಕವಾಗಿ ಎಡವಿ ಬಿದ್ದು ಸಾವನ್ನಪ್ಪಿದ.

## ಅಕ್ಬರ್ (ಕ್ರಿ.ಶ. 1556-1605)

- ಮೊಗಲ್ ಸಾಮ್ರಾಟರಲ್ಲಿ ಅನಕ್ಷರಸ್ಥ ದೊರೆ.
- ಅಕ್ಬರನ ಜನನ 1542 ಅಕ್ಟೋಬರ್ 15
- ಅಮರಕೋಟ್‌ನ ರಾಜ ವೀರಸಾಲನ ಮನೆಯಲ್ಲಿ.
- ಅಕ್ಬರನ ತಂದೆ-ಹುಮಾಯೂನ್ ಮತ್ತು ತಾಯಿ ಹಮೀದಬಾನು ಬೇಗಂ
- ಮೊಗಲ್ ಚಕ್ರವರ್ತಿಯಾದಾಗ ಅಕ್ಬರ್‌ಗೆ 14 ವರ್ಷ ಹಾಗಾಗಿ ರಾಜ ಪ್ರತಿನಿಧಿಯಾಗಿ ಬೈರಮ್‌ಖಾನ್ ಕ್ರಿ.ಶ. 1556-1560ರವರೆಗೆ ಆಳಿದ.

## ಅಕ್ಬರನ ಯುದ್ಧಗಳು

- 2ನೇ ಪಾಣಿಪತ್ ಕದನ ಕ್ರಿ.ಶ. 1556 ನವೆಂಬರ್ 5 (ಬೈರಾಮ್ ಖಾನ್ ಮತ್ತು ಹೇಮುವಿನ ನಡುವೆ, ಇವನು ದೆಹಲಿ ಸಿಂಹಾಸವನ್ನೇರಿದ ಕೊನೆಯ ಹಿಂದೂ ದೊರೆ.)
- ಮಾಳ್ವದ ದಂಡಯಾತ್ರೆ 1561 (ಬಾಜ್ ಬಹದ್ದೂರ್ ವಿರುದ್ಧ) (ರಾಜ್ ಪ್ರತಿನಿಧಿತ್ವ ಆಳ್ವಿಕೆ ಮುಗಿದ ನಂತರ ಅಕ್ಬರ ಕೈಗೊಂಡ ಪ್ರಥಮ ಸೈನಿಕ ಸಾಧನೆ)
- ಚುನಾರ್ ಆಕ್ರಮಣ 1561 (ಖಾನ್ ಜಮಾನ್ ವಿರುದ್ಧ)
- ಅಂಬರ್ / ಜೈಪುರ 1562 ಬಿಹಾರಿಮಲ್ ವಿರುದ್ಧ ಅಕ್ಬರನಿಗೆ ಶರಣಾದ ಮತ್ತು ತನ್ನ ಮಗಳನ್ನು ಕೊಟ್ಟು ವಿವಾಹ ಸಂಬಂಧ ಬೆಳೆಸಿದ ಪ್ರಥಮ ರಜಪೂತ ದೊರೆ)
- ಗೊಂಡಾವನದ ಆಕ್ರಮಣ 1564- ರಾಣಿ ದುರ್ಗಾವತಿ ವಿರುದ್ಧ.
- ಮೆರ್ತಾ (1562) - ಜೈಮಲ್‌ನ ವಿರುದ್ಧ
- ಮೇವಾರ (1567) - (ರಾಣಾ ಉದಯಸಿಂಗ್‌ನ ವಿರುದ್ಧ)
- ಹಾಲ್ದಿಘಾಟ್ ಕದನ 1576, ಜೂನ್ 18, - (ಮೇವಾರದ ರಾಣಾ ಪ್ರತಾಪನ ವಿರುದ್ಧ)
- ರಣಥಂಬೂರ್ 1569 (ಬೂಂದಿಯ ಹರ ರಜಪೂತ ದೊರೆ ಸುರ್ಜನ್‌ರಾಯ್ ವಿರುದ್ಧ)
- ಕಾಲಿಂಜರ್ ಕೋಟೆವಶ. 1569 (ರೇವ ಸಂಸ್ಥಾನದ ರಾಜರಾಜ ರಾಮಚಂದ್ರನ ವಿರುದ್ಧ)
- ಮಾರ್ವಾರ / ಜೋದ್‌ಪುರ 1570 (ಚಂದ್ರಸೇನನು ಸ್ವತಃ ಶರಣಾಗತನಾದ)
- ಗುಜರಾತ್ ಆಕ್ರಮಣ 1572-73 (3ನೇ ಮುಜಾಫರ್ ಖಾನ್ ವಿರುದ್ಧ)
- ಬಿಹಾರ, ಬಂಗಾಳ ವಶ -1576

- ಕಾಬೂಲ್ ಆಕ್ರಮಣ 1581 (ಮಿರ್ಜಾ ಮಹಮದ್ ಹಕೀಂ ವಿರುದ್ಧ)
- ಕಾಶ್ಮೀರ ವಶ 1586 (ಯೂಸಫ್ ಖಾನ್ ಮತ್ತು ಅವನ ಮಗ ಯಾಕುಬ್ ಖಾನ್ ವಿರುದ್ಧ)
- ಸಿಂಧ್ ಆಕ್ರಮಣ 1591 (ಜಾನ್‌ಬೇಗ್ ವಿರುದ್ಧ)
- ಒರಿಸ್ಸಾ ವಶ 1592 (ನಾಸಿರ್ ಖಾನ್ ವಿರುದ್ಧ)
- ಬಲೂಚಿಸ್ತಾನ ವಶ - 1595
- ಕಾಂದಹಾರ್ ವಶ (ಪರ್ಶಿಯಾದ ಅರಸನ ಗವರ್ನರ್ ಮುಜಾಫರ್ ಹುಸೇನ್ ಮಿರ್ಜಾನ್ ನಿಂದ)
- ಕ್ರಿ.ಶ. 1600ರ ವೇಳೆಗೆ ದಖ್ಖಿನ್ನಿನ ಖಾಂದೇಶ, ಅಹ್ಮದ್ ನಗರದ (ರಾಣಿ ಚಾಂದ್ ಬೀಬಿ) ಕೆಲವು ಭಾಗಗಳನ್ನು ವಶಪಡಿಸಿಕೊಳ್ಳುವಲ್ಲಿ ಅಕ್ಬರ್ ಯಶಸ್ವಿಯಾದ.

**ಅಕ್ಬರ್ ಕಾಲದ ಪ್ರಮುಖ ದಂಗೆಗಳು :**

- ಉಜ್ಬೇಗಿಗಳ ದಂಗೆ, ಕ್ರಿ.ಶ. 1564-67 ಜೌನ್‌ಪುರದ ಗೌರ್‍ನರ್ ಖಾನ್ ಇ ಜಮಾನ್, ಬಹದ್ದೂರ್ ಖಾನ್, ಇಬ್ರಾಹಿಂ ಖಾನ್, ಔಧ್‌ನ ಖಾನ್ ಇ ಆಲಂ, ಮಾಳ್ವದ ಗೌರ್‍ನರ್ ಅಬ್ದುಲ್ಲಾ ಖಾನ್ ನೇತೃತ್ವದಲ್ಲಿ.
- ಮಿರ್ಜಾಗಳ ದಂಗೆ, ಕ್ರಿ.ಶ. 1573 ಇಬ್ರಾಹಿಂ ಮಿರ್ಜಾ, ಮಹಮ್ಮದ್ ಹುಸೇನ್ ಮಿರ್ಜಾ, ಮಸೂದ್ ಹುಸೇನ್ ಮಿರ್ಜಾರ ನೇತೃತ್ವದಲ್ಲಿ.
- ಬಂಗಾಳದ ಮತ್ತು ಬಿಹಾರದ ದಂಗೆ, ಕ್ರಿ.ಶ. 1580-ಅನುಕ್ರಮವಾಗಿ ಬಾಬಾಖಾನ್ ಕಾಕ್‌ಶಲ್ ಮತ್ತು ಮಹಮ್ಮದ್ ಮಸೂಮ್ ನೇತೃತ್ವದಲ್ಲಿ.
- ಬಲೂಚಿಗಳು ಮತ್ತು ಆಫ್ಘನ್ನರ ದಂಗೆ ಕ್ರಿ.ಶ. 1585 ಈ ಸಂದರ್ಭದಲ್ಲಿ ಬೀರಬಲ್ ಕೊಲೆಯಾದ ಮತ್ತು ರಾಜಮಾನಸಿಂಗ್ ಈ ದಂಗೆಯನ್ನು ಅಡಗಿಸಿದ.
- ತನ್ನ ಪುತ್ರ ರಾಜಕುಮಾರ ಸಲೀಂ (ಜಹಂಗೀರ್) ನ ದಂಗೆ. ಕ್ರಿ.ಶ. 1599-ಈ ಸಂದರ್ಭದಲ್ಲಿ ಅಕ್ಬರನ ಆಪ್ತಗೆಳೆಯ ಅಬುಲ್ ಫಜಲ್‌ನನ್ನು ಜಹಂಗೀರನ ಆದೇಶದಂತೆ ವೀರ್‌ಸಿಂಗ್ ದೇವ್ ಬುಂದೇಲನು ಕೊಲೆ ಮಾಡಿದ.

**ಇತರೆ ಮುಖ್ಯಾಂಶಗಳು**

- ಪತೇಪುರ್ ಸಿಕ್ರಿಯಲ್ಲಿ 1575ರಲ್ಲಿ ಇಬಾದತ್ ಖಾನ್ / ಆರಾಧನಾ ಮಂದಿರ ಕಟ್ಟಿಸಿದ. ಹಿಂದೂ ತತ್ವಶಾಸ್ತ್ರಜ್ಞರಾದ, ಪುರುಷೋತ್ತಮ, ದೇವಿ, ಜೈನ ಗುರುಗಳಾದ, ಹರಿವಿಜಯಸೂರಿ, ವಿಜಯಸೇನಸೂರಿ ಮತ್ತು ಬಾನುಚಂದ್ರ ಉಪಾದ್ಯಾಯ ಹಾಗೂ ಪಾರ್ಸಿ, ಕ್ರೈಸ್ತ ಧರ್ಮಗುರುಗಳು ಇಲ್ಲಿ ಚರ್ಚಿಸುತ್ತಿದ್ದರು.
- 1579 ಜೂನ್ 22ರಂದು ಪತೇಪುರ್ ಸಿಕ್ರಿಯ ಮುಖ್ಯ ಉಪದೇಶಕನನ್ನು ತೆಗೆದು ಹಾಕಿ ತನ್ನ ಹೆಸರಿನಲ್ಲೆ ಖುತ್ಬಾವನ್ನು ಪಠಿಸಿದ.
- 1759 ಸೆಪ್ಟೆಂಬರ್‌ನಲ್ಲಿ "ಅನುಲ್ಲಂಘನೀಯ ಶಾಸನ" ಹೊರಡಿಸಿದ. (ಧಾರ್ಮಿಕ ವಿಷಯಗಳಲ್ಲಿ ಶ್ರೇಷ್ಠ ನ್ಯಾಯ ವಿಮರ್ಶಕನಾಗುವ ಶಾಸನ) ಇದನ್ನು ಅಬುಲ್ ಫಜಲ್‌ನ ತಂದೆ ಷೇಕ್ ಮುಬಾರಕ್ ರಚಿಸಿದ.
- 1581ರಲ್ಲಿ ದೀನ್ ಏ-ಇಲಾಹಿ (ತೌಹಿದ್ ಏ ಇಲಾಹಿ) ಎಂಬ ಹೊಸ ಧಾರ್ಮಿಕ ಪಂಥವನ್ನು ಎಲ್ಲಾ ಧರ್ಮಗಳ ಉತ್ತಮ ಸಾರವನ್ನೊಳಗೊಂಡ ಏಕೈಕ ಧರ್ಮ ಸ್ಥಾಪಿಸುವ ಉದ್ದೇಶದಿಂದ ಸ್ಥಾಪಿಸಿದ.
- 1562ರಲ್ಲಿ ಆಜ್ಞೆ ಹೊರಡಿಸಿ ವೈರಿ ಪಾಳೆಯದ ಸ್ತ್ರೀಯರು ಮತ್ತು ಮಕ್ಕಳನ್ನು ಮೊಗಲ್ ಸೈನ್ಯವು ಹಿಂಸಿಸಬಾರದು ಹಾಗೂ ಯುದ್ಧ ಖೈದಿಗಳನ್ನು ಗುಲಾಮರನ್ನಾಗಿಸಬಾರದು, ಎಂದು ಆಜ್ಞಾಪಿಸಿದ.
- 1563ರಲ್ಲಿ ಮಥುರಾದಲ್ಲಿ ಜಮುನಾ ನದಿಯಲ್ಲಿ ಪುಣ್ಯಸ್ನಾನ ಮಾಡಲು ಹಿಂದೂಗಳು ನೀಡಬೇಕಾಗಿದ್ದ ಯಾತ್ರಾ ತೆರಿಗೆಯನ್ನು ತೆಗೆದು ಹಾಕಿದ.

- 1564ರಲ್ಲಿ ಹಿಂದೂಗಳ ಮೇಲಿನ ಜುಜಿಯಾ ತಲೆ ಕಂದಾಯವನ್ನು ನಿಷೇಧಿಸಿದನು.
- 1560-64ರ ಅಕ್ಬರನ ಆಳ್ವಿಕೆಯ ಕಾಲವನ್ನು ಸ್ತ್ರೀಯರ ಪ್ರಭಾವದ ಆಳ್ವಿಕೆಯ ಕಾಲ / ಅತ್ಕಾ ಖಾಯಿಲ್‌ನ ಪ್ರಭಾವದ ಕಾಲ (Petticoat government) ಎನ್ನಲಾಗುತ್ತದೆ.
- 1562-ಅಜ್ಮೀರ್‌ನ ಷೇಕ್ ಮುಯಿನುದ್ದೀನ್ ಚಿಸ್ತೀಯ ಸಮಾದಿಗೆ ಭೇಟಿ ನೀಡಿದ. ಈ ಸಂದರ್ಭ ಅಂಬರ್ (ಆಧುನಿಕ ಜೈಪುರ) ರಾಜ ಬಿಹಾರ್‌ಮಲ್ ಅಕ್ಬರನಿಗೆ ಶರಣಾದ.
- ಮೇವಾರದ ರಾಣಾ ಉದಯಸಿಂಗ್‌ನ ಅನುಯಾಯಿಗಳಾದ ಜೈಮಲ್ ಮತ್ತು ಫತೇಸಿಂಗ್ ಎಂಬ ಸೈನಿಕರು ಚಿತ್ತೂರಿನ ಕೋಟೆಯ ರಕ್ಷಣೆಯಲ್ಲಿ ತೋರಿದ ಅಸಮಾನ್ಯ ಶೌರ್ಯದಿಂದ ಆಕರ್ಷಿತನಾಗಿ ಅವರಿಗೆ ಗೌರವ ಸಲ್ಲಿಸಲು ಆಗ್ರಾದ ಕೋಟೆಯ ಮಹಾದ್ವಾರದ ಬಳಿ ಇವರಿಬ್ಬರು ಆನೆಯ ಮೇಲೆ ಕುಳಿತಿರುವಂತೆ ಕಲ್ಲಿನ ವಿಗ್ರಹ ಕೆತ್ತಿಸಿ ನಿಲ್ಲಿಸಿದನು.
- ಹಾಲ್ದಿಘಾಟ್ ಕದನ (18-6-1576)ದಲ್ಲಿ ರಾಣಾಪ್ರತಾಪನ ನೊಬಲ್ಲನಾದ ಬಿಡಜಾಲನು ರಾಜನ ಕಿರೀಟವನ್ನು ಧರಿಸಿ ತಾನೇ ರಾಣನೆಂದು ಘೋಷಿಸಿಕೊಂಡು ಶತ್ರುಗಳಿಂದ ಹತನಾಗಿ ರಾಣಾ ಪ್ರತಾಪನ ಪ್ರಾಣ ರಕ್ಷಣೆ ಮಾಡಿದ. ರಾಣಾ ಪ್ರತಾಪನು ತನ್ನ ಪ್ರೀತಿಯ ಕುದುರೆ ಚೇತಕದ ಮೇಲೆ ಕುಳಿತು ರಣರಂಗದಿಂದ ತಪ್ಪಿಸಿಕೊಂಡನು.
- ಅಕ್ಬರನ ಕಾಲದಲ್ಲಿ ರಾಮಾಯಣ, ಮಹಾಭಾರತ, ಅಥರ್ವವೇದ ಮತ್ತು ಲೀಲಾವತಿ ಗ್ರಂಥಗಳನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಲಾಯಿತು.
- ಅಕ್ಬರನು ಜರೋಕ ದರ್ಶನ್, ತುಲಾಧನ ಹಿಂದೂ ಆಚರಣೆಗಳನ್ನು ಜಾರಿಗೆ ತಂದನು.
- ಜವಾಹರಲಾಲ್‌ನೆಹರುರವರು ಅಕ್ಬರನನ್ನು "ಭಾರತೀಯ ರಾಷ್ಟ್ರೀಯತೆಯ ಜನಕ" ಎಂದಿದ್ದಾರೆ.
- ಇವನ ಕಾಲದಲ್ಲಿ ಪರ್ಶಿಯನ್ ಮತ್ತು ಹಿಂದೂ ಶೈಲಿಗಳು ಸಮ್ಮಿಲನಗೊಂಡವು ಹಾಗಾಗಿ ಇವನನ್ನು "ಭಾರತ ರಾಷ್ಟ್ರೀಯ ಶೈಲಿಯ ಸಂಸ್ಥಾಪಕ" ಎನ್ನುವರು.
- ಅಕ್ಬರ್ ಕಾಲದಲ್ಲಿ - ದೆಹಲಿಯ ಹುಮಾಯೂನನ ಸಮಾದಿ, ಆಗ್ರಾದ ಕೋಟೆಯಲ್ಲಿರುವ ಅರಮನೆ (1668-73) ಅಕ್ಬರಿ ಮಹಲ್ ಮತ್ತು ಜಹಂಗೀರಿ ಮಹಲ್, ಜಾಮೀ ಮಸೀದಿ, ಬುಲಂದ್ ದರ್ವಾಜ (ಬೃಹತ್ ವಿಜಯದ ದ್ವಾರ) ಷೇಕ್ ಸಲೀಮ್ ಚಿಸ್ತಿಯ ಸಮಾಧಿಗಳು ನಿರ್ಮಾಣವಾದ ವಾಸ್ತುಶಿಲ್ಪ ರಚನೆಗಳಾಗಿವೆ.
- ಪತೇಪುರ್ ಸಿಕ್ರಿ (ವಿಜಯದ ನಗರ) - 1572ರ ಗುಜರಾತ್‌ನ ಆಕ್ರಮಣದ ನೆನಪಿಗಾಗಿ ನಿರ್ಮಿಸಿದ. ಈ ನಗರದಲ್ಲಿ ಪಂಚ ಮಹಲ್, ಇಬಾದತ್ ಮಹಲ್, ಟರ್ಕಿಸ್ ಸುಲ್ತಾನ, ಜೋದಬಾಯಿ ಮಹಲ್, ಬೀರಬಲ್ ಮಹಲ್, ಇಬಾದತ್ ಖಾನ, ಅಕ್ಬರನ ಗ್ರಂಥಾಲಯಗಳನ್ನು ಕಾಣಬಹುದು.

**ಮನ್ಸಬ್ದಾರಿ ಪದ್ಧತಿ :**

- ಅಕ್ಬರ್ ಕಾಲದ ಅತ್ಯಂತ ಪ್ರಸಿದ್ಧ ಸೈನಿಕ ಪದ್ಧತಿ ಇದಾಗಿದೆ, ಇದನ್ನು ಸೈನಿಕ ಶ್ರೀಮಂತ ಪ್ರಭುತ್ವ ಅಥವಾ ಸೈನಿಕ ದರ್ಜೆ / ಹುದ್ದೆ ಎನ್ನುವರು.
- ಅಕ್ಬರ್ ತನ್ನ ಅಧಿಕಾರ ವರ್ಗದವರನ್ನು 10ರ ನಾಯಕರಿಂದ 10,000 ನಾಯಕರವರೆಗೆ 33 ದರ್ಜೆಗಳಾಗಿ ವಿಂಗಡಿಸಿದ್ದನು.
- ಮನ್ಸಬ್‌ದಾರರನ್ನು ರಾಜನೇ ನೇರವಾಗಿ ನೇಮಿಸುತ್ತಿದ್ದು ಉನ್ನತ ಅಧಿಕಾರವನ್ನು ರಾಜಕುಟುಂಬದವರಿಗೆ ನೀಡಲಾಗುತ್ತಿತ್ತು.
- ಮನ್ಸಬ್ದಾರಿ ಹುದ್ದೆ ಅನುವಂಶಿಕವಾಗಿರಲಿಲ್ಲ. ಇವರಿಗೆ ವೇತವನ್ನು ನಗದು ರೂಪದಲ್ಲಿ ನೀಡಲಾಗುತ್ತಿತ್ತು.
- ಅಕ್ಬರನ ಶಿಕ್ಷಾ ಗುರು ಅಬ್ದುಲ್ ಲತೀಫ್
- ಅಕ್ಬರನ ಮಕ್ಕಳು ಸಲೀಂ (ಜಹಂಗೀರ) ಮುರಾದ್ ಮತ್ತು ಧನಿಯಾಲ.
- ಅಕ್ಬರನು 1605 ಅಕ್ಟೋಬರ್ 25ರಂದು ಆಮಶಂಕೆಯಿಂದ ನರಳಿ ಸಾವು.
- ಅಕ್ಬರನ ಸಮಾಧಿ - ಸಿಕಂದ್ರಾದಲ್ಲಿದೆ.

## ಜಹಂಗೀರ್ (ಕ್ರಿ.ಶ. 1605-1627)

- ಪತೇಪುರ್ ಸಿಕ್ರಿಯ ಷೇಕ್ ಸಲೀಂ ಚಿಸ್ತಿಯ ಅನುಗ್ರಹದಿಂದ ಅಕ್ಬರನ ಜೈಪುರದ ರಜಪೂತ ಪತ್ನಿ ಮರ್ಯಾಮ್ - ಉಮ್ ಝುಮಾನಿಯಾ ಗರ್ಭದಲ್ಲಿ 1569ರ ಆಗಸ್ಟ್ 30 ರಂದು ಜನಿಸಿದ.
- ಅಬ್ದುಲ್ ರಹೀಂ ಖಾನ್ ಇ-ಸಲೀಮನ ಗುರುವಾಗಿದ್ದ.
- 1577 ರಲ್ಲಿ 10,00 ಸೈನಿಕ ಮುಖಂಡ, 1586ರಲ್ಲಿ 12,000 ಸೈನಿಕರ ಮುಖಂಡನಾಗಿ ನೇಮಿಸಲಾಯಿತು. ಜೈಪುರದ ರಾಜ ಭಗವಾನ್‌ದಾಸ್‌ನ ಮಗಳು ಮತ್ತು ರಾಜಮಾನ್ ಸಿಂಗ್‌ನ ಸೋದರಿ ಮನ್‌ಬಾಯಿಯೊಡನೆ 1585ರ ಫೆಬ್ರವರಿ 13ರಂದು ವಿವಾಹ.
- 1602ರ ಆಗಸ್ಟ್ 19ರಂದು ಅಬುಲ್‌ಫಜಲ್‌ನನ್ನು ಕೊಲೆ ಮಾಡಿಸಿದ.
- ಅಕ್ಬರನ ಮರಣದ ನಂತರ 1605 ನವೆಂಬರ್ 3 ರಂದು ನೂರ್‌ಉದ್ ದೀನ್ ಮಹಮದ್ ಜಹಾಂಗೀರ್ ಪಾದಷಾಹ್ ಘಾಜಿ ಎಂಬ ಬಿರುದಿನೊಂದಿಗೆ ಆಗ್ರಾದಲ್ಲಿ ಪಟ್ಟಕ್ಕೆ ಬಂದ.
- ಆಗ್ರಾ ಕೋಟೆಯ ಷಾಬುರ್ಜಿಯಿಂದ ಯಮುನಾ ನದಿಯ ದಂಡೆಯಲ್ಲಿನ ಶಿಲಾಸ್ತಂಭದವರೆಗೆ ಪ್ರಸಿದ್ಧವಾದ ಚಿನ್ನದ ನ್ಯಾಯದ ಸರಪಳಿ ಹಾಕಿಸಿದ.
- ಖುಸ್ರಾವ್ ದಂಗೆಗೆ ಆರ್ಥಿಕ ಮತ್ತು ನೈತಿಕ ಬೆಂಬಲ ನೀಡಿದ ಆಪಾದನೆಯ ಮೇಲೆ 1606ರಲ್ಲಿ ಸಿಕ್ಖರ 5ನೇ ಗುರು ಅರ್ಜುನ್ ದೇವನನ್ನು ಕೊಲೆ ಮಾಡಿಸಿದ.
- ಮೇವಾರದ ರಾಜಾ ರಾಣಾ ರಾಜಸಿಂಗ್ ಮತ್ತು ಅವನ ಮಗ ಕರಣ್ ಯುದ್ಧ ಕಾಲದಲ್ಲಿ ತೋರಿದ ಶೌರ್ಯದ ನೆನಪಿಗಾಗಿ ಆಗ್ರಾದ ಅರಮನೆಯ ಉದ್ಯಾನವನದಲ್ಲಿ ಇವರ ದೇಹಾಕೃತಿಯ ಅಮೃತ ಶಿಲೆಯ ಪ್ರತಿಮೆಗಳನ್ನಿರಿಸಿದನು.
- ಜಹಂಗೀರನು ಲಾಹೋರಿನಲ್ಲಿ ಬಾದ್ ಷಾಹಿ ಮಸೀದಿ, ಕಾಶ್ಮೀರದ ಸುಪ್ರಸಿದ್ಧ ಶಾಲಿಮಾರ್ ತೋಟ ಮತ್ತು ದೆಹಲಿಯಲ್ಲಿ ಅಬ್ದುಲ್ ರಹೀಮ್ ಖಾನ್‌ನ ಸಮಾಧಿ ನಿರ್ಮಿಸಿದ.

## ನೂರ್ ಜಹಾನ್

- ಮೊದಲ ಹೆಸರು ಮೆಹರುನ್ನೀಸಾ
- 1577ರಲ್ಲಿ ಕಂದಹಾರದಲ್ಲಿ ಜನನ.
- ತಂದೆ ಮಿರ್ಜಾಘಿಯಾಸ್ ಬೇಗ್, ತಾಯಿ ಅಸ್ಮಿತ್ ಬೇಗಂ
- 1594ರಲ್ಲಿ ಮೆಹರುನ್ನಿಸಾ ಮತ್ತು ಅಲಿಕುಲಿಬೇಗ್ ವಿವಾಹ.
- 1611ರಲ್ಲಿ ನೌರೋಜ್ ಹಬ್ಬದಲ್ಲಿ ಜಹಂಗೀರ್ ಮತ್ತು ನೂರ್ ಜಹಾನ್‌ರ ಭೇಟಿ ಮತ್ತು ಅದೇ ವರ್ಷ ವಿವಾಹ. ನಂತರ ನೂರ್‌ಮಹಲ್ (ಅರಮನೆಯ ಜ್ಯೋತಿ) ಎಂಬ ಬಿರುದು ನೀಡಿದ. ನಂತರ ಆಕೆ ನೂರ್ ಜಹಾನ್ (ವಿಶ್ವಜ್ಯೋತಿ) ಎಂದು ಪ್ರಸಿದ್ಧಳಾದಳು.
- 1615ರಲ್ಲಿ ಅನಾರ್ಕಲಿಗಾಗಿ ಲಾಹೋರಿನಲ್ಲಿ ಸುಂದರವಾದ ಅಮೃತಶಿಲೆಯ ಸಮಾಧಿ ಕಟ್ಟಿಸಿ ಅದರ ಮೇಲೆ "ಹಾ ನನ್ನ ಪ್ರಿಯತಮೆಯ ಮುದ್ದು ಮುಖವ ಮತ್ತೊಮ್ಮೆ ನೋಡಬಲ್ಲೆನಾದರೆ ನನ್ನ ಪುನರುತ್ಥಾನ ದಿನದವರೆಗೂ ನಾನು ದೇವರನ್ನು ವಂದಿಸುತ್ತೇನೆ" ಎಂದು ಕೆತ್ತಿಸಿದ್ದಾನೆ.
- 1613ರಲ್ಲಿ ಮುಖ್ಯ ರಾಣಿ ನೂರ್ ಜಹಾನ್, ಬಾದಶಹಾ ಬೇಗಂಳಾಗಿ ಪರಿವರ್ತಿತಳಾದಳು. ಜರೋಕ್ ದರ್ಶನದಲ್ಲಿ ಭಾಗವಹಿಸುತ್ತಿದ್ದಳು.
- 1611-22 ರಲ್ಲಿ "ನೂರ್‌ಜಹಾನ್ ಜುಂತಾ ಕೂಟ" ಸ್ಥಾಪಿಸಿದಳು. ಈ ಕೂಟದಲ್ಲಿನ ಸದಸ್ಯರುಗಳು ತಾಯಿ ಅಸ್ಮತ್ ಬೇಗಂ, ತಂದೆ ಇತಿಮದ್ ಉದ್ದೌಲ, ರಾಜಕುಮಾರ ಖುರ್ರಂ (ಷಹಜಹಾನ್)
- 1627 ಅಕ್ಟೋಬರ್ 28ರಲ್ಲಿ ಜಹಾಂಗೀರ್ ಮರಣ, ನೂರ್ ಜಹಾನ್ ಜಹಂಗೀರನಿಗಾಗಿ ಸಮಾಧಿ ನಿರ್ಮಿಸಿದಳು.
- ನೂರ್ ಜಹಾನ್ ತನ್ನ ತಂದೆಗಾಗಿ ಇತ್ಮದ್ ಉದ್‌ದೌಲ ಸಮಾಧಿ ನಿರ್ಮಿಸಿದಳು.
- 1645ರಲ್ಲಿ ನೂರ್ ಜಹಾನ್ ಮರಣ.

**ಷಹಜಹಾನ್ (ಕ್ರಿ.ಶ. 1627-1658)**

- ❖ ಮೊದಲ ಹೆಸರು ಖುರ್ರಂ
- ❖ ತಂದೆ ಜಹಂಗೀರ್, ತಾಯಿ ಗೋಸಾಯಿ (ರಾಜ ಉದಯ್‌ಸಿಂಗ್ ಮಗಳು)
- ❖ 1628ರ ಫೆಬ್ರವರಿ 24ರಂದು ಆಗ್ರಾದಲ್ಲಿ ಸುಲ್ತಾನನೆಂದು ಘೋಷಣೆ ಮತ್ತು ಅಬುಲ್ ಮುಜಾಫರ್ ಷಿಹಾಬ್ ಉದ್-ದೀನ್ ಮಹಮದ್ ಸಾಹಿಬ್ ಏ - ಖಿರಾನ್ ಸಾನಿ ಎಂಬ ಬಿರುದು ಧರಿಸಿದ.
- ❖ 1579ರ ವೇಳೆಗೆ ಪೋರ್ಚುಗೀಸರು ಬಂಗಾಳದಲ್ಲಿ ಬಲವಾಗಿ ನೆಲೆಯೂರಿ ಅಲ್ಲಿನ ಜನರಿಗೆ ಕ್ರೂರವಾದ ಹಿಂಸೆ ನೀಡಲಾರಂಭಿಸಿದರು. ನಂತರ 1632ರ ಜೂನ್ 24ರಂದು ಮೊಗಲ್ ಸೇನೆ, ಹೂಗ್ಲಿಯನ್ನು ಪೋರ್ಚುಗೀಸರಿಂದ ವಶಪಡಿಸಿಕೊಂಡಿತು.
- ❖ 1630-1632ರಲ್ಲಿ ದಕ್ಷನ್ ಮತ್ತು ಗುಜರಾತ್‌ಗಳಲ್ಲಿ ಭೀಕರಕ್ಷಾಮ ಕಾಣಿಸಿಕೊಂಡಿತು.
- ❖ 1649 ಫೆಬ್ರವರಿ 11ರಂದು ಕಾಂದಹಾರನ್ನು ಕಳೆದುಕೊಂಡನು. ಅದನ್ನು ಪುನಃ ವಶಪಡಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು.
- ❖ ಷಹಜಹಾನ್ ಮತ್ತು ಮುಮ್ತಾಜ್ ಮಹಲ್‌ಳ ಮಕ್ಕಳು, ಧಾರಶುಕೊ, ಷಾಷೂಜ, ಔರಂಗಜೇಬ್, ಮುರಾದ್ ಭಕ್ಷ್, ಜಹಾನರ, ರೋಷನಾರ ಮತ್ತು ಗೌಹನಾರ. (ಇವರುಗಳಲ್ಲಿ ಸಿಂಹಾಸನಕ್ಕಾಗಿ ಕಲಹಗಳು ಆರಂಭವಾದವು)
- ❖ 1658ರ ಏಪ್ರಿಲ್ 25ರಂದು ಮುರಾದ್ ಮತ್ತು ಔರಂಗಜೇಬರ ನಡುವೆ ಧರ್ಮಾತ್ ಯುದ್ಧ ನಡೆಯಿತು.
- ❖ ಔರಂಗಜೇಬನು 1658 ಜೂನ್ 8ರಂದು ಆಗ್ರಾಕೋಟೆ ವಶಪಡಿಸಿಕೊಂಡು ಷಹಜಹಾನನ್ನು ಬಂಧನದಲ್ಲಿರಿಸಿದನು.
- ❖ ಷಹಜಹಾನ್ 1666 ಜನವರಿ 31ರಂದು ತನ್ನ 74ನೇ ವಯಸ್ಸಿನಲ್ಲಿ ಮರಣ ಹೊಂದಿದ. ಮರಣ ಕಾಲದಲ್ಲಿ ಇವನ ಮಗಳು ಜಹಾನಾರ ಜೊತೆಯಲ್ಲಿದ್ದಳು.
- ❖ ಹಿಂದೂಗಳ ಮೇಲಿನ ಯಾತ್ರಾತೆರಿಗೆಯನ್ನು ಪುನಃ ಜಾರಿಗೊಳಿಸಿದನು.
- ❖ ಷಹಜಹಾನ್ ಸ್ವಚ್ಛತಾ ಪ್ರಿಯನಾಗಿದ್ದು ರತ್ನಗಳನ್ನು ಮುಟ್ಟಿದ ನಂತರವೂ ಸಹ ಕೈ ತೊಳೆಯುತ್ತಿದ್ದನು.
- ❖ ಓರ್ಛಾದ ದೇವಾಲಯಗಳನ್ನು ನಾಶಗೊಳಿಸಿದನು. ಬನಾರಸ್‌ನಲ್ಲಿ ಸುಮಾರು 76 ದೇವಾಲಯಗಳು ಇವನ ಆಜ್ಞೆಯಿಂದ ನಾಶಗೊಂಡವು.
- ❖ ಷಹಜಹಾನನ ಕಾಲವನ್ನು ಮೊಗಲ್ ವಾಸ್ತುಶಿಲ್ಪದ ಸುವರ್ಣಯುಗ ಎನ್ನಲಾಗಿದೆ. ಇವನ ಕಾಲದ ಪ್ರಸಿದ್ಧ ಭವನಗಳೆಂದರೆ. ಆಗ್ರಾದ ಮೋತಿ ಮಸೀದಿ ಮತ್ತು ಜಾಮೀ ಮಸೀದಿ, ದಿವಾನ್-ಇ- ಆಮ್, ದಿವಾನ್ ಇ-ಖಾಸ್, ಮುಸಮಾನ್ ಜುರ್ಜಾ, ಷೀಷಮಹಲ್, ರಂಗಮಹಲ್, ಖಾಸ್ ಮಹಲ್, ಮಚ್ಚಿಮಹಲ್ ಮತ್ತು ರಾಣಿಯರಿಗಾಗಿ ನಿರ್ಮಿಸಿದ ಇತರ ಭವನಗಳಾಗಿವೆ.
- ❖ ಇವನ ಪ್ರಖ್ಯಾತ ಮಯೂರ ಸಿಂಹಾಸನವು 7 ವರ್ಷಗಳ ಕಾಲ ನಿರ್ಮಾಣಗೊಂಡಿದ್ದು 1 ಕೋಟಿ ವೆಚ್ಚವಾಗಿತ್ತು. ಇವನು ಪ್ರಖ್ಯಾತ ಕೋಹಿನೂರ್ ವಜ್ರವನ್ನು ಹೊಂದಿದ್ದನು.

**ಮುಮ್ತಾಜ್ ಮಹಲ್ :**

- ❖ ಮೂಲ ಹೆಸರು ಅರ್ಜುಮಂದ್ ಬೇಗಂ
- ❖ ಮುಮ್ತಾಜ್ ಮಹಲ್ ಎಂದರೆ ಅರಮನೆಯ ಅಲಂಕಾರ ಎಂದರ್ಥ. ಷಹಜಹಾನ್ ಇವಳಿಗೆ ಮಲ್ಲಿಕಾ ಇ ಜುಮಾನಿ ಎಂಬ ಬಿರುದು ನೀಡಿ ಪಟ್ಟದರಸಿಯಾಗಿ ಮಾಡಿಕೊಂಡ.
- ❖ 1612ರಲ್ಲಿ ಷಹಜಹಾನ್ ಮತ್ತು ಮುಮ್ತಾಜ್ ಮಹಲಳ ವಿವಾಹ -16 ಮಕ್ಕಳಿಗೆ ಜನ್ಮವಿತ್ತಳು. 1631ರಲ್ಲಿ ಮರಣ ಹೊಂದಿದಳು. ಮುಮ್ತಾಜಳನ್ನು ಮೊದಲು ಬರ್ಹಾನಪುರದ ಬಳಿಯಿದ್ದ ಉದ್ಯಾನದಲ್ಲಿ ಸಮಾಧಿ ಮಾಡಿ ನಂತರ ಇವಳ ಅವಶೇಷಗಳನ್ನು ಯಮುನಾ ನದಿ ತೀರದ ಆಗ್ರಾದ ಉದ್ಯಾನವನದಲ್ಲಿ ಸಮಾಧಿ ಮಾಡಿ, ಜಗತ್ ವಿಖ್ಯಾತ ತಾಜ್‌ಮಹಲ್ ಅನ್ನು ನಿರ್ಮಿಸಲಾಯಿತು.

**ತಾಜ್ ಮಹಲ್ :**

- ❖ ಪ್ರಪಂಚದ 7 ಅದ್ಭುತಗಳಲ್ಲಿ ಒಂದು.
- ❖ ಇದರ ಮುಖ್ಯ ನಕ್ಷೆಗಾರ ಉಸ್ತಾದ್ ಅಹಮದ್ ಲಾಹೋರಿ, ಷಹಜಹಾನ್ ಇವನಿಗೆ ನದಿರ್ ಉಲ್ ಅಸರ್ ಎಂಬ ಬಿರುದು ನೀಡಿದ.
- ❖ ತೋಟ ಒಳಗೊಂಡಂತೆ ಸುತ್ತಳತೆ 1900 x 1000 ಅಡಿ.
- ❖ ಸುಮಾರು 20,000 ಕಾರ್ಮಿಕರು ಸತತ 22 ವರ್ಷ ನಿರ್ಮಿಸಿದರು.

**ಷಹಜಹಾನ್ ಕಾಲದ ಇತರೆ ವಾಸ್ತು ಶಿಲ್ಪ ಕಟ್ಟಡಗಳು :**

- ❖ ಕೆಂಪುಕೋಟೆ, ದೆಹಲಿಯ ಜಾಮಿ ಮಸೀದಿ, ಮೋತಿಮಸೀದಿ, ದಿವಾನ್ ಏ-ಅಮ್, ದಿವಾನ್ ಏ-ಖಾಸಾಗಳು, ಆಗ್ರಾಕೋಟೆ, ಆಗ್ರಾದ ತಾಜ್ ಮಹಲ್, ಲಾಹೋರಿನಲ್ಲಿ ಅನೇಕ ಸುಂದರ ಕಟ್ಟಡಗಳು, ಕಾಬೂಲ್, ಕಾಶ್ಮೀರ, ಅಜ್ಮೀರ್ ಮುಂತಾದ ಕಡೆ ಮಸೀದಿಗಳು, ಉದ್ಯಾನವನಗಳನ್ನು ನಿರ್ಮಿಸಿದ.
- ❖ ಷಹಜಹಾನನ ಮತ್ತೊಂದು ಪ್ರಸಿದ್ಧ ಕಲಾಕೃತಿ - ಮಯೂರ ಸಿಂಹಾಸನ.
- ❖ 2 ಕಾಲುವೆಗಳನ್ನು ತೋಡಿಸಿದನು - ಒಂದು ರಾವಿಕಾಲುವೆ 98 ಮೈಲಿ ಉದ್ದವಿದ್ದು ಲಾಹೋರ್‌ವರೆಗೂ ನಿರ್ಮಾಣಗೊಂಡಿದೆ. ಮತ್ತೊಂದು ನಹರ್ ಏ-ಷಾಹ್ ಇದು ಫಿರೋಜ್‌ಷಾ ತೊಗಲಕ್ ನಿರ್ಮಿಸಿದ್ದು ಅದನ್ನು ದುರಸ್ತಿಗೊಳಿಸಿದ.

**ವಿದ್ವಾಂಸರುಗಳು :**

- ❖ ಜಗನ್ನಾಥ್ ಪಂಡಿತ (ಗಂಗಾಧರ ಮತ್ತು ಗಂಗಾ-ಲಹರಿ ಕೃತಿಗಳ ಕರ್ತೃ)
- ❖ ಚಿಂತಾಮಣಿ ಆಚಾರ್ಯ ಸರಸ್ವತಿ.
- ❖ ಸಂದರದಾಸ
- ❖ ಅಬ್ದುಲ್ ಹಮೀದ್ ಲಾಹೋರಿ "ಪದಶಹನಾಮ"ದ ಕರ್ತೃ
- ❖ ಅಮೀನ್ ಖಜ್ವಾನಿಯು ("ಷಹಜಹಾನ್ ನಾಮ"ದ ಕರ್ತೃ)
- ❖ ಷಹಜಹಾನನ ಮಗ ದಾರಾಷುಕೋ - ಸಂಸ್ಕೃತ, ಅರೇಬಿಕ್ ಪರ್ಶಿಯನ್ ಭಾಷೆಯಲ್ಲಿ ವಿದ್ವಾಂಸನಾಗಿದ್ದ.

**ಔರಂಗಜೇಬ್ ಅಲಂಗೀರ್ - 1658-1707**

- ❖ ಮುಹಿ-ಉದ್-ದೀನ್ ಮಹಮದ್ ಔರಂಗಜೇಬ್ 1618 ನವೆಂಬರ್ 3 ರಂದು ಉಜ್ಜೈನ್ ಬಳಿಯ ದೋಹಾದಲ್ಲಿ ಜನನ.
- ❖ 1658 ಜುಲೈ 31ರಂದು "ಅಬ್ದುಲ್ ಮುಜಾಫರ್ ಮುಹಿ ಉದ್-ದೀನ್ ಮಹಮದ್ ಔರಂಗಜೇಬ್ ಬಹದ್ದೂರ್ ಆಲಂಗಿರ್ ಪಾದಷಾಹ್ ಘಾಜಿ" ಎಂಬ ಬಿರುದಿನೊಡನೆ ಚಕ್ರವರ್ತಿಯಾದ.
- ❖ ಔರಂಗಜೇಬ್ ನಿಷ್ಠಾವಂತ ಸಂಪ್ರದಾಯಬದ್ಧ ಸುನ್ನಿಯಾಗಿದ್ದು, ಮುಸ್ಲಿಂಯೇತರ ಪ್ರದೇಶಗಳನ್ನು ಆಡಳಿತಕ್ಕೆ ಒಳಪಡಿಸಲು ಜಿಹಾದ್ (ಧರ್ಮ ಯುದ್ಧ) ಕೈಗೊಂಡನು.
- ❖ ಜರೋಕಾದರ್ಶನವನ್ನು ನಿಲ್ಲಿಸಿದನು.
- ❖ ಮೊಗಲರು ಪರ್ಷಿಯಾದವರಿಂದ ಅಳವಡಿಸಿಕೊಂಡಿದ್ದ ನೌರೋಜಾ ಆಚರಣೆಯನ್ನು ನಿಷೇಧಿಸಿದನು.
- ❖ ಮದ್ಯ ಮತ್ತು ಗಾಂಜಾದ ಉತ್ಪನ್ನ ಮತ್ತು ಮಾರಾಟ ನಿಷೇಧಿಸಿ ಹಿಂದುಗಳ ಮೇಲೆ ಕಠಿಣವಾಗಿ ತೆರಿಗೆ ವಿಧಿಸಿದ.
- ❖ 1669ರಲ್ಲಿ ಹಿಂದೂಗಳ ಪಾಠಶಾಲೆಗಳನ್ನು ಮತ್ತು ದೇವಾಲಯಗಳನ್ನು ನಾಶಪಡಿಸಬೇಕೆಂದು ಪ್ರಾಂತ್ಯಾಧಿಕಾರಿಗಳಿಗೆ ಆಜ್ಞಾಪಿಸಿದ.
- ❖ 1671ರಲ್ಲಿ ಆದೇಶ ಹೊರಡಿಸಿ ಅದರಂತೆ ಆಡಳಿತದಲ್ಲಿ ಗುಮಾಸ್ತರೂ ಮತ್ತು ಲೆಕ್ಕ ಪರಿಶೋಧಕರು ಮುಸಲ್ಮಾನರೇ

ಆಗಿರಬೇಕೆಂದು ನಿಯಮ ಮಾಡಿದ. ನಂತರದಲ್ಲಿ ಅರ್ಧ ಮುಸ್ಲೀಮರು ಅರ್ಧ ಹಿಂದುಗಳೆಂದು ಪುನಃ ಆಜ್ಞೆ ಹೊರಡಿಸಿದ.

- ❖ ಜೋದ್‌ಪುರ ಮತ್ತು ಉದಯಪುರಗಳಲ್ಲಿ 200ಕ್ಕೂ ಹೆಚ್ಚು ದೇವಾಲಯ ನೆಲಸಮ ಮಾಡಿದ.
- ❖ ಜಜಿಯಾ ತಲೆಗಂದಾಯ ಮುಸ್ಲಿಮೇತರ ಮೇಲೆ ಪುನಃ ಜಾರಿಯಾಯಿತು.
- ❖ 1695ರ ಆದೇಶದ ಪ್ರಕಾರ ರಜಪೂತರ ಹೊರತುಪಡಿಸಿ ಉಳಿದ ಹಿಂದೂಗಳು ಸರ್ಕಾರದ ಅನುಮತಿ ಪಡೆಯದೆ ಪಲ್ಲಕ್ಕಿ, ಅರೇಬಿಯಾದ ಕುದುರೆ / ಆನೆಯ ಮೇಲೆ ಕೂಡಕೂಡದೆಂದು ಆಜ್ಞೆ ಹೊರಡಿಸಿದ.
- ❖ 1679ರ ಏಪ್ರಿಲ್ 12ರಂದು ಮಾರ್ವಾರದಲ್ಲಿನ ಹಿಂದುಗಳ ಮೇಲೆ ಜಜಿಯಾ ತಲೆಗಂದಾಯ ಹೇರಿದನು.
- ❖ ಮಾರವಾರದ ಜಸ್ವಂತ್‌ಸಿಂಗ್‌ನ ಅನುಯಾಯಿ ದುರ್ಗಾದಾಸನು "ರಾಥೋಡರ ಶೌರ್ಯ ಕುಸುಮ" ಎಂದು ಹೆಸರಾಗಿದ್ದನು.
- ❖ ಉದಯಪುರದಲ್ಲಿ 173 ದೇವಾಲಯಗಳನ್ನು ಮತ್ತು ಚಿತ್ತೂರಿನಲ್ಲಿ 63 ದೇವಾಲಯಗಳನ್ನು ನಾಶಗೊಳಿಸಿದನು.
- ❖ ಔರಂಗಜೇಬನು ಹಲವಾರು ದಖ್ಖನ್ ಯುದ್ಧಗಳನ್ನು ಮಾಡಿ ಅಪಾರ ಹಣವನ್ನು ವ್ಯಯ ಮಾಡಿದನು. ಇದು ಸಾಮ್ರಾಜ್ಯದಲ್ಲಿ ಅನೇಕ ತೊಂದರೆಗಳಿಗೆ ಈಡು ಮಾಡಿತು.
- ❖ "ನನ್ನನ್ನು ನಾಶ ಮಾಡಿದ್ದು ಸ್ಪೇನ್ ಹುಣ್ಣು ಎಂದು ನೆಪೋಲಿಯನ್ ಹೇಳಿದಂತೆ ದಖ್ಖನ್ನಿನ ಹುಣ್ಣು ಔರಂಗಜೇಬನನ್ನು ಸರ್ವನಾಶ ಗೈದಿತು.
- ❖ ಔರಂಗಜೇಬ್ ತನ್ನ ಮಗ ಮುಜಂನಿಗೆ ಬರೆದ ಪತ್ರದಲ್ಲಿ "ನಾನು ಒಬ್ಬನೇ ಬಂದೆ ಒಬ್ಬನೇ ಹೋಗುತ್ತಿದ್ದೇನೆ. ದೇಶಕ್ಕೆ ಮತ್ತು ಜನತೆಗೆ ನಾನು ಉತ್ತಮವಾದವನ್ನು ಮಾಡಲಿಲ್ಲ ಮತ್ತು ಭವಿಷ್ಯದ ಬಗ್ಗೆ ನನಗೇನು ಭರವಸೆಯಿಲ್ಲ" ಎಂದು ಬರೆದಿದ್ದಾನೆ.
- ❖ ಇವನು ತನ್ನ ತಂದೆ ಷಹಜಹಾನ್‌ನನ್ನು 8 ವರ್ಷ ಕಾಲ ಸೆರೆಮನೆಯಲ್ಲಿಟ್ಟು ನರಳುವಂತೆ ಮಾಡಿದ.
- ❖ ಔರಂಗಜೇಬನ ಮಗ ಯುವರಾಜ ಅಕ್ಬರ್ ಇವನ ವಿರುದ್ಧ ದಂಗೆ ಎದ್ದು ದಖನ್ನಿಗೆ ಪಲಾಯನ ಮಾಡಿ ಶಿವಾಜಿಯ ಮಗ ಸಾಂಬಾಜಿಯ ಸ್ನೇಹಗಳಿಸಿದ.
- ❖ ದಂಗೆ ಎದ್ದ ತನ್ನ ಮಗ ಅಕ್ಬರನನ್ನು ಕುರಿತು ಔರಂಗಜೇಬನು "ಘೋರ ತಂದೆಯ ಘೋರ ಮಗ ಮತ್ತು ಭಾರತದ ಪೀಡಕ" ಎಂದು ಕರೆದಿದ್ದಾನೆ.
- ❖ ಔರಂಗಜೇಬನ ವಿರುದ್ಧ ಹೋರಾಡಿದ ಮರಾಠ ಅರಸರುಗಳೆಂದರೆ ಶಿವಾಜಿ, ಸಾಂಬಾಜಿ, ರಾಜಾರಾಮ್ ಮತ್ತು ತಾರಾಬಾಯಿ
- ❖ ತನ್ನ ಕೈ ಬರಹದಿಂದ ಬರೆದ ಕುರಾನ್ ಪ್ರತಿಗಳನ್ನು ಮಾರಿ ಸಂಪಾದಿಸಿದ 1350 ರೂಗಳನ್ನು ಬಡವರ ಸಲುವಾಗಿ ವೆಚ್ಚ ಮಾಡಿ ತನ್ನ ಶವಸಂಸ್ಕಾರಕ್ಕಾಗಿ ಏಳೆಂಟು ರೂಪಾಯಿಗಳನ್ನು ಉಳಿಸಿದ್ದು ಆ ಹಣದಿಂದಲೇ ಸಂಸ್ಕಾರವಾಗಬೇಕೆಂದು ಬಯಸಿದ್ದನು.
- ❖ 1686ರ ಸೆಪ್ಟೆಂಬರ್‌ನಲ್ಲಿ ಔರಂಗಜೇಬನಿಂದ ಬಿಜಾಪುರ ವಶ. (ಸುಲ್ತಾನ ಸಿಕಂದರ್ ಆದಿಲ್ ಷಾ ನಿಂದ)
- ❖ 1687 ಸೆಪ್ಟಂಬರ್ ಗೋಲ್ಕಂಡವನ್ನು ಅಬ್ದುಲ್ ಹಸನ್‌ನಿಂದ ವಶಪಡಿಸಿಕೊಂಡ.
- ❖ 1709ರ ಮಾರ್ಚಿ 3ರಂದು ಔರಂಗಜೇಬನು ಅಹ್ಮದ್‌ನಗರದಲ್ಲಿ ಮರಣವನ್ನಪ್ಪಿದ. ಅವನ ಮೃತ ದೇಹವನ್ನು ದೌಲತಾಬಾದ್‌ಗೆ ಕೊಂಡೊಯ್ದು ಸಂತ ಬರ್ಹಾನ್ ಉದ್ದೀನ್ ಗೋರಿಯ ಆವರಣದಲ್ಲಿ ಹೂಳಲಾಯಿತು.
- ❖ ಮುಸ್ಲೀಮರು ಔರಂಗಜೇಬನನ್ನು ಜಿಂದಾಪೀರ್ / ಜೀವಿಸುವ ಸಂತನೆಂದು ಗೌರವಿಸುತ್ತಿದ್ದರು.
- ❖ ಸಮಕಾಲೀನರು ಇವನನ್ನು ರಾಜಮನೆತನದಲ್ಲಿ ಜನಿಸಿದ ದರ್ವಿಷ್ ಎಂದು ಕರೆಯುತ್ತಿದ್ದರು.

**ಔರಂಗಜೇಬನ ಉತ್ತರಾಧಿಕಾರಿಗಳು :**

- ❖ ಬಹದ್ದೂರ್ ಶಾ (ಮುಜಂ) ಕ್ರಿ.ಶ. 1707-1712
- ❖ ಜಹಂದರ್ ಷಾ - ಕ್ರಿ.ಶ. 1712-1713
- ❖ ಫರುಕ್ ಸಿಯಾರ್ - ಕ್ರಿ.ಶ. 1713-1719

- ಮಹಮ್ಮದ್ ಷಾ - ಕ್ರಿ.ಶ. 1719-1748
- ಅಹಮ್ಮದ್ ಷಾ - ಕ್ರಿ.ಶ. 1748-1754
- 2ನೇ ಆಲಂ ಷಾ - ಕ್ರಿ.ಶ. 1754-1759
- 2ನೇ ಷಾ ಆಲಂ - ಕ್ರಿ.ಶ. 1759-1806
- 2ನೇ ಅಕ್ಬರ್ - ಕ್ರಿ.ಶ. 1806-1827
- 2ನೇ ಬಹದ್ದೂರ್ ಷಾ - ಕ್ರಿ.ಶ. 1827-1858
- ಮಹಮ್ಮದ್ ಷಾನ ಕಾಲದಲ್ಲಿ ನಾದಿರ್ ಷಾ ದಾಳಿ ಮಾಡಿದನು. ನಾದಿರ್ ಷಾ 1739ರ ಮಾರ್ಚ್ 20 ರಂದು ದೆಹಲಿ ಪ್ರವೇಶಿಸಿದನು. ನಾದರ್ ಷಾನು ಪರ್ಷಿಯಾಕ್ಕೆ ಹಿಂತಿರುಗುವಾಗ ಪ್ರಸಿದ್ಧ ಕೊಹಿನೂರ್ ವಜ್ರವೂ ಸೇರಿದಂತೆ ಷಹಜಹಾನನ ಅಮೂಲ್ಯ ಮಯೂರಸಿಂಹಾಸನ ಮತ್ತು ಹಲವಾರು ಬೆಲೆ ಬಾಳುವ ವಸ್ತುಗಳನ್ನು ಕೊಂಡೊಯ್ದನು.
- ಅಹ್ಮದ್ ಷಾ ಅಬ್ದಾಲಿಯು 1748ರ ಜನವರಿಯಲ್ಲಿ ಮೊತ್ತ ಮೊದಲ ಬಾರಿಗೆ ಭಾರತದ ಮೇಲೆ ದಾಳಿ ಮಾಡಿ ಲಾಹೋರ್ ವಶಪಡಿಸಿಕೊಂಡನು.

## ಮರಾಠರು

**ಶಿವಾಜಿ (1627-80) :**

- 1627ರಲ್ಲಿ ಜುನ್ನಾರದ ಬಳಿಯ ಶಿವನೇರು ದುರ್ಗದಲ್ಲಿ ಜನನ.
- ತಂದೆ ಷಹಾಜಿಬೋನ್ಸ್ಲೆ, ತಾಯಿ ಜೀಜಾಬಾಯಿ, (ತಾಯಿಕಡೆಯಿಂದ ದೇವಗಿರಿಯ ಯಾದವ ಸಂತತಿ. ತಂದೆ ಕಡೆಯಿಂದ ಮೇವಾಡದ ವೀರ ಸಿಸೋದಿಯ ಸಂತತಿಗೆ ಸೇರಿದವನಾಗಿದ್ದ)
- ಗುರು ದಾದಾಜಿ ಕೊಂಡದೇವ.
- ಶಿವಾಜಿ ಮೇಲೆ ಪ್ರಭಾವ ಬೀರಿದ ಸಂತರು ರಾಮದಾಸ ಮತ್ತು ತುಕಾರಾಮರು.
- ಶಿವಾಜಿ ತನ್ನ 16ನೇ ವಯಸ್ಸಿನಲ್ಲಿ ಪ್ರಥಮ ಬಾರಿಗೆ 1646ರಲ್ಲಿ ಬಿಜಾಪುರದ ಅಧೀನದಲ್ಲಿದ್ದ ತೋರಣದುರ್ಗ, ರಾಯಘಡಗಳನ್ನು ವಶಪಡಿಸಿಕೊಂಡ.
- 1665ರ ಜೂನ್ 22 ರಂದು ಶಿವಾಜಿ ಮತ್ತು ರಾಜ ಜೈಸಿಂಗ್‌ನ ನಡುವೆ ಪುರಂದರ ಒಪ್ಪಂದವಾಯಿತು.
- 1666ರ ಮಾರ್ಚ್ 16ರಂದು ತನ್ನ ಹಿರಿಯ ಪುತ್ರ ಸಾಂಬಾಜಿಯೊಂದಿಗೆ ಆಗ್ರಾಕ್ಕೆ ಹೋದನು. ಅಲ್ಲಿ ಔರಂಗಜೇಬನಿಂದ ಬಂದಿತನಾಗಿ ನಂತರ ಹಣ್ಣಿನ ಬುಟ್ಟಿ / ಮಿಠಾಯಿ ಬುಟ್ಟಿಯ ಮೂಲಕ ಸೆರೆಮನೆಯಿಂದ ತಪ್ಪಿಸಿಕೊಂಡು ಬಂದನು.
- 1674 ಜೂನ್ 16 ರಂದು ರಾಜಧಾನಿ ರಾಯಘಡದಲ್ಲಿ ಸಕಲರಾಜವೈಭವಗಳೊಡನೆ ಪಟ್ಟಾಭಿಷೇಕ ನಡೆಸಿಕೊಂಡು ಛತ್ರಪತಿ (ರಾಜರ ರಾಜ) ಎಂಬ ಬಿರುದು ಧರಿಸಿದ.
- ಶಿವಾಜಿಯು 1680 ಏಪ್ರಿಲ್ 4 ರಂದು ಮೃತನಾದನು.
- ಮರಾಠಿ ಭಾಷೆಯನ್ನು ಆಡಳಿತ ಭಾಷೆಯಾಗಿ ಜಾರಿಗೆ ತಂದನು.

**ಅಷ್ಟ ಪ್ರಧಾನರು :**

1. ಪೇಶ್ವೆ - ಪ್ರಧಾನಮಂತ್ರಿ
2. ಅಮಾತ್ಯ - ಹಣಕಾಸು ಮತ್ತು ಸಾರ್ವಜನಿಕ ಲೆಕ್ಕಪರಿಶೋಧಕ.
3. ಮಂತ್ರಿ - ರಾಜನ ದೈನಂದಿನ ಕಾರ್ಯ ಮತ್ತು ಆಸ್ಥಾನದ ಕಾರ್ಯಕಲಾಪಗಳ ಮುಖ್ಯಸ್ಥ.

4. ಸುಮಂತ - ವಿದೇಶಾಂಗ ವ್ಯವಹಾರ
5. ಸಚಿವ / ಗೃಹ ಕಾರ್ಯದರ್ಶಿ - ರಾಜನ ಪತ್ರ ವ್ಯವಹಾರಗಳ ಮುಖ್ಯಸ್ಥ.
6. ಪಂಡಿತರಾವ್ - ರಾಜ ಪುರೋಹಿತ
7. ಸೇನಾಪತಿ - ಪ್ರಧಾನದಂಡ ನಾಯಕ
8. ನ್ಯಾಯಾಧೀಶ - ಪ್ರಮುಖ ನ್ಯಾಯಮೂರ್ತಿ

**ಶಿವಾಜಿ ಕಾಲದ ಅಶ್ವದಳದಲ್ಲಿ 2 ವಿಧಗಳಿದ್ದವು.**

1. ಭಾಗೀರ್ - ಸರ್ಕಾರದಿಂದ ಪೋಷಿಸಲ್ಪಡುವ ಅಶ್ವದಳ.
2. ಸಿಲಾದಾರ್ - ತಾವೇ ಸ್ವತಃ ಕುದುರೆಗಳನ್ನು ಹೊಂದಿ ಅದರ ಪೋಷಣೆಗೆ ಬೇಕಾದ ನೆರವನ್ನು ಸರ್ಕಾರದಿಂದ ಪಡೆಯುತ್ತಿದ್ದ ಅಶ್ವದಳ.

**ಕಂದಾಯ ಪದ್ಧತಿ :**

- ❖ ಶಿವಾಜಿಯ ಕಂದಾಯ ಪದ್ಧತಿ ಅಹಮದ್ ನಗರದ ಮಲ್ಲಿಕ್ ಅಂಬರನ ಕಂದಾಯ ಪದ್ಧತಿಯನ್ನು ಹೋಲುತ್ತಿತ್ತು.
- ❖ ಚೌತ್ 1/4 ಭಾಗ ಮತ್ತು ಸರ್ದೇಶ್ ಮುಖಿ 1/10 ಭಾಗ. ಎಂಬ ಮಿಲಿಟರಿ ತೆರಿಗೆಗಳನ್ನು ವಿಧಿಸಿದ್ದನು.

**ಸಾಂಬಾಜಿ**

- ❖ ಶಿವಾಜಿಯ ಮಗನಾದ ಇವನು 1680ರಲ್ಲಿ ಪಟ್ಟಕ್ಕೆ ಬಂದನು.
- ❖ ಬಿಜಾಪುರ ಗೋಲ್ಕಂಡಗಳನ್ನು ವಶಪಡಿಸಿಕೊಂಡ ನಂತರ ಔರಂಗಜೇಬ್ ಸಾಂಬಾಜಿಯ ಮೇಲೆ ದಾಳಿ ಮಾಡಿದ. ಸಂಗಮೇಶ್ವರದಲ್ಲಿನ ಯುದ್ಧದಲ್ಲಿ 1689ರ ಫೆಬ್ರವರಿ 11ರಂದು ಮೊಗಲರ ಬಲಿಷ್ಠ ಅಧಿಕಾರಿ ಮುಕರಬ್ ಖಾನನಿಗೆ ಸೆರೆಯಾದ ಸಾಂಬಾಜಿಯನ್ನು 1689ರ ಮಾರ್ಚ್ 11ರಂದು ಬಹದ್ದೂರ್‌ಫುರ್‌ನಲ್ಲಿ ಕೊಲ್ಲಲಾಯಿತು. ಈ ಸಂದರ್ಭ ಸಾಂಬಾಜಿಯ ತಮ್ಮ ರಾಜಾರಾಂನು ಭಿಕ್ಷುಕನ ವೇಷದಲ್ಲಿ ತಪ್ಪಿಸಿಕೊಂಡು ಜಿಂಜಿಯನ್ನು ತಲುಪಿದ.
- ❖ ಮೊಗಲರ ವಿರುದ್ಧ ರಾಷ್ಟ್ರೀಯ ವಿರೋಧಿ ಯುದ್ಧವು, ರಾಮಚಂದ್ರ ಪಂತ್, ಶಂಕರ್‌ಜೀ ಮುಲ್ಹಾರ್ ಮತ್ತು ಪರಶುರಾಮ್ ತ್ರಿಯಂಬಕ್ ಮೊದಲಾದ ನಾಯಕರಿಂದ ಆರಂಭವಾಯಿತು ದಕ್ಷಿಣ ಭಾರತದ ಮೊಗಲ್ ಸರದಾರರಿಗೆ ಸಂತಾಜಿ ಘೋರ್ಪಡೆ ಮತ್ತು ದಾನಾಜಿ ಜಾದವ್ ಸಿಂಹಸ್ವಪ್ನವಾಗಿದ್ದರು. ಸಂತಾ ಮತ್ತು ಧನಾಗಳು ಈ ಅವಧಿಯ ವೀರರಾಗಿದ್ದರು.
- ❖ 1700ರಲ್ಲಿ ರಾಜಾರಾಮನು ಕಾಲವಾದ ಮೇಲೆ ಅವನ ಉತ್ತರಾಧಿಕಾರಿಯಾಗಿ ಅವನ ವಿಧವೆ ತಾರಾಬಾಯಿ ತನ್ನ ಅಪ್ರಾಪ್ತ ಬಾಲಕ 3ನೇ ಶಿವಾಜಿಯ ರಾಜ ಪ್ರತಿನಿಧಿಯಾಗಿ ಆಡಳಿತ ನಡೆಸಿದಳು.

**ಮರಾಠ ಅರಸರ ಕಾಲಾನುಕ್ರಮಣಿಕೆ**

- ❖ ಶಿವಾಜಿ - ಕ್ರಿ.ಶ. 1627-1680
- ❖ ಸಾಂಬಾಜಿ - ಕ್ರಿ.ಶ. 1680-1689
- ❖ ರಾಜಾರಾಂ - ಕ್ರಿ.ಶ. 1689-1700
- ❖ ತಾರಾಬಾಯಿ (3ನೇ ಶಿವಾಜಿಯ ರಾಜಪ್ರತಿನಿಧಿ) ಕ್ರಿ.ಶ. 1700-1707
- ❖ ಸಾಹು - 1708-1749
- ❖ ರಾಮರಾಜ - 1749-1777

**ಪೇಶ್ವೆಗಳು**

- ಬಾಲಾಜಿ ವಿಶ್ವನಾಥ - ಕ್ರಿ.ಶ. 1713-1720
- 1ನೇ ಬಾಜಿರಾವ್ - ಕ್ರಿ.ಶ. 1720-1740
- ಬಾಲಾಜಿ ಬಾಜಿರಾವ್ - ಕ್ರಿ.ಶ. 1740-1761
- ಮಾಧವ ರಾವ್ - ಕ್ರಿ.ಶ. 1761-1772
- ನಾರಾಯಣರಾವ್ - ಕ್ರಿ.ಶ. 1772-1773
- ಮಾಧವರಾವ್ ನಾರಾಯಣರಾವ್ - ಕ್ರಿ.ಶ. 1773-1798
- 2ನೇ ಬಾಜಿರಾವ್ - ಕ್ರಿ.ಶ. 1798-1818 (ಕೊನೆಯ ಪೇಶ್ವೆ.)
  (ಮೂರನೇ ಆಂಗ್ಲೋ ಮರಾಠ ಯುದ್ಧದ ನಂತರ 1818ರಲ್ಲಿ ಪೇಶ್ವೆ ಹುದ್ದೆಯು ರದ್ದಾಯಿತು)

**ಬಾಲಾಜಿ ವಿಶ್ವನಾಥ (1713-20)**

- ಸಾಂಬಾಜಿಯ ಮಗ ಸಾಹು 1703 ನವೆಂಬರ್ 16ರಂದು ಇವನನ್ನು ಪೇಶ್ವೆಯಾಗಿ (ಪ್ರಧಾನಿ) ನೇಮಿಸಿದ.
- ಇವನು ಪೇಶ್ವೆ ಹುದ್ದೆಯು ವಂಶ ಪಾರಂಪರ್ಯವಾಗುವಂತೆ ಮಾಡಿ, ಪೇಶ್ವೆಯ ಆಳ್ವಿಕೆಯನ್ನು ಆರಂಭಿಸಿದ.
- 1708ರಲ್ಲಿ ಸಾಹುವಿನಲ್ಲಿ ಕಾರಕೂನ / ಕಂದಾಯದ ಕರಣಿಕ ಹುದ್ದೆ ಪಡೆದಿದ್ದನು.
- 1712ರಲ್ಲಿ ಸೇನಾಕರ್ತೆ ವ್ಯವಸ್ಥಾಪಕ / ಸೇನೆಯ ಕಾರ್ಯಭಾರದ ನಿಯೋಗಿ ಎಂಬ ಬಿರುದನ್ನು ಸಾಹುವಿನಿಂದ ಪಡೆದು ಕೊಂಡಿದ್ದನು.
- 1720ರಲ್ಲಿ ಬಾಲಾಜಿ ವಿಶ್ವನಾಥನು ಮರಣ ಹೊಂದಿದನು.

**ಒಂದನೇ ಬಾಜಿರಾಯ (1720-40)**

- ಬಾಲಾಜಿ ವಿಶ್ವನಾಥನ ಮಗನಾಗಿ 1698ರಲ್ಲಿ ಜನಿಸಿದ. 19ನೇ ವಯಸ್ಸಿಗೆ ಪೇಶ್ವೆಯಾದ.
- 1728ರಲ್ಲಿ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದನು ಮತ್ತು ಹೈದರಾಬಾದಿನ ನಿಜಾಮನನ್ನು ಸೋಲಿಸಿದನು.
- 1713ರಲ್ಲಿ ಮೊಗಲ್ ಪ್ರಾಂತ್ಯಗಳಿಂದ ಚೌತ್ ಮತ್ತು ಸರ್ದೇಶ್‌ಮುಖಿ ತೆರಿಗೆಗಳನ್ನು ವಸೂಲಿ ಮಾಡುವ ಹಕ್ಕು ಪಡೆದ.
- 1739ರಲ್ಲಿ ಪೋರ್ಚುಗೀಸರಿಂದ ಸಾಲ್ಸೆಟ್ ಮತ್ತು ಬೆಸ್ಸಿನ್‌ಗಳನ್ನು ಆಕ್ರಮಿಸಿದನು.
- ಹಿಂದೂ-ಪಾದ್-ಬಾದ್‌ಷಾಹಿ ಅಂದರೆ ಮರಾಠ ಒಕ್ಕೂಟದಲ್ಲಿ ಹಿಂದೂ ಸಾಮ್ರಾಜ್ಯ ಕಟ್ಟುವ ಕಲ್ಪನೆ ಇವನದಾಗಿತ್ತು.
- 1740ರ ಏಪ್ರಿಲ್‌ನಲ್ಲಿ ಅಕಾಲ ಮರಣವನ್ನಪ್ಪಿದ.
- ಮರಾಠ ರಾಜ್ಯ ಸ್ಥಾಪನೆಗೆ ಅತ್ಯಂತ ಶ್ರಮ ವಹಿಸಿದ ಇವನನ್ನು ಮರಾಠ ಸಾಮ್ರಾಜ್ಯದ ದ್ವಿತೀಯ ಸಂಸ್ಥಾಪಕ ಎಂದು ಪರಿಗಣಿಸಲಾಗಿದೆ.

**ಇವನ ನಂತರ ಮರಾಠ ಸಾಮ್ರಾಜ್ಯ 5 ಭಾಗಗಳಾಯಿತು.**

- ಬಿರಾರ್ - ಬೋನ್ಸ್ಲೆ ಮನೆತನ (ರಘೂಜಿ ಬೋನ್ಸ್ಲೆ)
- ಗುಜರಾತ್ ಮತ್ತು ಬಗ್ಲಾ - ದೆಬಾಡೆಗಳು, ಗಾಯಕ್‌ವಾಡ್‌ಗಳು
- ಗ್ವಾಲಿಯಾರ್ - ಸಿಂಧ್ಯಾ ಮನೆತನ (ಸ್ಥಾಪಕ ರಾಣೋಜಿಸಿಂಧ್ಯಾ)

- ಇಂದೋರ್ - ಹೋಳ್ಕರ್ ಮನೆತನ (ಮಲ್ಹಾರ್ ರಾವ್ ಹೋಳ್ಕರ್)
- ಮಾಳ್ವ - ಪವಾರಗಳು (ಥಾರ್ ಇವರ ಕೇಂದ್ರಸ್ಥಾನ)

**ಬಾಲಾಜಿ ಬಾಜಿರಾಯ (1740-61)**

- 1ನೇ ಬಾಜಿರಾಯನ ಮಗ.
- ಇವನ ಕಾಲದಲ್ಲಿ ಸಾಹುರಾಜನು 1749ರಲ್ಲಿ ಮರಣ ಹೊಂದಿದ. ತಾರಾಬಾಯಿಯು ಮೊಮ್ಮಗ ರಾಜಾರಾಮನೊಂದಿಗೆ ಇವನನ್ನು ಹತ್ತಿಕ್ಕುವ ಪ್ರಯತ್ನ ಮಾಡಿದಳು.
- 1750ರಲ್ಲಿ ರಾಜಾರಾಮನೊಂದಿಗೆ 'ಸಂಗೋಲ' ಒಪ್ಪಂದ ಮಾಡಿಕೊಂಡರು.
- ತನ್ನ ತಂದೆಯ ಹಿಂದೂ-ಪಾದ್-ಬಾದ್‌ಷಾಹಿ ಕಲ್ಪನೆಯನ್ನು ಕೈ ಬಿಟ್ಟನು.
- 1760ರ ಉದ್ಗಿರ್ ಕದನದಲ್ಲಿ ಪೇಶ್ವೆಯ ಸಂಬಂಧಿ ಸದಾಶಿವರಾಯನು ಹೈದರಾಬಾದಿನ ನಿಜಾಮ್‌ಆಲಿಯನ್ನು ಸೋಲಿಸಿದ.
- ಇವನ ಕಾಲದ ಅತ್ಯಂತ ಪ್ರಮುಖ ಯುದ್ಧವೆಂದರೆ 3ನೇ ಪಾಣಿಪತ್ ಕದನ, 1761 ಜನವರಿ 14ರಂದು ನಡೆಯಿತು. ಈ ಯುದ್ಧವು ಅಫಘಾನಿಸ್ತಾನದ ಅಹಮದ್ ಷಾ ಅಬ್ದಾಲಿ ವಿರುದ್ಧ ನಡೆಯಿತು. ಬಾಲಾಜಿ ಬಾಜಿರಾಯನ ಮಗ ವಿಶ್ವಾಸರಾವ್ ಮತ್ತು ಸೋದರನ ಪುತ್ರ ಸದಾಶಿವರಾವ್ ನೇತೃತ್ವದಲ್ಲಿ ಮರಾಠ ಸೈನಿಕರು ವೀರಾವೇಶದಿಂದ ಹೋರಾಡಿದರೂ ಇವರು ಸೋತರು. 1761ರ ಜೂನ್ 23ರಂದು ಭಗ್ನ ಹೃದಯಿಯಾಗಿ ಬಾಲಾಜಿ ಬಾಜೀರಾಯನು ಮರಣ ಹೊಂದಿದ.

## ಸೂರ್ ಸಂತತಿ - ಕ್ರಿ.ಶ. 1540-1555

**ಷೇರ್ ಷಾ (ಕ್ರಿ.ಶ. 1540-45) :**

- ಇವನ ಮೂಲ ಹೆಸರು ಫರೀದ್, ಕ್ರಿ.ಶ. 1472ರಲ್ಲಿ ನರ್ನೌಲ್ ಬಳಿ ಜನನ.
- ಇವನು ಪೆಶಾವರ್‌ನಲ್ಲಿನ ಆಫ್ಘನ್ನರ ಸೂರ್ ಪಂಗಡಕ್ಕೆ ಸೇರಿದವನು.
- ತಂದೆ ಹಸನ್‌ನು ಇವನನ್ನು ಸಸಾರಂ ಮತ್ತು ಖವಾಸ್ಪುರ ಎಂಬ ಪರಗಣಗಳ ಮುಖ್ಯಸ್ಥನಾಗಿ ನೇಮಿಸಿದ.
- ಕ್ರಿ.ಶ. 1522ರಲ್ಲಿ ದಕ್ಷಿಣ ಬಿಹಾರದ ಬಿಹಾರ್ ಖಾನ್ ಲೋಹಾನಿ, ಸೇವೆಯಲ್ಲಿ ಸೇರಿದನು.
- ಕ್ರಿ.ಶ. 1527 ಏಪ್ರಿಲ್ ನಿಂದ 1528 ಜೂನ್‌ವರೆಗೆ ಬಾಬರ್‌ನ ಸೇವೆಯಲ್ಲಿದ್ದು ಚಾಂದೇರಿ ಕದನದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ.
- ಕ್ರಿ.ಶ. 1530ರಲ್ಲಿ ವಿಧವೆ ಲಾಡ್ ಮಲ್ಲಿಕಳನ್ನು ವಿವಾಹವಾಗಿ ಚುನಾರ್ ಕೋಟೆಯನ್ನು ಪಡೆದನು ಹಾಗೂ ಮತ್ತೊಬ್ಬ ವಿಧವೆ ಗೌಹರ್ ಗೊಸ್ಸಾಯಿನ್‌ಳನ್ನು ವಿವಾಹವಾಗಿ ಅಪಾರ ಸಂಪತ್ತಿನ ಒಡೆಯನಾದ.
- ಕ್ರಿ.ಶ. 1534ರಲ್ಲಿ ಸೂರಜ್ ಘರ್ ಕದನದಲ್ಲಿ ಬಂಗಾಳದ ಮಹಮ್ಮದ್ ಷಾ ಮತ್ತು ಲೋಹಾನಿ ನೋಬಲ್ಲರ ಒಕ್ಕೂಟದ ಸೇನೆಯನ್ನು ಸೋಲಿಸಿದ.
- ಚೌಸಾ ಕದನ (ದಿನಾಂಕ 26-06-1539) ಬಿಲ್ಗ್ರಾಮ್ ಕದನ (ದಿನಾಂಕ 17-05-1540)ಗಳ ಮೂಲಕ ಹುಮಾಯೂನ್‌ನನ್ನು ಸೋಲಿಸಿ ದೆಹಲಿ ಸಿಂಹಾಸವನ್ನೇರಿದ.
- ಜೀಲಂ ನದಿ ಬಳಿ ರೋಹಾಸ್ತಘರ್ ಎಂಬ ಹೊಸ ಕೋಟೆ ನಿರ್ಮಿಸಿದ.
- ಬಂದೇಲ್ ಖಂಡದ ಕಾಲಿಂಜರ್ ಕೋಟೆಯ ಮೇಲಿನ ದಾಳಿಯ ಸಂದರ್ಭದಲ್ಲಿ ದಿನಾಂಕ 22-05-1545ರಂದು ಸಿಡಿಮದ್ದಿನ ಸ್ಫೋಟದಿಂದ ಗಾಯಗೊಂಡು ಸಾವನ್ನಪ್ಪಿದ.

- ❖ ಅಲ್ಲಾವುದ್ದೀನ್ ಖಿಲ್ಜಿಕಾಲದಲ್ಲಿನ ಕುದುರೆಗಳಿಗೆ ಮುದ್ರೆ ಹಾಕುವ ದಾಗ್ ಪದ್ಧತಿಯನ್ನು ತನ್ನ ಸೈನ್ಯದಲ್ಲಿ ಜಾರಿಗೆ ತಂದನು.
- ❖ ಇವನ ಭೂಕಂದಾಯ ಪದ್ಧತಿಯು ಭಾರತದ ಆಡಳಿತ ವ್ಯವಸ್ಥೆಯಲ್ಲಿ ಹೆಸರಾಗಿದೆ.
- ❖ ಬೇಸಾಯ ಭೂಮಿಯನ್ನು ಅಳತೆ ಮಾಡಿಸಿ ಕಂದಾಯ ನಿಗಧಿ ಪಡಿಸಿದ.
- ❖ ಜಾರಿಬ್ ಎಂಬುದು ಜಮೀನನ್ನು ಅಳತೆ ಮಾಡುವ ಒಂದು ಪ್ರಮಾಣೀಕೃತ ಹಗ್ಗದಿಂದ ಮಾಡಿದ ಮಾಪನವಾಗಿತ್ತು.
- ❖ ನ್ಯಾಯಾಧಾನಕ್ಕೆ ಹೆಸರಾಗಿದ್ದ ಇವನ ಕಾಲವು ದರೋಡೆ ಕಳ್ಳಕಾಕರಿಂದ ಮುಕ್ತವಾಗಿತ್ತು.
- ❖ ಪೂರ್ವಬಂಗಾಳದ ಸೋನಾರ್‌ಗಾವ್‌ನಿಂದ ಸಿಂಧೂವರೆಗೆ ಗ್ರಾಂಡ್ ಟ್ರಂಕ್ ಹೆದ್ದಾರಿ ನಿರ್ಮಿಸಿದ.
- ❖ ದಾಮ್ ಎಂಬ ಹೊಸ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದ.
- ❖ ಇವನ ಬೆಳ್ಳಿಯ ರೂಪಾಯಿಯು 180 ಗ್ರೇನ್ ತೂಕವಿದ್ದು ಮೊಗಲರ ಆಡಳಿತಕಾಲದವರೆಗೂ ಜಾರಿಯಲ್ಲಿತ್ತು.
- ❖ ರೋಹಾಸ್ತಘರ್ ಕೋಟೆ, ದೆಹಲಿಯ ಪುರಾನಖಿಲ್ಲಾ ಇವನ ವಾಸ್ತು ರಚನೆಗಳು.
- ❖ ಇವನ ಸಮಾದಿಯನ್ನು ಸಸಾರಂನ ಸರೋವರದ ಮಧ್ಯದಲ್ಲಿ ನಿರ್ಮಿಸಲಾಗಿದೆ.

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿ

**ಸೂಫಿ ಸಂಥ :**

- ❖ ಸೂಫಿ ಪಂಥವು ಇಸ್ಲಾಂ ಧರ್ಮದ ಆಧ್ಯಾತ್ಮಿಕತೆಯ ಮತ್ತೊಂದು ಹೆಸರು, ಕುರಾನ್ ಇದಕ್ಕೆ ಮೂಲ ಆಧಾರ.
- ❖ ಸೂಫಿ ಎಂಬ ಪದವು ಸಾಪ್ ಎಂಬ ಪದದಿಂದ ಉತ್ಪತ್ತಿ, ಅದರ ಅರ್ಥಶುದ್ಧಿ / ಶುಚಿ
- ❖ ಸೂಫಿ ಪಂಥದ ಚಿಂತನೆಗಳು ವೇದಾಂತ, ತತ್ವಜ್ಞಾನವನ್ನು ಹೋಲುತ್ತವೆ.
- ❖ ಮೊದಲು ಸೂಫಿ ಚಳುವಳಿಯು ಷಿಯಾ ಪಂಥದ ಆಳ್ವಿಕೆಯಲ್ಲಿ ಪರ್ಶಿಯಾದಲ್ಲಿ ಆರಂಭವಾಯಿತು.
- ❖ ಸೂಫಿ ಪಂಥವು ಜೊರಾಷ್ಟ್ರಿಯಾ, ಬೌದ್ಧ, ಕ್ರೈಸ್ತ., ಹಿಂದೂ ಧರ್ಮಗಳ ಹಲವಾರು ಉತ್ತಮ ಅಂಶಗಳನ್ನು ಒಳಗೊಂಡಿದೆ.
- ❖ ಕ್ರಿ.ಶ. 12ನೇ ಶತಮಾನದಲ್ಲಿ ಸೂಫಿಸಂತರು ಭಾರತಕ್ಕೆ ಬಂದರು.
- ❖ ಮೊದಲ ಸೂಫಿ ಸಂತರು - ಅಬುಹಸೀಮ್ (ಕ್ರಿ.ಶ. 8ನೇ ಶತಮಾನ, ಪರ್ಶಿಯಾ)

**ಸೂಫಿ ಪಂಥದ ಪಂಗಡಗಳು ಮತ್ತು ಸುಧಾರಕರು**

- ❖ ಚಿಸ್ತಿ ಪಂಗಡ - ಕ್ವಾಜ ಮುಯಿನುದ್ದೀನ್ ಚಿಸ್ತಿ
- ❖ ಸುರ್ಹಾವರ್ದಿ - ಶೇಕ್ ಶಿಹಾಬುದ್ದೀನ್ ಸುಹಾವರ್ದಿ
- ❖ ಫಿರ್ದೌಸಿ - ಶೇಕ ಬದ್ರುದ್ದೀನ್ ಸಮರ್ ಖಂಡಿ (ಸ್ಥಾಪಕ) (ಶೇಕ್ ಸರ್ಫುದ್ದೀನ್ ಯಾಹ್ಯಾ ಮುನಿರಿಯವರಿಂದ ಪ್ರಸಾರ)
- ❖ ಖಾದ್ರಿ - ಶಬ್ ನಯಮಾತುಲ್ಲಾ ಖಾದ್ರಿ
- ❖ ಶತ್ತಾರಿ - ಶಾ ಅಬ್ದುಲ್ ಸತ್ತಾರಿ
- ❖ ನಕ್ಷ ಬಂದಿ - ಕ್ವಾಜ ಬಕಿಬಿಲ್ಲಾ (ಅಕ್ಬರನ ಕಾಲದಲ್ಲಿ) ಪ್ರಮುಖ ಸಂತರು ಶೇಕ ಅಹಮ್ಮದ್ ಸರ್‌ಹಿಂದ್ / ಮುಜೆದಿದ್ದ್‌ನ್ ಅಲಿಪ್ ಸಾನಿ

**ಭಕ್ತಿ ಪಂಥದ ಸುಧಾರಕರು**

- ❖ ರಮಾನಂದ
- ❖ ಕಬೀರ್
- ❖ ಮಲುಕ್‌ದಾಸ್
- ❖ ದಾದು ದಯಾರ್
- ❖ ವಲ್ಲಭಾಚಾರ್ಯ
- ❖ ಚೈತನ್ಯ

| | |
|---|---|
| ❖ ಮೀರಾಬಾಯಿ | ❖ ಸೂರ್‌ದಾಸ್ |
| ❖ ತುಳಸೀದಾಸರು | ❖ ಜ್ಞಾನದೇವ ಮುಂತಾದವರು |

**ಮಹಾರಾಷ್ಟ್ರದ ಭಕ್ತಿ ಸಂತರು**

| | |
|---|---|
| ❖ ಜ್ಞಾನದೇವ | ❖ ನಾಮದೇವ್ |
| ❖ ಏಕನಾಥ | ❖ ತುಕಾರಾಮ್ |
| ❖ ರಾಮ್‌ದಾಸ್ | ❖ ಬಾಹಿನಾ ಬಾಯಿ |

**ರಮಾನಂದ :**

- ❖ ಆರಂಭದ ಮೊದಲ ಶ್ರೇಷ್ಠ ಭಕ್ತಿ ಸಂತ, ಉತ್ತರ ಭಾರತದಲ್ಲಿ ಭಕ್ತಿ ಚಳವಳಿಗೆ ಕಾರಣಕರ್ತರು.
- ❖ ಅಲಹಾಬಾದ್‌ನ ಕನ್ಯಾಕುಬ್ಜ ಬ್ರಾಹ್ಮಣ ಮನೆತನದಲ್ಲಿ ಜನನ.
- ❖ ಹಿಂದಿ ಭಾಷೆಯಲ್ಲಿ ಭಕ್ತಿ ಪಂಥದ ತತ್ವಗಳನ್ನು ಪ್ರಚಾರ ಮಾಡಿದ ಮೊದಲ ಆಚಾರ್ಯ.
- ❖ ದಕ್ಷಿಣ ಭಾರತದಲ್ಲಿ ಮೊದಲು ಆರಂಭವಾದ ಚಳವಳಿಯನ್ನು ಉತ್ತರ ಭಾರತಕ್ಕೆ ಕೊಂಡೊಯ್ದ ಮೊದಲ ಸಂತ.
- ❖ ರಮಾನಂದರ ಒಂದು ಹಾಡು - ಸಿಖ್ಖರ ಪವಿತ್ರ ಗ್ರಂಥ "ಗುರುಗ್ರಂಥ ಸಾಹೇಬ್"ದಲ್ಲಿದೆ.
- ❖ ರಮಾನಂದರು ಶ್ರೀ ರಾಮಾನುಜಾಚಾರ್ಯರ ವೈಷ್ಣವ ಪಂಥವನ್ನು ಅವಲಂಬಿಸಿ. ಅದು ಉತ್ತರ ಭಾರತದಲ್ಲಿ ಜನಪ್ರಿಯವಾಗಲು ಕಾರಣರಾದರು.

❖ **ರಮಾನಂದರ 12 ಮಂದಿ ಶಿಷ್ಯರು :**

| | |
|---|---|
| 1. ಅನಂತಾನಂದ | 7. ಪರಮಾನಂದ |
| 2. ಕಬೀರ್ (ನೇಯ್ಗೆ) | 8. ಮಹಾನಂದ |
| 3. ಪೀಪ (ರಜಪೂತ) | 9. ರವಿದಾಸ (ಚಮ್ಮಾರ) |
| 4. ಭಾವಾನಂದ | 10. ಧನ್ನ (ಜಾಟ್ ಪಂಗಡ) |
| 5. ಸುಖಾಂದನಂದ | 11. ಸೇನ (ಕ್ಷೌರಿಕ) |
| 6. ಶ್ರೀಆನಂದ | 12. ಸುರಸುರಾನಂದ |

**ಮುಖ್ಯಾಂಶಗಳು :**

- ❖ ಕಬೀರರು ದೇವರನ್ನು ರಾಮನೆಂಬ ಹೆಸರಿನಿಂದ ಭಜಿಸುತ್ತಿದ್ದರು.
- ❖ ಹಿಂದೂ-ಮುಸ್ಲಿಂರಲ್ಲಿನ ವೈಷಮ್ಯವನ್ನು ನಿವಾರಣೆ ಮಾಡಲು ಪ್ರಯತ್ನಿಸಿದ ಮೊದಲ ಸಂತ - ಕಬೀರ್.
- ❖ ಕಬೀರರ ಕೀರ್ತನೆಗಳು ದೋಹಾ (2 ಸಾಲಿನ ಪದ್ಯಗಳು)ದಲ್ಲಿ ರಚಿತವಾಗಿವೆ.
- ❖ ಕಬೀರರ ಕೀರ್ತನೆಗಳನ್ನು ಆದಿಗ್ರಂಥ, ಕಬೀರ್ ಗ್ರಂಥಾವಳಿ ಮತ್ತು ಬೀಜಕ್‌ನಲ್ಲಿ ಕಾಣಬಹುದು.
- ❖ ಕಬೀರನ ಎರಡು ಸಮಾಧಿಗಳು ಮಘರ್‌ನಲ್ಲಿವೆ (ಉತ್ತರ ಪ್ರದೇಶ)
- ❖ ಬಂಗಾಳದ ಅತ್ಯಂತ ಶ್ರೇಷ್ಠ ಸಂತ ಚೈತನ್ಯ (ಮೂಲ ಹೆಸರು - ವಿಶ್ವಂಬರ) ಶ್ರೀಕೃಷ್ಣನ ಅವತಾರಕ ಎಂದು ಇವರನ್ನು ಅಲ್ಲಿನ ಜನರು ಭಾವಿಸಿದ್ದರು.
- ❖ ಸೂರ್‌ದಾಸ್‌ರವರ ಕೃತಿಗಳು - ಸೂರ್‌ಸಾಗರ್ ಮತ್ತು ಸಾಹಿತ್ಯರತ್ನ.
- ❖ ತುಳಸಿದಾಸರ ಕೃತಿಗಳು - ರಾಮಚರಿತ ಮಾನಸ, ತುಳಸೀರಾಮಾಯಣ, ಗೀತಾವಳಿ, ಕವಿತಾವಳಿ, ವಿನಯ ಪತ್ರಿಕ.

- ಅಸ್ಸಾಂನ ಶ್ರೇಷ್ಠ ಧರ್ಮಸುಧಾರಕರು - ಶಂಕರದೇವ.
- ಮಹಾತ್ಮಗಾಂಧೀಜಿಯವರ ಅತ್ಯಂತ ಪ್ರಿಯವಾದ "ವೈಷ್ಣವ ಜನತೋ" ಹಾಡಿನ ಕರ್ತೃ-ಗುಜರಾತಿನ ಶ್ರೇಷ್ಠ ಸಂತ ನರಸೀ ಮೆಹತಾ (ನರಸಿಂಹ)
- ಮೀರಾಬಾಯಿಯ ಭಜನೆ ಕೇಳಿ ಪ್ರಭಾವಿತರಾದವರು - ಅಕ್ಬರ್ ಮತ್ತು ತೇನಸಿನ್
- ಮೀರಬಾಯಿಯ ಕವನ ಸಂಗ್ರಹಗಳನ್ನು "ಪದಾವಳಿ" ಗ್ರಂಥದಲ್ಲಿ ಕಾಣಬಹುದು.
- ಮೀರಾಬಾಯಿ - ಭೋಜ್‌ಪುರಿ ಭಾಷೆಯಲ್ಲಿ ಕೃಷ್ಣನ ಕುರಿತು ಭಜನೆ ಹಾಡುತ್ತಿದ್ದಳು.
- ಜ್ಞಾನದೇವರ ಕೃತಿಗಳು - ಅಮೃತಾನುಭವ, ಜಂಗದೇವ ಪ್ರಶಸ್ತಿ.
- ಕತ್ತೆಯ ಬಾಯಿಗೆ ಪವಿತ್ರ ಗೋದಾವರಿ ನೀರು ಕುಡಿಸಿ ಅದನ್ನು ಬದುಕಿಸಿದ ಭಕ್ತಿ ಸಂತ - ಏಕನಾಥ.
- ಕ್ಷಾಮ ಕಾಲದಲ್ಲಿ ತನ್ನಲ್ಲಿದ್ದ ಸಮಸ್ತ ಸಂಪತ್ತನ್ನು ದಾನಮಾಡಿ, ದಿವಾಳಿಯಾಗಿ, ಪತ್ನಿ ಮತ್ತು ಕುಟುಂಬದವರಿಂದ ನಿಂದನೆಗೆ ಒಳಗಾದ ಭಕ್ತಿ ಸಂತ-ತುಕಾರಾಮ್.
- ದರ್ಜಿ ಕುಟುಂಬದಲ್ಲಿ ಜನಿಸಿ ಆರಂಭದಲ್ಲಿ ದರೋಡೆಕೋರನಾಗಿದ್ದು, ನಂತರ ಸಂತನಾಗಿ ಹಲವಾರು ಮುಸ್ಲಿಂ ಶಿಷ್ಯರನ್ನು ಹೊಂದಿದ್ದ ಭಕ್ತಿ ಸುಧಾರಕ ನಾಮದೇವ.
- ರಾಮದಾಸರ ಪ್ರಸಿದ್ಧ ಕೃತಿ - ದಾಸಬೋದೆ
- ಮಹಾರಾಷ್ಟ್ರದ ಭಕ್ತಿ ಸಂತರ ಕೀರ್ತನೆಗಳನ್ನು ಅಭಂಗಗಳೆಂದು ಕರೆಯಲಾಗುತ್ತದೆ.

## ಸಿಖ್‌ಧರ್ಮ

- ಗರುನಾನಕ್ : ಸಿಖ್ ಮತ ಸ್ಥಾಪಕರು.
  -ಕ್ರಿ.ಶ. 1469ರಲ್ಲಿ ಇಂದಿನ ಪಾಕಿಸ್ತಾನದ ಲಾಹೋರ್ ಬಳಿ ಇರುವ ತಲವಂಡಿ (ನಂಕಾನ ಸಾಹಿಬ್)ಯಲ್ಲಿ ಜನಿಸಿದರು.
  -ಇವರ ಬೋಧನೆಗಳನ್ನು 'ಆದಿಗ್ರಂಥದಲ್ಲಿ ಸಂಗ್ರಹಿಸಲಾಗಿದೆ'

**ಗುರುನಾನಕರ ನಂತರದ ಉತ್ತರಾಧಿಕಾರಿಗಳು (9 ಮಂದಿ ಸಿಖ್ ಗುರುಗಳು)**

- **ಗುರು ಅಂಗದ -** ಸಿಖ್ಖರ 2ನೇ ಗುರು.
  (1538-1552) - ಸಿಖ್ಖರ ಪವಿತ್ರ ಲಿಪಿಯಾದ ಗುರುಮುಖಿ ಲಿಪಿಯನ್ನು ಸಂಸ್ಕೃತಕ್ಕೆ ಬದಲಾಗಿ ಬಳಕೆಗೆ ತಂದರು.
- **ಗುರು ಅಮರದಾಸ -** ಮೂರನೇ ಗುರು, ಅಕ್ಬರನ ಸಮಕಾಲೀನ.
  (ಕ್ರಿ.ಶ. 1552-1574) - ಸತಿಪದ್ಧತಿಯನ್ನು ಅಕ್ಬರನಿಗೆ ಮೊದಲೇ ವಿರೋಧಿಸಿದವರು.
- **ಗುರು ರಾಮದಾಸ್ -** ನಾಲ್ಕನೇ ಗುರು, ಅಮರದಾಸನ ಅಳಿಯ.
  (ಕ್ರಿ.ಶ. 1575-1581) - ಇವರಿಂದ ಸಿಖ್‌ಗುರು ಪಂಥ ವಂಶಪಾರಂಪರ್ಯವಾಯಿತು.
  -ಹರ್ ಮಂದಿರ್ ಸಾಹಿಬ್ ಅಥವಾ ಅಮೃತಸರ ಸ್ವರ್ಣಮಂದಿರ ನಿರ್ಮಾಣ ಕಾರ್ಯ ಆರಂಭಿಸಿದರು.
- **ಗುರು ಅರ್ಜುನ್‌ದೇವ್ -** ಐದನೇಗುರು. ಸ್ವರ್ಣ ಮಂದಿರ ನಿರ್ಮಾಣ ಕಾರ್ಯ - ಪೂರ್ಣಗೊಳಿಸಿದರು.
  (ಕ್ರಿ.ಶ. 1581-1606) - ಸಿಖ್ಖರ ಪವಿತ್ರಗ್ರಂಥ 'ಆದಿಗ್ರಂಥ' ಕ್ರೋಢೀಕರಿಸಿದರು.
  -ಕ್ರಿ.ಶ. 1606ರಲ್ಲಿ ಮೊಗಲ್ ಚಕ್ರವರ್ತಿ ಜಹಾಂಗೀರ್ ಇವರನ್ನು ಸೆರೆಹಿಡಿಸಿ ಕೊಲ್ಲಿಸಿದ.
- **ಗುರು ಹರಗೋವಿಂದ -** ಸಿಖ್ಖರ 6ನೇ ಗುರು.

(ಕ್ರಿ.ಶ. 1606-1645) - ಮುಸ್ಲೀಂರ ವಿರುದ್ಧ ವೈರತ್ವವನ್ನು ಮೊದಲ ಬಾರಿಗೆ ಪ್ರಾರಂಭಿಸಿದರು.

-ಪೇಟಕ್ಕೆ ಬದಲು ಕಿರೀಟ ಧರಿಸಿದರು.

- ಅಖಾಲ್ ತಕ್ತ್ ನಿರ್ಮಿಸಿದರು.

-ಸೈನ್ಯ ಸಂಘಟಿಸಿ, ಯೋಧನಂತೆ ವೇಷಭೂಷಣ ಧರಿಸಿ, ಶಸ್ತ್ರಾಸ್ತ್ರಗಳನ್ನು ಜೊತೆಯಲ್ಲಿ ಇಟ್ಟುಕೊಂಡರು.

-ಶಾಂತಿಪ್ರಿಯರಾದ ಸಿಕ್ಖರು ಇವರ ಕಾಲದಿಂದ-ಯುದ್ಧೋತ್ಸಾಹಿಗಳಾದರು.

❖ **ಗುರು ಹರರಾಯ್** (ಕ್ರಿ.ಶ. 1645-1661)

❖ **ಗುರು ಹರಕಿಶನ್** (ಕ್ರಿ.ಶ. 1661-1664) - ಆನಂದಪುರ ಸಾಹಿಬ್ ಸ್ಥಾಪನೆ.

❖ **ಗುರು ತೇಜ್‌ಬಹದ್ದೂರ್** (ಕ್ರಿ.ಶ. 1664-1675)

-ಸಿಖ್ಖರ ಒಂಬತ್ತನೇ ಗುರು

-ಔರಂಗಜೇಬನಿಂದ ಹತ್ಯೆ (ಕ್ರಿ.ಶ. 1675)

-ಇವರು ಕೊಲೆಯಾದ ಸ್ಥಳದಲ್ಲಿ 'ಶಿಶ್‌ಗಜ್' ಎಂಬ ಗುರುದ್ವಾರವಿದೆ.

❖ **ಗುರು ಗೋವಿಂದ ಸಿಂಗ್** (ಕ್ರಿ.ಶ. 1675-1708)

-ಸಿಖ್ಖರ ಹತ್ತನೇ ಮತ್ತು ಕೊನೆಯ ಗುರು.

-'ಖಾಲ್ಸ' ಸೈನ್ಯಪಡೆ ರಚಿಸಿ ಮೊಗಲರ ವಿರುದ್ಧ ಹೋರಾಡಿದರು ಹಾಗೂ ತನ್ನ ಅನುಯಾಯಿಗಳಿಗೆ ತಮ್ಮ ಹೆಸರಿನ ಜೊತೆಗೆ ಸಿಂಗ್ (ಸಿಂಹ) ಎಂದು ಸೇರಿಕೊಳ್ಳುವಂತೆ ಕರೆ ನೀಡಿದರು.

## ಆಧುನಿಕ ಭಾರತದ ಇತಿಹಾಸ

**ಯೂರೋಪಿಯನ್ನರ ಆಗಮನ**

**ಉದ್ದೇಶ :** ವ್ಯಾಪಾರ ಮತ್ತು ಕ್ರೈಸ್ತ ಮತ ಪ್ರಚಾರ

**ಕಾಲಾನುಕ್ರಮಣಿಕೆ -**

1. ಪೋರ್ಚುಗೀಸರು - ಕ್ರಿ.ಶ. 1498
2. ಡಚ್ಚರು (ನೆದರ್‌ಲ್ಯಾಂಡ್ / ಹಾಲೆಂಡ್) - ಕ್ರಿ.ಶ. 1602
3. ಬ್ರಿಟೀಷರು - ಕ್ರಿ.ಶ. 1600 ಡಿ. 31
4. ಡೇನಿಶಿಯನ್ನರು (ಡೆನ್ಮಾರ್ಕ್) - ಕ್ರಿ.ಶ. 1616
5. ಫ್ರೆಂಚರು (ಫ್ರಾನ್ಸ್) - ಕ್ರಿ.ಶ. 1664
6. ಸ್ವೀಡಿಶಿಯನ್ನರು (ಸ್ವೀಡನ್) - ಕ್ರಿ.ಶ. 1731

**ಪೋರ್ಚುಗೀಸರು :**

❖ ಜಲಮಾರ್ಗಗಳ ಸಂಶೋಧನೆಗೆ ಪ್ರೋತ್ಸಾಹ ನೀಡಿದ ಪ್ರಥಮ ಪೋರ್ಚುಗಲ್ ರಾಜ-ರಾಜಕುಮಾರ ಹೆನ್ರಿ, ದಿ ನ್ಯಾವಿಗೇಟರ್. (ಕ್ರಿ.ಶ. 1393-1460)

❖ ಭಾರತಕ್ಕೆ ಜಲಮಾರ್ಗ ಕಂಡುಹಿಡಿಯಲು ಪ್ರಯತ್ನಿಸಿದ ಮೊದಲಿಗ ಭಾರ್ತೋಲೋಮಿಯಾ ಡಯಾಜ್

❖ ಕೇಪ್ ಆಫ್ ಗುಡ್‌ಹೋಪ್ ಕಂಡುಹಿಡಿದವನು ಡಯಾಜ್ - ಕ್ರಿ.ಶ. 1487. (ಇವನು ಕೇಪ್ ಆಫ್ ಸ್ಟಾರ್ಮ್ಸ್ ಎಂದು ನಾಮಕರಣ ಮಾಡಿದ)

❖ ಕೇಪ್ ಆಫ್ ಗುಡ್‌ಹೋಪ್ ಎಂದು ನಾಮಕರಣ ಮಾಡಿದವನು ಪೋರ್ಚುಗಲ್ ರಾಜ 2ನೇ ಜಾನ್.

❖ ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿದವನು - ವಾಸ್ಕೋಡಿಗಾಮ - 1498 ಮೇ 17 / 20.

- ವಾಸ್ಕೋಡಿಗಾಮ ಬಂದು ಇಳಿದ ಸ್ಥಲ ಕಲ್ಲಿಕೋಟೆಯ ಕುಪಡ್.
- ವಾಸ್ಕೋಡಿಗಾಮನನ್ನು ಸ್ವಾಗತಿಸಿದ ಕಲ್ಲಿಕೋಟೆಯ ದೊರೆ ಜಾಮೋರಿನ್ (ಮಾನವಿಕ್ರಮ)

**ಪೋರ್ಚುಗೀಸರ ವಸಾಹತು ನೆಲೆಗಳು :**

- ಡಿಯು-ಗುಜರಾತ್
- ಡಾಮನ್ - ಗುಜರಾತ್
- ಚಾವುಲ್ - ಮಹಾರಾಷ್ಟ್ರ
- ಬೆಸ್ಸಿನ್ - ಮಹಾರಾಷ್ಟ್ರ
- ಸಾಲ್ಸೆಟ್ - ಮಹಾರಾಷ್ಟ್ರ
- ಮುಂಬಯಿ - ಮಹಾರಾಷ್ಟ್ರ
- ಗೋವಾ - ರಾಜಧಾನಿ
- ಕಣ್ಣಾನೂರು - ಕೇರಳ
- ಕಲ್ಲಿಕೋಟೆ - ಕೇರಳ
- ಕೊಚ್ಚಿನ್ - ಕೇರಳ
- ಸ್ಯಾನ್ ಥೋಂ - ತಮಿಳುನಾಡು (ಪೂರ್ವ ಕರಾವಳಿ ತೀರದ ಏಕೈಕ ವಸಾಹತು ಕೇಂದ್ರ)
- ಹೂಗ್ಲಿ - ಪಶ್ಚಿಮ ಬಂಗಾಳ
- ದಾದ್ರ, ನಗರ ಹವೇಲಿ
- ಕ್ವಿಲಾನ್
- ಕ್ರಾಂಗನೂರ್
- ಸಿಲೋನ್
- ಓರ್ಮುಜ್
- ಮಲಕ್ಕ ಇತ್ಯಾದಿ

**ಪೋರ್ಚುಗೀಸ್ ಗೌರ್‍ನರುಗಳು**

- ಫ್ರಾನ್ಸಿಸ್ಕೋ - ಡಿ - ಅಲ್ಮೀಡ - 1503/05-1509
- ಪೋರ್ಚುಗೀಸರ ಪ್ರಥಮ ವೈಸ್ರಾಯ್
- ಇವನ ನೀತಿಯನ್ನು ಬ್ಲೂ ವಾಟರ್ ಪಾಲಿಸಿ (ಸಾಗರ ನೀತಿ) ಎನ್ನುವರು.

**ಅಲ್ಪೇನ್ಸೊ ಡಿಅಲ್ಬುಕರ್ಕ (ಕ್ರಿ.ಶ. 1509-1529)**

- ಪೋರ್ಚುಗೀಸ್ ವಸಾಹತು ಸಾಮ್ರಾಜ್ಯದ ಸ್ಥಾಪಕ.
- ಕ್ರಿ.ಶ. 1510ರಲ್ಲಿ ಗೋವಾವವನ್ನು ಬಿಜಾಪುರ ಸುಲ್ತಾನ ಯೂಸುಫ್ ಆದಿಲ್ ಷಾನಿಂದ ವಶಪಡಿಸಿಕೊಂಡ.
- ಅಲ್ಬುಕರ್ಕ ಗೋವಾವನ್ನು ವಶಪಡಿಸಿಕೊಳ್ಳಲು ಬೆಂಬಲ ನೀಡಿದ ವಿಜಯನಗರದ ಅರಸ -ಕೃಷ್ಣದೇವರಾಯ.
- ಭಾರತೀಯ ಸ್ತ್ರೀಯರನ್ನು ವಿವಾಹವಾಗಲು ಪೋರ್ಚುಗೀಸರಿಗೆ ಪ್ರೋತ್ಸಾಹ ನೀಡಿದ.
- ಮಲಕ್ಕ, ಓರ್ಮುಜ್, ಏಡನ್‌ಗಳಲ್ಲಿ ವಸಾಹತು ನೆಲೆ ಸ್ಥಾಪಿಸಿದ.
- 1515 ಡಿಸೆಂಬರಲ್ಲಿ ನಿಧನ.

**ಪೋರ್ಚುಗೀಸ್ ಬರಹಗಾರರು :**

- ಡ್ಯುರೆಟ್ ಬಾರ್ಬೋಸಾ
- ಡೊಮಿಂಗೊ ಪಯಸ್
- ಗಾಸ್ಪರ್ ಕೊರ್ರಿಯಾ
- ಡಿಯಾಗೊ ಡೊ ಕೊಟೊ
- ಬ್ರೊಸ್ ಡಿ ಅಲ್ಬುಕರ್ಕ್
- ಡೊಮ್ ಜೊಹೊ ಕ್ಯಾಸ್ಟ್ರೋ
- ಗಾರ್ಸಿಯ ಡ ಓರ್ಟ

**ಪೋರ್ಚುಗೀಸರಿಂದ ಭಾರತದಲ್ಲಿ - ಪರಿಚಯಿಸಲ್ಪಟ್ಟವುಗಳು**

- ಆಲೂಗಡ್ಡೆ, ಟೊಮೊಟೊ, ಅನಾನಸ್, ಪರಂಗಿಹಣ್ಣು, ಗೇರುಬೀಜ (ಗೋಡಂಬಿ), ಮೆಣಸಿನಕಾಯಿ, ನೆಲಗಡಲೆ, ಮೆಕ್ಕೆಜೋಳ, ಈರುಳ್ಳಿ, ತಂಬಾಕು
- ಸುಧಾರಿತ ಕೃಷಿ ವಿಧಾನ
- ಪಶು ಸಂಗೋಪನ ವಿಧಾನ
- ಪ್ರಥಮ ಮುದ್ರಣಾಲಯ ಕ್ರಿ.ಶ. 1556 ಗೋವಾದಲ್ಲಿ ಸ್ಥಾಪನೆ.
- ಭಾರತೀಯ ಗಿಡಮೂಲಿಕೆಗಳ ಬಗ್ಗೆ ಸಂಶೋಧನೆ
- ಪಾಶ್ಚಿಮಾತ್ಯ ವಾಸ್ತು ಶೈಲಿ.

**ಮುಖ್ಯಾಂಶಗಳು :**

- ಭಾರತೀಯ ಭಾಷೆಗಳು ಮತ್ತು ಮೊಗಲರ ಚಿತ್ರಕಲೆಯ ಮೇಲೆ ಇವರ ಪ್ರಭಾವ ಕಾಣಬಹುದು.
- ಕ್ರೈಸ್ತ ಮತ ಪ್ರಚಾರಕ್ಕಾಗಿ ಪೋರ್ಚುಗೀಸ್ ಪಾದ್ರಿಗಳು ಮೊದಲು ಬಂದು ಕಾಲಿಟ್ಟಿದ್ದು - 1500ರಲ್ಲಿ - ಅಂಜದೀವ ದ್ವೀಪಗಳಲ್ಲಿ.
- ಪೋರ್ಚುಗೀಸ್ ಪಾದ್ರಿ ಲೂಯಿಸೆಲ್ವಡಾರ್ ವಿಜಯನಗರದ ಅರಸ ವೀರ ನರಸಿಂಹನ ಆಸ್ಥಾನಕ್ಕೆ ಭೇಟಿ ನೀಡಿ ಅವನಿಂದ ಚರ್ಚುಗಳ ನಿರ್ಮಾಣಕ್ಕೆ ಅನುಮತಿ ಪಡೆದನು.
- ಕ್ರೂರ ಮತಾಂದರಾದ ಪೋರ್ಚುಗೀಸ್ ಅಧಿಕಾರಿಗಳು ಕ್ರಿ.ಶ. 1540ರಲ್ಲಿ ಹಿಂದೂ ದೇವಾಲಯಗಳ ನಾಶದ ಆಜ್ಞೆ ಹೊರಡಿಸಿದರು.
- ಕ್ರಿ.ಶ. 1567 ರಲ್ಲಿ ದಯಾಪುರಂನಲ್ಲಿ ನಡೆದ ಪೋರ್ಚುಗೀಸರ ಧಾರ್ಮಿಕ ಸಮ್ಮೇಳನದಲ್ಲಿ - ಬಲಾತ್ಕಾರದ ಮತಾಂತರ ಸರಿಯಲ್ಲವೆಂದು ತೀರ್ಮಾನಿಸಲಾಯಿತು.
- ಭಾರತಕ್ಕೆ ಬಂದು ಇಲ್ಲಿಯೇ ಮೃತರಾದ ಸಂತ ಜೇವಿಯರ್‌ರವರ ಮೃತ ಶರೀರವನ್ನು ಇಂದಿಗೂ ಗೋವಾದ ಚರ್ಚಿನಲ್ಲಿ ಸಂರಕ್ಷಿಸಿಡಲಾಗಿದೆ.
- ಪೋರ್ಚುಗೀಸರನ್ನು ಎದುರಿಸಿದ ಕನ್ನಡನಾಡಿನ ರಾಣಿ - ಉಲ್ಲಾಳದ ಅಬ್ಬಕ್ಕ.
- ರಾಷ್ಟ್ರಕೂಟರ ಕಲಾಕೇಂದ್ರ ಎಲಿಫೆಂಟಾಕ್ಕೆ ಹೆಸರು ನೀಡಿದವರು ಪೋರ್ಚುಗೀಸರು. ಎಲಿಫೆಂಟಾದ ಮೂಲ ಹೆಸರು ಗೊರವಪುರಿ.
- ಪೋರ್ಚುಗೀಸರಿಂದ ಗೋವಾ ವಿಮೋಚನೆಯಾದ ವರ್ಷ 1961.

**ಡಚ್ಚರು :**

- ಕ್ರಿ.ಶ. 1595-ಭಾರತಕ್ಕೆ ಆಗಮಿಸಿದ ಪ್ರಥಮ ಡಚ್ ವರ್ತಕ ಕಾರ್ನೇಲಿಯಸ್ - ಡಿ-ಹೌಟ್ಮನ್.
- 1602 - ಡಚ್ - ಈಸ್ಟ್ ಇಂಡಿಯಾ ಕಂಪೆನಿ ಸ್ಥಾಪನೆ.

**ಡಚ್ಚರ ಪ್ರಮುಖ ವಸಾಹತು ಕೇಂದ್ರಗಳು**

- ಮಚಲಿ ಪಟ್ಟಣ - 1605 (ಆಂಧ್ರಪ್ರದೇಶ)
- ಪುಲಿಕಾಟ್ - 1606/1610 (ತಮಿಳುನಾಡು-ಆಂಧ್ರಪ್ರದೇಶ)

- ಸೂರತ್ - 1616 (ಮಹಾರಾಷ್ಟ್ರ)
- ಹರಿಹರಪುರ, ಬಾಲಸೂರ್ - 1633 (ಒರಿಸ್ಸಾ)
- ಬೀಮ್ಲಿ ಪಟ್ಟಣ - 1641
- ಕಾರೈಕಲ್ - 1645 (ತಮಿಳುನಾಡು)
- ಕಿನ್ಸೂರ್ - 1653 (ಪಶ್ಚಿಮ ಬಂಗಾಳ)
- ನಾಗಪಟ್ಟಣ - 1658 (ಡಚ್ಚರ ರಾಜಧಾನಿ ತಮಿಳುನಾಡಿನಲ್ಲಿದೆ)

**ಬ್ರಿಟಿಷರು :**

- ಕ್ರಿ.ಶ. 1600 ಡಿ. 31-ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಸ್ಥಾಪನೆ.
- ಇಂಗ್ಲೆಂಡಿನ ಒಂದನೇ ಎಲಿಜಬೆತ್ ರಾಣಿಯ ರಾಜಸನ್ನದ್ದಿನೊಂದಿಗೆ ಕೇವಲ 15 ವರ್ಷಗಳ ಅವಧಿಗೆ ಈ ಕಂಪೆನಿ ವ್ಯಾಪಾರ ಚಟುವಟಿಕೆಗಳನ್ನು ಆರಂಭಿಸಲು ಅನುಮತಿ ಪಡೆಯಿತು.
- ಕ್ರಿ.ಶ. 1609ರಲ್ಲಿ ಇಂಗ್ಲೆಂಡಿನ ದೊರೆ 1ನೇ ಜೇಮ್ಸ್‌ನ ರಾಜಸನ್ನದ್ದಿನೊಂದಿಗೆ ಅನಿರ್ದಿಷ್ಟಕಾಲದವರೆಗೆ ವ್ಯಾಪಾರ ನಡೆಸಲು ಕಂಪನಿಯು ಅನುಮತಿ ಪಡೆಯಿತು.
- ಕ್ರಿ.ಶ. 1608 ಕ್ಯಾಪ್ಟನ್ ವಿಲಿಯಂಹಾಕಿನ್ಸ್‌ನ ನೇತೃತ್ವದ ಬ್ರಿಟಿಷ್ ತಂಡ ಜಹಂಗೀರನ ಆಸ್ಥಾನಕ್ಕೆ ಭೇಟಿ, ಕ್ರಿ.ಶ. 1613ರಲ್ಲಿ ಸೂರತ್‌ನಲ್ಲಿ ವ್ಯಾಪಾರ ಕೋಠಿ ಸ್ಥಾಪನೆಗೆ ಜಹಂಗೀರನಿಂದ ಅನುಮತಿ.
- ಕ್ರಿ.ಶ. 1639-ಫ್ರಾನಿಸ್‌ಡೆ ಬ್ರಿಟಿಷ್ ಅಧಿಕಾರಿಯು ಚಂದ್ರಗಿರಿ ಅರಸನಿಂದ ಖರೀದಿಸಿದ ನಿವೇಶನದ ಮೇಲೆ ಸೇಂಟ್ ಜಾರ್ಜ್‌ಫೋರ್ಟ್ ನಿರ್ಮಿಸಲಾಯಿತು. ಇದೇ ಮುಂದೆ ಮದ್ರಾಸ್ ಆಗಿ ಬೆಳೆಯಿತು.
- ಕ್ರಿ.ಶ. 1661/62- ಇಂಗ್ಲೆಂಡಿನ ರಾಜಕುಮಾರ 2ನೇ ಚಾರ್ಲ್ಸ್ ಪೋರ್ಚುಗಲ್ ರಾಜಕುಮಾರಿ ಕ್ಯಾಥರಿನ್‌ಳನ್ನು ವಿವಾಹವಾದ್ದರಿಂದ ಮುಂಬೈಯನ್ನು ಪೋರ್ಚುಗೀಸರಿಂದ ಬಳುವಳಿಯಾಗಿ ಪಡೆದು, ಅದನ್ನು ಕ್ರಿ.ಶ. 1668ರಲ್ಲಿ ವಾರ್ಷಿಕ ಕೇವಲ 10 ಪೌಂಡ್‌ಗಳ ಬಾಡಿಗೆಗೆ ಕಂಪನಿಗೆ ನೀಡಿದನು.
- ಕ್ರಿ.ಶ. 1690 ರಿಂದ 98ರ ನಡುವೆ ಕಲಿಕಾಟ, ಗೋವಿಂದಪುರ ಮತ್ತು ಸುತನತಿ ಎಂಬ ಹಳ್ಳಿಗಳನ್ನು ಪಡೆದು ಫೋರ್ಟ್‌ವಿಲಿಯಂ ಕೋಟೆಯನ್ನು ನಿರ್ಮಿಸಲಾಯಿತು. ಇದು ಕಲ್ಕತ್ತಾ ನಗರವಾಗಿ ಅಸ್ತಿತ್ವಕ್ಕೆ ಬಂದಿತು.
- ಕಲ್ಕತ್ತಾ ನಗರದ ಸ್ಥಾಪಕ ಜಾಬ್‌ಕಾರ್ನಕ್

**ಬ್ರಿಟಿಷರ ಪ್ರಮುಖ ವಸಾಹತು ಕೇಂದ್ರಗಳು**

- ಸೂರತ್ - 1613 (ಮಹಾರಾಷ್ಟ್ರ)
- ಆಗ್ರಾ - 1615-1617 (ಉತ್ತರ ಪ್ರದೇಶ)
- ಅಹಮದಾಬಾದ್ - 1615-1617 (ಗುಜರಾತ್)
- ಬ್ರೋಚ್ - 1615-1617 (ಗುಜರಾತ್)
- ಆಮಗಾಂವ್ - 1626
- ಮದ್ರಾಸ್ - 1639 (ಸೇಂಟ್ ಜಾರ್ಜ್‌ಫೋರ್ಟ್)
- ಮುಂಬೈ - 1661-1662 (2ನೇ ಚಾರ್ಲ್ಸ್)
- ಕಲ್ಕತ್ತ - 1698 (ಫೋರ್ಟ್ ವಿಲಿಯಂ)
- ಹೂಗ್ಲಿ - ಪಶ್ಚಿಮ ಬಂಗಾಳ
- ಖಾಸಿಂ ಬಜಾರ್ - ಪಶ್ಚಿಮ ಬಂಗಾಳ

### ಫ್ರೆಂಚರು

- ❖ ಫ್ರಾನ್ಸಿನ 14ನೇ ಲೂಯಿಯ ಅರ್ಥಮಂತ್ರಿ ಕೊಲ್ಬರ್ಟ್‌ನಿಂದ ಕ್ರಿ.ಶ. 1664ರಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪೆನಿ ಸ್ಥಾಪನೆ.
- ❖ ಮೊಗಲ್ ಚಕ್ರವರ್ತಿ ಔರಂಗಜೇಬನಿಂದ ಅನುಮತಿ ಪಡೆದ ಫ್ರೆಂಚರು ವ್ಯಾಪಾರ ಆರಂಭಿಸಿದರು.

### ಫ್ರೆಂಚರ ವಸಾಹತು ಕೇಂದ್ರಗಳು

- ❖ ಸೂರತ್ - 1668 (ಗುಜರಾತ್)
- ❖ ಮಚಲಿಪಟ್ಟಣ - 1669 (ಆಂಧ್ರಪ್ರದೇಶ)
- ❖ ಚಂದ್ರನಾಗೂರ್ - 1673 (ಪಶ್ಚಿಮಬಂಗಾಳ)
- ❖ ಪಾಂಡಿಚೇರಿ - 1674 ರಾಜಧಾನಿ (ತಮಿಳುನಾಡು)
- ❖ ಮಾಹೆ - 1725 (ಕೇರಳ)
- ❖ ಕಾರೈಕಲ್ - 1739 (ತಮಿಳುನಾಡು)
- ❖ ಬಲ್ಸೋರ್
- ❖ ಖಾಸಿಂ ಬಜಾರ್ ಇತ್ಯಾದಿ

## ಕರ್ನಾಟಿಕ್ ಯುದ್ಧಗಳು

- ❖ ಫ್ರೆಂಚರು ಮತ್ತು ಬ್ರಿಟಿಷರ ನಡುವೆ ದಕ್ಷಿಣ ಭಾರತದ ಸಾರ್ವಭೌಮತ್ವಕ್ಕಾಗಿ ನಡೆದ ಯುದ್ಧಗಳು ಇವಾಗಿವೆ.
- ❖ ಕೋರಮಂಡಲದ ಹಿನ್ನಾಡಿನ ಪ್ರದೇಶವೇ ಕರ್ನಾಟಿಕ್ (Carnatic) ಇದರ ರಾಜಧಾನಿ ಆರ್ಕಾಟ್

### ಪ್ರಥಮ ಕರ್ನಾಟಿಕ್ ಯುದ್ಧ (1746-48)

- ❖ ಕಾರಣ - ಯೂರೋಪಿನಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಡುವಣ ಆಸ್ಟ್ರೀಯಾದ ಉತ್ತರಾಧಿಕಾರತ್ವಕ್ಕಾಗಿ ನಡೆದ ಯುದ್ಧ. (1740-48) ಅದರ ಪ್ರತಿಧ್ವನಿಯೇ ಅಥವಾ ಉಪಾಂಗ ಈ ಯುದ್ಧ.

### ಪ್ರಮುಖ ಘಟನೆಗಳು :

- ❖ ಫ್ರೆಂಚ್ ಗವರ್ನರ್ ಡೂಪ್ಲೆ ಶಾಂತಿಯ ಪ್ರಯತ್ನ ವಿಫಲ.
- ❖ 1746-ಬರ್ನೆಟ್ ನೇತೃತ್ವದಲ್ಲಿ ಇಂಗ್ಲಿಷ್ ನೌಕಾಪಡೆ ಕೆಲವು ಫ್ರೆಂಚ್ ಹಡಗುಗಳನ್ನು ವಶಪಡಿಸಿಕೊಂಡು ಪಾಂಡಿಚೆರಿಗೆ ಬೆದರಿಕೆ
- ❖ ಡೂಪ್ಲೆ ನೆರವಿಗೆ ಮಾರಿಷಸ್ ಫ್ರೆಂಚ್ ಗವರ್ನರ್ ಲಾ ಬೋರ್ಡೋ ನಾಯಿಸ್ ಆಗಮನ
- ❖ 1746 ಸೆಪ್ಟೆಂಬರ್ - ಲಾ ಬೋರ್ಡೋ ನಾಯಿಸ್‌ನಿಂದ ಮದ್ರಾಸ್ ವಶ (ಇಂಗ್ಲಿಷ್ ಗೌರ್ನರ್ ಮೋರ್ಸ್ ಶರಣಾಗತಿ)
- ❖ ಇಂಗ್ಲಿಷ್ ನೌಕಾಧಿಕಾರಿ ಪೇಟಾನ್ (Peyton) ಹೂಗ್ಲಿಗೆ ಪಲಾಯನ
- ❖ ಇಂಗ್ಲಿಷರ ನೆರವಿಗೆ ಆರ್ಕಾಟ್‌ನವಾಬ ಅನ್ವರುದ್ದೀನ್ ಆಗಮನ
- ❖ ಅನ್ವರುದ್ದೀನ್ ಮತ್ತು ಫ್ರೆಂಚರ ನಡುವೆ ಸೇಂಟ್ ಥೋಮ್ (ಅಡ್ಯಾರ್ ಕಾಳಗ)
- ❖ ಅನ್ವರುದ್ದೀನನ ಸೋಲಿನೊಂದಿಗೆ ದೇಶೀಯ ಸೈನ್ಯ ಶಕ್ತಿಯ ದುರ್ಬಲತೆ ಜಗಜ್ಜಾಯಿರಾಯಿತು.

- ❖ 1748ರಲ್ಲಿ ಯೂರೋಪಿನಲ್ಲಿ ಆಸ್ಟ್ರೀಯಾದ ಉತ್ತರಾಧಿಕಾರತ್ವದ ಯುದ್ಧವು (Aix-la-Chapple) ಏಕ್ಸ್ -ಲಾ-ಚಾಪೆಲ್ ಒಪ್ಪಂದದ ಮೂಲಕ ಮುಕ್ತಾಯ ಇದರ ಅನ್ವಯ ಪ್ರಥಮ ಕರ್ನಾಟಿಕ್ ಯುದ್ಧವು ಮುಕ್ತಾಯವಾಯಿತು. ಫ್ರೆಂಚರು ಮದ್ರಾಸನ್ನು ಬಿಟ್ಟುಕೊಟ್ಟರು.
- ❖ ಸೇಂಟ್ ಥೋಮ್ ಕಾಳಗದ ಜಯವು ಯುರೋಪಿಯನ್ನರಿಗೆ ದೇಶದ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿ ಅಧಿಪತ್ಯ ಸ್ಥಾಪಿಸಲು ಉತ್ತೇಜನ ನೀಡಿತು.

### ಎರಡನೇ ಕರ್ನಾಟಿಕ್ ಯುದ್ಧ - (1749-54)

- ❖ ಕಾರಣಗಳು : 1748ರಲ್ಲಿ ಹೈದ್ರಾಬಾದ್ ಮತ್ತು ಆರ್ಕಾಟ್‌ಗಳಲ್ಲಿ ಉದ್ಭವಿಸಿದ ಉತ್ತರಾಧಿಕಾರತ್ವದ ಕಲಹ.

### ಪ್ರಮುಖ ಘಟನೆಗಳು

- ❖ ಹೈದ್ರಾಬಾದ್ ಸಂಸ್ಥಾನದ ಸ್ಥಾಪಕ ಅಸಫ್ ಜಾ / ನಿಜಾಂ-ಉಲ್-ಮುಲ್ಕ್ (1724-1748) ರಲ್ಲಿ ಮರಣ ಹೊಂದಿದ.
- ❖ ಹೈದ್ರಾಬಾದ್ ಸಿಂಹಾಸನಕ್ಕಾಗಿ ಅಸಫ್‌ಜಾನ ಮಗ ನಾಸಿರ್‌ಜಂಗ್ ಮತ್ತು ಮೊಮ್ಮಗ ಮುಜಾಫರ್ ಜಂಗ್ ನಡುವೆ ಕಲಹ ಏರ್ಪಟ್ಟಿತು.
- ❖ ನಾಸಿರ್‌ಜಂಗನಿಗೆ ಬ್ರಿಟಿಷರು ಬೆಂಬಲಿಸಿದರು ಹಾಗೆಯೇ ಮುಜಾಫರ್‌ಜಂಗ್‌ನನ್ನು ಅಧಿಕಾರಕ್ಕೆ ತರಲು ಫ್ರೆಂಚರು ಪ್ರಯತ್ನಿಸಿದರು - ಇದೇ ಇವರೀರ್ವರ ನಡುವಣ 2ನೇ ಕರ್ನಾಟಿಕ್ ಯುದ್ಧಕ್ಕೆ ಕಾರಣವಾಯಿತು.
- ❖ ಹಾಗೆಯೇ ಕರ್ನಾಟಿಕ್ / ಆರ್ಕಾಟ್‌ನಲ್ಲಿ ಮರಾಠರ ಬಂಧನದಿಂದ ಬಿಡುಗಡೆಯಾಗಿ ಬಂದ ಚಂದಾಸಾಹೇಬ ಮತ್ತು ಅನ್ವರುದ್ದೀನನ ನಡುವೆ ಸಿಂಹಾಸನಕ್ಕಾಗಿ ಕಲಹ ಆರಂಭವಾಯಿತು.
- ❖ ಚಂದಾಸಾಹೇಬನ ಪರವಾಗಿ ಫ್ರೆಂಚರು ಮತ್ತು ಅನ್ವರುದ್ದೀನನ ಪರವಾಗಿ ಬ್ರಿಟಿಷರು ನಿಂತರು. ಈ ಘಟನೆಯೂ ಸಹ ಯುದ್ಧಕ್ಕೆ ಕಾರಣವಾಯಿತು.
- ❖ 1749 ಆಗಸ್ಟ್ 3ರ ಅಂಬೂರು ಕಾಳಗದಲ್ಲಿ ಚಂದಾಸಾಹೇಬ, ಮುಜಾಫರ್‌ಜಂಗ್ ಮತ್ತು ಫ್ರೆಂಚರು ಒಂದುಗೂಡಿ ನವಾಬ ಅನ್ವರುದ್ದೀನನ್ನು ಕೊಂದು ಹಾಕಿದರು. ಅವನ ಮಗ ಮಹಮ್ಮದ್ ಅಲಿ ತಿರುಚಿನಾಪಳ್ಳಿಗೆ ಪಲಾಯನ ಮಾಡಿ, ಅಲ್ಲಿ ಆಶ್ರಯ ಪಡೆದ. ಚಂದಾಸಾಹೇಬನನ್ನು ಕರ್ನಾಟಿಕ್ ನವಾಬನನ್ನಾಗಿ ಫ್ರೆಂಚರು ಘೋಷಿಸಿದರು.
- ❖ 1750 ಡಿಸೆಂಬರ್ ಕಾಳಗದಲ್ಲಿ ನಾಸಿರ್‌ಜಂಗ್‌ನು ಸತ್ತ, ಆಗ ಡೂಪ್ಲೆ ತಮ್ಮ ಉಮೇದುವಾರ ಮುಜಾಫರ್‌ಜಂಗ್‌ನನ್ನು ಹೈದ್ರಾಬಾದ್ ನಿಜಾಮನನ್ನಾಗಿ ಮಾಡಿದ. ಹೀಗೆ ಪ್ರಾರಂಭದಲ್ಲಿ ಫ್ರೆಂಚರೇ ತಮ್ಮ ಅಭ್ಯರ್ಥಿಗಳನ್ನು ಅಧಿಕಾರಕ್ಕೆ ತರುವ ಮೂಲಕ ಜಯಶೀಲರಾದರು.
- ❖ ಸಣ್ಣ ಕಾದಾಟದಲ್ಲಿ ಮುಜಾಫರ್‌ಜಂಗ್‌ನ ಸಾವಿನಿಂದ ಅಧಿಕಾರಕ್ಕೆ ಬಂದ ಸಲಾಬತ್‌ಜಂಗ್‌ನು ಫ್ರೆಂಚರಿಗೆ ಎಲ್ಲೋರ, ಮುಸ್ತಾಫ್‌ನಗರ, ರಾಜಮಹೇಂದ್ರ, ಚಿಕಾಕೋಲ ಎಂಬ ನಾಲ್ಕು ಪೂರ್ವ ಕರಾವಳಿ ಜಿಲ್ಲೆಗಳನ್ನು (ಉತ್ತರ ಸರ್ಕಾರ್ ಜಿಲ್ಲೆಗಳು) ನೀಡಿದ.

### ನಂತರದ ಜಯ ಬ್ರಿಟಿಷರಿಗೆ

- ❖ 1750ರಲ್ಲಿ ಸಾಂಡರ್ಸ್ ಎಂಬ ಹೊಸ ಮದ್ರಾಸ್ ಗವರ್ನರ್ ಅಧಿಕಾರಕ್ಕೆ ಬಂದ.
- ❖ ತಿರುಚಿನಾಪಳ್ಳಿ ಕೋಟೆಯಲ್ಲಿ ಆಶ್ರಯ ಪಡೆದಿದ್ದ, ಮಹಮ್ಮದ್ ಆಲಿಯನ್ನು ಸೆರೆ ಹಿಡಿಯಲು ಫ್ರೆಂಚರ ಸಂಯುಕ್ತ ಪಡೆ ನಿರ್ಗಮನ.
- ❖ ಕಂಪನಿಯ ಸೇವೆಯಲ್ಲಿದ್ದ ರಾಬರ್ಟ್‌ಕ್ಲೈವ್ 1751 ಆಗಸ್ಟ್‌ನಲ್ಲಿ ಆರ್ಕಾಟ್‌ನ್ನು ಮುತ್ತಿ ವಶಪಡಿಸಿಕೊಂಡ.

- 1752ರಲ್ಲಿ ಫ್ರೆಂಚ್ ದಳಪತಿ ಜಾಕ್ವೀಸ್‌ಲಾ ಇಂಗ್ಲೀಷರಿಗೆ ಶರಣು.
- ತಂಜಾವೂರು ಸೇನಾಪತಿಯಿಂದ ಚಂದಾಸಾಹೇಬ ಕೊಲೆಯಾದ.
- ರಾಬರ್ಟ್‌ಕ್ಲೈವ್ ಮತ್ತು ಲಾರೆನ್ಸ್ ಮಹಮ್ಮದ್ ಅಲಿಯನ್ನು ಬಿಡುಗಡೆಗೊಳಿಸಿ ಆರ್ಕಾಟ್ ನವಾಬನನ್ನಾಗಿ ಘೋಷಿಸಿದರು.
- ಫ್ರಾನ್ಸ್ ಸರ್ಕಾರ ಡೂಪ್ಲೆಯನ್ನು ವಾಪಸ್ಸು ಕರೆಸಿಕೊಂಡಿತು. ಅವನ ಸ್ಥಾನದಲ್ಲಿ ಗೊಡೆಹ್ಯೂ ಫ್ರೆಂಚ್ ಗವರ್ನರ್ ಆಗಿ ಅಧಿಕಾರಕ್ಕೆ ಬಂದು ಬ್ರಿಟಿಷರೊಂದಿಗೆ 1754ರಲ್ಲಿ ಪಾಂಡಿಚೇರಿ ಒಪ್ಪಂದ ಮಾಡಿಕೊಂಡ. ಈ ಒಪ್ಪಂದದ ಪ್ರಕಾರ 2ನೇ ಕರ್ನಾಟಿಕ್ ಯುದ್ಧ ಬ್ರಿಟೀಷರ ವಿಜಯದೊಂದಿಗೆ ಮುಕ್ತಾಯವಾಯಿತು.

**ಮೂರನೇ ಕರ್ನಾಟಿಕ್ ಯುದ್ಧ - (1756-63)**

- ಕಾರಣ : ಯೂರೋಪಿನಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಡುವೆ ಉಂಟಾದ ಸಪ್ತ ವಾರ್ಷಿಕ ಯುದ್ಧ (1756-63)

**ಪ್ರಮುಖ ಘಟನೆಗಳು :**

- ಸಪ್ತವಾರ್ಷಿಕ ಯುದ್ಧದ ಹಿನ್ನೆಲೆಯಲ್ಲಿ ರಾಬರ್ಟ್ ಕ್ಲೈವ್ ಫ್ರೆಂಚರ ನೆಲೆ ಚಂದ್ರನಾಗೂರ್ (ಬಂಗಾಳ) ವಶಪಡಿಸಿಕೊಂಡ.
- ದಕ್ಷಿಣದಲ್ಲಿ ಫ್ರೆಂಚ್ ಸೇನಾಪತಿ ಕೌಂಟ್ ಡಿ ಲಾಲಿಯ ಇಂಗ್ಲಿಷರ ಪೋರ್ಟ್ ಸೇಂಟ್ ಡೇವಿಡ್ ಕೋಟೆ ವಶಪಡಿಸಿಕೊಂಡ.
- ಹೈದ್ರಾಬಾದಿನಲ್ಲಿದ್ದ ಫ್ರೆಂಚ್ ಸೇನಾಪತಿ ಬುಸ್ಸಿ ಪಾಂಡಿಚೇರಿಗೆ ಆಗಮನ.
- ರಾಬರ್ಟ್ ಕ್ಲೈವ್‌ನ ಆದೇಶದಂತೆ ಕಲ್ಕತ್ತಾದಿಂದ ಆಗಮಿಸಿದ ಕರ್ನಾಲ್ ಪೋರ್ಡ್‌ನು ಮಚಲಿಪಟ್ಟಣ ವಶಪಡಿಸಿಕೊಂಡ. ಹೈದ್ರಾಬಾದ್ ನವಾಬ ಸಲಾಬತ್‌ಜಂಗ್ ಫ್ರೆಂಚರನ್ನು ತೊರೆದು ಇಂಗ್ಲಿಷರ ಪಕ್ಷ ಸೇರಿ ಉತ್ತರ ಸರ್ಕಾರಗಳನ್ನು ಒಪ್ಪಿಸಿದ ಪರಿಣಾಮ ಫ್ರೆಂಚರಿಗೆ ಬಲವಾದ ಪೆಟ್ಟು ಬಿದ್ದಿತು.
- 1760 ಜನವರಿ 21/22 ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೇನಾಧಿಪತಿ ಸರ್ ಐರ್‌ಕೂಟ್‌ನಿಂದ ಫ್ರೆಂಚರು ನಿರ್ಣಾಯಕವಾಗಿ ಸೋತರು. ಬುಸ್ಸಿ ಸೆರೆಸಿಕ್ಕಿದ. ಲಾಲಿಯು ಪಾಂಡಿಚೇರಿಗೆ ಪಲಾಯನ ಮಾಡಿದ. ಇಂಗ್ಲಿಷರು ಪಾಂಡಿಚೇರಿಯನ್ನು 1761 ಜನವರಿಯಲ್ಲಿ ವಶಪಡಿಸಿಕೊಂಡರು. ಇದು ಫ್ರೆಂಚರ ಅಂತಿಮ ಪತನ.
- 1763ರಲ್ಲಿ ಪ್ಯಾರಿಸ್ ಒಪ್ಪಂದದ ಪ್ರಕಾರ ಸಪ್ತವಾರ್ಷಿಕ ಯುದ್ಧ ಯೂರೋಪಿನಲ್ಲಿ ಮುಕ್ತಾಯವಾಯಿತು. ಇದೇ ಒಪ್ಪಂದದ ಪ್ರಕಾರ - ಮೂರನೇ ಕರ್ನಾಟಿಕ್ ಯುದ್ಧವು ನಿಲುಗಡೆಯಾಯಿತು. ಷರತ್ತಿನ ಪ್ರಕಾರ ಪಾಂಡಿಚೇರಿಯನ್ನು ಫ್ರೆಂಚರಿಗೆ ಬಿಟ್ಟುಕೊಡಲಾಯಿತು.
- ಭಾರತದಲ್ಲಿ ವಸಾಹತು ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬ ಫ್ರೆಂಚರ ಕನಸು ಸಂಪೂರ್ಣವಾಗಿ ಭಗ್ನವಾಯಿತು.

**ಬಂಗಾಳದಲ್ಲಿ ಬ್ರಿಟಿಷ್ ಪ್ರಭುತ್ವದ ಸ್ಥಾಪನೆ**

- ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ (1707)ದ ನಂತರ ಬಂಗಾಳ ಸ್ವತಂತ್ರವಾಯಿತು.
- ಮುರ್ಶಿದಾ ಕುಲೀಖಾನ್ - ಬಂಗಾಳದಲ್ಲಿ ನವಾಬರ ವಂಶದ ಸ್ಥಾಪಕ (ರಾಜಧಾನಿ ಮುರ್ಶೀದಾಬಾದ್)

**ಬಂಗಾಳವನ್ನು ಆಳಿದ ನವಾಬರು**

- ಮುರ್ಶಿದಾ ಕುಲೀಖಾನ್ - 1700-1727
- ಪೂಜಾ ಉದ್ದೀನ್ ಖಾನ್ - ಕ್ರಿ.ಶ. 1727-39
- ಸರ್ಫರಾಜ್ ಖಾನ್ - 1739-40

- ❖ ಅಲಿವರ್ದಿನ್ ಖಾನ್ - 1714-1756
- ❖ ಸಿರಾಜ್ - ಉದ್ದೌಲ್ - 1756-1757
- ❖ ಮೀರ್ ಜಾಫರ್ - 1757-1760
- ❖ ಮೀರ್ ಖಾಸಿಂ - 1760-63
- ❖ ಮೀರ್ ಜಾಫರ್ - 1763-65

**ಸಿರಾಜ್ ಉದ್ ದೌಲ - (1756-57)**

- ❖ ಅಲಿವರ್ದಿ ಖಾನನ ಮೊಮ್ಮಗ
- ❖ ಸಿರಾಜುದೌಲ ಮತ್ತು ಬ್ರಿಟಿಷರ ನಡುವೆ ವೈಷಮ್ಯ ಉಂಟಾಯಿತು.

**ವೈಷಮ್ಯಕ್ಕೆ ಕಾರಣಗಳು :**

i. ತನ್ನ ಪ್ರತಿಸ್ಪರ್ಧಿ - ಶೌಕತ್ ಖಾನ್‌ನಿಗೆ ಬ್ರಿಟಿಷರು ಆಶ್ರಯ ನೀಡಿದ್ದು.
ii. ದಿವಾನ ರಾಜ ವಲ್ಲಭನ ಮಗ ಕೃಷ್ಣರಾಜನಿಗೆ ಬ್ರಿಟೀಷರು ಆಶ್ರಯ ನೀಡಿದ್ದು.
iii. ವಾಣಿಜ್ಯ ಸೌಲಭ್ಯವನ್ನು ದುರುಪಯೋಗಪಡಿಸಿಕೊಂಡಿದ್ದು.
iv. ನವಾಬನ ಅನುಮತಿಯಿಲ್ಲದೆ ಬ್ರಿಟಿಷರು ತಮ್ಮ ವಸಾಹತುಗಳ ಸುತ್ತ ಕೋಟೆಗಳನ್ನು ನಿರ್ಮಿಸಿದರು.

- ❖ ಸಿರಾಜುದ್ದೌಲನಿಂದ 1756 ಜೂನ್‌ನಲ್ಲಿ ಬ್ರಿಟಿಷರ (ಕಲ್ಕತ್ತ) ಪೋರ್ಟ್‌ವಿಲಿಯಂ, ಖಾಸಿಂ ಬಜಾರ್ ವಶ.
- ❖ ಕಲ್ಕತ್ತಾಗೆ ಅಲಿನಗರ್ ಎಂದು ನಾಮಕರಣ ಮಾಡಿ ಮಾಣಿಕ್‌ಚಂದ್‌ನನ್ನು ಅದರ ಮುಖ್ಯಸ್ಥನಾಗಿ ನೇಮಿಸಿದ.
- ❖ 1756 ಜೂನ್ 20 - ಕತ್ತಲೆ ಕೋಣೆಯ ದುರಂತದ ಘಟನೆ ಕಲ್ಕತ್ತದಲ್ಲಿ ನಡೆಯಿತು. (146 ಮಂದಿಯಲ್ಲಿ 123 ಮಂದಿ ಉಸಿರುಗಟ್ಟಿ ಸಾವನ್ನಪ್ಪಿದರು.)
- ❖ ರಾಬರ್ಟ್ ಕ್ಲೈವ್‌ನಿಂದ ಕಲ್ಕತ್ತ ಪುನಃ ವಶ - 1757 ಜನವರಿ 2.
- ❖ ರಾಬರ್ಟ್ ಕ್ಲೈವ್ ಮತ್ತು ಸೋತ ಸಿರಾಜುದೌಲನ ನಡುವೆ ಆಲಿನಗರ ಶಾಂತಿ ಒಪ್ಪಂದ 1757 ಫೆಬ್ರವರಿ 9 ರಂದು ನಡೆಯಿತು.

**ಸಿರಾಜುದೌಲನ ವಿರುದ್ಧ ನಡೆದ ಪಿತೂರಿ ಕೂಟದಲ್ಲಿನ ಸದಸ್ಯರು**

- ❖ ರಾಬರ್ಟ್‌ಕ್ಲೈವ್
- ❖ ಮೀರಜಾಫರ್ (ನವಾಬನ ದಂಡನಾಯಕ)
- ❖ ಅಮೀನ್‌ಚಂದ್ / ಓಮಿಚಂದ್-ದಲ್ಲಾಳಿ
- ❖ ರಾಯ ದುರ್ಲಬ್ - ಖಜಾನೆ ಅಧಿಕಾರಿ
- ❖ ಜಗತ್ ಸೇಠ್-ಬ್ಯಾಂಕರ್

**1757 ಜೂನ್ 23 - ಪ್ಲಾಸಿ ಕದನ**

- ❖ ಸಿರಾಜುದ್ದೌಲ ಮತ್ತು ಬ್ರಿಟಿಷರ ನಡುವೆ ನಡೆಯಿತು.
- ❖ **ಫಲಿತಾಂಶ :** ಬ್ರಿಟಿಷರು ಗೆಲುವು-ಸೋತ ಸಿರಾಜುದ್ದೌಲನನ್ನು ಮೀರ್‌ಜಾಫರ್ ಮಗ ಮಿರಾನ್ ಕೊಂದುಹಾಕಿದ. ಸಿರಾಜುದ್ದೌಲನ ಪರವಾಗಿ ಪ್ರಾಮಾಣಿಕವಾಗಿ ಹೋರಾಡಿದ ಸೇನಾಧಿಕಾರಿಗಳು, ಮೀರಮದನ್ ಮತ್ತು ಮೋಹನ್‌ಲಾಲ್.
- ❖ ಕ್ರಿ.ಶ. 1757-60 ಬಂಗಾಳದ ನವಾಬನಾಗಿ - ಮೀರ್ ಜಾಫರ್ ಅಧಿಕಾರಕ್ಕೆ ಬಂದನು.
- ❖ ಬಂಗಾಳದ ಬಂಗಾಳದ 24 ಪರಗಣ ಜಿಲ್ಲೆಯನ್ನು ಬ್ರಿಟಿಷರಿಗೆ ಮೀರ್ ಜಾಫರ್ ನೀಡಿದ.
- ❖ ತನ್ನನ್ನು ಅಧಿಕಾರಕ್ಕೆ ತಂದ ರಾಬರ್ಟ್ ಕ್ಲೈವ್‌ನಿಗೆ 2,33,000 ಪೌಂಡ್ ಬಹುಮಾನ ನೀಡಿದ.
- ❖ ರಾಬರ್ಟ್ ಕ್ಲೈವ್ ಬಂಗಾಳದ ಪ್ರಥಮ ಗೌರ್ನರ್‌ನಾಗಿ ಅಧಿಕಾರ ನಡೆಸಿದ. (ಕ್ರಿ.ಶ. 1758-60)

**ಮೀರ್ ಖಾಸಿಂ (ಕ್ರಿ.ಶ. 1760-63)**

- ಕ್ರಿ.ಶ. 1760ರಲ್ಲಿ ಮೀರ್‌ಜಾಫರ್ ಸ್ಥಾನದಲ್ಲಿ ಬಂಗಾಳದ ನವಾಬನನ್ನಾಗಿ ಅವನ ಅಳಿಯ ಮೀರ್‌ಖಾಸಿಂನನ್ನು ಬ್ರಿಟಿಷರು ಅಧಿಕಾರಕ್ಕೆ ತಂದರು. (ಗೌರ್ನರ್ ವ್ಯಾನ್ಸಿಟಾರ್ಟ್) ಅದಕ್ಕಾಗಿ ಮೀರ್‌ಖಾಸಿಂನು, ಬರ್ದ್ವಾನ್, ಮಿಡ್ನಾಪುರ, ಚಿತ್ತಗಾಂಗ್ ಜಿಲ್ಲೆಗಳನ್ನು ಬ್ರಿಟಿಷರಿಗೆ ನೀಡಿದನು.
- **ಬಕ್ಸಾರ್ ಯುದ್ಧ :** ಕ್ರಿ.ಶ. 1764 ಅಕ್ಟೋಬರ್ 22 ಮೀರ್ ಖಾಸಿಂ, ಔದ್ ನವಾಬ ಸಿರಾಜಾಉದ್ದೌಲ್ ಮತ್ತು ಮೊಗಲ್ ಚಕ್ರವರ್ತಿ 2ನೇ ಷಾ ಆಲಂ ನೇತೃತ್ವದಲ್ಲಿನ ಮೈತ್ರಿಕೂಟಕ್ಕೂ ಮತ್ತು ಬ್ರಿಟಿಷರ ನಡುವೆ ನಡೆಯಿತು.
- **ಫಲಿತಾಂಶ :** ಬ್ರಿಟಿಷ್ ದಳಪತಿ ಮೇಜರ್ ಹೆಕ್ಟರ್ ಮನ್ರೋ ಬ್ರಿಟಿಷರಿಗೆ ಜಯ ದೊರಕಿಸಿಕೊಟ್ಟರು. ಓಡಿಹೋದ ಮೀರ್‌ಖಾಸಿಂನನ್ನು ಬಂಧಿಸಲಾಯಿತು. ಮೊಗಲ್ ಚಕ್ರವರ್ತಿ ಬ್ರಿಟಿಷರ ಪಕ್ಷ ಸೇರಿದನು. ಹೀಗೆ ಪ್ಲಾಸಿ ಮತ್ತು ಬಕ್ಸಾರ್ ಕದನಗಳು ಬಂಗಾಳದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾದವು. ಅನಂತರ ಇಡೀ ಭಾರತದಾದ್ಯಂತ ತಮ್ಮ ಸಾಮ್ರಾಜ್ಯವನ್ನು ಬ್ರಿಟಿಷರು ವಿಸ್ತರಿಸಿದರು.
- ಕ್ರಿ.ಶ. 1765-ಅಲಹಾಬಾದ್ ಒಪ್ಪಂದದ ಮೂಲಕ ಮೊಗಲ್ ಚಕ್ರವರ್ತಿ 2ನೇ ಷಾ ಆಲಂನಿಂದ ಬಂಗಾಳ, ಬಿಹಾರ, ಒರಿಸ್ಸಾಗಳ ದಿವಾನಿ ಹಕ್ಕನ್ನು ರಾಬರ್ಟ್ ಕ್ಲೈವ್ ಪಡೆದು ಬ್ರಿಟಿಷ್ ಸಾಮ್ರಾಜ್ಯದ ಸ್ಥಾಪಕನಾಗಿ ಮಾರ್ಪಟ್ಟ.

## ಶಸ್ತ್ರಾಸ್ತ್ರ ಹೋರಾಟಗಳು

### ಕರ್ನಾಟಕ

### ಹೈದರಾಲಿ ಮತ್ತು ಟಿಪ್ಪು ಸುಲ್ತಾನ್‌ರ ಹೋರಾಟಗಳು :

### ಹೈದರಾಲಿ

- ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಮೊದಲಿಗ.
- 1721 ಕೋಲಾರದ ಬೂದಿಕೋಟೆಯಲ್ಲಿ ಜನನ.
- ತಂದೆ - ಪತೇಮಹಮ್ಮದ್, ತಾಯಿ - ಮಜೀದಾ ಬೇಗಂ
- ಸೋದರ - ಷಹಬಾಜ್
- ಮೈಸೂರಿನಲ್ಲಿ ಸೈನ್ಯದಲ್ಲಿ ಸೈನಿಕನಾಗಿ ಸೇವೆ.
- ಕ್ರಿ.ಶ. 1761 ರಿಂದ 1782 ಮೈಸೂರಿನಲ್ಲಿ ಸರ್ವಾಧಿಕಾರಿಯಾಗಿ ಅಧಿಕಾರಕ್ಕೆ ಬಂದ.
- 2ನೇ ಕೃಷ್ಣರಾಜ ಒಡೆಯರ್ - ಹೈದರಾಲಿಗೆ ಫತೇಹೈದರ್ ಬಹದ್ದೂರ್ / ನವಾಬ್ ಹೈದರ್ ಆಲಿ ಖಾನ್ ಎಂದು ಬಿರುದು ನೀಡಿದರು.
- ಕ್ರಿ.ಶ. 1763 ಕೆಳದಿಯ ರಾಣಿ ವೀರಮ್ಮಾಜಿ ಮತ್ತು ದತ್ತುಪುತ್ರ ಸೋಮಶೇಖರ ನಾಯಕನನ್ನು ಸೆರೆಹಿಡಿದು ಬಿದನೂರು ವಶಪಡಿಸಿಕೊಂಡು, ಅದಕ್ಕೆ ಹೈದರ್‌ನಗರ ಎಂದು ನಾಮಕರಣ ಮಾಡಿದ.
- ಕ್ರಿ.ಶ 1766 ಅಕ್ಟೋಬರ್ 1, ಚಿತ್ರದುರ್ಗದ ಒನಕೆ ಓಬವ್ವಳಿಂದ ಹೈದರಾಲಿಯ ಸೈನಿಕರು ಸಾವನ್ನಪ್ಪಿದರು.
- ಕ್ರಿ.ಶ. 1779 - 5ನೇ ಮದಕರಿ ನಾಯಕನಿಂದ ಚಿತ್ರದುರ್ಗ ಕೋಟೆ ವಶವಾಯಿತು. ಹೈದರಾಲಿಯು ಬೆಂಗಳೂರಿನ ಲಾಲ್‌ಬಾಗ್ ನಿರ್ಮಿಸಿದ.

**ಒಂದನೇ ಆಂಗ್ಲೋ ಮೈಸೂರು ಯುದ್ಧ - 1767-69**

- ಬ್ರಿಟೀಷರು ಮತ್ತು ಹೈದರಾಲಿ ಹಾಗೂ ಹೈದರಾಬಾದಿನ ನಿಜಾಮ ನಿಜಾಂ ಅಲಿಖಾನ್‌ರ ಸಂಯುಕ್ತ ಸೈನ್ಯದ ನಡುವೆ ನಡೆಯಿತು. ಪ್ರಾರಂಭದಲ್ಲಿ ಚಂಗಮ ಮತ್ತು ತಿರುವಣ್ಣಾಮಲೈಗಳಲ್ಲಿ ನಡೆದ ಯುದ್ಧಗಳಲ್ಲಿ ಹೈದರಾಲಿ ಸೋತಾಗ

ನಿಜಾಮನು ಬ್ರಿಟೀಷರೊಂದಿಗೆ ಮಚಲೀಪಟ್ಟಣ ಒಪ್ಪಂದ ಮಾಡಿಕೊಂಡು ಬ್ರಿಟೀಷರ ಪಕ್ಷ ಸೇರಿದ. ಅಂತಿಮವಾಗಿ ಬ್ರಿಟಿಷರ ವಿರುದ್ಧ ಹೈದರಾಲಿ ಗೆದ್ದನು. ಪರಿಣಾಮ 1769 ಏಪ್ರಿಲ್ 4 ರಂದು ನಡೆದ ಮದ್ರಾಸ್ ಒಪ್ಪಂದದೊಂದಿಗೆ ಯುದ್ಧ ಮುಕ್ತಾಯ.

### ಎರಡನೇ ಆಂಗ್ಲೋಮೈಸೂರು ಯುದ್ಧ - 1780-84

- ❖ 1781ರ ಜುಲೈ - ಪೋರ್ಟಿನೋವಾ ಕಾಳಗದಲ್ಲಿ ಬ್ರಿಟಿಷ್ ಅಧಿಕಾರಿ ಸರ್ ಐರ್‌ಕೂಟ್‌ನಿಂದ ಹೈದರಾಲಿ ಸೋಲು.
- ❖ 1782 ಡಿಸೆಂಬರ್ 7ರಂದು ಬೆನ್ನುಪಣಿ ರೋಗಕ್ಕೆ ತುತ್ತಾಗಿ ಚಿತ್ತೂರಿನ ನರಸಿಂಹರಾಯ ಪೇಟೆಯಲ್ಲಿ ಹೈದರಾಲಿ ನಿಧನ.
- ❖ 1783 ಮೇ 4 ಟಿಪ್ಪು ಪಟ್ಟಾಭಿಷೇಕ.
- ❖ ಟಿಪ್ಪು ಸುಲ್ತಾನ ಯುದ್ಧ ಮುಂದುವರಿಸಿ - ಬ್ರಿಟಿಷರನ್ನು ಅಂತಿಮವಾಗಿ ಸೋಲಿಸಿದ.
- ❖ ಮಂಗಳೂರು ಒಪ್ಪಂದದೊಂದಿಗೆ (1784 ಮಾರ್ಚ್ 11) ಎರಡನೇ ಆಂಗ್ಲೋ-ಮೈಸೂರು ಯುದ್ಧ ಮುಕ್ತಾಯ.
- ❖ 2ನೇ ಆಂಗ್ಲೋ ಮೈಸೂರು ಯುದ್ಧದ ಸಂದರ್ಭದಲ್ಲಿನ ಗೌರ್ನರ್ ಜನರಲ್ ಲಾರ್ಡ್ ವಾರನ್ ಹೇಸ್ಟಿಂಗ್ಸ್.

### ಟಿಪ್ಪು ಸುಲ್ತಾನ

- ❖ 1753 ನವೆಂಬರ್ 20 ದೇವನಹಳ್ಳಿಯಲ್ಲಿ ಜನನ.
- ❖ ತಂದೆ-ಹೈದರಾಲಿ, ತಾಯಿ - ಫಕ್ರುನ್ನೀಸಾ ಬೇಗಂ
- ❖ ಬ್ರಿಟಿಷರ ವಿರುದ್ಧ - 2ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಜಯಗಳಿಸಿದ.

### ಮೂರನೇ ಆಂಗ್ಲೋಮೈಸೂರು ಯುದ್ಧ - 1790-92

- ❖ ಫ್ರಾನ್ಸ್ ಚಕ್ರವರ್ತಿ 16ನೇ ಲೂಯಿಯ ನೆರವು ಪಡೆಯಲು ರಾಯಭಾರಿ ಕಳುಹಿಸಿದ. ಆದರೆ ಫ್ರಾನ್ಸ್ ಕ್ರಾಂತಿಯ (1789)ರ ಹಿನ್ನೆಲೆಯಲ್ಲಿ ಸಹಾಯ ಸಿಗಲಿಲ್ಲ.
- ❖ ಗವರ್ನರ್ ಜನರಲ್ ಲಾರ್ಡ್ ಕಾರನ್ ವಾಲಿಸ್ ಸೈನ್ಯದಿಂದ ಟಿಪ್ಪುವಿಗೆ ಸೋಲು.
- ❖ ಶ್ರೀರಂಗಪಟ್ಟಣ ಒಪ್ಪಂದದೊಂದಿಗೆ (1792 ಮಾರ್ಚ್ 18/22) ಯುದ್ಧ ಮುಕ್ತಾಯ.

### ಶ್ರೀರಂಗಪಟ್ಟಣ ಒಪ್ಪಂದದ ಮುಖ್ಯಾಂಶಗಳು

- ❖ ಟಿಪ್ಪು ಬ್ರಿಟಿಷರಿಗೆ ಅರ್ಧ ರಾಜ್ಯ ಬಿಟ್ಟು ಕೊಡಬೇಕಾಯಿತು.
- ❖ ಯುದ್ಧ ವೆಚ್ಚವಾಗಿ 3,33,00000 ರೂ.ಗಳನ್ನು 3 ಕಂತುಗಳಲ್ಲಿ ಕೊಡಲೊಪ್ಪಿದನು.
- ❖ ಈ ಹಣಕ್ಕೆ ಆಧಾರವಾಗಿ ತನ್ನ ಇಬ್ಬರು ಮಕ್ಕಳಾದ ಅಬ್ದುಲ್ ಖಲಿಕ್ ಮತ್ತು ಮುಯಿನುದ್ದೀನ್‌ರನ್ನು ಒತ್ತೆಯಾಗಿಡಬೇಕಾಯಿತು.
- ❖ ಟಿಪ್ಪು ನೀಡಿದ ಅರ್ಧರಾಜ್ಯವನ್ನು ಬ್ರಿಟಿಷರು, ಮರಾಠರು ಮತ್ತು ನಿಜಾಮರು ಹಂಚಿಕೊಂಡರು.
- ❖ ಬ್ರಿಟಿಷ್ ಯುದ್ಧ ಖೈದಿಗಳನ್ನು ಟಿಪ್ಪು ಬಿಡುಗಡೆ ಮಾಡಿದ.

### ನಾಲ್ಕನೇ ಆಂಗ್ಲೋ ಮೈಸೂರು ಯುದ್ಧ - 1799

- ❖ ಲಾರ್ಡ್ ವೆಲ್ಲೆಸ್ಲಿ ಈ ಸಂದರ್ಭದಲ್ಲಿ ಗವರ್ನರ್ ಜನರಲ್.
- ❖ ಬ್ರಿಟಿಷರನ್ನು ಮಣಿಸಲು - ಫ್ರಾನ್ಸ್‌ನ ನೆಪೋಲಿಯನ್ ಬೋನಾಪಾರ್ಟೆ, ಟರ್ಕಿಯ ಸುಲ್ತಾನ, ಆಫ್‌ಘಾನಿಸ್ತಾನದ ಅಮೀರ ಮುಂತಾದವರ ನೆರವಿಗೆ ಟಿಪ್ಪು ಯಾಚಿಸಿದ.
- ❖ ಫ್ರಾನ್ಸಿನ ಕ್ರಾಂತಿಯ ಸಂಕೇತವಾಗಿದ್ದ ಜಾಕೋಟಿನ್ ಕ್ಲಬ್‌ನ್ನು ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸ್ಥಾಪಿಸಿದ ಮತ್ತು ಫ್ರಾನ್ಸಿನ ಧ್ವಜವನ್ನು ಹಾರಿಸಿದ.

- ಲಾರ್ಡ್‌ವೆಲ್ಲೆಸ್ಲಿ ಟಿಪ್ಪುವಿಗೆ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕುವಂತೆ ಬಲತ್ಕರಿಸಿದ. ಪರಿಣಾಮ -4ನೇ ಆಂಗ್ಲೋ ಮೈಸೂರು ಯುದ್ಧ ಆರಂಭ.
- 1799 ಫೆಬ್ರವರಿ 22 ವೆಲ್ಲೆಸ್ಲಿ ಟಿಪ್ಪುವಿನ ವಿರುದ್ಧ ಯುದ್ಧ ಘೋಷಿಸಿದ. ಸಿದ್ದೇಶ್ವರ ಮತ್ತು ಮಳವಳ್ಳಿಯ ಕದನಗಳು ಟಿಪ್ಪುವಿಗೆ ಸೋಲುಣಿಸಿದವು.
- ಅಂತಿಮವಾಗಿ ಟಿಪ್ಪು 1799 ಮೇ 4 ಹೋರಾಡುತ್ತಲೇ ಬ್ರಿಟಿಷರ ಗುಂಡಿಗೆ ಬಲಿಯಾದ.

### ಯುದ್ಧದ ಪರಿಣಾಮ

- ವಿಶಾಲ ಮೈಸೂರು ರಾಜ್ಯ ಟಿಪ್ಪುವಿನ ಸಾವಿನೊಂದಿಗೆ ಬ್ರಿಟಿಷರ ವಶವಾಯಿತು.
- ಬ್ರಿಟಿಷರು - ನಿಜಾಮ, ಮರಾಠರ ಜೊತೆ ಗೆದ್ದ ಪ್ರದೇಶವನ್ನು ಹಂಚಿಕೊಂಡು ಉಳಿದ ಮೈಸೂರು ರಾಜ್ಯವನ್ನು ಹಳೆಯ ಒಡೆಯರ ವಂಶಸ್ಥರಿಗೆ ನೀಡಲಾಯಿತು.
- ಅದರಂತೆ 10 ವರ್ಷದ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರು 1799 ಜೂನ್ 30ರಂದು ಮೈಸೂರಿನ ಒಡೆಯರಾಗಿ ಸಿಂಹಾಸನವೇರಿದರು.
- ಮೈಸೂರು ಸಂಸ್ಥಾನ ಬ್ರಿಟಿಷರ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿ ಬ್ರಿಟಿಷರ ಆಶ್ರಿತ ಸಂಸ್ಥಾನವಾಗಿ ಮುಂದುವರಿಯಿತು.

### ಟಿಪ್ಪುವಿನ ನಂತರ ಬ್ರಿಟಿಷರ ವಿರುದ್ಧ ನಡೆದ ದಂಗೆಗಳು

- ದೋಂಡಿಯ ವಾಘನ ದಂಗೆ - 1800
- ಕಿತ್ತೂರಿನ ರಾಣಿ ಚೆನ್ನಮ್ಮಳ ದಂಗೆ - 1824
- ಕೊಡಗಿನ ಬಂಡಾಯ - 1835-37
- ರಾಜ ಚಿಕ್ಕವೀರರಾಜೇಂದ್ರನನ್ನು ಪದಚ್ಯುತಗೊಳಿಸಿ ಕೊಡಗು ಸಂಸ್ಥಾನವನ್ನು ಗೌ.ಜ. ಲಾರ್ಡ್ ವಿಲಿಯಂ ಬೆಂಟಿಂಗ್ 1834 ಏಪ್ರಿಲ್ 10ರಂದು ವಶಪಡಿಸಿಕೊಂಡನು. ಪರಿಣಾಮ ಕೊಡಗಿನ ವಿಮೋಚನೆಗಾಗಿ ಸ್ವಾಮಿ ಅಪರಂಪರ ಬಂಡಾಯ ಆರಂಭಿಸಿದ. ನಂತರ ಕಲ್ಯಾಣಸ್ವಾಮಿ, ಪುಟ್ಟಬಸಪ್ಪ ನೇತೃತ್ವದಲ್ಲಿ ನಡೆಯಿತು.

### 1857ರ ಮಹಾದಂಗೆಯ ಸಂದರ್ಭದಲ್ಲಿ ಕರ್ನಾಟಕದಲ್ಲಿ ನಡೆದ ದಂಗೆಗಳು

- ಅಲಗಲಿಯ ಬೇಡರ ದಂಗೆ (ಬಾಗಲಕೋಟೆ) - 1857 ನವೆಂಬರ್
- ಸುರಪುರದ ವೆಂಕಟಪ್ಪ ನಾಯಕನ ದಂಗೆ (ಯಾದಗಿರಿ) - 1858 ಫೆಬ್ರವರಿ
- ನರಗುಂದದ ಬಾಬಾಸಾಹೇಬನ ದಂಗೆ (ಗದಗ) - 1858 ಮೇ
- ಮುಂಡರಗಿ ಭೀಮರಾಯನ ದಂಗೆ (ಗದಗ) - 1858 ಮೇ / ಜೂನ್.

## 1857ರ ಮಹಾದಂಗೆ / ಸಿಪಾಯಿದಂಗೆ

- 1857ರ ಮಹಾದಂಗೆಯನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆದವರು - ವಿ.ಡಿ. ಸಾವರ್ಕರ್
- ಕೊಬ್ಬು ಸವರಿದ ತೋಟಾಗಳ ಬಳಕೆಯನ್ನು ನಿರಾಕರಿಸಿದ ಮೊದಲ ದೇಶಿಯ ತುಕಡಿ ಬರ್ಹಾಂಪುರದ 19ನೇ ರೆಡಿಮೆಂಟ್.
- ದಂಗೆಯ ಕಿಡಿ ಹೊತ್ತಿಸಿದವನು - ಮಾರ್ಚ್ 29, 1857ರಂದು ಬ್ಯಾರಕ್‌ಪುರದ 34ನೇ ರೆಜಿಮೆಂಟಿನ ಸಿಪಾಯಿ ಮಂಗಳಪಾಂಡೆ.
- ದಂಗೆಯು ಬಾಹ್ಯವಾಗಿ ಆರಂಭವಾದದ್ದು ಮೇ 10, ಭಾನುವಾರ 1857ರಂದು ಮೀರತ್‌ನ ಸಿಪಾಯಿಗಳಿಂದ.

**ದಂಗೆ ನಡೆದ ಪ್ರದೇಶಗಳು ಮತ್ತು ನಾಯಕತ್ವ ವಹಿಸಿಕೊಂಡವರು**

- ❖ ದೆಹಲಿ - ಮೊಗಲ್ ಚಕ್ರವರ್ತಿ 2ನೇ ಬಹದ್ದೂರ್ ಷಾ ಮಿರ್ಜಾ.
- ❖ ಅಸ್ಸಾಂ - ಮಣಿರಾಮ್‌ದತ್
- ❖ ಲಕ್ನೋ - ಔದ್‌ನ ಬೇಗಂ ಹಜರತ್‌ಮಹಲ್
- ❖ ಝಾನ್ಸಿ - ರಾಣಿ ಲಕ್ಷ್ಮೀಬಾಯಿ
- ❖ ಕಾನ್ಪುರ - ನಾನಾ ಸಾಹೇಬ (ಇವರೀರ್ವರಿಗೆ ಸಹಾಯಕ ತಾತ್ಯಾಟೋಪಿ / ರಾಮಚಂದ್ರ ಪಾಂಡುರಂಗ)
- ❖ ಬಿಹಾರ - ಜಗದೀಶ್‌ಪುರದ ಕುನ್ವರ್ ಸಿಂಗ್ / ಕುವರಸಿಂಹ
- ❖ ಅಲಹಾಬಾದ್, ಬನಾರಸ್ - ಅರಮ್‌ಸಿಂಗ್
- ❖ ಬಂದೇಲ್‌ಖಂಡ / ರಾಯ್‌ಬರೇಲಿ - ಖಾನ್‌ಬಹದ್ದೂರ್ ಖಾನ್
- ❖ ಮ್ಯಾಂಡ್‌ಸರ್ - ಫಿರೋಜ್ ಷಾ

**ದಂಗೆಯಲ್ಲಿ ಭಾಗವಹಿಸದೆ ತಟಸ್ಥವಾಗಿದ್ದವರು**

- ❖ ಪಂಜಾಬಿನ ಸಿಖ್ಖರು
- ❖ ಬಂಗಾಳದ ಜಮೀನ್ದಾರರು
- ❖ ಪಾಶ್ಚಿಮಾತ್ಯ ವಿದ್ಯಾಭ್ಯಾಸ ಪಡೆದ ಮಧ್ಯಮ ವರ್ಗ
- ❖ ಗ್ವಾಲಿಯರ್ ಸಿಂಧ್ಯ ಮತ್ತು ಮಂತ್ರಿ ದಿನಕರರಾವ್.
- ❖ ಹೈದ್ರಾಬಾದಿನ ನಿಜಾಮ - ಅಫಜ್ ಉದ್ದೌಲ ಮತ್ತು ಪ್ರಧಾನಿ ಸಾಲರ್‌ಜಂಗ್
- ❖ ಕಾಶ್ಮೀರದ ಮಹಾರಾಜ - ಗುಲಾಬ್‌ಸಿಂಗ್
- ❖ ಭೋಪಾಲದ ಸಿಕಂದರ ಬೇಗಂ
- ❖ ನೇಪಾಳದ ದೊರೆ ಜಂಗ್ ಬಹದ್ದೂರ್.

**ಫಲಿತಾಂಶ**

- ❖ ವಿಫಲತೆಯಲ್ಲಿ ಮುಕ್ತಾಯ
- ❖ ಝಾನ್ಸಿರಾಣಿ ಲಕ್ಷ್ಮೀಬಾಯಿ ಹೋರಾಡುತ್ತಲೇ 1858 ಜೂನ್ 17ರಂದು ಸಾವು.
- ❖ ನಾನಾಸಾಹೇಬ ಮತ್ತು ಬೇಗಂ ಹಜರತ್‌ಮಹಲ್ ನೇಪಾಳಕ್ಕೆ ಪಲಾಯನ.
- ❖ ತಾತ್ಯಾಟೋಪಿ ತನ್ನ ಸ್ನೇಹಿತ ಮಾನಸಿಂಗ್‌ನ ದ್ರೋಹದಿಂದ ಗ್ವಾಲಿಯಾರ್‌ನಲ್ಲಿ ಬಂಧಿಯಾಗಿ, ಗಲ್ಲಿಗೇರಿದ. (1859 ಏಪ್ರಿಲ್)
- ❖ ಮೊಘಲ್ ಕೊನೆಯ ಚಕ್ರವರ್ತಿ 2ನೇ ಬಹದ್ದೂರ್ ಷಾ ಮಿರ್ಜಾನನ್ನು ರಂಗೂನ್‌ನಲ್ಲಿ ಬಂಧಿಸಲಾಯಿತು. ಆತ ಅಲ್ಲಿಯೇ 1862ರಲ್ಲಿ ಮರಣ ಹೊಂದಿದ.

**1857ರ ದಂಗೆಯ ಅತಿಮುಖ್ಯ ಪರಿಣಾಮ**

- ❖ ದಂಗೆಯ ಕಾಲದ ಗವರ್ನರ್ ಜನರಲ್
- ❖ ಲಾರ್ಡ್ ಕ್ಯಾನಿಂಗ್ 1858 ನವೆಂಬರ್ 1 ರಂದು ಅಲಹಾಬಾದಿನಲ್ಲಿ ವಿಕ್ಟೋರಿಯ ರಾಣಿಯ ಘೋಷಣಾ ಪತ್ರವನ್ನು ಪ್ರಕಟಿಸುವುದರೊಂದಿಗೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ಅಂತ್ಯವಾಯಿತು. ಅಂದಿನಿಂದ ಬ್ರಿಟಿಷ್ ಸರ್ಕಾರ ರಾಣಿಯ ಹೆಸರಲ್ಲಿ ಭಾರತವನ್ನು ನೇರವಾಗಿ ಆಳುವಂತಾಯಿತು.

## ಸಾಮಾಜಿಕ-ಧಾರ್ಮಿಕ ಸುಧಾರಣ ಚಳುವಳಿ ಮತ್ತು ಸುಧಾರಕರು

- ❖ 19ನೇ ಶತಮಾನವನ್ನು ಭಾರತದ ಪುನರುಜ್ಜೀವನದ ಕಾಲ ಅಥವಾ ಸರ್ವೋದಯ ಕಾಲ ಎನ್ನುವರು.
- ❖ ರಾಜಾರಾಂ ಮೋಹನರಾಯ್ ಮತ್ತು ಬ್ರಹ್ಮ ಸಮಾಜ
- ❖ 1772 ಮೇ 22, ಪಶ್ಚಿಮ ಬಂಗಾಳದ ಬದ್ವಾನ್ ಜಿಲ್ಲೆಯ ರಾಧನಗರ ಎಂಬ ಹಳ್ಳಿಯಲ್ಲಿ ಜನನ.
- ❖ ತಂದೆ - ರಮಾಕಾಂತ್ ರಾಯ್, ತಾಯಿ - ತಾರಿಣಿದೇವಿ
- ❖ 1805 ರಿಂದ 1814ರವರೆಗೆ ಈ.ಇ. ಕಂಪನಿಯಲ್ಲಿ ಕಂದಾಯ ಸಂಗ್ರಹಣ ಅಧಿಕಾರಿಯಾಗಿ ರಂಗಪುರದಲ್ಲಿ ಕಾರ್ಯ ನಿರ್ವಹಿಸಿದರು.
- ❖ 1811ರಲ್ಲಿ ಅಣ್ಣ ಜಗಮೋಹನ್ ಸಾವು, ಅತ್ತಿಗೆ ಲೋಕ ಮಂಜರಿ ಸತಿಸಹಗಮನ.
- ❖ 1815 - ಆತ್ಮೀಯ ಸಭಾ ಸ್ಥಾಪನೆ
- ❖ 1825 - ವೇದಾಂತ ಕಾಲೇಜು ಸ್ಥಾಪನೆ
- ❖ 1828 ಆಗಸ್ಟ್ 20 ಬ್ರಹ್ಮ ಸಮಾಜ ಸ್ಥಾಪನೆ (ಕಲ್ಕತ್ತ)
- ❖ ಬ್ರಹ್ಮಸಮಾಜ ಸ್ಥಾಪನೆಯಲ್ಲಿ ರಾಯರಿಗೆ ಸಹಕರಿಸಿದವರು -ದ್ವಾರಕನಾಥ ಠಾಗೂರ್, ತಾರಾಚಂದ್ರ ಚಕ್ರವರ್ತಿ, ಕಾಳನಾಥಮುನ್ಷಿ ಮುಂತಾದವರು.
- ❖ ಇವರ ಪ್ರಯತ್ನದಿಂದ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ 1829 ಡಿಸೆಂಬರ್ 4 ರಂದು ನಿಯಮಾವಳಿ 17ರ ಪ್ರಕಾರ ಸತಿಸಹಗಮನ ನಿಷೇಧ ಕಾಯ್ದೆ ಜಾರಿಗೆ ತಂದರು.
- ❖ ಮೊಗಲ್ ಚಕ್ರವರ್ತಿ 2ನೇ ಅಕ್ಬರ್‌ನಿಂದ 'ರಾಜ' ಎಂಬ ಬಿರುದು.
- ❖ 2ನೇ ಅಕ್ಬರನ ವರ್ಷಾಶಸನಕ್ಕೆ ಸಂಬಂಧಿಸಿದಂತೆ - ಇಂಗ್ಲೆಂಡಿಗೆ ಪಯಣ - ಅಲ್ಲೇ ಬ್ರಿಸ್ಟಲ್ ನಗರದಲ್ಲಿ 1833 ಸೆಪ್ಟೆಂಬರ್ 27 ನಿಧನ.
- ❖ ನವಯುಗದ ಪ್ರವರ್ತಕ, ಆಧುನಿಕ ಭಾರತದ ಹರಿಕಾರ, ಭಾರತೀಯ ಜ್ಞಾನ ಪುನರುಜ್ಜೀವನದ ಪ್ರಾತಃಕಾಲದ ತಾರೆ, ಎಂದೆಲ್ಲಾ ಇವರನ್ನು ಸಂಬೋಧಿಸಲಾಗುತ್ತದೆ.
- ❖ **ಇವರ ಪತ್ರಿಕೆಗಳು :** ಸಂವಾದ ಕೌಮುದಿ, ಮಿರಾತುಲ್ ಅಕ್ಬರ್

**ಇವರ ಕೃತಿಗಳು :**

- ❖ ದೇವಾಸ್ತಿಕರಿಗೆ ಒಂದು ಕಾಣಿಕೆ : (ತುಹಪತ್ - ಉಲ್-ಮುವಾಹಿದಿನ್)
- ❖ ಜೀಸಸ್‌ನ ಬೋಧನೆಗಳು - The precepts of Jesus
- ❖ ದಿ ಗೈಡ್ ಟು ಪೀಸ್ ಅಂಡ್ ಹ್ಯಾಪಿನೆಸ್ (The guide to peace & happiness)
- ❖ Brief remarks regarding encroachments to the ancient rights of female.

### ದೇವೇಂದ್ರನಾಥ ಠಾಗೂರ್

- ❖ 1838ರಲ್ಲಿ ಬ್ರಹ್ಮ ಸಮಾಜದ ಕಾರ್ಯಕರ್ತರಾಗಿ ಸೇರ್ಪಡೆ.
- ❖ 839 ತತ್ವ ಬೋಧಿನಿ ಸಭಾ ಸ್ಥಾಪನೆ.
- ❖ ಅಕ್ಷಯಕುಮಾರ ದತ್ತ ಸಂಪಾದಕತ್ವದಲ್ಲಿ ತತ್ವಬೋಧಿನಿ ಪತ್ರಿಕೆ ಆರಂಭಿಸಿದರು.

## ಕೇಶವ ಚಂದ್ರ ಸೇನ್

- 1857- ಬ್ರಹ್ಮಸಮಾಜದ ಸದಸ್ಯರಾಗಿ ನಂತರ ಬ್ರಹ್ಮಸಮಾಜದ ನಾಯಕ ಪಟ್ಟವಾದ ಆಚಾರ್ಯ ಪದವಿ ಪಡೆದರು.
- 1866ರಲ್ಲಿ ಮೊದಲಿಗೆ ಬ್ರಹ್ಮಸಮಾಜ ಒಡೆಯಿತು. ಕೇಶವ ಚಂದ್ರ ಸೇನ್ ನೇತೃತ್ವದಲ್ಲಿ ಭಾರತ ವರ್ಷೀಯ ಬ್ರಹ್ಮಸಮಾಜ ಮತ್ತು ದೇವೇಂದ್ರನಾಥ ಠಾಗೂರ್ ನೇತೃತ್ವದಲ್ಲಿ ಆದಿ ಬ್ರಹ್ಮಸಮಾಜವಾಗಿ ಎರಡು ವಿಭಜನೆಯಾಯಿತು.
- 1872 ಸ್ಥಳೀಯ ವಿವಾಹ ಕಾಯ್ದೆ (Native Marriage Act) ಜಾರಿಗೆ ಬರಲು ಕಾರಣಕರ್ತರಾದರು. ಆ ಮೂಲಕ ಬಾಲ್ಯವಿವಾಹ ಪದ್ಧತಿ ನಿಷೇಧಿಸಲಾಯಿತು. (ಹೆಣ್ಣಿಗೆ 14, ಗಂಡಿಗೆ 18 - ವಿವಾಹ ವಯಸ್ಸು ನಿರ್ಧಾರ)
- 1878-ಇವರ ನೇತೃತ್ವದ ಬ್ರಹ್ಮ ಸಮಾಜ 2ನೇ ಬಾರಿಗೆ ಒಡೆಯಿತು. ಕಾರಣ ತನ್ನ ಅಪ್ರಾಪ್ತ ಮಗಳನ್ನು ಕೂಚ್ ಬಿಹಾರದ ರಾಜಕುಮಾರನಿಗೆ ಕೊಟ್ಟು ವಿವಾಹ ಮಾಡಿಸಿದ್ದರಿಂದ ಆನಂದ ಮೋಹನ್ ಬೋಸ್, ಶಿವನಾಥ ಶಾಸ್ತ್ರಿ ಮುಂತಾದವರು ಬ್ರಹ್ಮ ಸಮಾಜದಿಂದ ಹೊರಬಂದು ಸಾಧಾರಣ / ಸುಧಾರಣಾ ಬ್ರಹ್ಮ ಸಮಾಜ ಸ್ಥಾಪಿಸಿದರು.

### ಕೇಶವರು ಹೊರಡಿಸಿದ ಪತ್ರಿಕೆಗಳು

- ಸುಲಭ್ ಸಮಾಚಾರ ಪತ್ರಿಕೆ, ಇಂಡಿಯನ್ ಮಿರರ್ ಮತ್ತು ನಾಮ್ ಬೋದಿನಿ, ಇವರು ಸ್ಥಾಪಿಸಿದ ಸಂಘ ಸಂಘತ್ ಸಂಭಾ.

## ಪ್ರಾರ್ಥನಾ ಸಮಾಜ

- ಸ್ಥಾಪಕರು - ಆತ್ಮಾರಾಂ ಪಾಂಡುರಂಗ
- 1867-ಬಾಂಬೆಯಲ್ಲಿ ಸ್ಥಾಪನೆ
- ಜನಪ್ರಿಯಗೊಳಿಸಿದವರು - ಆರ್.ಜಿ. ಭಂಡಾರ್ಕರ್ ಮತ್ತು ಎಂ.ಜಿ. ರಾನಡೆ (ಮಹಾರಾಷ್ಟ್ರದ ಸಾಕ್ರಟಿಸ್)

## ಆರ್ಯಸಮಾಜ ಮತ್ತು ದಯಾನಂದ ಸರಸ್ವತಿ

- ಜನನ 1824 ಫೆಬ್ರುವರಿ 12, ಗುಜರಾತಿನ ಟಂಕಾರ ಎಂಬ ಪಟ್ಟಣ (ಹಳೆಯ ಮೋರ್ವಿ ರಾಜ್ಯ)
- ತಂದೆ - ಅಂಬಾ ಶಂಕರ ತಿವಾರಿ, ತಾಯಿ - ಅಮೃತಾ ಬಾಯಿ
- ಬಾಲ್ಯದ ಹೆಸರು - ಮೂಲಶಂಕರ
- ಗುರು - ಮಥುರಾದ ಸ್ವಾಮಿ ವಿರಾಜಾನಂದ ಸರಸ್ವತಿ.
- 1875 ಏಪ್ರಿಲ್ 10, ಮುಂಬೈಯಲ್ಲಿ ಆರ್ಯಸಮಾಜ ಸ್ಥಾಪನೆ.
- 1877 - ಆರ್ಯಸಮಾಜದ ಕೇಂದ್ರ ಕಛೇರಿಯನ್ನು ಲಾಹೋರ್‌ನಲ್ಲಿ ಸ್ಥಾಪಿಸಲಾಯಿತು.
- ಮದ್ರಾಸ್ ಹೊರತುಪಡಿಸಿ ಭಾರತದಾದ್ಯಂತ ಸಂಚರಿಸಿದ ಇವರು ಜೋದ್‌ಪುರದ ಅರಸ ಸಜ್ಜನ್‌ಸಿಂಗ್‌ನ ಆಹ್ವಾನದ ಮೇರೆಗೆ ಅಜ್ಮೀರ್ ಭೇಟಿ ನೀಡಿದರು. ಅಲ್ಲಿ ನಾನ್ಹಿಜಾ ಎಂಬ ವೇಶ್ಯೆಯ ಸಹವಾಸದಿಂದ ಸಜ್ಜನ್‌ಸಿಂಗ್‌ನ್ನು ಬಿಡಿಸಿದ್ದರಿಂದ ಕೋಪಗೊಂಡ ಈಕೆ ಆಹಾರಕ್ಕೆ ವಿಷ ಹಾಕಿಸಿ ದಯಾನಂದರನ್ನು ಕೊಲ್ಲಿಸಿದಳು. (ಅಕ್ಟೋಬರ್ 30, 1883).

### ಕೃತಿಗಳು

- ಸತ್ಯಾರ್ಥ ಪ್ರಕಾಶ (ಹಿಂದಿ)
- ವೇದಭಾಷ್ಯ (ಸಂಸ್ಕೃತ)
- ವೇದಭಾಷ್ಯ ಭೂಮಿಕ (ಅರ್ಧಹಿಂದಿ, ಅರ್ಧಸಂಸ್ಕೃತ)ಹಿಂದೆ ಅನ್ಯಧರ್ಮಕ್ಕೆ ಮತಾಂತರಗೊಂಡವರನ್ನು ಪುನಃ ಹಿಂದೂಧರ್ಮಕ್ಕೆ ಸೇರಿಸಿಕೊಳ್ಳಲು 'ಶುದ್ಧಿ ಚಳುವಳಿ' ಪ್ರಾರಂಭಿಸಿದರು.

- ಇವರ ಆರ್ಯ ಸಮಾಜ ರಾಷ್ಟ್ರೀಯ ಪ್ರಜ್ಞೆಯ ಬೆಳವಣಿಗೆಗೆ ಪ್ರೇರಣೆ ನೀಡಿತು.
- ತಿಲಕ್, ಲಜಪತ್ ರಾಯ್, ಗೋಖಲೆ ಆರ್ಯಸಮಾಜದ ತತ್ವಗಳಿಂದ ಪ್ರಭಾವಿತರಾದರು.
- ಇವರ ಆಧ್ಯಾತ್ಮಿಕ ಘೋಷಣೆ - 'ವೇದಗಳಿಗೆ ಹಿಂತಿರುಗಿ' ಮತ್ತು ರಾಜಕೀಯ ಘೋಷಣೆ 'ಭಾರತ-ಭಾರತೀಯರಿಗೆ' 'ಸ್ವರಾಜ್' - ಎಂಬ ಪದವನ್ನು ಮೊದಲಿಗೆ ಬಳಸಿದರು.
- 'ಹಿಂದಿ'ಯನ್ನು ಮೊದಲಿಗೆ ರಾಷ್ಟ್ರೀಯ ಭಾಷೆ ಎಂದು ಪರಿಗಣಿಸಿದರು.

**ಆರ್ಯ ಸಮಾಜದ ವಿಭಜನೆ - 1892**

- 1892ರಲ್ಲಿ ದಯಾನಂದ ಆಂಗ್ಲೋ ವೇದಿಕ್ (DAV) ಶಾಲೆಗಳನ್ನು ಸ್ಥಾಪಿಸಿದ ಲಾಲಹಂಸರಾಜರ ಒಂದು ಬಣ. ಗುರುಕುಲ ಆಶ್ರಮಗಳನ್ನು ಸ್ಥಾಪಿಸಿದ ಸ್ವಾಮಿ ಶ್ರದ್ಧಾನಂದರ ನೇತೃತ್ವದಲ್ಲಿ ಒಂದು ಬಣವಾಗಿ ಆರ್ಯಸಮಾಜ 1892ರಲ್ಲಿ ವಿಭಜನೆಯಾಯಿತು.

## ಥಿಯೋಸಾಪಿಕಲ್ ಸೊಸೈಟಿ / ಬ್ರಹ್ಮ ವಿದ್ಯಾ ಸಮಾಜ

- 1875ರಲ್ಲಿ ನ್ಯೂಯಾರ್ಕ್‌ನಲ್ಲಿ ಸ್ಥಾಪನೆ.
- ಸ್ಥಾಪಕರು - ರಷ್ಯಾದ ಮೇಡಂ ಎಚ್.ಪಿ. ಬ್ಲವಾಟ್‌ಸ್ಕಿ ಅಮೇರಿಕಾದ ಕರ್ನಲ್ ಎಚ್.ಎಚ್. ಓಲ್ಕಾಟ್
- 1882ರಲ್ಲಿ ಕೇಂದ್ರ ಕಛೇರಿಯನ್ನು ಮದ್ರಾಸ್ ಸಮೀಪ ಅಡ್ಯಾರ್‌ನಲ್ಲಿ ಸ್ಥಾಪನೆ.
- ಅನಿಬೇಸೆಂಟ್ - 1889ರಲ್ಲಿ ಸೊಸೈಟಿ ಸೇರಿ, 1893 ರಲ್ಲಿ ಭಾರತಕ್ಕೆ ಆಗಮನ.
- 1907ರಲ್ಲಿ ಓಲ್ಕಾಟ್ ಸಾವು - ಅನಿಬೆಸೆಂಟ್ ಸೊಸೈಟಿ ಅಧ್ಯಕ್ಷರಾಗಿ ನೇಮಕ.
- 1898ರಲ್ಲಿ ಬನಾರಸ್ (ಕಾಶಿ)ಯಲ್ಲಿ ಸೆಂಟ್ರಲ್ ಹಿಂದೂ ಕಾಲೇಜ್ ಅನಿಬೆಸೆಂಟ್‌ರಿಂದ ಸ್ಥಾಪನೆ. (ಇದೇ ಕಾಲೇಜು ಮುಂದೆ 1916ರಲ್ಲಿ ಪಂಡಿತ್ ಮದನ ಮೋಹನ ಮಾಳವೀಯರಿಂದ ಬನಾರಸ್ ಹಿಂದೂ ವಿಶ್ವವಿದ್ಯಾಲಯವಾಯಿತು.)
- ವಸಾಹತು ವಿರೋಧಿ ಹೋರಾಟದ ಬೆಂಬಲಿಗಳಾಗಿ, 1913ರಲ್ಲಿ ರಾಜಕೀಯಕ್ಕೆ ಪಾದಾರ್ಪಣೆ.
- 1916ರಲ್ಲಿ -ಹೋಂರೂಲ್ ಲೀಗ್ ಚಳುವಳಿ ಆರಂಭಿಸಿದರು.
- 1917 ಕಲ್ಕತ್ತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆ

## ಸ್ವಾಮಿ ವಿವೇಕಾನಂದ

- ಜನನ-1863 ಜನವರಿ 12, ಇವರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನವಾಗಿ ಆಚರಿಸಲಾಗುತ್ತದೆ.
- ಬಾಲ್ಯದ ಹೆಸರು - ನರೇಂದ್ರನಾಥದತ್ತ
- ತಂದೆ - ವಿಶ್ವನಾಥದತ್ತ, ತಾಯಿ - ಭುವನೇಶ್ವರಿ ದೇವಿ.
- 1893-ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಹಿಂದೂ ಧರ್ಮದ ಶ್ರೇಷ್ಠತೆಯನ್ನು ಜಗತ್ತಿಗೆ ಪರಿಚಯಿಸಿದರು.
- ಸರ್ವಧರ್ಮ ಸಮ್ಮೇಳನದಲ್ಲಿ ಇವರು ಭಾಗವಹಿಸಲು ಧನ ಸಹಾಯ ಮಾಡಿದರು ಮೈಸೂರಿನ 10ನೇ ಚಾಮರಾಜ ಒಡೆಯರ್ ಮತ್ತು ದಿವಾನ್ ಕೆ. ಶೇಷಾದ್ರಿ ಅಯ್ಯರ್.
- ಚಿಕಾಗೋ ಸರ್ವಧರ್ಮಸಮ್ಮೇಳನ ಏರ್ಪಡಿಸಲು ಕಾರಣ. ಕೊಲಂಬಸ್ ಅಮೇರಿಕವನ್ನು ಕಂಡುಹಿಡಿದ. (ಕ್ರಿ.ಶ. 1492) 400 ವರ್ಷಗಳ ಸ್ಮರಣಾರ್ಥವಾಗಿ.
- 1896-ನ್ಯೂಯಾರ್ಕ್‌ನಲ್ಲಿ ವೇದಾಂತ ಸಂಘ ಸ್ಥಾಪನೆ.
- 1897-ಕಲ್ಕತ್ತದ ಬೇಲೂರಿನಲ್ಲಿ ರಾಮಕೃಷ್ಣ ಮಿಶನ್ ಸ್ಥಾಪನೆ.

- ಇವರ ಘೋಷಣೆ : 'ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ'
- ಶಿಷ್ಯೆ - ಸೋದರಿ ನಿವೇದಿತಾ (ಎಲಿಜಬೆತ್ ಮಾರ್ಗರೆಟ್ ನೋಬಲ್)

**ರಾಮಕೃಷ್ಣ ಮಿಷನ್**

- ರಾಮಕೃಷ್ಣ ಪರಮಹಂಸರ ಬೋಧನೆ, ತತ್ವ, ಆಧ್ಯಾತ್ಮಿಕ ವಿಚಾರಗಳನ್ನು ಪ್ರಚಾರ ಮಾಡುವುದಕ್ಕಾಗಿ ಕಲ್ಕತ್ತಾ ಸಮೀಪ ಬೇಲೂರಿನಲ್ಲಿ 1897ರಲ್ಲಿ ಸ್ವಾಮಿ ವಿವೇಕಾನಂದರಿಂದ ಸ್ಥಾಪನೆ.
- ರಾಮಕೃಷ್ಣ ಪರಮಹಂಸರ ಬಾಲ್ಯದ ಹೆಸರು - ಗದಾಧರ ಚಟ್ಟೋಪಾಧ್ಯಾಯ
- ರಾಮಕೃಷ್ಣ ಪರಮಹಂಸರ ಜನನ 1836, ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಕಾಮರ್‌ಪುರ್ ಹಳ್ಳಿಯಲ್ಲಿ.
- ವೃತ್ತಿ - ಕಲ್ಕತ್ತ ಬಳಿಯ ದಕ್ಷಿಣೇಶ್ವರದಲ್ಲಿ ಕಾಳಿ ದೇವಿಯ ಅರ್ಚಕರು.
- ರಾಮಕೃಷ್ಣ ಪರಮಹಂಸರ ಪತ್ನಿ - ಶಾರದಾದೇವಿ

**ಸರ್ ಸಯ್ಯದ್ ಅಹ್ಮದ್ ಖಾನ್ ಮತ್ತು ಅಲಿಗಡ ಚಳುವಳಿ**

- ಅಲಿಘಡ ಚಳುವಳಿಯ ಸ್ಥಾಪಕರು - ಸರ್ ಸಯ್ಯದ್ ಅಹ್ಮದ್ ಖಾನ್.
- 1817ರಲ್ಲಿ ದೆಹಲಿಯಲ್ಲಿ ಜನನ, ಮರಣ : 1898
- ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಅಧೀನ ನ್ಯಾಯಾಧೀಶರಾಗಿ ಸೇವೆ 1864-ಭಾಷಾಂತರ ಸೊಸೈಟಿ ಸ್ಥಾಪನೆ (Translation Society) ಇದು 1865ರಲ್ಲಿ ಅಲಿಘರ್ ಸೈಂಟಿಫಿಕ್ ಸೊಸೈಟಿ ಎಂದು ಪುನರ್ ನಾಮಕರಣ ಪಡೆಯಿತು.
- 1875ರಲ್ಲಿ ಅಲಿಘರ್‌ನಲ್ಲಿ ಸ್ಥಾಪಿಸಿದ ಶಾಲೆಯು 1877ರಲ್ಲಿ ಮಹಮ್ಮಡನ್ ಆಂಗ್ಲೋ ಓರಿಯಂಟಲ್ ಕಾಲೇಜ್ ಆಗಿ ಪರಿವರ್ತನೆಯಾಯಿತು. ಥಿಯೋಡೆರ್‌ಬೆಕ್ ಈ ಕಾಲೇಜಿನ ಪ್ರಥಮ ಪ್ರಿನ್ಸಿಪಾಲ್. ಅದೇ ಕಾಲೇಜು 1920ಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯವಾಗಿ ಪರಿವರ್ತನೆಯಾಯಿತು.
- ತಹಜಿಬ್-ಅಲ್-ಅಖ್ಲಾಖ್ (ನೈತಿಕ ಸುಧಾರಣೆಗಳು) ಎಂಬ ಪತ್ರಿಕೆ ಮೂಲಕ ತತ್ವ ಪ್ರಚಾರ.
- ಪ್ರಮುಖ ಕೃತಿ - ಕುರಾನ್ ಮೇಲೆ ವ್ಯಾಖ್ಯಾನ
- ಭಾರತೀಯ ಇಸ್ಲಾಂ ವೃದ್ಧ ಪಿತಾಮಹ ಎಂದು ಇವರನ್ನು ಕರೆಯಲಾಗುತ್ತದೆ.

**ಇತರೆ ಸುಧಾರಣಾ ಚಳುವಳಿಗಳು**

- ಅಹಮ್ಮದೀಯ ಚಳವಳಿ - ಮಿರ್ಜಾ ಗುಲಾಂ ಅಹಮ್ಮದ್
- ಖಕ್ಸಾರ್ ಚಳವಳಿ - ಇನಾಯತುಲ್ಲಾಖಾನ್
- ಖುದೈ ಖಿದ್‌ಮತ್‌ಗಾರ್-ಖಾನ್ ಅಬ್ದುಲ್ ಗಫಾರ್ ಖಾನ್ (ಗಡಿನಾಡ ಗಾಂಧಿ)
- ವಹಾಬಿ ಚಳವಳಿ - ರಾಯಬರೇಲಿಯ ಸಯ್ಯದ್ ಅಹ್ಮದ್
- ಸತ್ಯ ಶೋಧಕ ಸಮಾಜ - ಜ್ಯೋತಿ ಭಾಪುಲೆ
- ಸ್ವಾಭಿಮಾನ ಚಳವಳಿ - ಇ.ವಿ. ರಾಮಸ್ವಾಮಿ ನಾಯರ್
- ಜಸ್ಟೀಸ್ ಪಾರ್ಟಿ ಚಳವಳಿ - ಶ್ರೀ ತ್ಯಾಗರಾಜ ಚೆಟ್ಟಿಯಾರ್, ಪಿ.ಎನ್. ಮೊದಲಿಯಾರ್, ಡಾ. ನಾಯರ್
- ಅರವಿಪ್ಪುರಮ್ ಚಳವಳಿ - ಶ್ರೀ ನಾರಾಯಣ ಗುರು
- ಧರ್ಮ ಸಭಾ (1830) - ರಾಧಾಕಾಂತ ದೇವ್
- ಸೇವಾಸದನ (1885) - ಬೆಹರಾಮ್‌ಜಿ
- ದೇವ ಸಮಾಜ (1887) - ಶಿವನರೇನ್ ಅಗ್ನಿ ಹೋತ್ರಿ
- ಸೇವಾ ಸಮಿತಿ (1914) - ಎಚ್.ಎನ್.ಖುಂಜ್ರು

# ಭಾರತದ ರಾಷ್ಟ್ರೀಯ ಕಾಂಗ್ರೆಸ್ - 1885 (INC)

- ಸ್ಥಾಪಕರು : ಎ.ಓ. ಹ್ಯೂಮ್
- ಮೊದಲ ಅಧಿವೇಶನ ನಡೆದ ಸ್ಥಳ - ಮುಂಬಯಿಯ ಗೋಕುಲದಾಸ್ ತೇಜ್‌ಪಾಲ್ ಸಂಸ್ಕೃತ ವೇದಪಾಠ ಶಾಲೆ
- ಮೊದಲ ಅಧಿವೇಶನ ನಡೆದದ್ದು 1885 ಡಿಸೆಂಬರ್ 28, 29, 30
- ಮೊದಲ ಅಧಿವೇಶನದಲ್ಲಿ ಭಾಗವಹಿಸಿದ ಒಟ್ಟು ಸದಸ್ಯರ ಸಂಖ್ಯೆ - 72
- ಪ್ರಥಮ ಅಧಿವೇಶನದಲ್ಲಿ ಭಾಗವಹಿಸಿದ ಕನ್ನಡಿಗರು - ಭಟೆ (ಬೆಳಗಾವಿ), ನಾರಾಯಣರಾವ್ ಚಂದಾವರ್ಕರ್ (ಕಾರವಾರ)

## INCಯ ವಾರ್ಷಿಕ ಅಧಿವೇಶನಗಳು

| ಇಸವಿ | ಸ್ಥಳ | ಅಧ್ಯಕ್ಷರು |
|---|---|---|
| 1885 | ಬಾಂಬೆ | W.C. ಬ್ಯಾನರ್ಜಿ |
| 1886 | ಕಲ್ಕತ್ತಾ | ದಾದಾಬಾಯಿ ನವರೋಜಿ |
| 1887 | ಮದ್ರಾಸ್ | ಸಯ್ಯದ್ ಬಹ್ರುದ್ದೀನ್ ತ್ಯಾಬ್ಜಿ (ಪ್ರಥಮ ಮುಸ್ಲಿಂ ಅಧ್ಯಕ್ಷ) |
| 1888 | ಅಲಹಾಬಾದ್ | ಜಾರ್ಜ್ ಯೂಲೆ (ಪ್ರಥಮ ಆಂಗ್ಲ ಅಧ್ಯಕ್ಷ) |
| 1889 | ಬಾಂಬೆ | ಸರ್ ವಿಲಿಯಂ ವೆಡ್ಡರ್ ಬರ್ನ್ |
| 1890 | ಕಲ್ಕತ್ತ | ಫಿರೋಜ್ ಶಾ ಮೆಹ್ತ |
| 1891 | ನಾಗಪುರ | ಆನಂದ ಚಾರ್ಲು |
| 1892 | ಅಲಹಾಬಾದ್ | W.C. ಬ್ಯಾನರ್ಜಿ |
| 1893 | ಲಾಹೋರ್ | ದಾದಾಬಾಯಿ ನವರೋಜಿ |
| 1894 | ಮದ್ರಾಸ್ | ಆಲ್ ಫ್ರೆಡ್ ವೆಜ್ |
| 1895 | ಪೂನಾ | W.C. ಬ್ಯಾನರ್ಜಿ |
| 1896 | ಕಲ್ಕತ್ತ | ಓ. ರಹಿಮತುಲ್ಲಾ ಸಯಾನ |
| 1897 | ಅಮ್ರಾತಿ | ಸಿ.ಎಸ್. ನಾಯಕ್ |
| 1898 | ಮದ್ರಾಸ್ | ಆನಂದ ಮೋಹನ ಭೋಸ್ |
| 1899 | ಲಕ್ನೋ | ರೊಮೇಶ್ ಚಂದ್ರದತ್ |
| 1900 | ಲಾಹೋರ್ | ನಾರಾಯಣರಾವ್ ಚಂದಾವರ್ಕರ್ (ಪ್ರಥಮ ಕನ್ನಡಿಗ) |
| 1901 | ಕಲ್ಕತ್ತ | ಡಿ.ಇ. ವಾಚಾ |
| 1902 | ಅಹಮದಾಬಾದ್ | ಎಸ್.ಎನ್. ಬ್ಯಾನರ್ಜಿ |
| 1903 | ಮದ್ರಾಸ್ | ಲಾಲ್ ಮೋಹನ್ ಘೋಷ್ |
| 1904 | ಬಾಂಬೆ | ಸರ್ ಹೆನ್ರಿ ಕಾಟನ್ |
| 1905 | ವಾರಣಾಸಿ / ಬನಾರಸ್ | ಸಿ. ಗೋಪಾಲಕೃಷ್ಣ ಗೋಖಲೆ |
| 1906 | ಕಲ್ಕತ್ತ | ದಾದಾಬಾಯಿ ನವರೋಜಿ (ಸ್ವರಾಜ್ ಘೋಷಣೆ) |
| 1907 | ಸೂರತ್ | ರಾಸ್ ಬಿಹಾರಿ ಘೋಷ್ (ಕಾಂಗ್ರೆಸ್ ಒಡಕ) |
| 1908 | ಮದ್ರಾಸ್ | ರಾಸ್ ಬಿಹಾರಿ ಘೋಷ್ |

| | | |
|---|---|---|
| 1909 | ಲಾಹೋರ್ | ಮದನ್ ಮೋಹನ್ ಮಾಳವೀಯ |
| 1910 | ಅಲಹಾಬಾದ್ | ಸರ್ ವಿಲಿಯಂ ವೆಡ್ಡರ್ ಬರ್ನ್ |
| 1911 | ಕಲ್ಕತ್ತ | ಬಿಷನ್ ನಾರಾಯಣ ಧಾರ್ (ಪ್ರಥಮ ಬಾರಿಗೆ ರಾಷ್ಟ್ರಗೀತೆ ಹಾಡಿದ್ದು) |
| 1912 | ಪಾಟ್ನ | ಆರ್.ಎನ್. ಮುದೋಳ್ಕರ್ |
| 1913 | ಕರಾಚಿ | ಸಯ್ಯದ್ ಮಹಮ್ಮದ್ ಬಹದೂರ್ |
| 1914 | ಮದ್ರಾಸ್ | ಭೂಪೇಂದ್ರನಾಥ್ ಬೋಸ್ |
| 1915 | ಬಾಂಬೆ | ಸರ್.ಎಸ್.ಸಿನ್ಹ |
| 1916 | ಲಕ್ನೋ | ಎ.ಸಿ. ಮಜಂದಾರ್ (ಕಾಂಗ್ರೆಸ್ ಪುನರ್ ವಿಲೀನ ಹಾಗೂ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ನಡುವೆ ಒಡಂಬಡಿಕೆ) |
| 1917 | ಕಲ್ಕತ್ತ | ಶ್ರೀಮತಿ ಅನಿಬೆಸೆಂಟ್ (ಪ್ರಥಮ ಮಹಿಳಾ ಅಧ್ಯಕ್ಷೆ) |
| 1918 | ದೆಹಲಿ | ಮದನ್‌ಮೋಹನ ಮಾಳವೀಯ |
| 1919 | ಅಮೃತಸರ | ಮೋತಿಲಾಲ್ ನೆಹರು |
| 1920 | ಕಲ್ಕತ್ತ | ಲಾಲ ಲಜಪತ ರಾಯ್ (ವಿಶೇಷ ಅಧಿವೇಶನ, ಅಸಹಕಾರ ನಿರ್ಣಯ ಅಂಗೀಕಾರ) |
| 1920 | ನಾಗಪುರ | ವಿಜಯರಾಘುವಚಾರ್ (ಅಸಹಕಾರ ನಿರ್ಣಯಕ್ಕೆ ಸರ್ವಸಮ್ಮತ ಅಂಗೀಕಾರ ಮತ್ತು ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಸ್ಥಾಪನೆ) |
| 1921 | ಅಹ್ಮದಾಬಾದ್ | ಸಿ.ಆರ್. ದಾಸ್ ಜೈಲಿನಲ್ಲಿದ್ದರಿಂದ, ಹಕಿಂ ಅಜ್ಮಲ್ ಖಾನ್ ಹಂಗಾಮಿ ಅಧ್ಯಕ್ಷರು |
| 1922 | ಗಯ | ಚಿತ್ತರಂಜನ್ ದಾಸ್ |
| 1923 | ದೆಹಲಿ | ಅಬ್ದುಲ್ ಕಲಾಂ ಆಜಾದ್ (ವಿಶೇಷ ಅಧಿವೇಶನ) |
| 1924 | ಬೆಳಗಾಂ | ಮಹಾತ್ಮ ಗಾಂಧಿ (ಗಾಂಧಿಯವರ ಮತ್ತು ಕರ್ನಾಟಕದಲ್ಲಿ ನಡೆದ ಏಕೈಕ ಅಧಿವೇಶನ) |
| 1925 | ಕಾನ್ಪುರ | ಶ್ರೀಮತಿ ಸರೋಜಿನಿ ನಾಯ್ಡು (ಪ್ರಥಮ ಭಾರತೀಯ ಮಹಿಳಾ ಅಧ್ಯಕ್ಷೆ) |
| 1926 | ಗೌಹಾತಿ | ಎಸ್. ಶ್ರೀನಿವಾಸ್ ಅಯ್ಯಂಗಾರ್ |
| 1927 | ಮದ್ರಾಸ್ | ಡಾ. ಎಂ.ಎ. ಅನ್ಸಾರಿ |
| 1928 | ಕಲ್ಕತ್ತ | ಮೋತಿಲಾಲ್ ನೆಹರು |
| 1929 | ಲಾಹೋರ್ | ಜವಹರಲಾಲ್ ನೆಹರು (ಪೂರ್ಣ ಸ್ವರಾಜ್ಯ / ಸ್ವಾತಂತ್ರ್ಯ ಘೋಷಣೆ) |
| 1930 | | ಅಧಿವೇಶನ ಇಲ್ಲ ನೆಹರೂರವರೇ ಅಧ್ಯಕ್ಷರಾಗಿ ಮುಂದುವರಿಕೆ |
| 1931 | ಕರಾಚಿ | ವಲ್ಲಭಬಾಯಿ ಪಟೇಲ್ |
| 1932 | ದೆಹಲಿ | ಅಮೃತ್ ರಾಂಚೋದ್ದಾಸ್ ಸೇಠ್ |
| 1933 | ಕಲ್ಕತ್ತ | ಶ್ರೀಮತಿ ನೆಲ್ಲಿ ಸೇನ್ ಗುಪ್ತ |
| 1934 | ಬಾಂಬೆ | ಡಾ. ರಾಜೇಂದ್ರ ಪ್ರಸಾದ್ ಅಧಿವೇಶನ ಇಲ್ಲ ಡಾ. ರಾಜೇಂದ್ರ ಪ್ರಸಾದ್ ಅಧ್ಯಕ್ಷರಾಗಿ ಮುಂದುವರಿಕೆ |
| 1936 | ಲಕ್ನೋ | ಜವಹರಲಾಲ್ ನೆಹರು |

| | | |
|---|---|---|
| 1936 | ಫೈಜಾಪುರ | ಜವಾಹರಲಾಲ್ ನೆಹರು (ಹಳ್ಳಿಯಲ್ಲಿ ನಡೆದ ಪ್ರಥಮ ಅಧಿವೇಶನ) |
| 1938 | ಹರಿಪರಪುರ | ಸುಭಾಷ್ ಚಂದ್ರ ಬೋಸ್ |
| 1939 | ತ್ರಿಪುರ | ಸುಭಾಷ್ ಚಂದ್ರ ಬೋಸ್ (ರಾಜೀನಾಮೆ, ರಾಜೇಂದ್ರ ಪ್ರಸಾದ್ ಅಧ್ಯಕ್ಷರಾಗಿ ಮುಂದುವರಿಕೆ) |
| 1940 | ರಾಮ್‌ಘರ್ | ಮೌಲಾನ ಅಬುಲ್ ಕಲಾಂ ಆಜಾದ್‌ಯಿಂದಾಗಿ ಕಾಂಗ್ರೆಸನ್ನು ಬಹಿಷ್ಕೃತ ಸಂಸ್ಥೆ ಎಂದು |
| **1941 ರಿಂದ 45ರವರೆಗೆ ಕ್ವಿಟ್ ಇಂಡಿಯಾ ಚಳುವಳಿ ಘೋಷಿಸಿದ್ದರಿಂದ ಅಧಿವೇಶನವು ನಡೆಯಲಿಲ್ಲ** | | |
| 1946 | | ಮೀರತ್ ಆಚಾರ್ಯ ಜೆ.ಬಿ. ಕೃಪಲಾನಿ |
| 1947 | ದೆಹಲಿ | ಡಾ. ರಾಜೇಂದ್ರ ಪ್ರಸಾದ್ |
| 1948 | ಜೈಪುರ | ಡಾ. ಪಟ್ಟಾಭಿ ಸೀತಾರಾಮಯ್ಯ |

### 1885 ರಿಂದ 1905ರ ಮಂದಗಾಮಿಗಳ (Moderates period) ಯುಗದಲ್ಲಿನ ಪ್ರಮುಖ ನಾಯಕರು

- ದಾದಾಬಾಯಿ ನವರೋಜಿ
- ಫಿರೋಜ್ ಷಾ ಮೆಹ್ತ
- ಗೋಪಾಲಕೃಷ್ಣ ಗೋಖಲೆ
- ಸುರೇಂದ್ರನಾಥ ಬ್ಯಾನರ್ಜಿ
- ದೀನ್ ಷಾ ವಾಚ
- ಆನಂದ ಮೋಹನ ಬೋಸ್
- ರೊಮೇಸ್ ಚಂದ್ರದತ್

### ಮಂದಗಾಮಿಗಳ ಪ್ರಮುಖ ಬೇಡಿಕೆಗಳು

- ಪ್ರಾಂತೀಯ ಮತ್ತು ಕೇಂದ್ರೀಯ ಲೆಜಿಸ್ಲೇಟಿವ್ ಕೌನ್ಸಿಲ್‌ಗಳಿಗೆ ಭಾರತೀಯರಿಗೆ ಪ್ರವೇಶ ಅವಕಾಶ ಕೋರುವುದು. ಆ ಮೂಲಕ ವಾರ್ಷಿಕ ಆಯವ್ಯಯ (ಬಜೆಟ್), ಕುರಿತು ಚರ್ಚಿಸುವ ಮತ್ತು ಉಪಪ್ರಶ್ನೆಗಳನ್ನು ಕೇಳುವ ಅಧಿಕಾರ.
- ಭಾರತ ಮತ್ತು ಇಂಗ್ಲೆಂಡ್‌ನಲ್ಲಿ ICS ಪರೀಕ್ಷೆಗಳನ್ನು ನಡೆಸಲು ಆಗ್ರಹ, ಆ ಮೂಲಕ ಹೆಚ್ಚು ಭಾರತೀಯರಿಗೆ ಉನ್ನತ ಹುದ್ದೆ ಕೊಡಿಸುವ ಮೂಲಕ ಆಡಳಿತವನ್ನು ಭಾರತೀಕರಣ ಮಾಡುವುದು.
- ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದು.
- ಶಸ್ತ್ರಾಸ್ತ್ರ ಕಾಯ್ದೆಯನ್ನು ರದ್ದುಗೊಳಿಸಿ ಜನರು ಆಯುಧಗಳನ್ನು ಹೊಂದಲು ಅವಕಾಶ ಮಾಡಿಕೊಡಬೇಕು.
- ಸೇನೆಯಲ್ಲಿ ಭಾರತೀಯರಿಗೆ ಉನ್ನತ ಹುದ್ದೆಗಳನ್ನು ಮೀಸಲಿಡಬೇಕು.
- ಪ್ರಾಥಮಿಕ, ತಾಂತ್ರಿಕ, ಉನ್ನತ ಶಿಕ್ಷಣಗಳಿಗೆ ಸೌಲಭ್ಯಗಳನ್ನು ಹೆಚ್ಚಿಸುವುದು.
- ಕೃಷಿ ಬ್ಯಾಂಕುಗಳ ಅಭಿವೃದ್ಧಿ, ನೀರಾವರಿ, ಆರೋಗ್ಯ, ವೈದ್ಯಕೀಯ ಸೌಲಭ್ಯ ವಿಸ್ತರಿಸುವುದು.
- ಹೋಂ ಚಾರ್ಜಸ್ ಮತ್ತು ಮಿಲಿಟರಿ ವೆಚ್ಚದಲ್ಲಿ ಕಡಿತ.
- ಉಪ್ಪಿನ ಮೇಲಿನ ತೆರಿಗೆಯನ್ನು ರದ್ದುಗೊಳಿಸುವುದು.
- ಭೂಕಂದಾಯವನ್ನು ಕಡಿತ ಮಾಡಬೇಕು ಇತ್ಯಾದಿ ಇವರ ಪ್ರಮುಖ ಬೇಡಿಕೆಗಳಾಗಿತ್ತು.
- ತೀವ್ರಗಾಮಿಗಳು ಮಂದಗಾಮಿ ಹೋರಾಟವನ್ನು 3P ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು (Petition, Prayer & Protest)
- ಹಾಗೆಯೇ ಈ ಕಾಲವನ್ನು ರಾಜಕೀಯ ಭಿಕ್ಷೆಯ ಕಾಲ ಎಂದು ಟೀಕಿಸಲಾಯಿತು.
- ಈ ಕಾಲವನ್ನು ಲಾಲಾ ಲಜಪತರಾಯ್‌ರವರು 'ಅವಕಾಶವಾದಿಗಳ ಚಳವಳಿ' ಎಂದು ಕರೆದಿದ್ದಾರೆ.

**ತೀವ್ರಗಾಮಿಯುಗ - 1905-1919**

- ಮಂದಗಾಮಿ ಧೋರಣೆಯನ್ನು ಮೊದಲ ಬಾರಿಗೆ 1893-94ರಲ್ಲಿ ಅರಬಿಂದೋಘೋಷ್‌ರವರು "New Lamps for Old" ಎಂಬ ಶೀರ್ಷಿಕೆಯಡಿಯಲ್ಲಿ ಲೇಖನಗಳನ್ನು ಬರೆದು ಟೀಕಿಸಿದರು.
- ವಿವೇಕಾನಂದರ ಶಿಷ್ಯೆ ನಿವೇದಿತಾ (ಮಾರ್ಗರೆಟ್ ಎಲಿಜಬೆತ್ ನೋಬೆಲ್) ವಿವೇಕಾನಂದರ ದೌರ್ಬಲ್ಯವೇ ಪಾಪ, ದೌರ್ಬಲ್ಯವೇ ಮೃತ್ಯು" ಎಂಬ ಸಂದೇಶಕ್ಕೆ ರಾಜಕೀಯ ಬಣ್ಣ ನೀಡಿದರು.
- ತೀವ್ರಗಾಮಿತ್ವ ಹೆಚ್ಚು ಪ್ರಚಾರಕ್ಕೆ ಬರಲು ತಿಲಕ್‌ರವರು ಮುಖ್ಯ ಕಾರಣ 1894ರಲ್ಲಿ ರಾಷ್ಟ್ರೀಯ ಹಬ್ಬವಾಗಿ ಗಣಪತಿ ಹಬ್ಬವನ್ನು ಮತ್ತು 1896ರಲ್ಲಿ ಶಿವಾಜಿ ಹಬ್ಬವನ್ನು ಆಚರಿಸಲು ಪ್ರಾರಂಭಿಸಿದರು.

**ತೀವ್ರಗಾಮಿ ನಾಯಕರು**

- ಅರಬಿಂದೋ ಘೋಷ್
- ಬಾಲಗಂಗಾಧರ ತಿಲಕ್
- ಲಾಲಾ ಲಜಪತ್ ರಾಯ್
- ಬಿಪಿನ್ ಚಂದ್ರಪಾಲ್

**ತೀವ್ರಗಾಮಿತ್ವದ ಹುಟ್ಟಿಗೆ ಕಾರಣಗಳು**

- ಮಂದಗಾಮಿಗಳ ಮೃದು ಧೋರಣೆಗೆ ಬ್ರಿಟಿಷರ ಉದಾಸೀನತೆ
- ಸಮಾಜೋ ಧಾರ್ಮಿಕ ಸುಧಾರಕರ ಪಾತ್ರ
- 1896-97 ಮತ್ತು 1899-1901ರ ಬರಗಾಲ, ಪ್ಲೇಗ್ ರೋಗದ ಸಂದರ್ಭ ಬ್ರಿಟೀಷರ ಪರಿಹಾರ ಕ್ರಮಗಳು ಅತೃಪ್ತಿ ತಂದವು.
- ತಿಲಕರ ಬಂಧನ (18ತಿಂಗಳ ಕಾಲ)
- ದಕ್ಷಿಣ ಆಫ್ರಿಕಾದಲ್ಲಿ ಪೀಡನೆಗೆ ಒಳಗಾದ ಭಾರತೀಯರ ಬಗ್ಗೆ ಬ್ರಿಟಿಷರು ತೋರಿದ ಅಸಹಾನುಭೂತಿ.
- 1896ರಲ್ಲಿ ಇಥಿಯೋಪಿಯಾ - ಇಟಲಿಯನ್ನು ಸೋಲಿಸಿದ್ದು ಮತ್ತು 1905ರಲ್ಲಿ ಜಪಾನ್ ರಷ್ಯಾವನ್ನು ಸೋಲಿಸಿದ ಘಟನೆಯು ಭಾರತೀಯರಲ್ಲಿ ತೀವ್ರವಾದ ಹೋರಾಟಕ್ಕೆ ಸ್ಫೂರ್ತಿ ನೀಡಿತು.
- ಲಾರ್ಡ್ ಕರ್ಜನ್ (1899-1905)ನ ಸಾಮ್ರಾಜ್ಯ ಶಾಹಿ ನೀತಿ.

## ಬಂಗಾಳ ವಿಭಜನೆ

- ಲಾರ್ಡ್‌ಕರ್ಜನ್ 1905 ಜುಲೈ 19ರಂದು ಬಂಗಾಳ ವಿಭಜನೆಯನ್ನು ಘೋಷಿಸಿದ.
- 1905 ಆಗಸ್ಟ್ 7 - ಸಾಂಪ್ರದಾಯಿಕವಾಗಿ ಸ್ವದೇಶಿ ಚಳವಳಿ ಪ್ರಾರಂಭ (ವಂಗಭಂಗ ಚಳುವಳಿ)
- ಎಸ್.ಎನ್. ಬ್ಯಾನರ್ಜಿ ಮತ್ತು ಕೃಷ್ಣಕುಮಾರ್ ಮಿತ್ರರಿಂದ ಸ್ವದೇಶಿ ಚಳವಳಿ ಆರಂಭ.
- 1905 ಅಕ್ಟೋಬರ್ 16, ಬಂಗಾಳ ವಿಭಜನೆ ಆದೇಶ ಜಾರಿಗೆ ಬಂತು, ಅಧಿಕೃತವಾಗಿ ಬಂಗಾಳ ವಿಭಜನೆಯಾಯಿತು.
- 1906 ಅಕ್ಟೋಬರ್ 16, ರ ದಿನವನ್ನು ಶೋಕದಿನವಾಗಿ ಆಚರಿಸಲಾಯಿತು ಮತ್ತು ಠಾಗೂರ್‌ರವರ ಕರೆಯ ಮೇರೆಗೆ 'ರಕ್ಷಾ ಬಂಧನ' ದಿನವಾಗಿ ಆಚರಿಸಲಾಯಿತು.
- ಬಂಕಿಮ ಚಂದ್ರ ಚಟರ್ಜಿಯವರ 'ವಂದೇ ಮಾತರಂ' ಗೀತೆ ಅಮರ ಸ್ತೋತ್ರ ಗೀತೆಯಾಯಿತು.
- ಸ್ವದೇಶಿ ಚಳವಳಿ ಸಂದರ್ಭದಲ್ಲಿದ್ದ ವೈಸ್ರಾಯ್ 2ನೇ ಲಾರ್ಡ್ ಮಿಂಟೋ (1905-1910)
- ಸ್ವದೇಶಿ ಚಳವಳಿ ಸಂದರ್ಭದಲ್ಲಿ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ತೀರ್ವಗಾಮಿ ಸಂಸ್ಥೆ ಮ್ಯಾಜಿನಿ ಕ್ಲಬ್, ಇದರ ಸ್ಥಾಪಕರು ಹನುಮಂತರಾವ್ ದೇಶಪಾಂಡೆ ಮತ್ತು ಗೋವಿಂದರಾವ್‌ಯಲ್ಗಿ.
- ಬಾರಿಸಾಲ್ ಶಾಲಾ ಪ್ರಾಧ್ಯಾಪಕರಾದ ಅಶ್ವಿನಿಕುಮಾರ್‌ದತ್‌ರವರಿಂದ ಸಂಘಟಿಸಲ್ಪಟ್ಟ 'ಸ್ವದೇಶಿ ಬಂದಬ್ ಸಮಿತಿ' ಹೆಚ್ಚು ಪ್ರಸಿದ್ಧಿಗೆ ಬಂದಿತು.

- ರವೀಂದ್ರನಾಥ್ ಠಾಗೂರ್‌ರವರು ಈ ಸಂದರ್ಭದಲ್ಲಿ "ಅಮರ್ ಸೋನಾರ್ ಬಾಂಗ್ಲ" ಗೀತೆ ರಚಿಸಿದರು (ಈ ಗೀತೆ ಮುಂದೆ 1971ರಲ್ಲಿ ಬಾಂಗ್ಲಾದೇಶದ ರಾಷ್ಟ್ರಗೀತೆಯಾಯಿತು.
- ಈ ಸಂದರ್ಭದಲ್ಲೇ ಡಾಕಾದಲ್ಲಿ 1906ರಲ್ಲಿ ಮುಸ್ಲಿಂ ಲೀಗ್ ಸ್ಥಾಪನೆಯಾಯಿತು. (ಸ್ಥಾಪಕರು - ಆಗಾಖಾನ್ ನವಾಬ್ ಸಲೀಮುಲ್ಲಾ)
- 1907 ಸೂರತ್ ಒಡಕಿನ ಮೂಲಕ ಅಧಿಕೃತವಾಗಿ ಕಾಂಗ್ರೆಸ್ ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಎಂಬುದಾಗಿ ವಿಭಜನೆಯಾಯಿತು.
- ಕೇಸರಿ ಪತ್ರಿಕೆಯಲ್ಲಿ ತಿಲಕ್‌ರವರು ಉಗ್ರ ಲೇಖನಗಳನ್ನು ಬರೆದರು ಎಂದು ಆಪಾದಿಸಿ 1908ರಲ್ಲಿ 6 ವರ್ಷಗಳ ಕಾಲ ಬರ್ಮಾದ ಮಾಂಡೇಲ ಸೆರೆಮನೆಯಲ್ಲಿ ಬಂಧಿಸಲಾಯಿತು. ಈ ಸೆರೆಮನೆಯಲ್ಲಿ ತಿಲಕರು - "ಗೀತಾರಹಸ್ಯ" ಕೃತಿ ರಚಿಸಿದರು.
- ಇಂಗ್ಲೆಂಡಿನ ದೊರೆ 5ನೇ ಜಾರ್ಜನ ಆದೇಶದ ಮೇರೆಗೆ 1911ರಲ್ಲಿ ಬಂಗಾಳ ವಿಭಜನೆ ರದ್ದತಿ ಮತ್ತು ಕಲ್ಕತ್ತಾದಿಂದ ದೆಹಲಿಗೆ ರಾಜಧಾನಿ ವರ್ಗಾವಣೆಯನ್ನು ಅಂದಿನ ವೈಸ್ರಾಯ್ 2ನೇ ಲಾರ್ಡ್ ಹಾರ್ಡಿಂಜ್ (1910-1916) ಮಾಡಿದನು.
- 1914-ತಿಲಕ್ ಬಂಧನದಿಂದ ಬಿಡುಗಡೆಯಾದರು ಮತ್ತು ಬೆಳಗಾವಿಯಲ್ಲಿ (1915 ಮೇ) "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ಅದನ್ನು ಪಡೆದೇ ತೀರುತ್ತೇನೆ" ಎಂದು ಘೋಷಿಸಿದರು.
- 1916 ಏಪ್ರಿಲ್ - ತಿಲಕರಿಂದ ಹೋಂರೂಲ್ ಲೀಗ್ ಚಳವಳಿ ಆರಂಭ (ಮಹಾರಾಷ್ಟ್ರ ವಲಯ)
- 1916 ಸೆಪ್ಟೆಂಬರ್ - ಶ್ರೀಮತಿ ಅನಿಬೆಸೆಂಟ್‌ರಿಂದ ಹೋಂರೂಲ್ ಲೀಗ್ ಚಳವಳಿ ಆರಂಭ. (ಮದ್ರಾಸ್ ವಲಯ).
- 1916-ಲಕ್ನೋ ಒಡಂಬಡಿಕೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ (ತಿಲಕ್ ಮಹತ್ವ ಪಾತ್ರ ನಿರ್ವಹಿಸಿದರು).
- 1917 ಆಗಸ್ಟ್ 20ರಂದು ಕಾರ್ಯದರ್ಶಿ ಮಾಂಟೆಗ್ಯೂರವರಿಂದ ಆಗಸ್ಟ್ ಘೋಷಣೆ ಪ್ರಕಟ
- 1918ರಲ್ಲಿ ಕಾಂಗ್ರೆಸ್ನಲ್ಲಿ ಒಡಕು, ಸುರೇಂದ್ರನಾಥ್ ಬ್ಯಾನರ್ಜಿ ಕಾಂಗ್ರೆಸ್‌ನಿಂದ ಹೊರಬಂದು "ಇಂಡಿಯನ್ ಲಿಬರಲ್ ಫೆಡರೇಷನ್" ಸ್ಥಾಪಿಸಿದರು.
- ಪ್ರಮುಖ ಕ್ರಾಂತಿಕಾರಿ ಸಂಘಟನೆಗಳು ಮತ್ತು ಸ್ಥಾಪಕರು
- ವ್ಯಾಯಾಮ ಮಂಡಲ್ (ಮಹಾರಾಷ್ಟ್ರ) - (ಬಂಗಾಳದ ಪ್ರಥಮ ಕ್ರಾಂತಿಕಾರಿ ಸಂಘಟನೆ) - ಬರೀಂದ್ರಕುಮಾರ್ ಘೋಷ್, ಜಿತೇಂದ್ರನಾಥ್ ಬ್ಯಾನರ್ಜಿ, ಪ್ರಮೋದ್ ಮಿತ್ತಲ್, ಪುಲಿನ್‌ದಾಸ್ (ಡಾಕ ಶಾಖೆ ಮುಖ್ಯಸ್ಥ)
- ಬೆಂಗಾಳ್ ವಾಲಂಟರೀಸ್ - ಹೇಮಚಂದ್ರ ಘೋಷ್
- ಲೀಲನಾಗ್ ಮತ್ತು ಶ್ರೀ ಸಂಘ - ಅನಿಲ್ ರಾಯ್
- ಮಿತ್ರ ಮೇಳ (1899) / ಅಭಿನವ ಭಾರತ (1904) - ವಿನಾಯಕ ದಾಮೋದರ ಸಾವರ್ಕರ್, ಗಣೇಶ ದಾಮೋದರ್ ಸಾವರ್ಕರ್, ನಾರಾಯಣ ದಾಮೋದರ ಸಾವರ್ಕರ್.
- ಭಾರತ್ ಮಾತಾ ಸೊಸೈಟಿ - ಸರ್ದಾರ್ ಅಜಿತ್‌ಸಿಂಗ್
- ಸಂಜೀವಿನಿ ಸಭಾ (ಬಂಗಾಳ) - ಜ್ಯೋತೀಂದ್ರನಾಥ್
- ಹಿಂದೂಸ್ಥಾನ್ ಸೋಶಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ / ಆರ್ಮಿ - (1924 ಕಾನ್ಪುರ) ಸಚ್ಚೇಂದ್ರ ಸನ್ಯಾಲ್, ಯೋಗೇಶ್ ಚಂದ್ರ ಬ್ಯಾನರ್ಜಿ, (ರಾಂಪ್ರಸಾದ್ ಬಿಸ್ಮಿಲ್ಲಾ, ಚಂದ್ರಶೇಖರ ಆಜಾದ್, ಭಗತ್ ಸಿಂಗ್, ರಾಜಗುರು, ಸುಖದೇವ್, ಮುಂತಾದವರು ಈ ಸಂಘದ ಸದಸ್ಯರು)
- ಇಂಡಿಯನ್ ರಿಪಬ್ಲಿಕನ್ ಆರ್ಮಿ - ಸೂರ್ಯ ಸೇನ್
- ಇಂಡಿಯನ್ ನ್ಯಾಷನಲ್ ಆರ್ಮಿ (INA) - ಕ್ಯಾಪ್ಟನ್ ಮೋಹನ್‌ಸಿಂಗ್ (ಸ್ಥಾಪಕ) ಮತ್ತು ರಾಸ್ ಬಿಹಾರಿ ಘೋಷ್, 1943 ಜುಲೈ 4 /5 ರಂದು ಇದರ ಪ್ರಧಾನ ಮುಖ್ಯಸ್ಥರಾಗಿ ಸುಭಾಷ್‌ಚಂದ್ರ ಭೋಸ್ ನೇಮಕ.
- ಗದ್ದರ್ ಪಕ್ಷ (1913) ಅಮೇರಿಕಾದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಸ್ಥಾಪನೆ. ಸೋಹನ್‌ಸಿಂಗ್ ಭಕ್ನ, ಲಾಲ್ ಹರದಯಾಳ್.
- ಮ್ಯಾಜಿನಿ ಕ್ಲಬ್ (ಕರ್ನಾಟಕ) - ಹನುಮಂತರಾವ್ ದೇಶಪಾಂಡೆ ಮತ್ತು ಗೋವಿಂದರಾವ್‌ಯಲ್ಗಿ.

**ಕ್ರಾಂತಿಕಾರಿಗಳ ಪಿತೂರಿ ಮತ್ತು ಹತ್ಯೆಗಳು (Conspiracy & Kill)**

- ಕ್ರಾಂತಿಕಾರಿ ಚಳವಳಿ ಮೊದಲು ಪ್ರಾರಂಭವಾಗಿದ್ದು - ಮಹಾರಾಷ್ಟ್ರದಲ್ಲಿ
- ಭಾರತದ ಮೊದಲ ಕ್ರಾಂತಿಕಾರಿ - ವಾಸುದೇವ ಬಲವಂತ ಫಡ್ಕೆ - ಕ್ರಿ.ಶ. 1879.
- ರ್ಯಾಂಡ್ ಮತ್ತು ಆಯೆರ್ಸ್ಟ್ ಹತ್ಯೆ 1897 ಜೂನ್ 22- ಛಾಪೇಕರ್ ಸಹೋದರರು (ದಾಮೋದರ ಹರಿ, ಬಾಲಕೃಷ್ಣ ಹರಿ, ವಾಸುದೇವ ಹರಿ)
- ನ್ಯಾಯಾಧೀಶ ಕಿಂಗ್ಸ್ ಫೋರ್ಡ್ ಮೇಲೆ ಬಾಂಬ್ ಎಸೆತ (1908, ಏಪ್ರಿಲ್ 30) ಕಿಂಗ್ಸ್‌ಫೋರ್ಡ್ಸ್ ಬದಲು ಕೆನಡಿ ಕುಟುಂಬ ಬಲಿ - ಪ್ರಫುಲ್ಲಚಾಕಿ ಮತ್ತು ಖುದಿರಾಂ ಬೋಸ್
- ನ್ಯಾಯಾಧೀಶ ಜಾಕ್ಸನ್ ಹತ್ಯೆ (1909, ಡಿಸೆಂಬರ್ 21) - ಅನಂತ ಲಕ್ಷ್ಮಣ ಕಾನ್ಹೇರಿ
- ವೈಸ್ರಾಯ ಲಾರ್ಡ್ ಹಾರ್ಡಿಂಜ್ ಮೇಲೆ ವಿಫಲ ಬಾಂಬ್ ದಾಳಿ (1911 ಡಿಸೆಂಬರ್ 23) - ರಾಸ್ ಬಿಹಾರಿ ಘೋಷ್
- ಕಾಕೋರಿ ರೈಲು ಡಕಾಯಿತಿ (1925 ಆಗಸ್ಟ್ 9) - ರಾಂ ಪ್ರಸಾದ್ ಬಿಸ್ಮಿಲ್ಲಾ ಮತ್ತು ತಂಡ.
- ಐ.ಪಿ. ಸ್ಯಾಂಡರ್ಸ್ ಹತ್ಯೆ (1928 ನವೆಂಬರ್ 17) - ಭಗತ್‌ಸಿಂಗ್ ಮತ್ತು ರಾಜಗುರು.
- ದೆಹಲಿಯ ಕೇಂದ್ರೀಯ ಶಾಸನಸಭೆ ಮೇಲೆ ಬಾಂಬ್ ದಾಳಿ (1929, ಏಪ್ರಿಲ್ 8) - ಭಗತ್‌ಸಿಂಗ್ ಮತ್ತು ಭಟುಕೇಶ್ವರ ದತ್
- ವೈಸ್ರಾಯ್ ಇರ್ವಿನ್ ರೈಲು ಭೋಗಿಯ ಮೇಲೆ (ನಿಜಾಮುದ್ದೀನ್ ರೈಲು ನಿಲ್ದಾಣ, ದೆಹಲಿ ಬಳಿ) ಬಾಂಬ್ ಸ್ಫೋಟ - ಯಶ್‌ಪಾಲ್ ಮತ್ತು ಭಗವತಿ ಚರಣ ಬೋಹ್ರಾ
- ಚಿತ್ತಗಾಂಗ್ ಶಸ್ತ್ರಗಾರದ ಮೇಲೆ ದಾಳಿ (1930 ಏಪ್ರಿಲ್ 18 ರಿಂದ) - ಸೂರ್ಯಸೇನ್
- ಪೊಲೀಸ್ ಅಧಿಕಾರಿ - ಈ.ಎ. ಲೋಮನ್ ಮತ್ತು ಹಡ್ಸನ್‌ರನ್ನು ಗಾಯಗೊಳಿಸಿದವರು (1930 ಆಗಸ್ಟ್ 29) - ಡಾಕಾದಲ್ಲಿ ಬಿನಯ್ ಕೃಷ್ಣದಾಸ್
- ಕಲ್ಕತ್ತದ ರೈಟರ್ಸ್ ಬಿಲ್ಡಿಂಗ್ ಕಾರಗೃಹ ಮುಖ್ಯಸ್ಥ ಕರ್ನಲ್ ಸಿಂಪ್ಸನ್‌ನ ಹತ್ಯೆ - ಬಿನಯ್ ಕೃಷ್ಣ ದಾಸ್, ಬಾದಲ್ ಮತ್ತು ದಿನೇಶ್

**ಪ್ರಮುಖ ಮಹಿಳಾ ಕ್ರಾಂತಿಕಾರಿಗಳು**

- ಪ್ರೀತಿಲತ ವಡ್ಡೇದಾರ್
- ಶಾಂತಿಘೋಷ್
- ಬೀನಾದಾಸ್
- ಕಲ್ಪನಾದತ್
- ಸುನೇತಿ ಚೌದರಿ

## ಗಾಂಧಿಯುಗ - 1919 ರಿಂದ 1947

**ಮಹಾತ್ಮಗಾಂಧಿ :**

- ಜನನ - 1869, ಅಕ್ಟೋಬರ್ 2, ಗುಜರಾತಿನ ಪೋರಬಂದರಿನಲ್ಲಿ.
- ತಂದೆ - ಕರಮಚಂದಗಾಂಧಿ, ತಾಯಿ : ಪುತಲೀಬಾಯಿ, ಹೆಂಡತಿ - ಕಸ್ತೂರಿ ಬಾಯಿ
- ಮಕ್ಕಳು - ಹರಿಲಾಲ್ ಗಾಂಧಿ, ರಾಮದಾಸ್ ಗಾಂಧಿ, ಮಣಿಲಾಲ್ ಗಾಂಧಿ ಮತ್ತು ದೇವದಾಸ್ ಗಾಂಧಿ.
- 1887 - ಕಾನೂನು ಪದವಿಗಾಗಿ ಇಂಗ್ಲೆಂಡಿಗೆ ಪಯಣ.
- 3 ವರ್ಷ ಅಧ್ಯಯನ ತರುವಾಯ - ರಾಜ್‌ಕೋಟ್‌ನಲ್ಲಿ ವಕೀಲಿ ವೃತ್ತಿ ಆರಂಭ.
- ಗಾಂಧೀಜಿಯ ರಾಜಕೀಯ ಗುರು - ಗೋಪಾಲಕೃಷ್ಣ ಗೋಖಲೆ.
- 1893ರಲ್ಲಿ ದಾದಾ ಅಬ್ದುಲ್ಲಾ ಮತ್ತು ಕಂಪನಿಗೆ ಕಾನೂನು ನೆರವು ನೀಡಲು ದಕ್ಷಿಣ ಆಫ್ರಿಕಾಕ್ಕೆ ಪಯಣ.

## ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ

- ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ 20 ವರ್ಷಗಳ ಕಾಲ ಹೋರಾಟ.
- ಡರ್ಬಾನ್‌ನಿಂದ ಪ್ರಿಟೋರಿಯಾಗೆ ಹೋಗುವ ರೈಲಿನಲ್ಲಿ ಹವಮಾನ (ಮಾರಿಟ್ಜ್‌ಬರ್ಗ್ ನಿಲ್ದಾಣದಲ್ಲಿ ಹೊರದೂಡಲಾಯಿತು)
- ಕ್ರಿ.ಶ. 1893- ನಟಾಲ್ ಶಾಸನ ಸಭೆ ಭಾರತೀಯರ ಮತದಾನದ ಹಕ್ಕನ್ನು ಕಸಿದುಕೊಂಡಿತು. ಪರಿಣಾಮ ಗಾಂಧೀಜಿ ಮುಖಂಡತ್ವದಲ್ಲಿ ಹೋರಾಟ ಆರಂಭವಾಯಿತು.
- 1894 ಆಗಸ್ಟ್ 14 - ಹಸಿರು ರಟ್ಟಿನ ಪುಸ್ತಕ (ದಕ್ಷಿಣ ಆಫ್ರಿಕಾದಲ್ಲಿ ಬ್ರಿಟೀಷ್ ಭಾರತೀಯರ ಕಷ್ಟಕೋಟಲೆಗಳು) ಪ್ರಕಟಿಸಿದರು.
- ಕ್ರಿ. ಶ. 1894ರಲ್ಲಿ ಆಗಸ್ಟ್ 22 ನೆಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪಿಸಿದರು. ದಕ್ಷಿಣ ಆಫ್ರಿಕಾದಲ್ಲಿ ದರ್ಬಾನ್‌ನಲ್ಲಿ ಆರಂಭಿಸಿದ ಪ್ರಥಮ ಪತ್ರಿಕೆ ಇಂಡಿಯನ್ ಒಪಿನಿಯನ್ (ವಾರಪತ್ರಿಕೆ) ನಂತರ ಈ ಪತ್ರಿಕೆಯ ಕಾರ್ಯಾಲಯವನ್ನು ಪಿನಿಕ್ಸ್‌ಗೆ ವರ್ಗಾವಣೆ ಮಾಡಿದರು.
- ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್ ಬಳಿ 1904ರಲ್ಲಿ ಫಿನಿಕ್ಸ್ ಆಶ್ರಮ ಅಥವಾ ಟಾಲ್‌ಸ್ಟಾಯ್ ಫಾರ್ಮ್ (ಜಾನ್ ರಸ್ಕಿನ್‌ನ 'ಅನ್ ಟುದಿ ಲಾಸ್ಟ್' ಪ್ರೇರಣೆಯಿಂದ) ಸ್ಥಾಪಿಸಿದರು.
- 1906ರಲ್ಲಿ ಭಾರತೀಯರು ಕಡ್ಡಾಯವಾಗಿ ದಾಖಲಾತಿ ಪತ್ರ ಹೊಂದಬೇಕೆಂದು ಟ್ರಾನ್ಸ್‌ವಾಲ್ ಸರ್ಕಾರ ಏಷ್ಯಾಟಿಕ್ ಕಾಯ್ದೆಯನ್ನು ಜಾರಿಗೆ ತಂದಿತು. ಇದರ ವಿರುದ್ಧ ಜೋಹಾನ್ಸ್ ಬರ್ಗ್‌ನ ಜ್ಯೂಯಿಶ್ ಎಂಪೈರ್ ಥಿಯೇಟರ್‌ನಲ್ಲಿ ಬೃಹತ್ ಸಭೆ ಏರ್ಪಟ್ಟಿತು. ಆಗ ಗಾಂಧೀಜಿ ಬಂಧನಕ್ಕೆ ಒಳಗಾದರು.
- "ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯನ್ ಅಸೋಷಿಯೇಶನ್ ಸ್ಥಾಪನೆ" ಭಾರತಕ್ಕೆ ಹಿಂದಿರುಗಿ ಬರುವ ತನಕ ಅದರ ಗೌರವ ಕಾರ್ಯದರ್ಶಿಯಾಗಿದ್ದರು.
- 1906ರ ಜೂಲು ದಂಗೆಯ ಸಂದರ್ಭದಲ್ಲಿ ಸ್ವಯಂ ಸೇವಕರ ತಂಡದ ಮೂಲಕ ಸೈನಿಕರಿಗೆ ನೆರವು. ಇವರ ಈ ಸಮಾಜ ಸೇವೆಗಾಗಿ ಅಲ್ಲಿನ ಬಿಳಿಯರ ಸರ್ಕಾರ ಕೈಸರ್ ಎ-ಹಿಂದ್ ಎಂಬ ಪದವಿ ನೀಡಿತು.
- ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಪರಿಸ್ಥಿತಿ ಬಗ್ಗೆ ಬ್ರಿಟನ್ ಸರ್ಕಾರದ ಗಮನ ಸೆಳೆಯಲು ಹೆಚ್.ಬಿ. ಅಲಿಯೊಂದಿಗೆ ಇಂಗ್ಲೆಂಡ್‌ಗೆ ಪಯಣ.
- ಲಂಡನ್ನಿನಲ್ಲಿ ದಾದಾ ಬಾಯಿ ನವರೋಜಿಯವರೊಂದಿಗೆ ಭಾರತೀಯರ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.
- ಗಾಂಧೀಜಿ ಮನವಿ ಮೇರೆಗೆ ಸರ್ಕಾರವು ಟ್ರಾನ್ಸ್‌ವಾಲ್‌ನ ಏಷ್ಯಾಟಿಕ್ ಶಾಸನವನ್ನು ಕಾರ್ಯರೂಪಕ್ಕೆ ತರುವುದಿಲ್ಲ ಎಂಬ ಭರವಸೆ ನೀಡಿತು. ಇದು ಗಾಂಧೀಯವರ ಪ್ರಮುಖ ಯಶಸ್ಸು.
- ಪ್ರಿಟೋರಿಯಾದ ವಲಸೆ ಶಾಸನದ ವಿರುದ್ಧವೂ ಗಾಂಧೀಜಿ ಹೋರಾಟ ಆರಂಭಿಸಿದರು.
- ಏಷ್ಯಾಟಿಕ್ ಕಾಯ್ದೆಯು ಅಂಗೀಕಾರವಾದ ದಿನದಂದು ಬಹಿರಂಗವಾಗಿ ದಾಖಲಾತಿ ಪತ್ರಗಳನ್ನು ಸುಡಲಾಯಿತು. ಈ ಘಟನೆಯನ್ನು ಗಾಂಧೀಜಿಯವರ ರಾಜಕೀಯ ಜೀವನದಲ್ಲಿ 'ಬಾನ್ ಫೈರ್' ಎಂದು ಕರೆಯಲಾಗಿದೆ. (ಈ ಘಟನೆಯನ್ನು ಅಮೆರಿಕಾದ ಬೋಸ್ಟನ್ ಟೀ ಪಾರ್ಟಿಗೆ ಹೋಲಿಸಲಾಗಿದೆ)
- 1909 "ಹಿಂದ್ ಸ್ವರಾಜ್" ಪುಸ್ತಕವನ್ನು ಗುಜರಾತಿ ಭಾಷೆಯಲ್ಲಿ ಪ್ರಕಟಿಸಿದರು.
- 1912 "ನೀತಿ ಧರ್ಮ" ಎಂಬ ಪುಸ್ತಕ ಬರೆದರು.
- 1911 ಸೆಪ್ಟೆಂಬರ್‌ನಲ್ಲಿ ಗಾಂಧೀಜಿ ಮತ್ತು ಜನರಲ್ ಸ್ಮಟ್ಸ್ ನಡುವೆ ಒಪ್ಪಂದ, ಸ್ಮಟ್ಸ್ ಸೂಚಿಸಿದ ಸ್ವ ಇಚ್ಛೆಯ ದಾಖಲಾತಿಗೆ ಗಾಂಧೀಜಿ ಒಪ್ಪಿ, ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದರು.
- 1912 ಪಿನಿಕ್ಸ್ ಟ್ರಸ್ಟ್ ಸ್ಥಾಪನೆ
- 1912 ಅಕ್ಟೋಬರ್‌ನಲ್ಲಿ ದಕ್ಷಿಣ ಆಫ್ರಿಕಾಗೆ ಗೋಪಾಲ ಕೃಷ್ಣ ಗೋಖಲೆ ಬೇಟಿ.

- ಸರ್ ಸಾಲೋಮನ್ ವಿಚಾರಣಾ ಆಯೋಗದ ಶಿಫಾರಸ್ಸುಗಳನ್ನು ಅಂಗೀಕರಿಸಿದ ಬಿಳಿಯರ ಸರ್ಕಾರ ಇಂಡಿಯಾ ರಿಲೀಫ್ ಬಿಲ್ ಪಾಸುಮಾಡಿ ಮೂರು ಪೌಂಡುಗಳ ತಲೆಗಂದಾಯ, ಭಾರತೀಯ ಸಾಂಪ್ರದಾಯಿಕ ವಿವಾಹಗಳಿಗೆ ಮನ್ನಣೆ, ಭಾರತೀಯ ವಲಸೆಯನ್ನು ಮಾನವೀಯತೆಯಿಂದ ಪರಿಗಣಿಸುವುದು, ದಾಖಲಾತಿ ಪತ್ರ ಇತ್ಯಾದಿಗಳನ್ನು ಪುರಸ್ಕರಿಸಲಾಯಿತು.
- 1955 ಜನವರಿ 9, ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮಿಸಿದರು. ಈ ದಿನವನ್ನೇ ಪ್ರವಾಸಿ / ಅನಿವಾಸಿ ಭಾರತೀಯರ ದಿನವಾಗಿ ಆಚರಿಸಲಾಗುತ್ತಿದೆ.
- ಗುಜರಾತಿನ ಸಬರಮತಿಯಲ್ಲಿ ಆಶ್ರಮ ಸ್ಥಾಪಿಸಿದರು.

**ಭಾರತದಲ್ಲಿ ಗಾಂಧೀಜಿಯವರ ಸತ್ಯಾಗ್ರಹ ಪ್ರಯೋಗ : ಚಂಪಾರಣ್ :**

- ಗಾಂಧೀಜಿಯವರ ಪ್ರಥಮ ಸತ್ಯಾಗ್ರಹ ಪ್ರಯೋಗ ಯಶಸ್ವಿಯಾದ ಸ್ಥಳ.
- ಚಂಪಾರಣ್‌ನಲ್ಲಿನ ಮುಖ್ಯಸಮಸ್ಯೆ ನೀಲಿಬೆಳೆಗಾರರ ಸಮಸ್ಯೆ, (3/20 ಕಟ್ಟೆಯಲ್ಲಿ ಕಡ್ಡಾಯನೀಲಿ ಬೆಳೆದು ಯೂರೋಪಿನ ಪ್ಲಾಂಟರ್ಸ್‌ಗಳು ನಿಗದಿಪಡಿಸಿದ ಕನಿಷ್ಠ ಬೆಲೆಗೆ ಮಾರಬೇಕಿತ್ತು ಇದನ್ನೇ ತೀನ್ ಕಥಿಯಾ ಪದ್ಧತಿ ಎನ್ನುವರು)
- ಚಂಪಾರಣ್ ಸಮಸ್ಯೆಯನ್ನು ಗಾಂಧೀಜಿಗೆ ತಿಳಿಸಿದವನು ಸ್ಥಳೀಯರೈತ ಮುಖಂಡ ರಾಜಕುಮಾರ ಶುಕ್ಲ (1916ರ ಲಖ್ನೋ ಅಧಿವೇಶನದಲ್ಲಿ)

**ಅಹಮದಾಬಾದ್ ಕಾರ್ಮಿಕ ಮುಷ್ಕರ :-**

- ಇಲ್ಲಿನ ಹತ್ತಿಗಿರಣಿ ಮಾಲಿಕರು ಪ್ಲೇಗ್‌ಬೋನಸ್ಸನ್ನು ಹಿಂತೆಗೆದುಕೊಂಡಿದ್ದು ಕಾರ್ಮಿಕರು ಮುಷ್ಕರ ಹೂಡಲು ಕಾರಣ.
- ಗಾಂಧೀಜಿ ನೇತೃತ್ವದಲ್ಲಿ ಕಾರ್ಮಿಕರು ಮುಷ್ಕರ ಹೂಡಿದರು.
- 1918 ಮಾರ್ಚಿ 15 ರಿಂದ 18 ರವರೆಗೆ ಅಹಮ್ಮದಾಬಾದ್ ಕಾರ್ಮಿಕ ಮುಷ್ಕರ ಚಳುವಳಿ ಸಂದರ್ಭದಲ್ಲಿ ಪ್ರಥಮ ಬಾರಿಗೆ ಉಪವಾಸ ಕೈಗೊಂಡರು.

**ಖೇಡರೈತ ಚಳುವಳಿ :**

- ಬೆಳೆಹಾನಿಯಿಂದಾಗಿ ಗುಜರಾತಿನ ಖೇಡಾ ಜಿಲ್ಲೆಯ ರೈತರು ಸಂಕಷ್ಟಕ್ಕೀಡಾದ ಸಂದರ್ಭದಲ್ಲಿ ಸರ್ಕಾರ ಬಲಪ್ರಯೋಗದಿಂದ ಕಂದಾಯ ವಸೂಲಿ ಮಾಡಿದ್ದರಿಂದ ರೈತರು ಗಾಂಧೀಜಿ ನಾಯಕತ್ವದಲ್ಲಿ ಚಳವಳಿ ಹೂಡಿದರು. 1918 ಮಾರ್ಚಿ/ಏಪ್ರಿಲ್ ರಂದು ಖೇಡ ರೈತರ ಸಮಸ್ಯೆಯನ್ನು ಬಗೆಹರಿಸಲಾಯಿತು.

**ರಾಷ್ಟ್ರೀಯ ಚಳುವಳಿಗೆ ಗಾಂಧಿಯವರ ಪಾದಾರ್ಪಣೆ ರೌಲತ್ ಕಾಯ್ದೆ :**

- ಕ್ರಾಂತಿಕಾರಿ ಮತ್ತು ಭಯೋತ್ಪಾದಕ ಚಳುವಳಿಯನ್ನು ಹತ್ತಿಕ್ಕುವ ನೆಪದಲ್ಲಿ 1919 ಫೆಬ್ರವರಿ 6 ರಂದು ಈ ಕಾಯ್ದೆಯನ್ನು ಮಂಡಿಸಲಾಯಿತು.
- ಯಾವುದೇ ವ್ಯಕ್ತಿಯನ್ನು ವಿಚಾರಣೆಯಿಲ್ಲದೆ ಮತ್ತು ಕಾರಣವಿಲ್ಲದೆ ಬಂಧಿಸುವ, ಸರ್ಕಾರದ ವಿರುದ್ಧ ಕ್ರಾಂತಿಕಾರಕ ಸಾಹಿತ್ಯವನ್ನು ಪ್ರತಿಬಂಧಿಸುವ ಮೊದಲಾದ ವಿಶೇಷ ಅಧಿಕಾರಗಳನ್ನು ಈ ಕಾಯ್ದೆ ನೀಡಿತು.
- ಗಾಂಧೀಜಿಯವರು ಈ ಕಾಯ್ದೆಯನ್ನು ಹಿಂತೆಗೆದುಕೊಳ್ಳಲು ವೈಸ್ರಾಯ್ ಚೆಲ್ಮ್ಸ್ ಫೋರ್ಡ್‌ರಿಗೆ ಮನವಿ ಮಾಡಿಕೊಂಡರು. ಆದರೆ ಸರ್ಕಾರ ತಿರಸ್ಕರಿಸಿತು.
- ಇದರ ವಿರುದ್ಧ ಹೋರಾಡಲು ಗಾಂಧೀಜಿ 1919 ಫೆಬ್ರವರಿ 24 ರಂದು ಬೊಂಬಾಯಿಯಲ್ಲಿ ಸತ್ಯಾಗ್ರಹ ಸಭಾ ಸ್ಥಾಪಿಸಿದರು.

- ಈ ಸಂದರ್ಭದಲ್ಲಿ ಮುಸ್ಲಿಂಲೀಗಿನ ಮುಖಂಡ ಅಬ್ದುಲ್‌ಬಾರಿಯವರು ಗಾಂಧೀಜಿಯವರನ್ನು ಬೆಂಬಲಿಸಿದರು.
- ಈ ಕಾಯ್ದೆ ವಿರುದ್ಧ 1919 ಏಪ್ರಿಲ್ 6 ರಂದು ದೇಶದಾದ್ಯಂತ ಸತ್ಯಾಗ್ರಹ ನಡೆಸಲಾಯಿತು. ಈ ದಿನವನ್ನು ರಾಷ್ಟ್ರೀಯ ಅಪಮಾನದ ದಿನವಾಗಿ ಆಚರಿಸಲಾಯಿತು.
- 1919 ಏಪ್ರಿಲ್ 9 - ಗಾಂಧೀಜಿ ಬಂಧನ.
- ಪಂಜಾಬಿನ ಅಮೃತಸರ ಮತ್ತು ಲಾಹೋರ್‌ನಲ್ಲಿ ಸತ್ಯಾಗ್ರಹ ಚಳುವಳಿ ಹಿಂಸಾತ್ಮಕ ರೂಪ ತಾಳಿತು.
- ಗಾಂಧೀಜಿ ನೇತೃತ್ವದ ಪ್ರಥಮ ರಾಷ್ಟ್ರವ್ಯಾಪಿ ಸತ್ಯಾಗ್ರಹ ಇದಾಗಿತ್ತು.

### ಜಲಿಯನ್ ವಾಲಾಬಾಗ್ ದುರಂತ 1919 ಏಪ್ರಿಲ್ 13

- ಪಂಜಾಬ್ ಪ್ರಾಂತ್ಯಕ್ಕೆ ಬರಲು ಗಾಂಧೀಜಿಗೆ ನಿರ್ಬಂಧ.
- 1919 ಏಪ್ರಿಲ್ 10 ರಂದು ಸ್ಥಳೀಯ ಮುಖಂಡರಾದ ಡಾ. ಸತ್ಯಪಾಲ್ ಮತ್ತು ಡಾ. ಸೈಪುದ್ದೀನ್ ಕಿಚಲೂರವರ ಬಂಧನದ ಸುದ್ದಿಯಿಂದ ಪಂಜಾಬಿನ ಅಮೃತಸರದಲ್ಲಿ ಪ್ರತಿಭಟನೆ, ಶಾಲಾ ಉಪಾಧ್ಯಾಯಿನಿ ಮಿಸ್ ಶೇರವುಡ್ ಮೇಲೆ ಹಲ್ಲೆ.
- ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಜನರಲ್ ಮೈಕಲ್ ಓ ಡ್ವಯರ್‌ನು ಜಲಂದರ್‌ನ ಬ್ರಿಗೇಡಿಯರ್ ಜನರಲ್ ಡಯರ್‌ನಿಗೆ ಸೈನ್ಯದ ನಾಯಕತ್ವ ನೀಡಿ ಏಪ್ರಿಲ್ 12ರಂದು ನಗರದಲ್ಲಿ ಸಾರ್ವಜನಿಕ ಸಭೆಗಳನ್ನು ನಿಷೇದಿಸಲು ಆದೇಶ ಹೊರಡಿಸಿದ.
- ಏಪ್ರಿಲ್ 13, 1919 ರಂದು ವೈಶಾಖ ಉತ್ಸವದ ಸಂದರ್ಭದಲ್ಲಿ ಜಲಿಯನ್ ವಾಲಾಬಾಗ್ ಮೈದಾನದಲ್ಲಿ ಸಂಜೆ 4.30 ರ ಸಮಯದಲ್ಲಿ ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ಸುಮಾರು 10 ರಿಂದ 20 ಸಾವಿರ ಮಂದಿ ಸಭೆ ಸೇರಿದ್ದರು. ನೆರೆದಿದ್ದ ನಿರಾಯುಧ ಜನರ ಮೇಲೆ ಡಯರ್‌ನ ಅಣತೆಯಂತೆ 10 ನಿಮಿಷಗಳ ಕಾಲ 1650 ಸುತ್ತಿನ ಗುಂಡಿನ ದಾಳಿ ಮಾಡಲಾಯಿತು. ಪರಿಣಾಮ 379 ಮಂದಿ ಸತ್ತು ಸುಮಾರು 1200ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡರು. (ಕಾಂಗ್ರೆಸ್ ವಿಚಾರಣಾ ಸಮಿತಿ ಪ್ರಕಾರ ಸ್ಥಳದಲ್ಲೇ 1000 ಮಂದಿ ಸತ್ತರು 2000 ಮಂದಿ ತೀವ್ರವಾಗಿ ಗಾಯಗೊಂಡರು.
- ಏಪ್ರಿಲ್ 15 ಪಂಜಾಬ್ ಪ್ರಾಂತ್ಯದಲ್ಲಿ ಮಾರ್ಷಲ್ ಲಾ/ಸೈನ್ಯಾಡಳಿತ ಜಾರಿಗೆ ತರಲಾಯಿತು. ಜಲಿಯನ್ ವಾಲಾಬಾಗ್ ಬಗ್ಗೆ ತನಿಖೆ ಮಾಡಲು 1919ರಲ್ಲಿ ಹೆಚ್. ಹಂಟರ್ ಆಯೋಗ ನೇಮಿಸಲಾಯಿತು. ಹಂಟರ್ ಆಯೋಗದಲ್ಲಿ ಒಟ್ಟು 8 ಮಂದಿ ಸದಸ್ಯರಿದ್ದು ಅದರಲ್ಲಿ 3 ಮಂದಿ ಭಾರತೀಯರಾಗಿದ್ದರು. ಹೆಚ್. ಹಂಟರ್ ಆಯೋಗದಲ್ಲಿನ ಭಾರತೀಯರು.
    1. ಸರ್ ಸುಲ್ತಾನ್ ಅಹ್ಮದ್
    2. ಸರಂ ಚಿಮನ್ ಲಾಲ್ ಸೆಟಲ್‌ವಾಡ್
    3. ಪಂಡಿತ್ ಜಗತ್ ನಾರಾಯಣ್
- ಈ ದುರಂತರ ಹಿನ್ನೆಲೆಯಲ್ಲಿ ರವೀಂದ್ರನಾಥ್ ಠಾಗುರ್‌ರವರು ನೈಟ್ ಹುಡ್ ಪದವಿ ಹಿಂತಿರುಗಿಸಿ ಈ ದುರಂತವನ್ನು 'ರಾಕ್ಷಸಿ ಯುದ್ಧದ ರಾಕ್ಷಸಿ ಸಂತಾನ' ಎಂದು ಕರೆದರು.

### ಖಿಲಾಫತ್ ಚಳುವಳಿ

- ಪ್ರಥಮ ಮಹಾಯುದ್ಧ ಮುಕ್ತಾಯವಾದ ಮೇಲೆ ಜರ್ಮನಿ ಪರವಾಗಿ ಹೋರಾಡಿ ಸೋತಿದ್ದ ಟರ್ಕ ಸಾಮ್ರಾಜ್ಯವನ್ನು 1920ಮೇ ತಿಂಗಳಲ್ಲಿ ಆದ ಸೆವರ್ಸ್ ಒಪ್ಪಂದದಂತೆ ವಿಸರ್ಜಿಸಿ ಟರ್ಕಿಯ ಸುಲ್ತಾನನ ಸ್ಥಾನಮಾನವನ್ನು ಕಸಿದುಕೊಳ್ಳಲಾಯಿತು. ಟರ್ಕಿಯ ಸುಲ್ತಾನನನ್ನು ತಮ್ಮ ಖಲೀಫನೆಂದು ಭಾವಿಸಿದ್ದ ಭಾರತೀಯ ಇಸ್ಲಾಮಿಯರು ಖಲೀಫನಿಗಾದ ಆ ಅವಮಾನವನ್ನು ವಿರೋಧಿಸಿ, ನಡೆಸಿದ ಚಳುವಳಿಯೇ ಖಿಲಾಫತ್ ಚಳುವಳಿ.
- ಅಲಿ ಸಹೋದರರಾದ ಮಹಮ್ಮದ್ ಅಲಿ, ಶೌಕತ್ ಅಲಿ, ಮೌಲಾನಾ ಅಬುಲ್ ಕಲಾಂ ಆಜಾದ್ ಹಕೀಂ ಅಜಮಲ್

ಖಾನ್ ಮತ್ತು ಹರಸತ್ ಮೊಹಾನಿ ಮೊದಲಾದವರಿಂದ ಖಿಲಾಫತ್ ಸಮಿತಿ ರಚನೆಯಾಯಿತು.

- ಈ ಚಳವಳಿಯು ರಾಷ್ಟ್ರೀಯ ಚಳುವಳಿಗೆ ಹೊಸ ಹುರುಪು ನೀಡಿತು. ಹಿಂದೂ ಮುಸ್ಲಿಂ ಏಕತೆಯ ಹೋರಾಟಕ್ಕೆ ನಾಂದಿಯಾಯಿತು.
- ಆರ್ಯ ಸಮಾಜದ ಮುಖಂಡರಾದ ಸ್ವಾಮಿ ಶ್ರದ್ಧಾನಂದರಿಗೆ ದೆಹಲಿಯ ಜುಮ್ಮಾ ಮಸೀದಿಯಿಂದ ಧರ್ಮೋಪದೇಶ ಮಾಡಲು ಇಸ್ಲಾಂ ಧರ್ಮೀಯರು ಆಹ್ವಾನ ನೀಡಿದರು. ಹಾಗೆಯೇ ಅಮೃತಸರದ ಮುಸ್ಲಿಂ ಮುಖಂಡ ಡಾ. ಸೈಫುದ್ದಿನ್ ಕಿಚಲು ಅವರಿಗೆ ಸಿಖ್ಖರ ಪವಿತ್ರ ದೇವಾಲಯ ಸ್ವರ್ಣಮಂದಿರದಿಂದ ಬೀಗದ ಕೀಲಿಯನ್ನೂ ಕೊಡಲಾಯಿತು.
- 1919ರ ನವೆಂಬರನಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಖಿಲಾಫತ್ ಸಮ್ಮೇಳನ ನಡೆಯಿತು. ಗಾಂಧೀಜಿ ವಿಶೇಷ ಆಹ್ವಾನಿತರು.

**ಅಸಹಕಾರ ಚಳುವಳಿ**

- 1920 ಫೆಬ್ರವರಿಯಲ್ಲಿ ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ಖಿಲಾಫತ್ ಚಳವಳಿಯಲ್ಲಿ ಅಳವಡಿಸಿಕೊಳ್ಳುವಂತೆ ಗಾಂಧೀಜಿ ಸೂಚಿಸಿದರು.
- ಅಸಹಕಾರ ಚಳವಳಿಯ ರೂಪು ರೇಷೆಗಳಿಗೆ ಸಂಬಂಧಿಸಿದಂತೆ ನಿರ್ಣಯಕೈಗೊಳ್ಳಲು 1920 ಸೆಪ್ಟಂಬರ್‌ನಲ್ಲಿ ಲಾಲ ಲಜಪತರಾಯ್ ಅಧ್ಯಕ್ಷತೆಯಲ್ಲಿ ವಿಶೇಷ ಕಾಂಗ್ರೆಸ್ ಅಧಿವೇಶನ ಜರುಗಿತು.
- 1855 - 873 ಮತಗಳ ಅಂತರದಿಂದ ಅಸಹಕಾರ ನಿರ್ಣಯವನ್ನು ಈ ಅಧಿವೇಶನದಲ್ಲಿ ಅಂಗೀಕರಿಸಲಾಯಿತು. ಆದರೆ ಚಿತ್ತರಂಜನ್ ದಾಸ್, ತಿಲಕ್ ವಿರೋಧಿಸಿದರು. (ತಿಲಕ್, ಚಿತ್ತರಂಜನ್ ದಾಸ್‌ರವರು ಕೌನ್ಸಿಲ್ ಚುನಾವಣಾ ಬಹಿಷ್ಕಾರವನ್ನು ಅಸಹಕಾರದಲ್ಲಿ ಅಳವಡಿಸಿಕೊಂಡಿದ್ದರಿಂದಾಗಿ ಅಸಹಕಾರ ನಿರ್ಣಯವನ್ನು ವಿರೋಧಿಸಿದರು.)
- ನಂತರ 1920ರ ಡಿಸೆಂಬರ್‌ನಲ್ಲಿ ನಡೆದ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಸರ್ವಾನುಮತದಿಂದ ಅಸಹಕಾರ ನಿರ್ಣಯವನ್ನು ಅಂಗೀಕರಿಸಲಾಯಿತು.
- 1920 ಆಗಸ್ಟ್ 1 ರಂದು ಖಿಲಾಫತ್ ಮತ್ತು ಅಸಹಕಾರ ಚಳವಳಿ ಆರಂಭವಾಯಿತು. ಆ ದಿನವೇ ತಿಲಕರು ನಿಧನರಾದರು.

**ಅಸಹಕಾರ ಚಳುವಳಿಯ ಪ್ರಮುಖ ಕಾರ್ಯಕ್ರಮಗಳು :**

- ಬ್ರಿಟಿಷ್ ಸರ್ಕಾರ ನೀಡಿದಬಿರುದುಗಳನ್ನು ಹಿಂತಿರುಗಿಸುವುದು.
- ಶಾಲಾ ಕಾಲೇಜು, ನ್ಯಾಯಾಲಯ, ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸುವುದು.
- ಕರ ನಿರಾಕರಣೆ, ಸಾಮೂಹಿಕ ಕಾನೂನು ಭಂಗ ಚಳವಳಿಯನ್ನು ಹಮ್ಮಿಕೊಳ್ಳುವುದು.
- ಸರ್ಕಾರಿ ಸೇವೆಗೆ ರಾಜಿನಾಮೆ
- ಚುನಾವಣೆಗಳಿಗೆ ಬಹಿಷ್ಕಾರ
- ರಾಷ್ಟ್ರೀಯ ಶಾಲೆಗಳನ್ನು ಪ್ರಾರಂಭಿಸುವುದು
- ವ್ಯಾಜ್ಯಗಳ ಇತ್ಯರ್ಥಕ್ಕೆ ನ್ಯಾಯಾಲಯಗಳ ಸ್ಥಾಪನೆ ಇತ್ಯಾದಿ.
- ಜಮ್ನಲಾಲಂ ಬಜಾಜ್‌ರವರು ರಾಯ್ ಬಹದ್ದೂರ್ ಬಿರುದನ್ನು ಹಿಂದಿರುಗಿಸಿದರು.
- ದೇಶಬಂಧು ಚಿತ್ತರಂಜನ್ ದಾಸ್, ಮೋತಿಲಾಲ್ ನೆಹರು, ಚಕ್ರವರ್ತಿ ಸಿ. ರಾಜಗೋಪಾಲ ಚಾರಿ, ವಲ್ಲಭ ಬಾಯಿ ಪಟೇಲ್, ಎಂ.ಆರ್. ಜಯಕರ್, ಡಾ. ರಾಜೇಂದ್ರ ಪ್ರಸಾದ್, ಅಸಫ್ ಅಲಿ, ಮೊದಲಾದವರು ವಕೀಲಿ ವೃತ್ತಿಯನ್ನು ತ್ಯಜಿಸಿದರು.
- ದೇಶದಾದ್ಯಂತ 800 ರಾಷ್ಟ್ರೀಯ ಶಾಲಾ ಕಾಲೇಜುಗಳನ್ನು ಸ್ಥಾಪಿಸಲಾಯಿತು.

- 1921 ಮಾರ್ಚಿನಲ್ಲಿ ವಿಜಯವಾಡದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ತಿಲಕ್ ನಿಧಿ' ಸ್ಥಾಪಿಸಲು ತೀರ್ಮಾನಿಸಲಾಯಿತು.
- 1921 ನವೆಂಬರ್ 17, ವೇಲ್ಸ್ ರಾಜಕುಮಾರ ಭಾರತಕ್ಕೆ ಆಗಮನ. ಆ ದಿನವನ್ನು ಹರತಾಳವಾಗಿ ಆಚರಿಸಲು ಕಾಂಗ್ರೆಸ್ ಕರೆ ಕೊಟ್ಟಿತು.
- ಸೂರತ್ ಜಿಲ್ಲೆಯ ಬಾರ್ದೋಲಿಯಲ್ಲಿ ಕರನಿರಾಕರಣೆ ಕೈಗೊಳ್ಳಲು ಘೋಷಿಸಲಾಯಿತು. ಆದರೆ ಆರಂಭಿಸಲು ಆಗಲಿಲ್ಲ ಕಾರಣ **ಚೌರಿಚೌರ ಘಟನೆ**
- 1922 ಫೆಬ್ರವರಿ 5 ರಂದು ಉತ್ತರ ಪ್ರದೇಶದಲ್ಲಿ ಗೋರಕ್‌ಪುರ ಜಿಲ್ಲೆಯ ಚೌರಿಚೌರದಲ್ಲಿ ನಡೆದ ಹಿಂಸಾತ್ಮಕ ಘಟನೆಯಲ್ಲಿ 22 ಮಂದಿ ಪೊಲೀಸರನ್ನು ಠಾಣೆಗೆ ಬೆಂಕಿ ಹಚ್ಚಿ ಸಜೀವವಾಗಿ ದಹಿಸಲಾಯಿತು. ಪರಿಣಾಮವಾಗಿ ಫೆಬ್ರವರಿ 11 ರಂದು ಬಾರ್ದೋಲಿಯಲ್ಲಿ ಅಸಹಕಾರ ಚಳವಳಿಯನ್ನು ಸ್ಥಗಿತಗೊಳಿಸುವ ಏಕಪಕ್ಷೀಯ ನಿರ್ಧಾರವನ್ನು ಗಾಂಧೀಜಿ ಕೈಗೊಂಡರು. (ಇದನ್ನು ಬಾರ್ದೋಲಿ ನಿರ್ಣಯ ಎನ್ನುವರು.)
- 1922 ಫೆಬ್ರವರಿ 12 ರಂದು ಅಸಹಕಾರ ಚಳವಳಿ ನಿಲುಗಡೆಯಾಯಿತು.
- 1922 ಮಾರ್ಚ್ 10 ರಂದು ಸಬರಮತಿ ಆಶ್ರಮದಲ್ಲಿ ಗಾಂಧೀಜಿ ಮತ್ತು ಶಂಕರ್‌ಲಾಲ್ ಬ್ಯಾಂಕರ್ ಬಂಧನಕ್ಕೆ ಒಳಗಾದರು.
- ಗಾಂಧೀಜಿಗೆ 6 ವರ್ಷಗಳ ಕಾರಾಗೃಹ ಶಿಕ್ಷೆಯನ್ನು ನ್ಯಾಯಾಧೀಶರಾದ ಬ್ರೂಮ್ ಪೀಲ್ಡ್ ವಿಧಿಸಿದರು. ಆದರೆ ಅನಾರೋಗ್ಯ ನಿಮಿತ್ತ, 1924 ಫೆಬ್ರವರಿ 5 ರಂದು ಗಾಂಧೀಜಿ ಬಿಡುಗಡೆಯಾದರು.

### ಸವಿನಯ ಕಾನೂನು ಭಂಗ ಚಳುವಳಿ (ಉಪ್ಪಿನ ಸತ್ಯಾಗ್ರಹ) - 1930

- ಉಪ್ಪಿನ ಸತ್ಯಾಗ್ರಹದ ಮೂಲಕ ಗಾಂಧೀಜಿ ಕಾನೂನು ಭಂಗ ಚಳವಳಿಯನ್ನು ಪ್ರಾರಂಭಿಸಿದರು.
- 1930 ಮಾರ್ಚ್ 12 ರಂದು ಉಪ್ಪಿನ ಸತ್ಯಾಗ್ರಹಕ್ಕಾಗಿ ಸಬರಮತಿಯಿಂದ ದಂಡಿಗೆ 78 ಮಂದಿ ಅನುಯಾಯಿಗಳೊಂದಿಗೆ ಕಾಲ್ನಡಿಗೆಯನ್ನು ಬೆಳಿಗ್ಗೆ 6-30ರಲ್ಲಿ ಆರಂಭಿಸಿದರು.
- ದಂಡಿಯಾತ್ರೆಯ ಕಾಲ್ನಡಿಗೆಯಲ್ಲಿ ಭಾಗವಹಿಸಿದ್ದ ಕನ್ನಡಿಗ ಮೈಲಾರ ಮಹದೇವಪ್ಪ.
- ದಂಡಿಯಾತ್ರೆಯನ್ನು ಎಲ್ಬಾ ದ್ವೀಪದಿಂದ ತಪ್ಪಿಸಿಕೊಂಡ ನೆಪೋಲಿಯನ್ನನ ಪ್ಯಾರೀಸ್ ಪಯಣಕ್ಕೆ ಹೋಲಿಕೆ ಮಾಡಿದವರು **ಸುಭಾಷ್ ಚಂದ್ರಬೋಸ್**
- ಗಾಂಧೀಜಿಯ ದಂಡಿಯಾತ್ರೆಯನ್ನು ಲಂಕೆಗೆ ಹೊರಟ ಶ್ರೀರಾಮ ಚಂದ್ರನ ಯಾತ್ರೆಗೆ ಹೋಲಿಸಿರುವವರು **ಮೋತಿಲಾಲ್ ನೆಹರು**
- ಗಾಂಧಿಯ ದಂಡಿಯಾತ್ರೆಯನ್ನು ಮೋಸಸ್‌ನ ಜೊತೆಯಲ್ಲಿ ಯಹೂದಿಗಳ ವಲಸೆಗೆ ಹೋಲಿಕೆ ಮಾಡಿರುವ ವ್ಯಕ್ತಿ **ಆಚಾರ್ಯ ಪ್ರಪುಲ್ಲ ಚಂದ್ರ ರೇ.**
- 1930 ಏಪ್ರಿಲ್ 6ರ ಮುಂಜಾನೆ ದಂಡಿಯ ಕಡಲತೀರದಲ್ಲಿ ಗಾಂಧೀಜಿ ಉಪ್ಪನ್ನು ಕೈಯಿಂದ ಎತ್ತಿಕೊಳ್ಳುವ ಮೂಲಕ ಕಾನೂನು ಭಂಗ ಚಳವಳಿಯನ್ನು ಆರಂಭಿಸಿದರು.
- ಮದ್ರಾಸ್ ಪ್ರಾಂತ್ಯದಲ್ಲಿ ತಿರುಚನಾಪಳ್ಳಿಯಿಂದ ವೇದಾರಣ್ಯಂಗೆ ಉಪ್ಪಿನಯಾತ್ರೆ ಕೈಗಂಡವರು **ಸಿ. ರಾಜಗೋಪಾಲಚಾರಿ**
- ಮಲಬಾರಿನಲ್ಲಿ ಕಲ್ಲಿಕೋಟೆಯಿಂದ ಯಣ್ಣೂರ್ಗೆ ಉಪ್ಪಿನ ಸತ್ಯಾಗ್ರಹ ಯಾತ್ರೆ ಕೈಗೊಂಡವರು **ಕೆ. ಕಲ್ಲಪ್ಪನ್**

### ಉಪ್ಪಿನ ಸತ್ಯಾಗ್ರಹ ಚಳುವಳಿ ಸಂದರ್ಭದಲ್ಲಿ ನಡೆದ ಹಿಂಸಾತ್ಮಕ ಘಟನೆಗಳು

- 1930ರ ಏಪ್ರಿಲ್ 18 ಚಿತ್ತಗಾಂಗ್ ಶಸ್ತ್ರಾಗಾರ ದಾಳಿ - ಸೂರ್ಯಸೇನ್ ನೇತೃತ್ವದಲ್ಲಿ
- 1930ರ ಏಪ್ರಿಲ್ 23 ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ಬಂಧನದಿಂದಾಗಿ ಪೆ,ಆವರ್‌ನಲ್ಲಿ ಹಿಂಸಾತ್ಮಕ ಘಟನೆ.

- 1930 ಮೇ 7 ಗಾಂಧೀಜಿ ಬಂಧನ (1930 ಮೇ 4) ನಿರೋಧಿಸಿ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಜವಳಿ ಗಿರಣಿಗಳ ಕಾರ್ಮಿಕರು ಮುಷ್ಕರ ಹೂಡಿದರು.
- 1930 ಮೇ 21 - ದರಸನ (ಬೊಂಬಾಯಿ ಹತ್ತಿರ) ಸರ್ಕಾರಿ ಉಪ್ಪಿನ ಮಳಿಗೆ ಮೇಲೆ ಸರೋಜಿನಿ ನಾಯ್ಡು ನೇತೃತ್ವದಲ್ಲಿ ದಾಳಿ. ಇದರಲ್ಲಿ ಗಾಂಧೀಜಿ ಪುತ್ರ ಮಣಿಲಾಲ್‌ಗಾಂಧಿ ಭಾಗವಹಿಸಿದ್ದರು.
- 1930 ಜೂನ್ 1 ವಡಾಲ ಸರ್ಕಾರಿ ಉಪ್ಪಿನ ಕೇಂದ್ರದ ಮೇಲೆ ಸತ್ಯಾಗ್ರಹಿಗಳ ದಾಳಿ
- ಮಣಿಪುರ ಮತ್ತು ನಾಗಾಲ್ಯಾಂಡಿನ ವೀರಕನ್ಯೆ ರಾಣಿ ಗೈಡಿಲ್ಲು ತನ್ನ 13ನೇ ವಯಸ್ಸಿನಲ್ಲೇ ಗಾಂಧೀಜಿ ಪ್ರಭಾವದಿಂದ ಬ್ರಿಟೀಷರ ವಿರುದ್ಧ ಹೋರಾಟಕ್ಕೆ ಅಣಿಯಾದಳು. 1932ರಲ್ಲಿ ಇವಳಿಗೆ ಜೀವಾವಧಿ ಶಿಕ್ಷೆ ನೀಡಲಾಯಿತು. 1947 ಸ್ವತಂತ್ರ ಬಂದ ನಂತರ ಬಿಡುಗಡೆಯಾದಳು.

**ಕ್ವಿಟ್ ಇಂಡಿಯಾ ಚಳುವಳಿ**

- 1942 ಜುಲೈ 6-14 ರವರೆಗೆ ವಾರ್ಧಾದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಗಾಂಧೀಜಿಯವರ ಕ್ವಿಟ್ ಇಂಡಿಯಾ ನಿರ್ಣಯದ ಬಗ್ಗೆ ತೀವ್ರವಾದ ಚರ್ಚೆ ಆರಂಭವಾಯಿತು. ಜುಲೈ 14ರಂದು "ಕ್ವಿಟ್ ಇಂಡಿಯಾ" ನಿರ್ಣಯವನ್ನು ಅಂಗೀಕರಿಸಲಾಯಿತು.
- 1942 ಆಗಸ್ಟ್ 7 - ಬೊಂಬಾಯಿಯಲ್ಲಿ ಚರಿತ್ರಾರ್ಹವಾದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಸೇರಿತು.
- 1942 ಆಗಸ್ಟ್ 8 ರಂದು ಕ್ವಿಟ್ ಇಂಡಿಯಾ ಗೊತ್ತುವಳಿಯನ್ನು ಜವಹರಲಾಲ್ ನೆಹರುರವರು ಸಮಿತಿ ಮುಂದೆ ಮಂಡಿಸಿದರು.
- ಮುಂಬಯಿಯ ಗೋವಾಲಿಯ ಕೆರೆ ಮೈದಾನದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಯಿತು. ಗಾಂಧೀಜಿ "ಮಾಡು ಇಲ್ಲವೆ ಮಡಿ" ಎಂಬ ಮಂತ್ರ ಘೋಷಣೆಯನ್ನು ಜನರಿಗೆ ನೀಡಿದರು.
- 1942 ಆಗಸ್ಟ್ 9 ಗಾಂಧೀಜಿ, ಕಾರ್ಯದರ್ಶಿ ಮಹಾದೇವ ದೇಸಾಯಿ. ಪತ್ನಿ ಕಸ್ತೂರಿ ಬಾ, ಸರೋಜಿನಿನಾಯ್ಡು ಎಲ್ಲಾ ಪ್ರಮುಖ ಮುಖಂಡರು ಬಂಧಿಯಾದರು. ಇವರನ್ನು ಪೂನಾದ ಆಗಾಖಾನ್ ಅರಮನೆಯಲ್ಲಿ ಬಂಧಿಸಿಡಲಾಯಿತು. ಉಳಿದ ಮುಖಂಡರನ್ನು ಅಹ್ಮದ್ ನಗರ ಕೋಟೆಯಲ್ಲಿ ಬಂಧಿಸಿಡಲಾಯಿತು.
- ರಾಷ್ಟ್ರವ್ಯಾಪಿ ಆಂದೋಲನವಾದ ಈ ಚಳವಳಿಯ ಪ್ರಮುಖ ಘಟನಾವಳಿಗಳೆಂದರೆ :
- ಅಹ್ಮದಾಬಾದ್ ಗಿರಣಿ ನೌಕರರು 3 ತಿಂಗಳ ಕಾಲ ಮುಷ್ಕರ ಹೂಡಿದರು. ಈ ನಗರವನ್ನು ಭಾರತದ ಸ್ಟಾಲಿನ್‌ಗ್ರಾಡ್ ಎನ್ನುವರು.
- 332ರೈಲು ನಿಲ್ದಾಣಗಳು, 208 ಪೊಲೀಸ್ ಠಾಣೆಗಳು, 945 ಅಂಚೆ ಕಛೇರಿಗಳು ದೇಶದ ವಿವಿಧ ಭಾಗಗಳಲ್ಲಿ 664 ಬಾಂಬ್ ಸ್ಫೋಟಗಳು ಸಂಭವಿಸಿದವು. (ಬೊಂಬಾಯಿ ಪ್ರಾಂತ್ಯದಲ್ಲಿ 477 ಬಾಂಬ್ ಸ್ಫೋಟಗಳಾದವು).
- ಕರ್ನಾಟಕದಲ್ಲಿ ಸು. 1600 ತಂತಿ ಸಂಪರ್ಕ ಕಡಿದು ಹಾಕಿದ ಪ್ರಕರಣಗಳು ವರದಿಯಾದವು.
- ಈ ಸಂದರ್ಭದಲ್ಲಿ ಭೂಗತ ಚಳವಳಿ ಆರಂಭಿಸಿದವರು ರಾಮ್‌ಮನೋಹರ್ ಲೋಹಿಯಾ, ಶ್ರೀಮತಿ ಅರುಣಾ ಅಸಫ್ ಅಲಿ, ಸುಚೇತ ಕೃಪಲಾನಿ, ಆರ್.ಪಿ. ಗೋಯೆಂಕಾ, ಬಿಜು ಪಟ್ನಾಯಕ್, ಅಚ್ಯುತ ಪಟವರ್ಧನ್, ಜಯಪ್ರಕಾಶ್ ನಾರಾಯಣ್ ಮುಂತಾದವರು.
- 1943 ಫೆಬ್ರವರಿ 10ನೇ ತಾರೀಖಿನಿಂದ 21 ದಿನಗಳ ಕಾಲ ಸೆರೆಮನೆಯಲ್ಲಿ ಗಾಂಧೀಜಿ ಉಪವಾಸ ಆರಂಭಿಸಿದರು.

**ಪ್ರತಿ ಸರ್ಕಾರಗಳ ರಚನೆ :**

- ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಸಂಯುಕ್ತ ಪ್ರಾಂತ್ಯದ ಬಲಿಯಾ, ಬಂಗಾಳದ ತಾಮ್‌ಲುಕ್, ಮಹಾರಾಷ್ಟ್ರದ ಸತಾರ, ಕರ್ನಾಟಕದ ಈಸೂರಿನಲ್ಲಿ ಬ್ರಿಟೀಷರ ಸರ್ಕಾರದ ವಿರುದ್ಧ ಪ್ರತಿ ಸರ್ಕಾರಗಳು ರಚನೆಯಾದವು.

❖ ಈಸೂರು ದುರಂತ - 1942ರ ಸೆಪ್ಟೆಂಬರ್ 25 : ಶಿವಮೊಗ್ಗದ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ಪ್ರತಿಸರ್ಕಾರ ರಚನೆಯ ಸಂದರ್ಭ ಇಬ್ಬರು ಸರ್ಕಾರಿ ಅಧಿಕಾರಿಗಳನ್ನು ಕೊಲ್ಲಲಾಯಿತು. ನಂತರ ಸಶಸ್ತ್ರ ಪೊಲೀಸ್ ಪಡೆಯು ಆಗಮಿಸಿ ಗ್ರಾಮವನ್ನು ನಿಯಂತ್ರಣಕ್ಕೆ ತೆಗೆದುಕೊಂಡಿತು. ಗುರಪ್ಪ, ಶಂಕರಪ್ಪ, ಮಲ್ಲಪ್ಪ, ಹಾಲಪ್ಪ ಮತ್ತು ಸೂರ್ಯನಾರಾಯಣಾಚಾರಿ ಎಂಬ 5 ಮಂದಿಯನ್ನು ಗಲ್ಲಿಗೇರಿಸಲಾಯಿತು.

## 1919 ರಿಂದ 1947ರ ವರೆಗೆ ಪ್ರಮುಖ ಘಟನಾವಳಿಗಳು

❖ 1920 AITUC ಸ್ಥಾಪನೆ - ಲಲಾಲಜಪತರಾಯ್ ಅಧ್ಯಕ್ಷತೆಯಲ್ಲಿ ಪ್ರಥಮ ಅಧಿವೇಶನ ನಡೆಯಿತು.

❖ 1921 - ಮಲಬಾರ್‌ನಲ್ಲಿ ಮಾಪಿಳ್ಳೆಗಳು ಬ್ರಿಟೀಷರ ವಿರುದ್ಧ ದಂಗೆಯೆದ್ದರು. ನಂತರ ಅದು ಹಿಂದೂಗಳ ವಿರುದ್ಧ ತಿರುಗಿತು. ಸ್ವಾಮಿ ಶ್ರದ್ಧಾನಂದರು ಕೊಲೆಯಾದರು.

❖ 1923 ಜನವರಿ 1, ಗಯಾದಲ್ಲಿ ಸ್ವರಾಜ್ಯ ಪಕ್ಷ ಸ್ಥಾಪನೆ (ಅಧ್ಯಕ್ಷರು ಸಿ.ಆರ್. ದಾಸ್ ಮತ್ತು ಕಾರ್ಯದರ್ಶಿ ಮೋತಿಲಾಲ್ ನೆಹರು)

❖ ಕಲ್ಕತ್ತಾದ ಮೇಯರ್ ಆಗಿ ಸಿ.ಆರ್. ದಾಸ್ ನೇಮಕ (ಪ್ರಥಮ ಭಾರತೀಯ ಮೇಯರ್)

❖ 1924 ಕಾನ್ಪುರ ಪಿತೂರಿ ಮೊಕದ್ದಮೆ ಮತ್ತು ಬೆಳಗಾವಿ ಅಧಿವೇಶನ (ಗಾಂಧಿ ಅಧ್ಯಕ್ಷತೆ)

❖ 1927 ನವೆಂಬರ್ 8 ರಂದು ಸೈಮನ್ ಕಮಿಷನ್ ಆಯೋಗ ಸ್ಥಾಪನೆ

❖ 1928 ಫೆಬ್ರವರಿ 3 - ಸೈಮನ್ ಕಮಿಷನ್ ಭಾರತಕ್ಕೆ ಆಗಮನ

❖ ಸೈಮನ್ ಕಮಿಷನ್ ವಿರುದ್ಧ ಪ್ರತಿಭಟನೆ - ಕಾರಣ ಆಯೋಗದ ಎಲ್ಲಾ 7 ಮಂದಿ ಸದಸ್ಯರು ಬಿಳಿಯರೇ ಆಗಿದ್ದುದು.

❖ 1928 ಫೆಬ್ರವರಿ 3ರ ಸಂಜೆ ಮುಂಬಯಿಯ ಚೌಪಾಟಿಯ ಕಡಲ ದಂಡೆಯಲ್ಲಿ ಬೃಹತ್ ಬಹಿರಂಗ ಸಭೆ ಇದರ ವಿರುದ್ಧ ನಡೆಯಿತು.

❖ 1928 ಅಕ್ಟೋಬರ್ 20, ಲಾಹೋರ್‌ನಲ್ಲಿ ಸೈಮನ್ ವಿರುದ್ಧದ ಪ್ರದರ್ಶನದ ನೇತೃತ್ವ ವಹಿಸಿದ್ದವರು ಲಾಲಾಲಜಪತರಾಯ್ ಇವರ ಮೇಲೆ ಬಿದ್ದ ಲಾಠಿ ಏಟಿನ ಪರಿಣಾಮದಿಂದ ನವೆಂಬರ್ 17, 1928ರಂದು ಮರಣ ಹೊಂದಿದರು. (ಇದಕ್ಕೆ ಪ್ರತಿಕಾರವಾಗಿ ಇವರ ಸಾವಿಗೆ ಕಾರಣ ಕರ್ತನಾದ (ಸ್ಕಾಟ್) ಐ.ಪಿ. ಸ್ಯಾಂಡರ್ಸ್ ಪೊಲೀಸ್ ಅಧಿಕಾರಿಯನ್ನು ಭಗತ್‌ಸಿಂಗ್ ಮತ್ತು ಮಿತ್ರರು ಗುಂಡಿಕ್ಕಿ ಕೊಂದರು.

❖ ಲಕ್ನೋದಲ್ಲಿ ಸೈಮನ್ ಬಹಿಷ್ಕಾರ ಪ್ರದರ್ಶನ ನೇತೃತ್ವ ವಹಿಸಿದ್ದವರು ಜವಹರಲಾಲ್ ನೆಹರು ಮತ್ತು ಗೋವಿಂದ ವಲ್ಲಭಪಂಥ್.

❖ 1927 ಡಾ. ಅನ್ಸಾರಿ ಅಧ್ಯಕ್ಷತೆಯಲ್ಲಿ ನಡೆದ ಮದ್ರಾಸ್ ಕಾಂಗ್ರೆಸ್ ಅಧಿವೇಶನದಲ್ಲಿ ಕೈಗೊಂಡ ನಿರ್ಣಯದಂತೆ 1928 ಫೆಬ್ರವರಿ 28ರಂದು ಇವರ ಅಧ್ಯಕ್ಷತೆಯಲ್ಲೇ ದೆಹಲಿಯಲ್ಲಿ ಸರ್ವಪಕ್ಷಗಳ ಸಭೆ ನಡೆಯಿತು.

❖ ಭಾರತೀಯರಿಗೆ ಸರಿ ಹೊಂದುವ ಸಂವಿಧಾನ ರಚಿಸುವ ಉದ್ದೇಶದಿಂದ ಮೋತಿಲಾಲ್ ನೆಹರು ವರದಿ ಸಿದ್ಧವಾಯಿತು. (ಕಾರ್ಯದರ್ಶಿ ಬರ್ಕನ್ ಹೆಡ್ ಸವಾಲಿಗೆ ಪ್ರತಿಯಾಗಿ ವರದಿ ರಚಿತವಾಯಿತು.)

❖ 1929 ಡಿಸೆಂಬರ್ 31ರಂದು ಲಾಹೋರಿನ ರಾವಿ ನದಿ ದಂಡೆಯ ಮೇಲೆ ನೆಹರೂರವರು ತ್ರಿವರ್ಣಧ್ವಜ ಹಾರಿಸಿದರು.

❖ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ತೀರ್ಮಾನದಂತೆ 1930 ಜನವರಿ 26 ರಂದು ಪೂರ್ಣಸ್ವರಾಜ್ಯ ದಿನ (ಸ್ವಾತಂತ್ರ್ಯ ದಿನ) ಆಚರಿಸಲಾಯಿತು.

**ದುಂಡು ಮೇಜಿನ ಸಮ್ಮೇಳನಗಳು (ಲಂಡನ್ನಿನಲ್ಲಿ)**

- ಪ್ರಥಮ ದುಂಡು ಮೇಜಿನ ಸಮ್ಮೇಳನ 1930 ನವೆಂಬರ್ 16 ರಿಂದ 1931 ಜನವರಿ 19 (89 ಪ್ರತಿನಿಧಿಗಳು ಭಾಗವಹಿಸಿದ್ದರು)
- ದ್ವಿತೀಯ ದುಂಡುಮೇಜಿನ ಸಮ್ಮೇಳನ 1931 ಸೆಪ್ಟೆಂಬರ್ 1/7 ರಿಂದ 1931 ಡಿಸೆಂಬರ್ 1
- ತೃತೀಯ ದುಂಡುಮೇಜಿನ ಸಮ್ಮೇಳನ 1932 ನವೆಂಬರ್ 12/17 ರಿಂದ 1932 ಡಿಸೆಂಬರ್ 24
- ದುಂಡುಮೇಜಿನ ಸಮ್ಮೇಳನದಲ್ಲಿ ದಕ್ಷಿಣ ಸಂಸ್ಥಾನಗಳ ಪ್ರತಿನಿಧಿಯಾಗಿ ಭಾಗವಹಿಸಿದ ದಿವಾನರು ಮಿರ್ಜಾ ಇಸ್ಮಾಯಿಲ್
- ಮೂರೂ ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದ್ದರು - ಡಾ. ಬಿ.ಆರ್. ಅಂಬೇಡ್ಕರ್
- 1930 ಏಪ್ರಿಲ್ 6 - ದಂಡಿ ಸತ್ಯಾಗ್ರಹ ಆರಂಭ
- 1930 ಏಪ್ರಿಲ್ 13 - ಕರ್ನಾಟಕದ ಅಂಕೋಲ (ಕರ್ನಾಟಕದ ಬಾರ್ಡೋಲಿ ಮತ್ತು ದಂಡಿ)ದಲ್ಲಿ ಎಂ.ಪಿ. ನಾಡಕರ್ಣಿ ಮುಖಂಡತ್ವದಲ್ಲಿ ಉಪ್ಪಿನ ಸತ್ಯಾಗ್ರಹ ಆರಂಭ.
- 1931 ಮಾರ್ಚಿ 5 - ಗಾಂಧಿ - ಇರ್ವಿನ್ ಒಪ್ಪಂದ / ದೆಹಲಿ ಒಪ್ಪಂದ (ತೇಜ್‌ಬಹದ್ದೂರ್ ಸಪ್ರು ಮತ್ತು ಎಂ.ಆರ್. ಜಯಕರ್ ಪ್ರಯತ್ನದಫಲ)
- 1932 ಆಗಸ್ಟ್ 4/16 - ಬ್ರಿಟನ್ ಪ್ರಧಾನಿ ರಾಮ್ಸೆ ಮ್ಯಾಕ್‌ಡೊನಾಲ್ಡ್ ಮತೀಯ ತೀರ್ಪು ಪ್ರಕಟ (ನಿಮ್ನ ವರ್ಗದವರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ ನಿಗದಿ)
- 1932 ಸೆಪ್ಟೆಂಬರ್ 20 - ಮತೀಯ ತೀರ್ಪಿನ ವಿರುದ್ಧ ಗಾಂಧೀಜಿ ಯರವಾಡ ಜೈಲಿನಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭ
- 1932 ಸೆಪ್ಟೆಂಬರ್ 24/26 - ಪೂನಾ ಒಪ್ಪಂದ (ಯರವಾಡ ಒಪ್ಪಂದ) - ಗಾಂಧೀಜಿ ಮುಖಂಡತ್ವದಲ್ಲಿ ಸವರ್ಣೀಯರ ಪರವಾಗಿ ಮದನ್ ಮೋಹನ್ ಮಾಳವೀಯ ಮತ್ತು ನಿಮ್ನವರ್ಗ (ಅಸ್ಪೃಶ್ಯರು)ದ ಪರವಾಗಿ ಅಂಬೇಡ್ಕರ್ ಸಹಿ ಹಾಕಿದರು.
- 1938 ಏಪ್ರಿಲ್ 11 - ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಶಿವಪುರ ಧ್ವಜ ಸತ್ಯಾಗ್ರಹ
- 1938 ಏಪ್ರಿಲ್ 25 - ವಿದುರಾಶ್ವತ್ಥ ದುರಂತ (ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕು)
- 1939 ಏಪ್ರಿಲ್ -ಸುಭಾಸ್‌ಚಂದ್ರ ಬೋಸ್‌ರಿಂದ ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪನೆ
- 1940 ಮಾರ್ಚ್ 23/24 -ಲಾಹೋರ್‌ನಲ್ಲಿ ನಡೆದ ಮುಸ್ಲಿಂ ಲೀಗ್ ಅಧಿವೇಶನದಲ್ಲಿ ಮಹಮ್ಮದಾಲಿ ಜಿನ್ನಾರವರಿಂದ ದ್ವಿರಾಷ್ಟ್ರ ಸಿದ್ಧಾಂತ ಪ್ರತಿಪಾದನೆ (Two nation theory)
- 1940 - ಆಗಸ್ಟ್ 8 - ವೈಸ್ರಾಯ್ ಲಾರ್ಡ್ ಲಿನ್ ಲಿತ್‌ಗೋರವರಿಂದ ಆಗಸ್ಟ್ ಕೊಡುಗೆ ಘೋಷಣೆ
- 1942 ಮಾರ್ಚ್ 22 - ಸ್ಟಾಫರ್ಡ್ ಕ್ರಿಪ್ಸ್ ಆಯೋಗ ಭಾರತಕ್ಕೆ ಭೇಟಿ ಕ್ರಿಪ್ಸ್ ಯೋಜನೆಯನ್ನು ದಿವಾಳಿಯಾಗುತ್ತಿರುವ ಬ್ಯಾಂಕಿನ ಹೆಸರಿನಲ್ಲಿ ನೀಡಿದ ಮುಂದಿನ ಚೆಕ್ (post dated cheque on crashing bank) ಎಂದವರು ಗಾಂಧೀಜಿ.
- 1942 ಆಗಸ್ಟ್ 8 - ಕ್ವಿಟ್ ಇಂಡಿಯಾ ಚಳುವಳಿ ಆರಂಭ
- 1942 ಆಗಸ್ಟ್ 9 - ಗಾಂಧೀಜಿ, ನೆಹರು, ಪಟೇಲ್ ಮೊದಲಾದ ಪ್ರಮುಖ ನಾಯಕರೆಲ್ಲರ ಬಂಧನ.
- 1942 ಸೆಪ್ಟೆಂಬರ್ 25 - ಈಸೂರು ದುರಂತ
- 1944 ಮಾರ್ಚ್ ರಾಜಿ ಸೂತ್ರ

- 1945 ಜೂನ್ 14 - ವೇವಲ್ ಯೋಜನೆ
- 1945 ಜೂನ್ 25 - ಶಿಮ್ಲಾ ಸಮ್ಮೇಳನ (ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ನಡುವಿನ ಸಂವಿಧಾನ ಬಿಕ್ಕಟ್ಟು ಬಗೆಹರಿಸಲು)
- 1945 ಜುಲೈ - ಬ್ರಿಟನ್‌ನಲ್ಲಿ ಕ್ಲೆಮಂಟ್ ಅಟ್ಲಿ ನೇತೃತ್ವದಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂತು
- 1946 ಮಾರ್ಚ್ 24 - ಕ್ಯಾಬಿನೆಟ್ ನಿಯೋಗ ಭಾರತಕ್ಕೆ ಭೇಟಿ
- 1947 ಫೆಬ್ರವರಿ 20 - ಅಟ್ಲಿಯವರು ಪಾರ್ಲಿಮೆಂಟಿನಲ್ಲಿ 1948ರ ಜೂನ್ ಒಳಗಾಗಿ ಭಾರತಕ್ಕೆ ಅಧಿಕಾರ ಹಸ್ತಾಂತರಿಸುವ ಬಗ್ಗೆ ಘೋಷಣೆ
- 1947 ಮಾರ್ಚ್ 24 - ಭಾರತಕ್ಕೆ ಅಧಿಕಾರ ಹಸ್ತಾಂತರಿಸುವುದಕ್ಕಾಗಿ ಗವರ್ನರ್ ಜನರಲ್‌ನನ್ನಾಗಿ ಲಾರ್ಡ್ ಮೌಂಟ್ ಬ್ಯಾಟನ್‌ನನ್ನು ನೇಮಿಸಲಾಯಿತು.
- 1947 ಜೂನ್ 3 - ಮೌಂಟ್ ಬ್ಯಾಟನ್ ವರದಿ ಪ್ರಕಟ (ಜೂನ್ 3 ಪ್ಲಾನ್)
- 1947 ಜುಲೈ 18 - ಭಾರತ ಸ್ವಾತಂತ್ರ್ಯ ಅಧಿನಿಯಮ ಕಾಯ್ದೆಗೆ ಬ್ರಿಟಿಷ್ ಪ್ರಭುತ್ವದ ಅಂತಿಮ ಒಪ್ಪಿಗೆ
- 1947 ಆಗಸ್ಟ್ 15 - ಭಾರತಕ್ಕೆ ಸ್ವಾತಂತ್ರ್ಯ

## ಬಂಗಾಳದ ಬ್ರಿಟಿಷ್ ಗೌರ್ನರ್‌ಗಳು

- ರಾಬರ್ಟ್ ಕ್ಲೈವ್ -ಕ್ರಿ.ಶ. 1757/58-1760
- ಹೋಲ್‌ವಾಲ್ (ಹಂಗಾಮಿ) - ಕ್ರಿ.ಶ. 1760
- ವ್ಯಾನ್ಸಿಟಾರ್ಟ್ - ಕ್ರಿ.ಶ. 1760-1765
- ರಾಬರ್ಟ್ ಕ್ಲೈವ್ (2ನೇ ಬಾರಿ) - ಕ್ರಿ.ಶ. 1765 - 1767)
- ವೆರಲ್‌ಸೆಟ್ - ಕ್ರಿ.ಶ. 1767-69
- ಕಾರ್ಟಿಯರ್ - ಕ್ರಿ.ಶ. 1769 - 1772
- ವಾರನ್ ಹೇಸ್ಟಿಂಗ್ಸ್ - ಕ್ರಿ.ಶ. 1772 - 1774

## ರಾಬರ್ಟ್ ಕ್ಲೈವ್ - 1758 - 1760

- ಬ್ರಿಟಿಷ್ ಸಾಮ್ರಾಜ್ಯ ಸ್ಥಾಪಕ
- ಬಂಗಾಳದ ಪ್ರಥಮ ಗವರ್ನರ್
- 2ನೇ ಕರ್ನಾಟಿಕ್ ಯುದ್ಧದಲ್ಲಿ ನಿರ್ಣಾಯಕ ಪಾತ್ರ 1751 - ಆಗಸ್ಟ್‌ನಲ್ಲಿ ಆರ್ಕಾಟ್ ಗೆಲುವು.
- ಪ್ಲಾಸಿ ಕದನದಲ್ಲಿ (1757 ಜೂನ್ 23) - ಸಿರಾಜುದ್ದೌಲನ ವಿರುದ್ಧ ಗೆಲುವು
- 1765 ಆಗಸ್ಟ್‌ನಲ್ಲಿ - ಕಂಪನಿ ಮತ್ತು ಔದ್‌ಗಳ ನಡುವೆ ಅಲಹಾಬಾದ್ ಒಪ್ಪಂದ
- 1765 ಆಗಸ್ಟ್‌ನಲ್ಲಿ ಮೊಗಲ್ ಚಕ್ರವರ್ತಿ ಷಾ ಆಲಂನೊಡನೆ ಅಲಹಾಬಾದ್ ಒಪ್ಪಂದ
- ಬಂಗಾಳದಲ್ಲಿ ದ್ವಿಸರ್ಕಾರ ಪದ್ಧತಿ ಜಾರಿಗೆ ತಂದ
- ವಾಣಿಜ್ಯ ಸಂಘ ಸ್ಥಾಪನೆ
- 1774ರಲ್ಲಿ ಆತ್ಮಹತ್ಯೆ
- ಸ್ವರ್ಗದಲ್ಲಿ ಜನಿಸಿದ ಸೇನಾಪತಿ

**ಬ್ರಿಟಿಷ್ ಭಾರತದ ಗವರ್ನರ್ ಜನರಲ್‌ಗಳು**

- ವಾರನ್‌ಹೇಸ್ಟಿಂಗ್ಸ್ (ಪ್ರಥಮ ಗ. ಜನರಲ್) - ಕ್ರಿ.ಶ. 1774 - 1785
- ಸರ್ ಮ್ಯಾಕ್‌ಪರ್‌ಸನ್ (ಹಂಗಾಮಿ) - ಕ್ರಿ.ಶ. 1785 - 86
- ಲಾರ್ಡ್ ಕಾರ್ನ್‌ವಾಲೀಸ್ - ಕ್ರಿ.ಶ. 1786 - 93
- ಸರ್ ಜಾನ್ ಶೋರ್ - ಕ್ರಿ.ಶ. 1798 - 1805
- ಲಾರ್ಡ್ ಕಾರ್ನ್‌ವಾಲೀಸ್ (2ನೇ ಬಾರಿಗೆ)ಕ್ರಿ.ಶ. 1805
- ಸರ್ ಜಾರ್ಜ್ ಬಾರ್ಲೊ - ಕ್ರಿ.ಶ. 1805-1807
- ಲಾರ್ಡ್ ಮಿಂಟೋ I - ಕ್ರಿ.ಶ. 1807 - 1813
- ಲಾರ್ಡ್ ಹೇಸ್ಟಿಂಗ್ಸ್ - ಕ್ರಿ.ಶ. 1813 - 1823
- ಜಾನ್ ಆಡಂ (ಹಂಗಾಮಿ) ಕ್ರಿ.ಶ. 1823
- ಲಾರ್ಡ್‌ಆಮ್ ಹರ್ಸ್ಟ್ -ಕ್ರಿ.ಶ. 1823-28
- ಲಾರ್ಡ್ ವಿಲಿಯಂ ಬೆಂಟಿಂಕ್ - ಕ್ರಿ.ಶ. 1828 - 1835
- ಸರ್ ಚಾರ್ಲ್ಸ್ ಮೆಟ್‌ಕಾಫ್ - ಕ್ರಿ.ಶ. 1835 - 1936
- ಲಾರ್ಡ್ ಆಕ್ಲೆಂಡ್ - ಕ್ರಿ.ಶ. 1836 - 1842
- ಲಾರ್ಡ್ ಎಲ್ಲಿನ್‌ಬರೋ ಕ್ರಿ.ಶ. 1842 - 1844
- ಲಾರ್ಡ್ ಹಾರ್ಡಿಂಜ್ I ಕ್ರಿ.ಶ. 1844 - 1848
- ಲಾರ್ಡ್ ಡಾಲ್‌ಹೌಸಿ - ಕ್ರಿ.ಶ. 1848 - 1856
- ಲಾರ್ಡ್ ಕ್ಯಾನಿಂಗ್ - ಕ್ರಿ.ಶ. 1856 - 1858

**ವೈಸ್ರಾಯ್‌ಗಳು**

- ಲಾರ್ಡ್ ಕ್ಯಾನಿಂಗ್ ಕ್ರಿ.ಶ. 1858 - 1862
- ಲಾರ್ಡ್ ಎಲ್ಗಿನ್ I ಕ್ರಿ.ಶ. 1862 - 1863
- ಸರ್ ರಾಬರ್ಟ್ ನೇಪಿಯಾರ್ (ಹಂಗಾಮಿ) ಕ್ರಿ.ಶ. 1863
- ಸರ್. ವಿಲಿಯಂ ಟಿ. ಡಾನ್‌ಸನ್ (ಹಂಗಾಮಿ) ಕ್ರಿ.ಶ. 1863
- ಲಾರ್ಡ್ ಜಾನ್ ಲಾರೆನ್ಸ್ ಕ್ರಿ.ಶ. 1864 - 1869
- ಲಾರ್ಡ್ ಮೇಯೋ - ಕ್ರಿ.ಶ. 1869 - 1872
- ಲಾರ್ಡ್ ಲಾರ್ತ್ ಬ್ರೂಕ್ - ಕ್ರಿ.ಶ. 1872 - 1876
- ಲಾರ್ಡ್ ಲಿಟ್ಟನ್ - ಕ್ರಿ.ಶ. 1880 - 1884
- ಲಾರ್ಡ್ ಡಫರಿನ್ - ಕ್ರಿ.ಶ. 1884 - 1888
- ಲಾರ್ಡ್ ಲ್ಯಾನ್ಸ್‌ಡೌನ್ - ಕ್ರಿ.ಶ. 1888 - 1894
- ಲಾರ್ಡ್ ಎಲ್ಗಿನ್ 2 - ಕ್ರಿ.ಶ. 1894 - 1899
- ಲಾರ್ಡ್ ಕರ್ಜನ್ - ಕ್ರಿ.ಶ. 1899 - 1905
- ಲಾರ್ಡ್ ಮಿಂಟೋ - 2 ಕ್ರಿ.ಶ. 1905 - 10
- ಲಾರ್ಡ್ ಹಾರ್ಡಿಂಜ್ 2 - ಕ್ರಿ.ಶ. 1910 - 16

- ಲಾರ್ಡ್ ಚೆಲ್ಮಸ್‌ಫರ್ಡ್ - ಕ್ರಿ.ಶ. 1916 - 1921
- ಲಾರ್ಡ್ ರೀಡಿಂಗ್ - ಕ್ರಿ.ಶ. 1921 - 1925
- ಲಾರ್ಡ್ ಲಿಟ್ಟನ್ (2ನೇ ಬಾರಿ ಹಂಗಾಮಿ) - ಕ್ರಿ.ಶ. 1925
- ಲಾರ್ಡ್ ಇರ್ವಿನ್ - ಕ್ರಿ.ಶ. 1926 - 1931
- ಲಾರ್ಡ್ ವೆಲ್ಲಿಂಗ್‌ಟನ್ -ಕ್ರಿ.ಶ. 1931-34
- ಸರ್ ಜಾರ್ಜ್ ಸ್ಟ್ಯಾನ್ಲಿ - 1934
- ಲಾರ್ಡ್ ಲಿನ್ ಲಿತ್ ಗೋ - ಕ್ರಿ.ಶ. 1934 - 1943
- ಲಾರ್ಡ್ ವೇವಲ್ - ಕ್ರಿ.ಶ. 1943 - 1947
- ಲಾರ್ಡ್ ಮೌಂಟ್ ಬ್ಯಾಟನ್ - ಕ್ರಿ.ಶ. 1947 - 1948
- ಸಿ. ರಾಜಗೋಪಾಲಚಾರಿ - ಕ್ರಿ.ಶ. 1948-1950 (ಪ್ರಥಮ ಭಾರತೀಯ ಗೌರ್ನರ್ ಜನರಲ್)

## ವಾರನ್ ಹೇಸ್ಟಿಂಗ್ಸ್ (1773 - 1785)

- ಭಾರತದ ಪ್ರಥಮ ಗವರ್ನರ್ ಜನರಲ್
- 1773 ರೆಗ್ಯುಲೇಟಿಂಗ್ ಆಕ್ಟ್ ಜಾರಿಗೆ
- 1784 ಪಿಟ್ ಇಂಡಿಯಾ ಆಕ್ಟ್ ಜಾರಿಗೆ
- 1774 ರೋಹಿಲ್ಲಾ ಯುದ್ಧ (ಅಫ್ಘನ್ ಪಂಗಡದ ಮುಖ್ಯಸ್ಥ - ಹಪೀಜ್ ರಹಮತ್‌ಖಾನ್)
- 1773 ಔದ್ ನವಾಬ ಷಿರಾಜಉದ್ದೌಲನೊಡನೆ - ಬನಾರಸ್ ಒಪ್ಪಂದ
- ಬನಾರಸ್ ಒಪ್ಪಂದದ ಪ್ರಕಾರ ಹೇಸ್ಟಿಂಗ್ಸ್, ನವಾಬನಿಗೆ ಕಾರಾ ಮತ್ತು ಅಲಹಾಬಾದ್ ನೀಡಿದ (50 ಲಕ್ಷ ರೂಪಾಯಿಗೆ)
- 1775-82 ಮೊದಲ ಮರಾಠ ಯುದ್ಧ 1782 ಸಾಲ್ಬಾಯಿ ಒಪ್ಪಂದ
- 1780-84 ಎರಡನೇ ಆಂಗ್ಲೋ ಮೈಸೂರು ಯುದ್ಧ
- 1784 ಮಂಗಳೂರು ಒಪ್ಪಂದ
- ಬನಾರಸ್ ರಾಜ ಚೈತ್‌ಸಿಂಗ್ ಪ್ರಕರಣ (1778)
- ಔದ್‌ನ ಬೇಗಂ ಪ್ರಕರಣ (1782)
- ನಂದಕುಮಾರನ ಮರಣದಂಡನೆ (1775)
- ಬೆಂಗಾಲ್ ಏಷ್ಯಾಟಿಕ್ ಸೊಸೈಟಿ ಸ್ಥಾಪನೆ (1784) ವಿಲಿಯಂ ಜೋನ್ಸ್ ಅಧ್ಯಕ್ಷ
- ಬಂಗಾಳದಲ್ಲಿ ದ್ವಿಸರ್ಕಾರ ರದ್ದು (1772)

## ಲಾರ್ಡ್ ಕಾರನ್ ವಾಲೀಸ್ (1786-1893)

- ಹಂಗಾಮಿ ಗವರ್ನರ್ ಜನರಲ್ ಸನ್ ಜಾನ್ ಮ್ಯಾಕ್‌ಫರ್‌ಸನ್ ನಂತರ ಅಧಿಕಾರಕ್ಕೆ
- ಸ್ಥಿರ ಅಥವಾ ಶಾಶ್ವತ ಭೂಕಂದಾಯ ಪದ್ಧತಿ / ಖಾಯಂ ಜಮೀನ್ದಾರಿ ಪದ್ಧತಿ (The Permanent Land revenue Settlement) ಜಾರಿಗೆ 1793
- ಕಾರನ್‌ವಾಲೀಸ್ ಕೋಡ್ - ಸರ್ಕಾರದ ಇಲಾಖೆಗಳ ಅಧಿಕಾರಿಗಳ ಮಾರ್ಗದರ್ಶನಕ್ಕಾಗಿ ಜಾರ್ಜ್ ಬಾರ್ಲೋ ಎಂಬುವನಿಂದ ನಿಬಂಧನೆಗಳ ಹೊಸ ಸಂಗ್ರಹ ಸಿದ್ಧ ಇದೇ ಕಾರನ್‌ವಾಲೀಸ್ ಕೋಡ್ ಎನ್ನುವರು.
- ಸಿವಿಲ್ ಸರ್ವಿಸ್ ಹುದ್ದೆಗಳನ್ನು ಸೃಷ್ಟಿಸಿದ
- 3ನೇ ಆಂಗ್ಲೋ ಮೈಸೂರು ಯುದ್ಧ 1790-92 ಟಿಪ್ಪು ಸೋಲು (ಶ್ರೀರಂಗಪಟ್ಟಣ ಒಪ್ಪಂದ 1792 ಮಾರ್ಚ್ 18, 22)
- 1793 - ಚಾರ್ಟರ್ ಆಕ್ಟ್

**ಸರ್‌ಜಾನ್ ಶೋರ್ (1793 - 1798)**

- ❖ ಖಾಯಂ ಜಮೀನ್ದಾರಿ ಪದ್ಧತಿಯಲ್ಲಿ ನಿರ್ಣಾಯಕ ಪಾತ್ರ
- ❖ ತಾಟಸ್ಥ್ಯ ನೀತಿ
- ❖ 1795 ಖಾರ್ಡಾ ಕಾಳಗದಲ್ಲಿ ಮರಾಠರಿಂದ ಸೋಲು
- ❖ ಕಾಬೂಲ್ ದೊರೆ ಜಮಾನ್ ಷಾ ಪಂಜಾಬ್ ಮೇಲೆ ದಾಳಿ
- ❖ 1795 ಐರೋಪ್ಯ ಸೇನಾಧಿಕಾರಿಗಳ ದಂಗೆ

**ಲಾರ್ಡ್ ವೆಲ್ಲೆಸ್ಲಿ (1798-1805)**

- ❖ ಮೂಲ ಹೆಸರು - ಲಾರ್ಡ್ ಮಾರ್ನಿಂಗಟ್ಟನ್
- ❖ ಕಂಪನಿ ವಂಶದ ಅಕ್ಬರ್ ಎಂಬ ಹೆಸರು The Akbar and Company dynasty
- ❖ ಸಹಾಯಕ ಸೈನ್ಯ ಪದ್ಧತಿ Subsidiary Alliance ಜಾರಿಗೆ 1798
- ❖ ಪ್ರಥಮ ಬಾರಿಗೆ ಸಹಾಯಕ ಸೈನ್ಯ ಪದ್ಧತಿ ಒಪ್ಪಂದಕ್ಕೆ ಸಹಿಮಾಡಿದವನು - ಹೈದ್ರಾಬಾದ್ ನಿಜಾಮ ನಿಜಾಂ ಅಲಿಖಾನ್ (1798)
- ❖ ಈ ಪದ್ಧತಿ ವಿರೋಧಿಸಿದ ಮೊದಲಿಗ ಟಿಪ್ಪು ಸುಲ್ತಾನ್ (1798)

**ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಇತರರು**

- ❖ ಔದ್ ನವಾಬ ಸಾದತ್ ಅಲಿ - 1801
- ❖ ತಂಜಾವೂರಿನ ಸರ್ಫೋಜಿ - 1799
- ❖ ಮೈಸೂರಿನ ಮುಮ್ಮಡಿಕೃಷ್ಣರಾಜ ಒಡೆಯರ್ - 1799
- ❖ ಮರಾಠ ಪೇಶ್ವೆ 2ನೇ ಬಾಜಿರಾವ್ 1802 (ಬೆಸ್ಸಿನ್ ಒಪ್ಪಂದದ ಮೂಲಕ)
- ❖ ನಾಲ್ಕನೇ ಆಂಗ್ಲೋ - ಮೈಸೂರು ಯುದ್ಧ - 1799 ಟಿಪ್ಪು ಮರಣ. ಮೈಸೂರಿನ ಕೆಲವು ಭಾಗಗಳು ವಶ.
- ❖ 2ನೇ ಮರಾಠ ಯುದ್ಧ 1803 - 1805
- ❖ ತಂಜಾವೂರು ಮತ್ತು ಕರ್ನಾಟಿಕ್ ವಶದ ನಂತರ ಮದ್ರಾಸ್ ಪ್ರೆಸಿಡೆನ್ಸಿ ರಚನೆ
- ❖ ಸೂರತ್ ಸಂಸ್ಥಾನ ವಶ
- ❖ ಪರೂಕಾಬಾದ್ ವಶ (ಔದ್‌ನ ಒಂದು ಭಾಗ)
- ❖ ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥಗಳ ಆಳವಾದ ಅಧ್ಯಯನ
- ❖ 65ನೇ ವಯಸ್ಸಿನಲ್ಲಿ ಅಮೇರಿಕನ್ ಮಹಿಳೆ ಜೊತೆ ವಿವಾಹ
- ❖ ವೃದ್ಧ ಮೊಗಲ್ ಬಾದಷಹನಾದ ಷಾ ಆಲಂನನ್ನು ಕಂಪನಿಯ ರಕ್ಷಣೆಗೆ ಒಳಪಡಿಸಿದ.

**ಸರ್ ಜಾರ್ಜ್ ಬಾರ್ಲೋ (1805 - 1807)**

- ❖ 1806 ವೆಲ್ಲೂರ್ ಸಿಪಾಯಿ ದಂಗೆ
- ❖ ತಾಟಸ್ಥ್ಯ ನೀತಿ

**ಲಾರ್ಡ್ ಮಿಂಟೋ (1807 - 1813)**

- ❖ 1808 ಅಮೀರ್‌ಖಾನ್ ಪಠಾಣ ನಾಯಕ - ಬಿರಾರ್ ರಾಜ್ಯದ ಮೇಲೆ ದಾಳಿ
- ❖ ಬಿರಾರ್ ರಾಜ್ಯಕ್ಕೆ ನೆರವು
- ❖ ರಾಯಭಾರಿ ಚಾರ್ಲ್ ಮೆಟಕಾಫ್ - ರಣಜಿತ್‌ಸಿಂಗ್‌ನ ಆಸ್ಥಾನಕ್ಕೆ ಭೇಟಿ

- 1809 ರಣಜಿತ್‌ಸಿಂಗ್‌ನೊಂದಿಗೆ ಅಮೃತಸರ ಒಪ್ಪಂದ
- ಬ್ರಿಟಿಷರು ಮತ್ತು ರಣಜಿತ್‌ಸಿಂಗ್ ನಡುವೆ ಶಾಶ್ವತ ಮೈತ್ರಿ ಒಪ್ಪಂದ
- ಫ್ರಾನ್ಸ್ ಚಕ್ರವರ್ತಿ ನೆಪೋಲಿಯನ್ 1807ರಲ್ಲಿ ರಷ್ಯಾದ ಝಾರ್‌ನೊಡನೆ ಟಿಲ್ಸಟ್ ಒಪ್ಪಂದ
- ಪರ್ಶಿಯಾ, ಸಿಂಧ್, ಅಫಘಾನಿಸ್ತಾನಗಳಿಗೆ ರಾಯಭಾರ ನಿಯೋಗ
- ಫ್ರೆಂಚ್ ವಸಾಹತುಗಳಾದ ಬೋರ್ಬನ್ ಮತ್ತು ಮಾರಿಷಸ್‌ಗಳ ವಶ
- ಡಚ್ಚರಿಂದ ಜಾವಾ ವಶ
- 1813 ಚಾರ್ಟರ್ ಆಕ್ಟ್

## ಲಾರ್ಡ್ ಹೇಸ್ಟಿಂಗ್ಸ್ (1813 - 1823)

- ನೇಪಾಳ ಅಥವಾ ಗೋರ್ಖಾ ಯುದ್ಧ - (1814 / 16) ಗೆಲುವು - ಸಗೌಲಿ ಒಪ್ಪಂದ ಅಂದಿನಿಂದ ಮಾರ್ಕ್ವಿಸ್ ಆಫ್ ಹೇಸ್ಟಿಂಗ್ಸ್ ಎಂಬ ಹೆಸರು
- ಮೂರನೇ ಆಂಗ್ಲೋ ಮರಾಠಯುದ್ಧ (1817-18) - ಮರಾಠರ ಸೋಲು
- 1818 - ಪೇಶ್ವೆ ಹುದ್ದೆ ರದ್ದು
- ಕೊನೆಯ ಪೇಶ್ವೆ 2ನೇ ಬಾಜೀರಾಯನಿಗೆ 8 ಲಕ್ಷ ರೂ ನಿವೃತ್ತಿ ವೇತನ
- ಮರಾಠರಿಂದ ಭೂಭಾಗಗಳ ವಶ - ಬಾಂಬೆ ಪ್ರೆಸಿಡೆನ್ಸಿ ರಚನೆ
- ಪಿಂಡಾರಿಗಳೆಂಬ ದರೋಡೆಕೋರರ ದಮನ (1815-1817) ಪಿಂಡಾರಿಗಳ ನಾಯಕರು - ಅಮೀರ್‌ಖಾನ್, ಚಿತು, ಕರಿಂಖಾನ್, ವಾಸಿಲ್‌ಮಹಮ್ಮದ್
- ಶಿವಾಜಿ ವಂಶಸ್ಥ ಪ್ರತಾಪಸಿಂಗ್‌ನನ್ನು ಸತಾರದಲ್ಲಿ ಸಿಂಹಾಸನಕ್ಕೆ ತರಲಾಯಿತು.
- ಮದ್ರಾಸ್‌ನಲ್ಲಿ ರೈತ್ವಾರಿ ಪದ್ಧತಿ ಜಾರಿಗೆ (ಮದ್ರಾಸ್ ಗವರ್ನರ್ ಥಾಮಸ್ ಮನ್ರೋ) (1820)
- ದೇಶೀಯ ಭಾಷಾ ಶಾಲೆಗಳ ಸ್ಥಾಪನೆ (Vernaculer Schools)
- ಪಾಮರ್ ಮತ್ತು ಕಂಪನಿ ಎಂಬ ಬ್ಯಾಂಕಿಂಗ್ ಸಂಸ್ಥೆಗೆ ತೋರಿದ ಪಕ್ಷಪಾತದ ಹಿನ್ನೆಲೆಯಲ್ಲಿ ರಾಜೀನಾಮೆ.

## ಲಾರ್ಡ್ ಅಮ್‌ಹರ್ಸ್ಟ್ (1823-28)

- ಮೊದಲ ಬರ್ಮಯುದ್ಧ (1824-26)
- ಬ್ಯಾರಕ್‌ಪುರ ಸಿಪಾಯಿದಂಗೆ
- ಭರತ್‌ಪುರ ವಶ

## ಲಾರ್ಡ್ ವಿಲಿಯಂ ಬೆಂಟಿಂಗ್ (1828 - 1835)

- ಇವನ ಕಾಲ 'ಉದಾರ ನೀತಿಯ ಯುಗ'
- ಶಾಂತಿ ಪ್ರಿಯ, ಉದಾತ್ತ ಮತ್ತು ಪರೋಪಕಾರಿ
- ಸತಿ ಸಹಗಮನ ನಿಷೇಧ (1829 ಡಿಸೆಂಬರ್ 4)
- ತಗ್ಗೀ (ಠಕ್ಕರ್) ನಿರ್ಮೂಲನೆ (1829-35) (ಕರ್ನಲ್ ಸ್ಲೀಮನ್ ನೆರವು)
- 1833ರ ಚಾರ್ಟರ್ ಆಕ್ಟ್
- ಪ್ರಥಮ ಕಾನೂನು ಮಂತ್ರಿ ಮೆಕಾಲೆ ಟಿಪ್ಪಣಿ ಆಧರಿಸಿ - ಆಂಗ್ಲ ಶಿಕ್ಷಣ ಜಾರಿ.
- ಮೆಕಾಲೆಯಿಂದ ಕಾನೂನುಗಳ ಕ್ರೋಢೀಕರಣ ಆರಂಭ
- 1837 - ಪೀನಲ್ ಕೋಡ್ ಸಿದ್ಧತೆ (1860ರಲ್ಲಿ ಜಾರಿಗೆ)

- ಕಲ್ಕತ್ತದಲ್ಲಿ ಮೆಡಿಕಲ್ ಕಾಲೇಜ್ ಸ್ಥಾಪನೆ
- ಬಾಂಬೆಯಲ್ಲಿ ಎಲ್ಫಿನ್‌ಸ್ಟನ್ ಇನ್‌ಸ್ಟಿಟ್ಯೂಟ್ ಸ್ಥಾಪನೆ
- ಗಂಗಾನದಿಯಲ್ಲಿ ಉಗಿಯಂತ್ರ ಚಾಲಿತ ನೌಕಾಯಾನ (Steam Navigation)ಕ್ಕೆ ಚಾಲನೆ
- 1831 ಮೈಸೂರು ಸಂಸ್ಥಾನದಲ್ಲಿ ಕಮೀಷನರ್ ಆಳ್ವಿಕೆ
- 1835 ಕೊಡಗು ಪ್ರಾಂತ್ಯವಶ (ಚಿಕ್ಕವೀರ ರಾಜೇಂದ್ರನಿಂದ)
- ರಣಜಿತ್‌ಸಿಂಗ್ ಮತ್ತು ಸಿಂಧ್ ಅಮೀರ್‌ರೊಡನೆ ಮೈತ್ರಿ ಒಪ್ಪಂದ
- ಕಚಾರ್ ಮತ್ತು ಜಯಂತಿಯ ವಶ (1832)
- ಆಗ್ರಾ ಪ್ರಾಂತ್ಯ ರಚನೆ (1834)

**ಲಾರ್ಡ್ ಅಕ್ಲೆಂಡ್ (1835-5042)**

- ಪ್ರಥಮ ಆಫ್‌ಘಾನ್ ಯುದ್ಧ (1838 - 42)
- ರಣಜಿತ್‌ಸಿಂಗ್ ಮರಣ 1839

**ಲಾರ್ಡ್ ಎಲ್ಲಿನ್ ಬರೋ (1842-44)**

- ಅಫ್‌ಘನ್ ಯುದ್ಧ ಮುಕ್ತಾಯ (1842)
- ಸಿಂಧ್‌ವಶ (1843)
- 1843 - ಗುಲಾಮಗಿರಿ ನಿಷೇಧ

**ಲಾರ್ಡ್ ಹಾರ್ಡಿಂಜ್ I (1844 - 48)**

- ಮೊದಲ ಆಂಗ್ಲೋ - ಸಿಖ್ ಯುದ್ಧ (1845-46) - ಲಾಹೋರ್ ಒಪ್ಪಂದ (1846)
- ಒರಿಸ್ಸಾದ ಕೊಂಡರಲ್ಲಿದ್ದ ಮೀರಯ್ಯ ನರಬಲಿ ಆಚರಣೆ ರದ್ಧತಿ
- ಹೆಣ್ಣು ಶಿಶುಹತ್ಯೆ ನಿಷೇಧ

**ಲಾರ್ಡ್ ಡಾಲ್‌ಹೌಸಿ (1848 - 1856)**

- ಆಧುನಿಕ ಭಾರತದ ನಿರ್ಮಾಪಕ
- 2ನೇ ಆಂಗ್ಲೋ ಸಿಖ್ ಯುದ್ಧ (1848 - 49)
- 1849 ಪಂಜಾಬ್ ವಶ
- 2ನೇ ಬರ್ಮಾಯುದ್ಧ (1852) ಕೆಳಗಿನ ಬರ್ಮಾವಶ
- 1853ರ ಚಾರ್ಟರ್ ಆಕ್ಟ್
- 1856 ಔದ್ ವಶ (ನವಾಬ ವಾಜಿದ್ ಅಲಿಖಾನ್‌ನಿಂದ)
- 1856 ವಿಧವಾ ಪುನರ್ ವಿವಾಹ ಕಾಯ್ದೆ ಜಾರಿಗೆ
- ಸಾರ್ವಜನಿಕ ಲೋಕೋಪಯೋಗಿ ಇಲಾಖೆ ಸ್ಥಾಪನೆ
- ಸಂತಾಲರ ದಂಗೆ (1855-56)
- ಪ್ರಥಮ ರೈಲು ಸಂಚಾರ 1853 ಏಪ್ರಿಲ್ 16, ಬಾಂಬೆ-ಥಾಣಾ
- ಪ್ರಥಮ ಟೆಲಿಗ್ರಾಫ್ ಸಂಪರ್ಕ (1853) ಕಲ್ಕತ್ತಾ-ಆಗ್ರಾ

- ಅಂಚೆ ಪದ್ಧತಿ ಜಾರಿಗೆ (1853)
- ಚಾರ್ಲ್ಸ್‌ವುಡ್ ಶೈಕ್ಷಣಿಕ ವರದಿ (1854) (ಭಾರತೀಯ ಶಿಕ್ಷಣದ ಚಾರ್ಟರ್)
- ಆಶ್ರಿತ ಸಂಸ್ಥಾನಗಳ ರಾಜರ ಬಿರುದು ಬಾವಲಿಗಳ ರದ್ಧತಿ
- ಮೊಗಲ್ ಬಾದ್‌ಷನ ಬಿರುದು ರದ್ಧತಿ
- ದತ್ತುಪುತ್ರರಿಗೆ ಹಕ್ಕಿಲ್ಲ ಎಂಬ ನೀತಿ (Doctrine of lapse) ಜಾರಿಗೆ 1848
- ಈ ನೀತಿಗೆ ಬಲಿಯಾದ ರಾಜ್ಯಗಳು
  - ಸಂಬಲ್‌ಪುರ (ಒರಿಸ್ಸಾ) 1849
  - ಭಗತ್‌ಸಂಸ್ಥಾನ (1850)
  - ಉದಯಪುರ (1852)
  - ಝಾನ್ಸಿ (1853)
  - ನಾಗಪುರ (1854)

### ಲಾರ್ಡ್ ಕ್ಯಾನಿಂಗ್ (1856-57)

- ಕಲ್ಕತ್ತ, ಮದ್ರಾಸ್, ಬಾಂಬೆ ವಿಶ್ವವಿದ್ಯಾಲಯಗಳ ಸ್ಥಾಪನೆ (1857)
- 1857ರ ಮಹಾದಂಗೆ
- 1858 ನವೆಂಬರ್, 1, "ವಿಕ್ಟೋರಿಯಾ ರಾಣಿಯ ಘೋಷಣಾಪತ್ರ" ಅಲಹಾಬಾದ್‌ನಲ್ಲಿ ಪ್ರಕಟಣೆ
- 1858-62, ಪ್ರಥಮ ವೈಸ್ರಾಯ್ ಆಗಿ ಅಧಿಕಾರ
- 1859 ಬಿಳಿಯರ ದಂಗೆ
- 1860 ಪೀನಲ್ ಕೋಡ್ ಜಾರಿಗೆ (1837) ಮೆಕಾಲೆ ಸಿದ್ಧಪಡಿಸಿದ್ದು)
- 1861 ಸುಪ್ರೀಂಕೋರ್ಟ್ ಮತ್ತು ಸದರ್ ಅದಾಲತ್ ರದ್ಧತಿ ಮತ್ತು ಪ್ರತಿ ಪ್ರೆಸಿಡೆನ್ಸಿಯಲ್ಲಿ ಒಂದು ಹೈಕೋರ್ಟ್ ಸ್ಥಾಪನೆ
- 1861ರ ಇಂಡಿಯನ್ ಕೌನ್ಸಿಲ್ ಆಕ್ಟ್ ಜಾರಿ

### ಲಾರ್ಡ್ ಎಲ್ಗಿನ್ (1862-63)

- ಅಕಾಲಮರಣ (1862) ಸರ್ ನೇಪಿಯರ್ ಮತ್ತು ಸರ್ ಡೆನಿಸನ್‌ರವರು 1862ರಿಂದ64ರವರೆಗೆ ಆಡಳಿತ ನಿರ್ವಹಿಸಿದರು.

### ಲಾರ್ಡ್ ಜಾನ್‌ಲಾರೆನ್ಸ್ (1864-69)

- 1865 ಭೂತಾನ್ ಯುದ್ಧ
- ಕಲ್ಕತ್ತ, ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ಹೈಕೋರ್ಟ್ ಸ್ಥಾಪನೆ (1865)
- ಮೈಸೂರು ಸಂಸ್ಥಾನವನ್ನು ಒಡೆಯರಿಗೆ ನೀಡುವ ಭರವಸೆ (1867)

### ಲಾರ್ಡ್ ಮೇಯೋ (1869-72)

- 1870 ಆರ್ಥಿಕ ವಿಕೇಂದ್ರಿಕರಣ ನೀತಿ ಜಾರಿಗೆ
- ಅಂಕಿ-ಅಂಶಗಳ ಸರ್ವೆ ಇಲಾಖೆ ಸ್ಥಾಪನೆ
- ಕೃಷಿ ಮತ್ತು ವಾಣಿಜ್ಯ ಇಲಾಖೆ ಸ್ಥಾಪನೆ

- ❖ ಭಾರತೀಯ ರಾಜಕುಟುಂಬಗಳ ಶಿಕ್ಷಣ ಮತ್ತು ರಾಜಕೀಯ ತರಬೇತಿಗಾಗಿ ಅಜ್ಮೀರ್‌ನಲ್ಲಿ ಮೇಯೋ ಕಾಲೇಜ್ ಸ್ಥಾಪನೆ
- ❖ ಜೈಲು ಸುಧಾರಣೆಗೆ ಕ್ರಮ
- ❖ ರಾಜ್ಯ ರೈಲ್ವೆ ಪದ್ಧತಿ ಜಾರಿಗೆ
- ❖ 1872 ಶೇರ್‌ಆಲಿ ಎಂಬ ಅಫಘನ್ ಖೈದಿಯಿಂದ ಅಂಡಮಾನ್‌ನಲ್ಲಿ ಹತ್ಯೆ

**ಲಾರ್ಡ್ ನಾರ್ತ್ ಬ್ರೂಕ್ (1872-76)**

- ❖ 1875 ವೇಲ್ಸ್ ರಾಜಕುಮಾರ ಭೇಟಿ (7ನೇ ಎಡ್ವರ್ಡ್)
- ❖ ಮುಕ್ತ ವ್ಯಾಪಾರ ತತ್ವ ಜಾರಿಗೆ (Free Trade)
- ❖ 1874 ಆಮದು ಸರಕುಗಳ ಮೇಲಿನ ತೆರಿಗೆ ಇಳಿಕೆ ಶೇ 10 ರಿಂದ 7½ಕ್ಕೆ ಇಳಿಕೆ
- ❖ ರಫ್ತು ಸುಂಕ ರದ್ದು

**ಲಾರ್ಡ್ ಲಿಟ್ಟನ್ (1876-80)**

- ❖ 1876 ರಾಯಲ್ ಟೈಟಲ್ ಆಕ್ಟ್
- ❖ 1877 ಜನವರಿ 1 ದೆಹಲಿಯಲ್ಲಿ ವೈಭವದ ದರ್ಬಾರು ರಾಣಿ ವಿಕ್ಟೋರಿಯಾಳನ್ನು "ಭಾರತದ ಸಾಮ್ರಾಜ್ಞಿ" ಎಂದು ಘೋಷಣೆ
- ❖ 1876-78 ಭೀಕರ ಕ್ಷಾಮ (ದಕ್ಷಿಣ ಭಾರತ-ಮದ್ರಾಸ್, ಮೈಸೂರು, ಹೈದ್ರಾಬಾದ್, ಮುಂಬೈ)
- ❖ ಸರ್ ರಿಚರ್ಡ್ ಸ್ಟ್ರಾಚಿ ನೇತೃತ್ವದಲ್ಲಿ ಪ್ರಥಮ ಕ್ಷಾಮ ಆಯೋಗ (1878-80)
- ❖ ಏಕರೂಪವಾದ ಉಪ್ಪಿನ ತೆರಿಗೆ ಜಾರಿ
- ❖ ಸ್ಟ್ಯಾಚುಟೆರಿ ಸಿವಿಲ್ ಸರ್ವಿಸ್ (1879) -1/6 ಭಾಗ ಉನ್ನತ ಹುದ್ದೆಗಳು ಭಾರತೀಯರಿಗೆ
- ❖ ದೇಶಭಾಷಾ ವೃತ್ತ ಪತ್ರಿಕೆಗಳ ಶಾಸನ (ವರ್ನಾಕ್ಯುಲರ್) ಪ್ರೆಸ್ ಆಕ್ಟ್ ಜಾರಿಗೆ) 1878
- ❖ ಆಯುಧಗಳ ಶಾಸನ (Arms Act) ಜಾರಿಗೆ 1878
- ❖ ಬ್ರಿಟಿಷ್ ಭಾರತದ ನೀರೋ ಎಂಬ ಅನ್ವರ್ಥನಾಮ

**ಲಾರ್ಡ್ ರಿಪ್ಪನ್ (1880-84)**

- ❖ ಅತ್ಯಂತ ಜನಪ್ರಿಯ ಭಾರತೀಯ ಪರವಾದಿ ಗವರ್ನರ್ ಜನರಲ್
- ❖ ಪ್ರಥಮ ಕೈಗಾರಿಕೆ ಕಾಯ್ದೆ ಜಾರಿಗೆ - 1881
- ❖ ಪ್ರಥಮ ಜನಗಣತಿ - 1881 (25.4 ಕೋಟಿ ಜನಸಂಖ್ಯೆ)
- ❖ ಸ್ಥಳೀಯ ಸರ್ಕಾರ ರಚನೆ (1882) ಪರಿಣಾಮ ಸ್ಥಳೀಯ ಸರ್ಕಾರದ ಪಿತಾಮಹ ಎಂಬುದಾಗಿ ಜನಪ್ರಿಯ.
- ❖ ದೇಶೀಯ ಭಾಷಾ ಪತ್ರಿಕಾ ಕಾಯ್ದೆ ರದ್ದತಿ - 1882
- ❖ ಪ್ರಥಮ ಶೈಕ್ಷಣಿಕ ಆಯೋಗ - ವಿಲಿಯಂ ಹಂಟರ್ ಆಯೋಗ - 1882ರಲ್ಲಿ ರಚನೆ
- ❖ 1883 ಇಲ್ಬರ್ಟ್ ಬಿಲ್ ಮಸೂದೆ ವಿವಾದ (ಪ್ರಥಮ ಬಾರಿಗೆ ಭಾರತೀಯ ನ್ಯಾಯಾಧೀಶರಿಗೆ ಯೂರೋಪಿನ ಆಪಾದಿತರನ್ನು ವಿಚಾರಣೆ ಮಾಡುವ ಅಧಿಕಾರ ಈ ಮಸೂದೆ ನೀಡಿತ್ತು)
- ❖ ಆಫ್‌ಘನ್ ಸಮಸ್ಯೆಯ ಪರಿಹಾರ

- ಅಬ್ದುಲ್ ರೆಹಮಾನ್‌ನನ್ನು ಅಫಘಾನಿಸ್ಥಾನದ ಅಮೀರ್/ದೊರೆ ಎಂದು ಅಂಗೀಕಾರ
- ಒಡೆಯರಿಗೆ ಮೈಸೂರು ಸಂಸ್ಥಾನದ ವರ್ಗಾವಣೆ (1881)

**ಲಾರ್ಡ್ ಢಫರಿನ್ (1884-1894)**

- 3ನೇ ಬರ್ಮಾ ಯುದ್ಧ (1884-1886)
- INC ಸ್ಥಾಪನೆ (ಭಾರತೀಯ ರಾಷ್ಟ್ರೀಯ ಕಾಂಗ್ರೆಸ್)
- 1886 ಜನವರಿ ಮೇಲಣ ಬರ್ಮಾ ವಶ.

**ಲಾರ್ಡ್ ಲ್ಯಾನ್ಸ್ ಡೌನ್ (1888-1894)**

- 1891 - 2ನೇ ಪ್ಯಾಕ್ಟರಿ ಆಕ್ಟ್
- ಭಾರತದ ರೂಪಾಯಿ ಮೌಲ್ಯ ಸ್ಥಿರಗೊಳಿಸಲು ಕ್ರಮ
- ಭಾರತ-ಅಫಘಾನಿಸ್ತಾನ್ ನಡುವೆ ಡುರಾಂಡ್ ರೇಖೆ ಗುರ್ತಿಸಲಾಯಿತು.
- ವಾಯುವ್ಯ ಬೋಲನ್ ಕಣಿವೆಯವರೆಗೆ ರೈಲ್ವೆ ರಚನೆ
- 1892 - ಇಂಡಿಯಾ ಕೌನ್ಸಿಲ್ ಕಾಯ್ದೆ ಜಾರಿ
- ನಾಗರೀಕ ಸೇವೆಗಳನ್ನು ಕೇಂದ್ರ, ಪ್ರಾಂತೀಯ ಉಪ ಪ್ರಾಂತ್ಯಗಳಾಗಿ ವಿಂಗಡನೆ

**ಲಾರ್ಡ್ ಎಲ್ಗಿನ್ 2 (1894-1899)**

- ಆಮದು ಸುಂಕ, ಮಾರಾಟ ತೆರಿಗೆ ಇಳಿಕೆ
- ಭಾರತೀಯ ಸೈನ್ಯವನ್ನು ಏಕಮೇವ ಪ್ರಧಾನ ದಂಡನಾಯಕನ ನಿಯಂತ್ರಣಕ್ಕೆ ಒಳಪಡಿಸಲಾಯಿತು.
- 1897 - ಪೂನಾದ ಚಾಪೇಕರ್ ಸೋದರರಿಂದ ಬ್ರಿಟಿಷ್ ಅಧಿಕಾರಿಗಳು ಹತ್ಯೆ

**ಲಾರ್ಡ್ ಕರ್ಜನ್ (1899-1905)**

- ಡಾಲ್‌ಹೌಸಿ ನಂತರ 2ನೇ ಕಿರಿಯ ಗವರ್ನರ್ ಜನರಲ್ (40 ವರ್ಷ)
- 1900 - ಭೀಕರ ಬರಗಾಲ (10 ಲಕ್ಷ ಜನರ ಸಾವು)
- ಸರ್ ಆಂಟನಿ ಮ್ಯಾಕ್ ಡೊನೆಲ್ಲರ್ ನೇತೃತ್ವದಲ್ಲಿ ಬರಗಾಲ ಆಯೋಗ ರಚನೆ
- 1900 - ಪಂಜಾಬ್ ಲ್ಯಾಂಡ್ ಏಲಿಯನೇಷನ್ ಆಕ್ಟ್ ಜಾರಿಗೆ - ಇದರ ಪ್ರಕಾರ ಶ್ರೀಮಂತರು ರೈತರನ್ನು ಅವರ ಜಮೀನುಗಳಿಂದ ಹೊರಗಟ್ಟುವ ಪದ್ಧತಿ ರದ್ದು.
- 1901 - ಕಷಿ ಇನ್ಸ್‌ಪೆಕ್ಟರ್ ಜನರಲ್ ನೇಮಕ
- ಬಿಹಾರದ 'ಪೂಸಾ'ದಲ್ಲಿ ಕೃಷಿ ಸಂಶೋಧನಾ ಸಂಸ್ಥೆ ಸ್ಥಾಪನೆ
- 1904 - ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಗಳ ಶಾಸನ ಜಾರಿ.
- ಔದ್ಯಮಿಕ ಅಭಿವೃದ್ಧಿಗೆ ಜಮ್‌ಶೆಡ್ ಜಿ ಟಾಟಾ ಅವರಿಗೆ ಸರ್ಕಾರದಿಂದ ನೆರವು.
- 1902 - ಸರ್ ಥಾಮಸ್ ರ್‍ಯಾಲಿ ನೇತೃತ್ವದಲ್ಲಿ ಯೂನಿವರ್ಸಿಟಿ ಕಮಿಷನ್ ರಚನೆ
- 1904 - ಭಾರತೀಯ ವಿ.ವಿ. ಕಾಯ್ದೆ ಜಾರಿಗೆ (ಥಾಮಸ್ ರ್‍ಯಾಲಿ ವರದಿ ಆಧಾರದ ಮೇಲೆ)
- 1904 - ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾಯ್ದೆ ಜಾರಿ
- ಪ್ರಾಕ್ತನಶಾಸ್ತ್ರ ಇಲಾಖೆ ಸ್ಥಾಪನೆ (ಸರ್‌ಜಾನ್ ಮಾರ್ಷಲ್ ಪ್ರಥಮ ನಿರ್ದೇಶಕ)

- ಚಿನ್ನವನ್ನು ಲೀಗಲ್ ಟೆಂಟರ್ ಎಂದು ಘೋಷಣೆ. (1ಸವರನ್ ಚಿನ್ನಕ್ಕೆ 15 ರೂ.ಗಳೆಂದು ವಿನಿಮಯ ದರ ನಿಗದಿ)
- ಕಲ್ಕತ್ತ ಕಾರ್ಪೋರೇಷನ್ ಆಕ್ಟ್ ಜಾರಿಗೆ (1899)
- 1899 - ಅಫೀಶಿಯಲ್ ಸೀಕ್ರೆಟ್ ಆಕ್ಟ್
- ಖಾಸಗಿ ವಲಯಕ್ಕೆ ರೈಲ್ವೆ
- 1905 ಅಕ್ಟೋಬರ್ 16, ಬಂಗಾಳ ವಿಭಜನೆ (ಬಂಗಾಳ ಮತ್ತು ಪೂರ್ವಬಂಗಾಳ)
- ಪ್ರಧಾನ ದಂಡನಾಯಕ ಲಾರ್ಡ್ ಕಿಚನ್‌ರನೊಡನೆ ವಿವಾದದಿಂದಾಗಿ ರಾಜೀನಾಮೆ
- ಬ್ರಿಟಿಷರ ಔರಂಗಜೇಬ್ ಎಂದು ಗೋಖಲೆಯಿಂದ ವರ್ಣನೆ.

**ಲಾರ್ಡ್ ಮಿಂಟೋ 2 (1905-10)**

- ಬಂಗಾಳ ವಿಭಜನೆ ವಿರುದ್ಧ ವಂಗಭಂಗ ಚಳವಳಿ / ಸ್ವದೇಶಿ ಚಳವಳಿ
- ಸೂರತ್ ಅಧಿವೇಶನ (1907) ಕಾಂಗ್ರೆಸ್‌ನಲ್ಲಿ ಮೊದಲ ಒಡಕು.
- 1906 - ಡಿಸೆಂಬರ್ ಢಾಕಾದಲ್ಲಿ ಮುಸ್ಲಿಂಲೀಗ್ ಸ್ಥಾಪನೆ (ಆಗಾಖಾನ್)
- 1909 - ಮಿಂಟೋ ಮಾರ್ಲೆ ಸುಧಾರಣೆ

**ಲಾರ್ಡ್ ಹಾರ್ಡಿಂಜ್ 2 (1910-16)**

- ಇಂಗ್ಲೆಂಡ್ ದೊರೆ 5ನೇ ಜಾರ್ಜ್ ಆದೇಶದ ಮೇರೆಗೆ ಬಂಗಾಳ ವಿಭಜನೆ ರದ್ದು (1911) ಮತ್ತು ಕಲ್ಕತ್ತಾದಿಂದ ದೆಹಲಿಗೆ ರಾಜಧಾನಿ ವರ್ಗಾವಣೆ (1911)
- 1915 - ಗೋಖಲೆ ಮರಣ
- 1915 - ಹಿಂದೂ ಮಹಾಸಭಾ ಸ್ಥಾಪನೆ (ಮದನ್‌ಮೋಹನ್ ಮಾಳಟೀಯ ಮತ್ತು ಇತರೆ ಪಂಜಾಬ್ ನಾಯಕರಿಂದ)
- 1911 ಡಿಸೆಂಬರ್ - ಚಾಂದಿನ ಚೌಕಾದಲ್ಲಿ ವೈಸ್ರಾಯ್ ಮೇಲೆ ಬಾಂಬ್ ದಾಳಿ
- 1916 - ಬನಾರಸ್ ಹಿಂದೂ ವಿ.ವಿ. ಸ್ಥಾಪನೆ (ಪಂಡಿತ್ ಮದನ್ ಮೋಹನ್ ಮಾಳವೀಯ)

**ಲಾರ್ಡ್ ಚೆಲ್ಮ್ಸ ಫೊರ್ಡ್ (1916-21)**

- ತಿಲಕ್ ಮತ್ತು ಅನಿಬೆಸೆಂಟ್‌ರವರಿಂದ ಪ್ರತ್ಯೇಕವಾಗಿ ಹೋಂ ರೂಲ್ ಚಳವಳಿ ಆರಂಭ (ಅನುಕ್ರಮವಾಗಿ 1916 ಏಪ್ರಿಲ್ 1916 ಸೆಪ್ಟೆಂಬರ್)
- ಲಕ್ನೋ ಕಾಂಗ್ರೆಸ್ ಅಧಿವೇಶನ (1916) ಮಂದಗಾಮಿ ಮತ್ತು ತೀವ್ರಗಾಮಿಗಳು ಒಂದಾದರು. (ಕಾಂಗ್ರೆಸ್ ಪುನರ್ ಸಂಘಟನೆಯಲ್ಲಿ ಆನಿಬೆಸೆಂಟ್ ಪ್ರಮುಖ ಪಾತ್ರ)
- 1916 ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಲಕ್ನೋ ಒಪ್ಪಂದ. (ತಿಲಕ್ ಪ್ರಧಾನ ಪಾತ್ರ)
- ಮ್ಯಾಂಟೆಗ್ಯೂರವರಿಂದ 1917 ಆಗಸ್ಟ್ 20 ರಂದು "ಆಗಸ್ಟ್ ಘೋಷಣೆ)
- 1918 ಎಸ್.ಎನ್. ಬ್ಯಾನರ್ಜಿ ಮತ್ತಿತರರು ರಾಜೀನಾಮೆ, ಕಾಂಗ್ರೆಸ್‌ನಿಂದ ಹೊರಬಂದು ಇಂಡಿಯನ್ ಲಿಬೆರಲ್ ಫೆಡರೇಷನ್ ಸ್ಥಾಪನೆ
- 1919 - ರೌಲತ್ ಆಕ್ಟ್ - ಜಲಿಯನ್ ವಾಲಾಬಾಗ್ ದುರಂತ 1919 ಏಪ್ರಿಲ್ 13
- 1916 - ಪೂನಾದಲ್ಲಿ ಮಹಿಳಾ ವಿ.ವಿ. ಸ್ಥಾಪನೆ
- ಬಿಹಾರದ ಲೆಫ್ಟಿನೆಂಟ್ ಗವರ್ನರ್ ಆಗಿ ಎಸ್.ಪಿ. ಸಿನ್ಹ ನೇಮಕ (ಈ ಪದವಿ ಪಡೆದ ಪ್ರಥಮ ಭಾರತೀಯ ಹಾಗೂ ಬ್ರಿಟಿಷ್ ಪಾರ್ಲಿಮೆಂಟಿನ 2ನೇ ಸದಸ್ಯ), ಮೊದಲನೆಯವರು ದಾದನವರೋಜಿ)

### ಲಾರ್ಡ್ ರೀಡಿಂಗ್ (1921-26)

### ನಿಜವಾದ ಹೆಸರು ಸರ್ ರಫಸ್ ಡೇನಿಯಲ್ ಐಸಾಕ್

- 1921 - ವೇಲ್ಸ್‌ರಾಜಕುಮಾರ್ (8ನೇ ಎಡ್ವರ್ಡ್ ದೊರೆ) ಭೇಟಿ
- ಅಸಹಕಾರ ಚಳವಳಿ ನಿಲುಗಡೆ (ಚೌರಿಚೌರ ಘಟನೆ ಫೆಬ್ರವರಿ 5, 1920)

### ಲಾರ್ಡ್ ಇರ್ವಿನ್ (1926-31)

- ಮೂಲ ಹೆಸರು - ಎಡ್ವರ್ಡ್ ಫ್ರೆಡರಿಕ್ ಲಿಂಡ್ಲೆವುಡ್
- ಶೈಕ್ಷಣಿಕ ಮ್ಯಾಗ್ನಕಾರ್ಟ್‌ದ ರೂವಾರಿ ಚಾರ್ಲ್ಸ್‌ವುಡ್‌ನ ಮೊಮ್ಮಗ.
- 'ಆರ್ಡರ್ ಆಫ್ ಮೆರಿಟ್' ಗೌರವಕ್ಕೆ ಪಾತ್ರನಾದ ಭಾರತದ ಏಕೈಕ ವೈಸರಾಯ್
- 1931 ಮಾರ್ಚಿನಲ್ಲಿ ಗಾಂಧಿಯೊಡನೆ ಒಪ್ಪಂದ ಅದೇ ದೆಹಲಿ ಒಪ್ಪಂದ / ಗಾಂಧಿ ಇರ್ವಿನ್ ಒಪ್ಪಂದ.
- ಕ್ರಿಶ್ಚಿಯನ್ ವೈಸ್ರಾಯ್ ಎಂಬ ಜನಪ್ರಿಯತೆ
- 1927 ನವೆಂಬರ್ ಹರ್‌ಕೋರ್ಟ್ ಬಟ್ಲರ್ ನೇತೃತ್ವದಲ್ಲಿ ದೇಶೀಯ ಸಂಸ್ಥಾನಗಳ ಸಮಿತಿ (ದೇಶೀಯ ಸಂಸ್ಥಾನಗಳು ಮತ್ತು ಸರ್ಕಾರದ ನಡುವಿನ ಸಂಬಂಧದದ ಅಧ್ಯಯನಕ್ಕಾಗಿ)
- 1927 ಡಿಸೆಂಬರ್ All India States People's Conference
- 1928 ಡಿಸೆಂಬರ್ - ಪ್ರಥಮ ಅಖಿಲ ಭಾರತ ಯುವ ಕಾಂಗ್ರೆಸ್ ಸಮಾವೇಶ.
- 1929 ಅಕ್ಟೋಬರ್ 31 - ದೀಪಾವಳಿ ಘೋಷಣೆ (ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ನೀಡಲು)

### ಲಾರ್ಡ್ ವೆಲ್ಲಿಂಗ್‌ಡನ್ (1931-36)

- ಮೂಲ ಹೆಸರು - ಫ್ರೀಮನ್ ಥಾಮಸ್
- 1913ರಲ್ಲಿ ಮುಂಬೈ ಮತ್ತು 1918ರಲ್ಲಿ ಮದ್ರಾಸ್‌ನಲ್ಲಿ ಗೌರ್ನರ್
- 1932 ಆಗಸ್ಟ್ ಬ್ರಿಟೀಷ್ ಪ್ರಧಾನಿ ರಾಮ್ಸೆಮ್ಯಾಕ್ ಡೊನಾಲ್ಡ್‌ರ ಮತೀಯ ತೀರ್ಪು ಘೋಷಣೆ
- 1934 - ಬಿಹಾರ ಮತ್ತು ಪಂಜಾಬ್‌ನ ಕ್ವೆಟ್ಟಾದಲ್ಲಿ ಭೀಕರ ಭೂಕಂಪ
- 5ನೇ ಜಾರ್ಜ್ ದೊರೆಯ ಬೆಳ್ಳಿ ಹಬ್ಬ ಆಚರಣೆ (1935 ಮೇ)
- 3 ದುಂಡುಮೇಜಿನ ಸಮ್ಮೇಳನಗಳು
- 1935 - ಭಾರತ ಸರ್ಕಾರ ಕಾಯ್ದೆ
- 1934 ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆ (ಆಚಾರ್ಯ ನರೇಂದ್ರದೇವ ಮತ್ತು ಜಯಪ್ರಕಾಶ್ ನಾರಾಯಣ್‌ರವರಿಂದ)

### ಲಾರ್ಡ್ ಲಿನ್‌ಲಿತ್‌ಗೋ (1936-43)

- 1937 - ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳ ರಚನೆ
- 1939 ಸೆಪ್ಟೆಂಬರ್ 1/3 ಎರಡನೇ ಮಹಾಯುದ್ಧ ಮಂತ್ರಿಮಂಡಲಗಳ ರಾಜೀನಾಮೆ

- 1939 ಡಿಸೆಂಬರ್ 22 ಮುಸ್ಲಿಂ ಲೀಗಿನಿಂದ ಬಿಡುಗಡೆ ದಿನವಾಗಿ (Deliverance Day) ಆಚರಣೆ
- 1940 ಆಗಸ್ಟ್ 8 ಆಗಸ್ಟ್ ಆಫರ್

**ಲಾರ್ಡ್ ವೇವೆಲ್ (1943-47)**

- 1945 ಜೂನ್ 14 ವೇವಲ್ ಯೋಜನೆ
- 1945 ಜೂನ್ 25, ಸಿಮ್ಲಾ ಸಮ್ಮೇಳನ
- 1945 ನವೆಂಬರ್ 5 II, INA ವಿಚಾರಣೆ (ದೆಹಲಿಯ ಕೆಂಪುಕೋಟೆಯಲ್ಲಿ)
- 1946 ಫೆಬ್ರವರಿ ರಾಯಲ್ ನೌಕಾಪಡೆ ದಂಗೆ (ಮುಂಬೈ)
- 1946 - ಸೆಪ್ಟಂಬರ್ 2 ಮಧ್ಯಂತರ ಸರ್ಕಾರ ರಚನೆ
- 1946 ಆಗಸ್ಟ್ 16/17 ಮುಸ್ಲಿಂಲೀಗಿನಿಂದ ನೇರ ಕಾರ್ಯಾಚರಣೆ ದಿನ ಆಚರಣೆ.

**ಲಾರ್ಡ್ ಮೌಂಟ್ ಬ್ಯಾಟನ್ - 1947 ಮಾರ್ಚ್ ಆಗಸ್ಟ್**

- ಮೌಂಟ್ ಬ್ಯಾಟನ್ / ಜೂನ್ 3 ಯೋಜನೆ ಅಧಿಕಾರ ಹಸ್ತಾಂತರ
- ಭಾರತಕ್ಕೆ ಸ್ವಾತಂತ್ರ್ಯ 1947 ಆಗಸ್ಟ್ 15

**ಬ್ರಿಟಿಷರ ವಿರುದ್ಧ ಪ್ರಮುಖ ಬುಡಕಟ್ಟು ದಂಗೆಗಳು**

| ಬುಡಕಟ್ಟು | ಸ್ಥಳ | ನಾಯಕತ್ವ |
|---|---|---|
| ಖಾಸಿಗಳ ದಂಗೆ | ಖಾಸಿ ಬೆಟ್ಟಗಳು (ಅಸ್ಸಾಂ ಮತ್ತು ಮೇಘಾಲಯ) | ತಿರುತ್ ಸಿಂಗ್ ಮತ್ತು ಬಾರಮನಿಕ್ |
| ಕೋಲರ ದಂಗೆ | ಛೋಟನಾಗಪುರ | ಬುದ್ದೋಭಗತ್ |
| ಕೋಯರ ದಂಗೆ | ಆಂದ್ರದ ಚೋಡಾವರಂ | ಅಲ್ಲೂರಿ ಸೀತರಾಮ ರಾಜು |
| ಕೊಂಡರದಂಗೆ | ಒರಿಸ್ಸಾದ | ಚಕ್ರ ಬಿಸಾಯಿ |
| ಸಂತಾಲರ ದಂಗೆ | ಬಿಹಾರದ ರಾಜಮಹಲ್ ಬೆಟ್ಟಗಳು | ಸಿದ್ದು ಮತ್ತು ಕನ್ಹು |
| ನಾಯಕ್‌ದಾಸರ | ಗುಜರಾತಿನ | ರೂಪ್‌ಸಿಂಗ್, |
| ದಂಗೆ | ಪಂಚಮಹಲ್ | ಜೊರಿಯ ಭಗತ್ |
| ಕಚ್ಚಾನಾಗರ ದಂಗೆ | ಅಸ್ಸಾಮಿನ ಕಚಾರ್ | ಸೆಂಬುದನ್ |
| ಮುಂಡರ ದಂಗೆ | ಛೋಟಾನಾಗಾಪುರ | ಬಿರ್ಸಾಮುಂಡ |
| ಬಿಲ್ಲರ ದಂಗೆ | ದಕ್ಷಿಣ ರಾಜಸ್ಥಾನ | ಗೋವಿಂದಗುರು |

## ಸ್ವಾತಂತ್ರ್ಯ ಚಳುವಳಿ ಕಾಲದ ಪ್ರಮುಖ ಕೃತಿಗಳು ಮತ್ತು ಕರ್ತೃಗಳು

- ಆನಂದಮಠ - ಬಂಕಿಮ ಚಂದ್ರ ಚಟರ್ಜಿ
- ವಂಗ ದರ್ಶನ - ಬಂಕಿಮ ಚಂದ್ರ ಚಟರ್ಜಿ
- ಗಣದೇವತ - ತಾರಾಶಂಕರ ಬಂಡೋಪಾಧ್ಯಾಯ
- ಇಂಡಿಯಾ ಡಿವೈಡೆಡ್ - ಡಾ|| ರಾಜೇಂದ್ರ ಪ್ರಸಾದ್
- ಅನ್‌ಹ್ಯಾಪಿ ಇಂಡಿಯಾ - ಲಾಲಾ ಲಜಪತರಾಯ್
- ಪತೇರ್ ಡಬಿ - ಶರತ್‌ಚಂದ್ರ ಚಟರ್ಜಿ
- ಭಾರತ ದರ್ಶನ - ಭರತೇಂದು ಹರಿಶ್ಚಂದ್ರ
- ಕರಮ್ ಭೂಮಿ - ಪ್ರೇಮಚಂದ್
- ಬಿಪ್ರದಾಸ್ - ಶರತ್‌ಚಂದ್ರ ಚಟ್ಟೋಪಾಧ್ಯಾಯ
- ಹಿಂದ್ ಸ್ವರಾಜ್ಯ - ಗಾಂಧಿ
- ಸರ್ವೋದಯ - ಗಾಂಧಿ
- ಮೈ ಎಕ್ಸಪೆರಿಮೆಂಟ್ ವಿತ್ ಟ್ರೂಥ್ - ಗಾಂಧಿ
- ನಿಬಂಧ ಮಾಲ - ವಿಷ್ಣುಕೃಷ್ಣ ಚಿಪುಲಂಕರ್
- ಸರಸ್ವತಿ ಚಂದ್ರ - ಗೋವರ್ಧನ ರಾಮ್ ಎಂಬ ತ್ರಿಪಾಠಿ

## ರಾಷ್ಟ್ರೀಯ ಕಾಂಗ್ರೆಸ್‌ಗಿಂತ ಹಿಂದಿನ ರಾಜಕೀಯ ಸಂಸ್ಥೆಗಳು

- ಲ್ಯಾಂಡ್ ಹೊಲ್ಡರ್ಸ್ ಸೊಸೈಟಿ - ದ್ವಾರಕನಾಥ ಠಾಗೂರ್ (1837-38 ಕಲ್ಕತ್ತ)
- ಬ್ರಿಟಿಷ್ ಇಂಡಿಯಾ ಸೊಸೈಟಿ - ವಿಲಿಯಂ ಆಡಮ್ (1839-ಲಂಡನ್) ಬ್ರಿಟಿಷ್ ಇಂಡಿಯಾ ಅಸೋಶಿಯೇಷನ್ ದೇವೇಂದ್ರನಾಥ ಠಾಗೂರ್ (1851-ಕಲ್ಕತ್ತ)
- ಬಾಂಬೆ ಅಸೋಶಿಯೇಷನ್ - ಜಗನ್ನಾಥ ಶಂಕರ್‌ಶೇಠ್ (1852-ಬಾಂಬೆ)
- ಈಸ್ಟ್ ಇಂಡಿಯಾ ಅಸೋಷಿಯೇಷನ್ - ದಾದಾಬಾಯಿನವರೋಜಿ (1866-ಲಂಡನ್)
- ನ್ಯಾಷನಲ್ ಇಂಡಿಯನ್ ಅಸೋಶಿಯೇಷನ್ - ಮೇರಿ ಕಾರ್ಪೆಂಟರ್ (1867-ಲಂಡನ್)
- ಪೂನಾ ಸಾರ್ವಜನಿಕ ಸಭಾ - ಎಸ್.ಎಚ್. ಚಿಪ್ಲುಂಕರ್, ಜಿ.ವಿ. ಜೋಷಿ, ಎಂ.ಜಿ. ರಾನಡೆ ಮೊದಲಾದವರು (1870-ಪೂನಾ)
- ಇಂಡಿಯನ್ ಸೊಸೈಟಿ - ಆನಂದ ಮೋಹನ ಬೋಸ್ (1872-ಲಂಡನ್)
- ಇಂಡಿಯನ್ ಅಸೋಶಿಯೇಷನ್ - ಆನಂದ ಮೋಹನ ಬೋಸ್ ಮತ್ತು ಸುರೇಂದ್ರನಾಥ ಬ್ಯಾನರ್ಜಿ (1876ಕಲ್ಕತ್ತ) ಮದ್ರಾಸ್ ಮಹಾಜನ ಸಭಾ - ಜಿ.ಎಸ್. ಐಯ್ಯರ್, ಎಂ. ವೀರ ರಾಘವಚಾರಿ, ಆನಂದಚಾರ್ಲು ಮುಂತಾದವರು (1884-ಮದ್ರಾಸ್)
- ಬಾಂಬೆ ಪ್ರೆಸಿಡೆನ್ಸಿ ಅಸೋಷಿಯೇಷನ್ - ಫಿರೋಜ್ ಷಾ ಮೆಹ್ತ ಕೆ.ಟಿ. ತೆಲಾಂಗ್, ಬಧ್ರುದ್ದೀನ್ ತಾಬ್ಜಿ (1885-ಬಾಂಬೆ)

## ಭಾರತೀಯ ಪತ್ರಿಕೆ ಇತಿಹಾಸ

| ಪತ್ರಿಕೆಗಳು | | ಸ್ಥಾಪಕರು |
|---|---|---|
| ಬೆಂಗಾಲ್ ಗೆಜೆಟ್ - 1780 (ಭಾರತದ ಪ್ರಥಮ ಪತ್ರಿಕೆ) | - | ಜೇಮ್ಸ್ ಅಗಸ್ಟಸ್ ಹಿಕಿ |
| ಮಿರಾತ್-ಉಲ್-ಅಕ್ಬರ್ - 1822 (ಪ್ರಥಮ ಪರ್ಶಿಯನ್ ನಿಯತಕಾಲಿಕ) | - | ರಾಜಾರಾಂ ಮೋಹನ್‌ರಾಯ |
| ಸಂವಾದ ಕೌಮುದಿ | - | ರಾಜಾರಾಂ ಮೋಹನ್‌ರಾಯ್ |
| ನ್ಯೂ ಇಂಡಿಯಾ | - | ಬಿಪಿನ್ ಚಂದ್ರಪಾಲ್ |
| ಇಂಡಿಯನ್ ಒಪಿನಿಯನ್ | - | ಮಹಾತ್ಮಗಾಂಧಿ |
| ನವಜೀವನ್ | - | ಮಹಾತ್ಮಗಾಂಧಿ |
| ಹರಿಜನ | - | ಮಹಾತ್ಮಗಾಂಧಿ |
| ಯಂಗ್ ಇಂಡಿಯಾ | - | ಮಹಾತ್ಮಗಾಂಧಿ |
| ವಂದೇಮಾತರಂ | - | ಅರಬಿಂದೊ ಘೋಷ್ |
| ಕರ್ಮಯೋಗಿನ್ | - | ಅರಬಿಂದೊ ಘೋಷ್ |
| ಯುಗಾಂತರ್ | - | ಬರೀಂದ್ರ ಕುಮಾರ್‌ಘೋಷ್ |
| ಬಸುಮತಿ | - | ಬರೀಂದ್ರ ಕುಮಾರ್‌ಘೋಷ್ |
| ಮರಾಠ | - | ತಿಲಕ್ |
| ಕೇಸರಿ | - | ತಿಲಕ್ |
| ಇಂಡಿಯನ್ ಮಿರರ್ | - | ದೇವೇಂದ್ರನಾಥ್ ಠಾಗೂರ್ |
| ಅಮೃತ ಬಜಾರ್ | - | ಶಶಿರ್ ಕುಮಾರ್ ಘೋಷ್ |
| ಬಂಗದರ್ಶನ | - | ಬಂಕಿಮ ಚಂದ್ರ ಚಟರ್ಜಿ |
| ಸ್ವದೇಶ್ ಮಿತ್ರನ್ | - | ಜಿ. ಸುಬ್ರಹ್ಮಣ್ಯ ಅಯ್ಯರ್ |
| ಸ್ಟೇಟ್ಸ್ ಮನ್ | - | ರಾಬರ್ಟ್ ವೈಟ್ |
| ರಸ್‌ಗೊಪ್ತಾರ್ | - | ದಾದಾಬಾಯಿ ನವರೋಜಿ |
| ವಾಯ್ಸ್ ಆಫ್ ಇಂಡಿಯಾ | - | ದಾದಾಬಾಯಿ ನವರೋಜಿ |
| ದೀನಬಂಧು | - | ಎನ್.ಎಮ್. ಲೋಖಂಡೆ |
| ಪಕ್ತೂನ್ | - | ಖಾನ್ ಅಬ್ದುಲ್ ಗಫರ್‌ಖಾನ್ |
| ಪೇಟ್ರಿಯಟ್ | - | ಅರುಣ್ ಅಸಫ್ ಆಲಿ |
| ಇಂಕ್ವಿಲಾಬ್ | - | ಲೋಹಿಯ ಮತ್ತು ಅರುಣಾ ಅಸಫ್ ಆಲಿ |
| ಟ್ರಿಬ್ಯೂನ್ | - | ಚಯಲ್ ಸಿಂಗ್ ಮಜೀತಿಯ |
| ಹಿಂದು | - | ಜಿ.ಎಸ್. ಅಯ್ಯರ್ ಮತ್ತು ವೀರರಾಘವಚಾರಿ |
| ಹಿಂದು ಪೇಟ್ರಿಯಾಟ್ | - | ಗಿರೀಶ್ ಚಂದ್ರಘೋಷ್ ಮತ್ತು ಹರಿಶ್ಚಂದ್ರ ಮುಖರ್ಜಿ |
| ಮಂಗಳೂರು ಸಮಾಚಾರ | - | ರೆವರೆಂಡ್ ಹರ್ಮನ್ ಫೆಡ್ರಿಕ್‌ಮೊಗ್ಲಿಂಗ್ |

**(ಕನ್ನಡದ ಮೊದಲ ಪತ್ರಿಕೆ 1843 ಜುಲೈ 1)**

# ಆಧುನಿಕ ಕರ್ನಾಟಕ

## ಮೈಸೂರು ಒಡೆಯರು :

### 1. ಯದುರಾಯ (1399-1423)

❖ ಒಡೆಯರ ವಂಶಸ್ಥ
❖ ಯದು ವಂಶಸ್ಥ
❖ 1399 - ಹದಿನಾಡು ಪ್ರಾಂತ್ಯದ ಅರಸನಾಗಿ ಪಟ್ಟಾಭಿಷಕ್ತ/1400 ಏಪ್ರಿಲ್ 29
❖ ಸಹೋದರ ಕೃಷ್ಣರಾಯ ಕಾರುಗಳ್ಳಿಯ ಅಧಿಪತಿಯಾಗಿ ನೇಮಕ

### 2. 1ನೇ ರಾಜ ಒಡೆಯರು (ಕ್ರಿ.ಶ. 1578-1617)

❖ ಆಪೂಗ ಒಡೆಯರಲ್ಲಿ ಪ್ರಸಿದ್ಧನಾದನು.
❖ 33ಹಳ್ಳಿಗಳು ಮತ್ತು 300 ಸೈನಿಕರನ್ನು ಹೊಂದಿದ್ದ ಪಾಳೆಯಪಟ್ಟನ್ನು ಪ್ರಬಲ ರಾಜ್ಯನಾಗಿ ಮಾರ್ಪಡಿಸಿದ ಕೀರ್ತಿ.
❖ ಕ್ರಿ.ಶ. 1610ರಲ್ಲಿ ಶ್ರೀರಂಗಪಟ್ಟಣ ವಶ ಶ್ರೀರಂಗರಾಯ/ತಿರುಮಲರಾಯನಿಂದ
❖ ಕ್ರಿ.ಶ. 1610ರಲ್ಲಿ ಮೈಸೂರನಿಂದ ಶ್ರೀರಂಗಪಟ್ಟಣಕ್ಕೆ ರಾಜಧಾನಿ ವರ್ಗಾವಣೆ
❖ ಕ್ರಿ.ಶ. 1610ರಲ್ಲಿ ಜಗತ್ ಪ್ರಸಿದ್ಧ ದಸರಾಹಬ್ಬದ ಆಚರಣೆ ಪ್ರಾರಂಭಿಸಿದ
❖ ಶ್ರೀರಂಗರಾಯನ ಪತ್ನಿ ಅಲುಮೇಲಮ್ಮನಿಂದ **"ಮಾಲಂಗಿ ಮಡುವಾಗಲಿ ತಲಕಾಡು ಮರುಳಾಗಲಿ ಮೈಸೂರು ಅರಸರಿಗೆ ಗಂಡು ಮಕ್ಕಳಿಲ್ಲದೆ ಹೋಗಲಿ"** ಎಂದು ಶಾಪ ಪಡೆದ.
❖ ಶ್ರೀರಂಗಪಟ್ಟಣ, ಮೇಲುಕೋಟೆ ದೇವಾಲಯಗಳ ಜೀರ್ಣೋದ್ಧಾರ
❖ ಸಿಂಗಾರಿ ಅಯ್ಯಂಗಾರ್ **"ಶ್ರೀರಂಗ ಮಹಾತ್ಮ"** ಮತ್ತು ತಿರಮಲ ಅಯ್ಯಂಗಾರ್ **"ಕರ್ಣವೃತ್ತಾಂತ ಕಥೆ"**ರಚನೆ.

### ಚಾಮರಾಜ ಒಡೆಯರ್ (1617-1637)

❖ ಶ್ರೀರಂಗಪಟ್ಟಣದಲ್ಲಿ ಆಯುಧಾಗಾರ ಸ್ಥಾಪನೆ.
❖ ಶ್ರೀರಂಗಪಟ್ಟಣದ ಹತ್ತಿರ ಕಾವೇರಿ ನದಿಗೆ ಸೇತುವೆ.
❖ ಚಾಮರಾಜೋಕ್ತಿ ವಿಲಾಸ ಎಂಬ ಕೃತಿ ರಚಿಸಿದ (ಇದು-ವಾಲ್ಮಿಕಿ ರಾಮಾಯಣದ ಕನ್ನಡ ಭಾಷಾಂತರ)
❖ ಮೇಲುಕೋಟೆಯಲ್ಲಿ ಸ್ನಾನಕ್ಕಾಗಿ ಕಲ್ಯಾಣಿ ನಿರ್ಮಿಸಿದ
❖ ಇವನ ಆಸ್ಥಾನ ಕವಿಗಳು - ಪದ್ಮ ಪಂಡಿತ ಮತ್ತು ರಾಮಚಂದ್ರ
❖ ಇವರ ಮತ್ತೊಂದು ಕೃತಿ - ಶ್ರೀಮದ್ರಾಮಾಯಣ ಸಪ್ತಕಾಂಡ.

### ರಣಧೀರ ಕಂಠೀರವ ನರಸರಾಜ (ಕ್ರಿ.ಶ. 1638-1659)

❖ ಕಂಠೀರಾಯ ವರಾಹಗಳೆಂಬ ನಾಣ್ಯಗಳನ್ನು ಟಂಕಿಸಿದ
❖ ತಿರುಚಿರಾಪಳ್ಳಿಯಲ್ಲಿ ಮಾರುವೇಷದಲ್ಲಿ ಹೋಗಿ ಜಟ್ಟಿಯನ್ನು ಕೊಂದ
❖ 1639ರಲ್ಲಿ ಬಿಜಾಪುರದ ಸೇನಾನಿ ರಣದುಲ್ಲಾಖಾನನ್ನು ಸೋಲಿಸಿದ.
❖ ಶ್ರೀರಂಗಪಟ್ಟಣದ ನರಸಿಂಹ ದೇವಾಲಯ ರಚನೆ

- ಬಂಗಾರದೊಡ್ಡಿ ಕಾಲುವೆ ನಿರ್ಮಾಣ
- ಗೋವಿಂದ ವೈದ್ಯ, ಭಾಸ್ಕರ (ಬೆಹಾರ ಗಣಿತ) ಮತ್ತು ತಿಮ್ಮರಸ (ಮಾರ್ಕಂಡೇಯ ರಾಮಾಯಣ) ಈತನ ಆಶ್ರಿತ ಕವಿಗಳು.
- ವಿಜಯನಗರ ಅರಸರಿಗೆ ವಿಧೇಯತೆ ತೋರದ ಮೊದಲ ದೊರೆ
- ಯಲಹಂಕದ ಮಾಗಡಿ ಕೆಂಪೆಗೌಡನನ್ನು ಸೋಲಿಸಿ ಕಪ್ಪ ಕಾಣಿಕೆ ಪಡೆದ

**ದೊಡ್ಡದೇವ ರಾಜ ಒಡೆಯರು (1659-1672)**

- ಶ್ರೀರಂಗಪಟ್ಟಣದ ಮೇಲೆ ಮುತ್ತಿಗೆ ಹಾಕಿದ ಕೆಳದಿ ಶಿವಪ್ಪನಾಯಕನನ್ನು ಪರಾಭವಗೊಳಿಸಿದ.
- ಬಿರುದುಗಳು - ಪರರಾಯ ಭಯಂಕರ, ಹಿಂದೂರಾಯ ಸುರತ್ರಾಣ
- ಆಸ್ಥಾನದ ಕವಿ - ಚಾಮಯ್ಯನಿಂದ "ದೊಡ್ಡದೇವರಾಯ ಸಾಂಗತ್ಯ" ರಚನೆ
- ಚಾಮುಂಡಿಬೆಟ್ಟಕ್ಕೆ ಸಾವಿರ ಮೆಟ್ಟಲು ಹಾಕಿಸಿದ ಮತ್ತು ಮಾರ್ಗಮಧ್ಯದಲ್ಲಿ ನಂದಿ ಪ್ರತಿಮೆ ಸ್ಥಾಪಿಸಿದ
- ಫ್ರೆಂಚರೊಂದಿಗೆ ವ್ಯಾಪಾರ ಸಂಪರ್ಕ ಆರಂಭ, ಕ್ರಿ.ಶ. 1617ರಲ್ಲಿ ಫ್ರೆಂಚ್ ಪ್ರತಿನಿಧಿಯಾಗಿ ಫ್ಲಾಕನ್ ಇವನ ಆಸ್ಥಾನಕ್ಕೆ ಭೇಟಿ.
- ದೇವರಾಜಪುರ, ಅಗ್ರಹಾರ ಮತ್ತು ದೇವಾಂಬುಧಿ ಕೆರೆ ಸ್ಥಾಪನೆ.

**ಚಿಕ್ಕದೇವರಾಜ ಒಡೆಯರು (ಕ್ರಿ.ಶ. 1672-1704)**

- ಮೈಸೂರಿನ ಪ್ರಸಿದ್ಧ ಅರಸರಲ್ಲಿ ಒಬ್ಬ ಬಿರುದುಗಳ ಮಹಾರಾಷ್ಟ್ರ ಭೂಪಾಲ ಜಾಲರಿಪು, ನವಕೋಟಿ ನಾರಾಯಣ, ಅಪ್ರತಿಮ ವೀರ ನರಪತಿ, ರಾಜ ಪರಮೇಶ್ವರ, ಪ್ರೌಢಪ್ರತಾಪ
- ಶಿವಾಜಿಯ ಮಗ ಕುಮಾರಯ್ಯ - ಸಾಂಭಾಜಿಗೆ ಸೆರೆ
- ಔರಂಗಜೇಬನೊಂದಿಗೆ ಮೈತ್ರಿ ಮಂತ್ರಿಲಿಂಗಣ್ಣಯ್ಯ ಅಹಮ್ಮದ್ ನಗರಕ್ಕೆ ಕಳುಹಿಸಿದ ಒಪ್ಪಂದ ಮಾಡಿಕೊಂಡ (1699)
- ಔರಂಗಜೇಬನಿಂದ - ರಾಜಜಗದೇವ ಎಂಬ ಬಿರುದು ಪಡೆದ.
- ಮೊಗಲ್ ಸೇನಾನಿ ಮತ್ತು ಸಿರಾದ ಪೌಜುದಾರ ಖಾಸಿಂಖಾನನು ಮರಾಠ ಏಕೋಜಿಯಿಂದ
- ಬೆಂಗಳೂರನ್ನು ಗೆದ್ದು, 3ಲಕ್ಷ ವರಹಗಳಿಗೆ, ಒಡೆಯರಿಗೆ ಮಾರಿದನು.
- ಆಸ್ಥಾನ ವಿದ್ವಾಂಸರು ತಿರುಮಲಾರ್ಯ, ಸಿಂಹಾರ್ಯ, ತಿಮ್ಮಕವಿ ಲಕ್ಷ್ಮೀಶ, ಚಿಕ್ಕುಪಾಧ್ಯಾಯ, ಮಲ್ಲಿಕಾರ್ಜುನ ವೇಣುಗೋಪಾಲವರ ಪ್ರಸಾದ ಮಲ್ಲರಸ, ಸಂಚಿಹೊನ್ನಮ್ಮ-ಶೃಂಗಾರಮ್ಮ
- **ತಿರುಮಲಾರ್ಯರ ಕೃತಿಗಳು :**
  - ಚಿಕ್ಕದೇವರಾಯ ವಂಶಾವಳಿ
  - ಚಿಕ್ಕದೇವರಾಜ ವಿಜಯ
  - ಅಪ್ರತಿಮ ವೀರಚರಿತೆ
- **ಚಿಕ್ಕದೇವರಾಯ ಒಡೆಯರ ಕೃತಿಗಳು :**
  - ಚಿಕ್ಕದೇವರಾಜ ಭಿನ್ನಪ್ಪ
  - ಗೀತಗೋಪಾಲ
  - ಭಾಗವತ, ಶೇಷಧರ್ಮ

- ಲಕ್ಷ್ಮೀಶ - ಜೈಮಿನಿ ಭಾರತ
- ಸಿಂಗರಾರ್ಯ - ಮಿತ್ರವಿಂದ ಗೋವಿಂದ (ಪ್ರಥಮ ಕನ್ನಡ ನಾಟಕ)
- ಸಂಚಿಹೊನ್ನಮ್ಮ - ಹದಿಬದೆಯಧರ್ಮ
- ಶೃಂಗಾರಮ್ಮ/ಸಿಂಗಾರಮ್ಮ-ಪದ್ಮಿನಿ ಕಲ್ಯಾಣ
- ಚಿಕ್ಕುಪಾಧ್ಯಾಯ - ವಿಷ್ಣುಪುರಾಣ, ದಿವ್ಯಸೂರಿ ಚರಿತೆ
- ಮಲ್ಲರಸ - ದಶಾವತಾರ ಚರಿತೆ
- ಅಠಾರ ಕಛೇರಿ ಸ್ಥಾಪನೆ (18ಆಡಳಿತ ಇಲಾಖೆಗಳ ಸ್ಥಾಪನೆ)
- ಬಾರಾಬಲೂತಿ ಗ್ರಾಮಡಳಿತ ಜಾರಿಗೆ (12 ಮಂದಿ ಅಧಿಕಾರಿಗಳನ್ನು ಒಳಗೊಂಡ ಗ್ರಾಮಾಡಳಿತ ವ್ಯವಸ್ಥೆ)
- ಗುಂಡ್ಲುಪೇಟೆಯ ಪರವಾಸು ದೇವಾಲಯ, ಮೈಸೂರಿನ ಶ್ವೇತವರಾಹ, ಹರದಿನಹಳ್ಳಿಯ ಗೋಪಾಲಕೃಷ್ಣ ದೇವಾಲಯ, ಬೆಂಗಳೂರಿನ ಕೋಟೆ ವೆಂಕಟರಮಣ ಈತನ ರಚನೆಗಳು.
- "ಅಂಚೆ" ಮತ್ತು ಪೊಲೀಸ ಇಲಾಖೆಯು ಪುನರ್ ಸಂಘಟನೆ.
- ಅಂಚೆ, ಶಬ್ಧವನ್ನು ಪರಿಚಯಿಸಿದ.
- ನಂಜನಗೂಡಿನಲ್ಲಿ ರೈತರ ದಂಗೆ

**2ನೇ ಕಂಠೀರವ ನರಸರಾಜ ಒಡೆಯರ್ (1704-1713)**

- ಮೂಕ ಅರಸು
- ಪ್ರಧಾನಿ ತಿರುಮಲಯ್ಯ, ದಳವಾಯಿ ಕಾಂತರಾಜಯ್ಯನವರ ಮೂಲಕ ರಾಜ್ಯಭಾರ
- ಮೇಲುಕೋಟೆ ಬಿಂದುಮಾದವ ದೇವಾಲಯ ನಿರ್ಮಾಣ
- ಕೆಳಲೆ ಮನೆತನದ ದಳವಾಯಿಗಳ ಪ್ರಾಬಲ್ಯ

**1ನೇ ಕೃಷ್ಣರಾಜ ಒಡೆಯರ್ (1713-1732)**

- ಹೈದಾಬಾದ್ ನಿಜಾಮ, ಆರ್ಕಾಟ್ ನವಾಬ, ಗುತ್ತಿಯ ಮುರಾರಿರಾವ್ ಘೋರ್ಪಡೆಯವರಿಗೆ 1 ಕೋಟಿ ರೂ. ಕಪ್ಪ ಕಾಣಿಕೆ.
- 1732 - ಪೇಶ್ವೆ 1ನೇ ಬಾಜಿರಾಯನಿಂದ ಶ್ರೀರಂಗಪಟ್ಟಣ ಮುತ್ತಿಗೆ 1 ಲಕ್ಷ ರೂ. ಚೌತ್ ಸಂಗ್ರಹ
- ದಳವಾಯಿ ನಂಜರಾಜಯ್ಯ, ದೇವರಾಜಯ್ಯ ಪ್ರಬಲರಾದರು.
- ರಾಣಿದೇವಜಾಮ್ಮಣ್ಣಿಯು 2ನೇ ಕೃಷ್ಣರಾಜರನ್ನು ದತ್ತು ಸ್ವೀಕರಿಸಿದಳು.
- 4ನೇ ಕೆಂಪೇಗೌಡನನ್ನು ಸೋಲಿಸಿ ಸಾವನದುರ್ಗವಶ.

**ಚಾಮರಾಜ ಒಡೆಯರ್ (1732-34)**

- ದಳವಾಯಿ ದೇವರಾಜಯ್ಯನಿಂದ ಕಬ್ಬಾಳ ದುರ್ಗದಲ್ಲಿ ಬಂಧನ.

**2ನೇ ಕೃಷ್ಣರಾಜ ಒಡೆಯರ್ (1734-1766)**

- ಹೈದರಾಲಿ - ಮೈಸೂರಿನ ಸೇನೆ ಸೇರಿದ.
- ಇವರಿಂದ - ಹೈದರಾಲಿ ಫತೆ ಹೈದರ್ ಬಹದ್ದೂರ್ ಎಂಬ ಬಿರುದು ಪಡೆದ.
- 1761 - ಸರ್ವಾಧಿಕಾರಿಯಾಗಿ ಹೈದರಾಲಿ
- 1766 - ಒಡೆಯರ್ ಮರಣ
- ಹಿರಿಯ ರಾಣಿ ಲಕ್ಷ್ಮೀ ಅಮ್ಮಣಿಯು ಹೈದರ್ ಮತ್ತು ಟಿಪ್ಪುವಿನ ಪತನಕ್ಕಾಗಿ ಅಧಿಕಾರವನ್ನು ಮರಳಿ ಪಡೆಯಲು ಬ್ರಿಟಿಷರೊಂದಿಗೆ ಸಂದಾನ.
- 1761-1799ರ ವರೆಗೆ 38 ವರ್ಷಗಳ ಕಾಲ ಹೈದರ್ ಆಲಿ ಮತ್ತು ಟಿಪ್ಪುವಿನ ಆಳ್ವಿಕೆ ಪ್ರಾರಂಭ. ಈ ಕಾಲದಲ್ಲಿ ನಂಜರಾಜ ಒಡೆಯರ್ (1766-1770) 8ನೇ ಚಾಮರಾಜ ಒಡೆಯರ್ (1770-1776) ಖಾಸಚಾಮರಾಜ ಒಡೆಯರ್ (1776-1796) ನಾಮ ಮಾತ್ರ ಅರಸರಾಗಿದ್ದರು.

## ಒಡೆಯರ ಮನೆತನದ ಮರು ಸ್ಥಾಪನೆ :

**ಮುಮ್ಮಡಿ ಕೃಷ್ಣರಾಜ ಒಡೆಯರ್ (1799-1831)**

- 1798 - ರಾಣಿ ಅಮ್ಮಣಿಯವರು ಬ್ರಿಟಿಷರಿಂದ ನೆರವಿನ ಒಪ್ಪಂದ ಪಡೆದರು (ಜನರಲ್ ಹ್ಯಾರಿಸ್ ನೊಂದಿಗೆ)
- 1799 ಮೇ 4 ಟಿಪ್ಪುವಿನ ಮರಣದ ನಂತರ ಗವರ್ನರ್ ಜನರಲ್ ವೆಲ್ಲಸ್ಲಿ ಒಡೆಯರ ಮನೆತನವನ್ನು ಪುನರ್ ಸ್ಥಾಪಿಸಿದನು.
- ಮುಮ್ಮಡಿ ಕೃಷ್ಣರಾಜ ಒಡೆಯರ್ ಅಪ್ರಾಪ್ತ ಬಾಲಕನಾಗಿದ್ದರಿಂದ ಆಡಳಿತ ನೋಡಿಕೊಳ್ಳಲು ರಾಜಪ್ರತಿನಿಧಿ ಸಮಿತಿ ಸ್ಥಾಪನೆ.
- ರಾಜಪ್ರತಿನಿಧಿ ಸಮಿತಿ ಸದಸ್ಯರು - ರಾಜಮಾತೆ ಲಕ್ಷ್ಮಿ ಅಮ್ಮಣ್ಣಿ, ದಿವಾನ್ ಪೂರ್ಣಯ್ಯ, ಕರ್ನಲ್ ಬ್ಯಾರಿಕ್ಲೋಸ್
- 1799 ಜೂನ್ 30 ಪಟ್ಟಾಭಿಷೇಕ
- 1799-1811ರವರೆಗೆ ಪ್ರಥಮ ದಿವಾನರಾಗಿ ಪೂರ್ಣಯ್ಯ ನೇಮಕ
- ಸಂಸ್ಥಾನದ ಪ್ರಥಮ ಬ್ರಿಟಿಷ್ ರೆಸಿಡೆಂಟ್ ಆಗಿ ಕರ್ನಲ್ ಬ್ಯಾರಿಕ್ಲೋಸ್ ನೇಮಕ
- 1799 ಜೂನ್ 8 ಸಹಾಯಕ ಸೈನ್ಯ ಪದ್ಧತಿಗೆ ಸಹಿ (ಶ್ರೀರಂಗಪಟ್ಟಣ ಒಪ್ಪಂದ ಪ್ರಕಾರ)
- 1811-1831 ಒಡೆಯರ ನೇರ ಆಳ್ವಿಕೆ.
- ಶಿವನ ಸಮುದ್ರದ ಬಳಿ ಕಾವೇರಿ ನದಿಗೆ ಸೇತುವೆ ನಿರ್ಮಾಣ
- 1816-17 ಮತ್ತು 1823-24 ಬರಗಾಲ ಮತ್ತು ಕ್ಷಾಮಗಳು
- 1831 ನಗರ / ಬಿದನೂರು ರೈತರದಂಗೆ - ಕುಂಸಿಯ ಸಾದರಮಲ್ಲ / ಬೂದಿ ಬಸಪ್ಪನಿಂದ
- (ಸಹಾಯಕ ಸೈನ್ಯ ಒಪ್ಪಂದದ ಅನ್ವಯ) ರಾಜ್ಯದ ಆಡಳಿತ ವಿಫಲವಾದ್ದರಿಂದ ಒಡೆಯರನ್ನು ಪದಚ್ಯುತಿ ಮಾಡಿ ಲಾರ್ಡ್ ವಿಲಿಯಂ ಬೆಂಟಿಂಕ್ ಕಮಿಷನರ್ ಆಳ್ವಿಕೆ ಜಾರಿಗೆ ತಂದ.
- 1831 ಅಕ್ಟೋಬರ್ 19, ಕಮಿಷನರ್ ಆಳ್ವಿಕೆ ಜಾರಿ
- ಮು.ಕೃ. ಒಡೆಯರ್ ಬಹುಭಾಷಾ ಪಂಡಿತರು ಇವರ ಕೃತಿಗಳ ಕೃಷ್ಣ ಕಥಾಪುಷ್ಪ ಮಂಜರಿ, ರಾಮಾಯಣ ಕಥಾ ಪುಷ್ಪ ಮಂಜರಿ, ಚಾಮುಂಡಿ ಮಂಗಳ ಮಾಲಿಕಾ, ಶ್ರೀ ತತ್ವನಿಧಿ, ಕೌತುಕ ನಿಧಿ ವತ್ಸರಾಜ ಕಥೆ, ಕೃಷ್ಣ ಕಥಾ ಸಾರಸಂಗ್ರಹ ಮತ್ತು ದೇವಿಮಾಹತ್ಮ ಸಪ್ತಶತಿ, ಸಿರಿನಂಜುಂಡ ಶತಕ ಮುಂತಾದವು.

**ಆಸ್ಥಾನ ವಿದ್ವಾಂಸರು ಮತ್ತು ಅವರ ಕೃತಿಗಳು :**

- ಕೆಂಪುನಾರಾಯಣ - ಮುದ್ರಾಮಂಜೂಷ
- ಶ್ರೀನಿವಾಸಕವಿ ಕೃಷ್ಣರಾಜ - ಜಯೋತ್ಕರ್ಷ ಕೃಷ್ಣರಾಜ ಸುಭೋದಯ
- ಅಳಿಯ ಲಿಂಗರಾಜ - ನರಪತಿ ಚರಿತೆ
- ದೇವಚಂದ್ರ - ರಾಜಾವಳಿ ಕಥೆ
- ರಾಮಕೃಷ್ಣಶಾಸ್ತ್ರಿ - ಭುವನ ಪ್ರದೀಪಿಕಾ
- ಬಸವಪ್ಪಶಾಸ್ತ್ರೀ (ಅಭಿನವ ಕಾಳಿದಾಸ) - ಶಾಕುಂತಲ ನಾಟಕ, ರತ್ನಾವಳಿ, ವಿಕ್ರಮೋರ್ವಶಿಯ, ನೀತಿತರ್ಕ, ಮಾಲತಿ ಮಾಧವ ವನ್ನು ಕನ್ನಡಕ್ಕೆ ಅನುವಾದ
- ಸಂಗೀತ ವಿದ್ವಾಂಸರು - ಸದಾಶಿವರಾವ್, ವೆಂಕಟ ಸುಬ್ಬಯ್ಯ ಮತ್ತು ಚಿಕ್ಕರಾಮಪ್ಪ ಜಗನ್ಮೋಹನ ಅರಮನೆ ನಿರ್ಮಾಣ
- ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದ ಮಹಾಗೋಪುರ ಮತ್ತು ಚಾಮುಂಡೇಶ್ವರಿ ದೇವಾಲಯದ ಗೋಪುರ ನಿರ್ಮಾಣ
- 1867ರಲ್ಲಿ ದತ್ತುಪುತ್ರ ಸ್ವೀಕಾರಕ್ಕೆ ಅನುಮತಿ ಮತ್ತು ದತ್ತು ಪುತ್ರನಿಗೆ 18 ವರ್ಷ ತುಂಬಿದಾಗ ರಾಜ್ಯವನ್ನು ಹಿಂತಿರುಗಿಸುವ ಭರವಸೆ. (ಗ.ಜ. ಲಾರ್ಡ್ ಲಾರೆನ್ಸ್‌ನಿಂದ) ಅದರಂತೆ 1881 ಮಾರ್ಚ್ 25 ಕಮಿಷನರ್ ಆಳ್ವಿಕೆ ಮುಕ್ತಾಯ.

**ಕಮಿಷನರುಗಳು (1831 ಅಕ್ಟೋಬರ್ 19 ರಿಂದ 1881 ಮಾರ್ಚ್ 25)**

**ಮಾರ್ಕ್ ಕಬ್ಬನ್ (1834-1861)**

- ಪ್ರಥಮ ಚೀಫ್ ಕಮಿಷನರ್
- ಮೈಸೂರಿನಿಂದ ಬೆಂಗಳೂರಿಗೆ ರಾಜಧಾನಿ ವರ್ಗಾವಣೆ
- ಬೆಂಗಳೂರಿನ ಟಿಪ್ಪು ಅರಮನೆಯಲ್ಲಿ ಕಾರ್ಯಾಲಯ (ಸಚಿವಾಲಯ) ಆರಂಭ
- ಆಡಳಿತದ ಅನುಕೂಲಕ್ಕಾಗಿ ಮೈಸೂರು ರಾಜ್ಯವನ್ನು 4 ಭಾಗಗಳಾಗಿ ವಿಂಗಡನೆ
  1. ಬೆಂಗಳೂರು
  2. ಚಿತ್ರದುರ್ಗ
  3. ಅಷ್ಟಗ್ರಾಮ (ಮೈಸೂರು ಜಿಲ್ಲೆ)
  4. ಹೈದರ್‌ನಗರ (ಬಿದನೂರು)
- **ಹಳೆಯ ಅಠಾರ ಕಛೇರಿ** ಬದಲು 9 ಇಲಾಖೆಗಳ ಸ್ಥಾಪನೆ
  - ಕಂದಾಯ ಇಲಾಖೆ
  - ಪೊಲೀಸ್ ಇಲಾಖೆ
  - ಅಂಚೆ ಇಲಾಖೆ
  - ಸವಾರ್ ಇಲಾಖೆ (ಅಶ್ವಪಡೆ)
  - ಬಾರ್ ಇಲಾಖೆ (ಕಾಲಾಳುಪಡೆ)
  - ಮರಾಮೆತ್ ಇಲಾಖೆ (ಲೋಕೋಪಯೋಗಿ)
  - ಆರೋಗ್ಯ ಇಲಾಖೆ
  - ಪಸುಸಂಗೋಪನಾ ಇಲಾಖೆ (ಅಮೃತಮಹಲ್)

❖ ನ್ಯಾಯಾಡಳಿತ ಮತ್ತು ಶಿಕ್ಷಣ ಇಲಾಖೆ

❖ ನ್ಯಾಯಾಡಳಿತಕ್ಕಾಗಿ ನಾಲ್ಕು ಸೂಪರಿಂಡೆಂಡೆಂಟ್ ಕೋರ್ಟುಗಳು, 8 ಸದರ್ ಮುನ್ಸಿಪಲ್ ಕೋರ್ಟ್‌ಗಳು, 85 ತಾಲ್ಲೋಕು ನ್ಯಾಯಾಲಯಗಳು, ಒಂದು ಹುಜೂರ್ ಅದಾಲತ್ ನ್ಯಾಯಾಲಯ ಸ್ಥಾಪನೆಯಾಯಿತು.

❖ 1853- ಬೆಂಗಳೂರು ಮೈಸೂರು ನಡುವೆ ಟೆಲಿಗ್ರಾಫ್ ಸಂಪರ್ಕ.

❖ 1856/59 ರಾಜ್ಯದಲ್ಲಿ ಪ್ರಥಮ ಬಾರಿಗೆ ಜೋಲಾರಪೇಟೆ ಮತ್ತು ಬೆಂಗಳೂರು ಮಧ್ಯೆ ರೈಲ್ವೆ ಮಾರ್ಗ ಸ್ಥಾಪನೆ

❖ 1856 ಗವರ್ನರ್ ಡಾಲ್‌ಹೌಸಿ ಸಂಸ್ಥಾನಕ್ಕೆ ಭೇಟಿ ಇವರ ಸಲಹೆ ಮೇರೆಗೆ ಜುಡಿಷಿಯಲ್ ಕಮಿಷನರ್ ಸ್ಥಾಪನೆ.

❖ ಬತಾಯಿ ಪದ್ಧತಿ (ನಗದು ಮತ್ತು ಧಾನ್ಯ ರೂಪದಲ್ಲಿ ಕಂದಾಯ ಪಾವತಿ) ರದ್ದು ಮಾಡಿ ನಗದು ರೂಪದ ರೈತ್ವಾರಿ ಪದ್ಧತಿ ಜಾರಿಗೆ ತರಲಾಯಿತು.

❖ 1861 ಅನಾರೋಗ್ಯದಿಂದಾಗಿ ಸ್ವದೇಶಕ್ಕೆ ಪಯಣ ಮಾರ್ಗಮಧ್ಯದಲ್ಲೇ ಸೂಯಜ್ ಕಾಲುವೆಯ ಸಯ್ಯದ್ ಬಂದರಿನಲ್ಲಿ ನಿಧನ.

❖ ಹಳೆಯ ಪಗೋಡ (ವರಹಾ)ಗಳ ಬದಲಿಗೆ ಬ್ರಿಟಿಷರ ಹೊಸಬೆಳ್ಳಿ ರೂಪಾಯಿಯನ್ನು 1854ರಲ್ಲಿ ಚಲಾವಣೆ.

❖ ಹಳೆಯ ದುಷ್ಟ ಪದ್ಧತಿ 'ಸಮಯಾಚಾರ'ವನ್ನು ಕಬ್ಬನ್ 1834ರಲ್ಲಿ ಪ್ರತಿಬಂಧಿಸಿದ (ವ್ಯಭಿಚಾರ ಮಾಡುವ ಸ್ತ್ರೀಯರನ್ನು ಸರ್ಕಾರವೇ ಹರಾಜು ಮಾಡಿ ಬಂದ ಹಣವನ್ನು ಸರ್ಕಾರದ ಖಜಾನೆಗೆ ಜಮಾ ಮಾಡುವುದಕ್ಕೆ ಸಮಯಾಚಾರ ಪದ್ಧತಿ ಎನ್ನುವರು)

❖ 1851ರಲ್ಲಿ ಟ್ರಿನಿಟಿ ಚರ್ಚ್ ಸ್ಥಾಪನೆ.

### ಎಲ್.ಬಿ. ಬೌರಿಂಗ್ (1862-1870)

❖ ಆಡಳಿತ ವಿಭಾಗಗಳನ್ನು 4 ರಿಂದ 3ಕ್ಕೆ ಇಳಿಸಿದ. ಅವುಗಳೆಂದರೆ.
   a. ಅಷ್ಟಗ್ರಾಮ (ಮೈಸೂರು)
   b. ನಂದಿದುರ್ಗ
   c. ಹೈದರ್‌ನಗರ

❖ ಈ ವಿಭಾಗಗಳನ್ನು 8 ಜಿಲ್ಲೆಗಳಾಗಿ ವಿಂಗಡಣೆ, ಪ್ರತಿ ವಿಭಾಗಕ್ಕೂ ಒಬ್ಬ ಸೂಪರಿಂಡೆಂಡೆಂಟ್ ಮತ್ತು ಪ್ರತಿ ಜಿಲ್ಲೆಗೊಬ್ಬ ಉಪ ಸೂಪರಿಂಟೆಂಡೆಂಟ್ ಮತ್ತು ಸಹಾಯಕ ಸೂಪರಿಟೆಂಡೆಂಟ್ ನೇಮಕ.

❖ 1872 ಪೊಲೀಸ್ ಕಾಯ್ದೆ ಜಾರಿ ಮಾಡಿ ಪೊಲೀಸರಿಗೆ ಸಮವಸ್ತ್ರ ನೀಡಲಾಯಿತು.

❖ ಮದ್ರಾಸಿನ ಮಾದರಿಯಲ್ಲಿ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಸುಧಾರಣೆ ಮಾಡಲಾಯಿತು. ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ (DIG) ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (IGP) ಮತ್ತು ಜಿಲ್ಲೆಗಳಿಗೆ ಪೊಲೀಸ್ ಸೂಪರಿಟೆಂಡೆಂಟ್ (SP) ಹುದ್ದೆಗಳನ್ನು ಸೃಷ್ಟಿಸಿಲಾಯಿತು.

❖ 1803ರಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಕಾರಾಗೃಹ ಸ್ಥಾಪನೆ

❖ 1861 ಶಿಕ್ಷಕರ ತರಬೇಥಿಗೆ ನಾರ್ಮಲ್ ಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು.

❖ 1864 - ಬೆಂಗಳೂರು ಸೆಂಟ್ರಲ್ ಕಾಲೇಜು ಸ್ಥಾಪನೆ ಮತ್ತು ಬೆಂಗಳೂರು ಮ್ಯೂಸಿಯಂ ಸ್ಥಾಪನೆ.

❖ 1868-64 ಬೆಂಗಳೂರಿನಲ್ಲಿ ಹೈಕೋಟ್ (ಅಠಾರ ಕಛೇರಿ) ಸ್ಥಾಪನೆ. ಟಿಪ್ಪುವಿನ ಅರಮನೆಯಿಂದ ಇಲ್ಲಿಗೆ ಕಾರ್ಯಾಲಯ ವರ್ಗಾಯಿಸಲಾಯಿತು.

- ಸರ್ಕಾರಿ ಮುದ್ರಣಾಲಯ ಸ್ಥಾಪನೆ (1866)
- 1868/63 ಭೂಮಾಪನ ಮತ್ತು ಕಂದಾಯ ಇಲಾಖೆಗಳಲ್ಲಿ ಸಂಪೂರ್ಣ ಸುಧಾರಣೆ.
- ರೆವಿನ್ಯೂ ಸರ್ವೆ ಅಂಡ್ ಸೆಟ್ಲ್‌ಮೆಂಟ್ ಅಧಿಕಾರಿ ನೇಮಕ.
- 1863 ದತ್ತಿ ಭೂಮಿ ಅಭಿವೃದ್ಧಿಗಾಗಿ ಇನಾಂ ಕಮಿಷನ್ ನೇಮಕ
- 1864 - ರಿಜಿಸ್ಟ್ರೇಷನ್ ಕಾಯ್ದೆ ಜಾರಿ ಮಾಡಿ ಎಲ್ಲಾ ಆಸ್ತಿ, ಪತ್ರ ವ್ಯವಹಾರಗಳನ್ನು ಕಡ್ಡಾಯವಾಗಿ ನೊಂದಾಯಿಸಲಾಯಿತು. ಅದಕ್ಕಾಗಿ ಪ್ರತಿ ತಾಲ್ಲೋಕಿಗೆ ನೊಂದಣಿ ಕಛೇರಿ ಸ್ಥಾಪನೆ ರಿಜಿಸ್ಟ್ರಾರ್, ಸಬ್‌ರಿಜಿಸ್ಟ್ರಾರ್, ಮತ್ತು ಡಿಪ್ಯುಟಿ ರಿಜಿಸ್ಟ್ರಾರ್‌ಗಳ ನೇಮಕ ಶುಲ್ಕ ರದ್ದು ಮಾಡಿ ಸ್ಟಾಂಪ್ ಪೇಪರ್ ಬಳಕೆ ಜಾರಿಗೆ ತಂದರು.
- 1862 - ಭಾರತ ದಂಡ ಸಂಹಿತೆ (ಇಂಡಿಯನ್ ಪೀನಲ್ ಕೋಡ್) ಮತ್ತು ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್ ಜಾರಿಗೆ ತರಲಾಯಿತು.
- 1863ರಲ್ಲಿ ಮೈಸೂರು ಕ್ರಮಬದ್ಧ ಪ್ರಾಂತ್ಯವಾಗಿ ರಚನೆ.
- ಶಿಕ್ಷಣದ ಅಭಿವೃದ್ಧಿಗೆ ಸೆಂಟ್ರಲ್ ಎಜುಕೇಷನ್ ಏಜೆನ್ಸಿ ಸ್ಥಾಪನೆ, ಹಾಲಿಪಾಕ್ಸ್ ವರದಿಯ ಶಿಫಾರಸ್ಸಿನ ಮೇರೆಗೆ 'ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ' ಸ್ಥಾಪಿಸಲಾಯಿತು. 1868ರಲ್ಲಿ ಬಿ.ಎಲ್. ರೈಸ್ ಯೋಜನೆಯಂತೆ ಹೋಬಳಿಗೊಂದು ಶಾಲೆ ಯೋಜನೆ ಜಾರಿಗೆ ತರಲಾಯಿತು.
- 1866ರಲ್ಲಿ ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ ಮತ್ತು ಬೌರಿಂಗ್ ಇನ್‌ಸ್ಟಿಟ್ಯೂಟ್ ಸ್ಥಾಪನೆ.
- 1864ರಲ್ಲಿ ನಿರ್ಮಾಣದ ಬಂಗಾರಪೇಟೆಗೆ ಇವನ ಹೆಸರಲ್ಲಿ ಬೌರಿಂಗ್ ಪೇಟೆ ಎಂದು ನಾಮಕರಣ ಮಾಡಲಾಯಿತು.
- 1867ರಲ್ಲಿ ಬ್ರಿಟಿಷ್ ಸರ್ಕಾರದಿಂದ ಸಿ.ಎಸ್.ಐ. ಪ್ರಶಸ್ತಿ.
- ಇವನ ಕಾಲದಲ್ಲೇ (1867) ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮೈಸೂರು ರಾಜ್ಯವನ್ನು ಹಿಂತಿರುಗಿಸುವ ಭರವಸೆಯನ್ನು ನೀಡಲಾಯಿತು.
- 1868 ಸೆಪ್ಟೆಂಬರ್ 23ರಂದು 10ನೇ ಚಾಮರಾಜ ಒಡೆಯರಿಗೆ ಪಟ್ಟಾಭಿಷೇಕ ಸಮಾರಂಭ.
- ಬೆಂಗಳೂರಿನಲ್ಲಿ ಮಾರ್ಕ್ ಕಬ್ಬನ್ ನೆನಪಿಗಾಗಿ ಕಬ್ಬನ್ ಪಾರ್ಕ್ ನಿರ್ಮಿಸಿದ.
- ಸ್ವತಃ ವಿದ್ವಾಂಸನಾದ ಈತನ ಕೃತಿ 'ರೂಲರ್ಸ್ ಆಫ್ ಇಂಡಿಯಾ' (ಹೈದರಾಲಿ ಮತ್ತು ಟಿಪ್ಪು ಇತಿಹಾಸ ಕುರಿತು)
- ಪತ್ನಿ - ಲೇಡಿ ಬೌರಿಂಗ್ ಕೃತಿ 'ಈಸ್ಟರ್ನ್ ಎಕ್ಸ್‌ಪೀರಿಯನ್ಸ್' (ಆತ್ಮಕಥೆ)
- 1868ರಲ್ಲಿ ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದಲ್ಲಿ ಗ್ಯಾಸ್‌ನಿಂದ ಉರಿಯುವ ಬೀದಿ ದೀಪ ಹಾಕಲಾಯಿತು.
- 1866ರಲ್ಲಿ ಮೈಸೂರು ಸಂಸ್ಥಾನದಲ್ಲಿ ಭಾರೀ ಕ್ಷಾಮ ತಲೆದೋರಿ ನಗರಕ್ಕೆ ವಲಸೆ ಪ್ರಮಾಣ ಅಧಿಕವಾಯಿತು.
- 1870ರಲ್ಲಿ ಬೆಂಗಳೂರಿನಲ್ಲಿ ಬ್ರಹ್ಮ ಸಮಾಜ ಸ್ಥಾಪನೆ
- ಬ್ರಹ್ಮ ಸಮಾಜದ ಪ್ರಭಾವದಿಂದ ಆರಂಭಿಸಿದ RBANM ಶಾಲೆ (ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್)ಯ ಆರಂಭದ ವರ್ಷಗಳಲ್ಲಿ ಬಿಪಿನ್ ಚಂದ್ರಪಾಲ್‌ರವರು ಪ್ರಾಂಶುಪಾಲರಾಗಿದ್ದರು.
- 1870ರಲ್ಲಿ ಹುದ್ದೆಗೆ ರಾಜೀನಾಮೆ.
- ಬೌರಿಂಗ್ ನಂತರದ ಕಮಿಷನರುಗಳು ರಿಚರ್ಡ್ ಮೀಡ್ (1870-75) ಸಿ.ಬಿ. ಸಾಂಡರ್ಸ್ (187-78) ಮತ್ತು ಜೆ.ಡಿ. ಗೋರ್ಡನ್ (1878-1881)
- 1881 ಮಾರ್ಚ್ 25 - 10ನೇ ಚಾಮರಾಜ ಒಡೆಯರಿಗೆ ಅಧಿಕಾರ ಹಸ್ತಾಂತರ ಕಮಿಷನರ್ ಆಳ್ವಿಕೆ ಮುಕ್ತಾಯ ಮತ್ತು ದಿವಾನರುಗಳ ಆಳ್ವಿಕೆ ಮುಂದುವರಿಕೆ.

- 1876-78ರಲ್ಲಿ ಮೈಸೂರು ಸಂಸ್ಥಾನದಲ್ಲಿ ಧಾತು - ಈಶ್ವರ ಸಂವತ್ಸರಗಳ ಕ್ಷಾಮದಲ್ಲಿ ಮೈಸೂರು ರಾಜ್ಯದಲ್ಲಿ 9ಲಕ್ಷ ಜನರು ಸಾವಿಗೀಡಾದರು.
- ಚಾರ್ಲ್ಸ್ ಎಲಿಯಟ್‌ನನ್ನು ಕ್ಷಾಮ ಕಮಿಷನರ್ ಆಗಿ ನೇಮಿಸಲಾಯಿತು.

## ಪುನರ್ ಸ್ವಾಯುತ್ತತೆಯ ನಂತರ ಮೈಸೂರು - 1881-1947

### 10ನೇ ಚಾಮರಾಜ ಒಡೆಯರ್ (1881-1894)

- 1868 ಸೆಪ್ಟೆಂಬರ್ 30 ಪಟ್ಟಾಭಿಷೇಕ (ಅಪ್ರಾಪ್ತ ಬಾಲಕ)
- ಕರ್ನಲ್ ಹೈನ್ಸ್ ಮತ್ತು ಕರ್ನಲ್ ಮಾಲ್‌ಸನ್ ಪೋಷಣೆಯಲ್ಲಿ ಬೆಳವಣಿಗೆ.
- 1875-76 ತೀವ್ರಕ್ಷಾಮ, ಗ.ಜನರಲ್ ಲಾರ್ಡ್ ಲಿಟ್ಟನ್ ಮೈಸೂರಿಗೆ ಭೇಟಿ.
- 1878ರಲ್ಲಿ ಜೆ.ಡಿ. ಗೋರ್ಡನ್ ಕಮಿಷನರ್ ಆಗಿ ನೇಮಕ
- 1881 ಮಾರ್ಚ್ 25 ಅಧಿಕಾರವನ್ನು ಬ್ರಿಟಿಷರಿಂದ ಪಡೆದರು.
- 1881ರಲ್ಲಿ ಜೆ.ಡಿ. ಗೋರ್ಡನ್ ರೆಸಿಡೆಂಟ್ ಆಗಿ ಅಧಿಕಾರ (ಕೊಡಗಿನ ಮುಖ್ಯ ಕಮಿಷನರ್ ಆಗಿಯೂ ಆಡಳಿತ)
- 1881-83ರಲ್ಲಿ ಸಿ. ರಂಗಾಚಾರ್ಲು ದಿವಾನರಾಗಿ ನೇಮಕ
- ಇವರ ಕಾಲದ ದಿವಾನರುಗಳು - ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್
- 1894 ಡಿ. 28 ಡಿಫ್ತೀರಿಯಾ ರೋಗಕ್ಕೆ ತುತ್ತಾಗಿ ಕಲ್ಕತ್ತಾದಲ್ಲಿ ಸಾವು.

### ನಾಲ್ವಡಿ ಕೃಷ್ಣರಾಜ ಒಡೆಯರ್ (1902-1940)

- 1895ರಲ್ಲಿ ಫೆಬ್ರವರಿ 1ರಂದು ಪಟ್ಟಾಭಿಷೇಕ (ಅಪ್ರಾಪ್ತ ಬಾಲಕ)
- ರಾಜಪ್ರತಿನಿಧಿಯಾಗಿ ಮಹಾರಾಣಿ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿದಾನದವರು ಆಳ್ವಿಕೆ. (1895-1902)
- 1897 ಫೆಬ್ರವರಿ - ಸಹೋದರಿ ವಿವಾಹದ ಸಂದರ್ಭದಲ್ಲಿ ಮರದ ಅರಮನೆ ಬೆಂಕಿಗೆ ಆಹುತಿ, ಇಂದಿನ ಅರಮನೆ ನಿರ್ಮಾಣ ಕೆಲಸ ಆರಂಭ.
- 1900 ಜೂನ್ 6, ಕಾಠೇವಾಡ ಸಂಸ್ಥಾನದ ರಾಣಾಸಾಹೇಬ ಶ್ರೀ ವಿನಯಸಿಂಹರ ಪುತ್ರಿ ಪ್ರತಾಪ ಕುಮಾರಿದೇವಿಯೊಂದಿಗೆ ವಿವಾಹ.
- 1901ರಲ್ಲಿ ಮಹಾರಾಣಿ ಕೆಂಪನಂಜಮ್ಮಣ್ಣಿ ನಿಧನ.
- 1902 ಆಗಸ್ಟ್ 8, ವೈಸರಾಯ್ ಲಾರ್ಡ್‌ಕರ್ಜನ್ ಸಮ್ಮುಖದಲ್ಲಿ ನೇರ ಅಧಿಕಾರ ಸ್ವೀಕಾರ (ಜಗನ್ಮೋಹನ ಅರಮನೆಯಲ್ಲಿ)
- 1902 ಜನವರಿ ಇಂಗ್ಲೆಂಡಿನ ಅರಸ 7ನೇ ಎಡ್ವರ್ಡ್‌ನ ಕಿರೀಟ ಧಾರಣೆ ಸಂದರ್ಭ (ದಿಲ್ಲಿಯಲ್ಲಿ) ನಡೆದ ಸಮಾರಂಭಕ್ಕೆ ಭೇಟಿ

### ಇವರ ಆಳ್ವಿಕೆಯ ಕಾಲದಲ್ಲಿನ ದಿವಾನರುಗಳು

| | | |
|---|---|---|
| - ಶೇಷಾದ್ರಿ ಅಯ್ಯರ್ | - | (1883-1901) |
| - ಪಿ.ಎನ್. ಕೃಷ್ಣಮೂರ್ತಿ | - | (1901-1906) |
| - ಪಿ.ವಿ. ಮಾಧವರಾವ್ | - | (1906-1909) |

- ಟಿ. ಆನಂದರಾವ್ - (1909-1912)
- ಸರ್. ಎಂ. ವಿಶ್ವೇಶ್ವರಯ್ಯ - (1912-1918)
- ಕಾಂತರಾಜ ಅರಸ್ - (1918-1922)
- ಸರ್ ಅಲ್ಬಿಯನ್ ಬ್ಯಾನರ್ಜಿ - (1922-1926)
- ಸರ್ ಮಿರ್ಜಾ ಇಸ್ಮಾಯಿಲ್ - (1926-1941)

❖ ಇವರ ಕಾಲ - ಮೈಸೂರು ಸಂಸ್ಥಾನದ ಸುವರ್ಣಯುಗ
❖ ದೇಶದಲ್ಲೇ ಮಾದರಿ ರಾಜ್ಯವಾಗಿ ನಿರ್ಮಾಣ
❖ ಗಾಂಧೀಜಿ ಹರಿಜನ ಪತ್ರಿಕೆಯಲ್ಲಿ ಇವರ ಕಾಲವನ್ನು ರಾಮರಾಜ್ಯ ಎಂದು ವರ್ಣಿಸಿದರು. ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರನ್ನು 'ರಾಜರ್ಷಿ' (ರಾಜಋಷಿ) ಎಂದು ಕರೆದರು.
❖ ಬ್ರಿಟಿಷ್ ಸರ್ಕಾರದಿಂದ ಗ್ರಾಂಡ್ ಕಮಾಂಡರ್ ಆಫ್ ಇಂಡಿಯನ್ ಎಂಪೈರ್ ಬಿರುದು (GCIE)
❖ 1940ರಲ್ಲಿ ನಿಧನ.

**ಜಯಚಾಮರಾಜ ಒಡೆಯರು (1940-1947)**

❖ ಕೊನೆಯ ಮತ್ತು 25ನೆಯ ಒಡೆಯರು
❖ 1940 ಸೆಪ್ಟೆಂಬರ್ 8ರಂದು 23ನೇ ವಯಸ್ಸಿನಲ್ಲಿ ಅಧಿಕಾರ ಸ್ವೀಕಾರ.
❖ ಇವರ ಆಳ್ವಿಕೆಯ ಕಾಲದ ದಿವಾನರುಗಳು - ನ್ಯಾಪತಿ ಮಾಧವರಾವ್ (1941-1946) ಮತ್ತು ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ (1946-47/49)
❖ 1938ರಲ್ಲಿ ರಾಜಕುಮಾರಿ ಸತ್ಯಪ್ರೇಮ ಕುಮಾರಿ ದೇವಿಯೊಡನೆ ವಿವಾಹ
❖ 1942ರಲ್ಲಿ ರಾಜಕುಮಾರಿ ತ್ರಿಪುರ ಸುಂದರಮ್ಮಣ್ಣಿಯೊಡನೆ ಎರಡನೇ ವಿವಾಹ.
❖ ಕಾಶಿ ವಿಶ್ವವಿದ್ಯಾಲಯದಲ್ಲಿ ಎಲ್.ಎಲ್.ಬಿ. ಪದವಿ.
❖ ಲಂಡನ್ನಿನ ಗಿಲ್ಡ್‌ಹಾಲ್ ಸ್ಕೂಲ್‌ಆಫ್ ಮ್ಯೂಸಿಕ್ ಸಂಸ್ಥೆಯಿಂದ ಲೈಸನ್ಸಿಯೇಟ್ ಸಂಗೀತ ಪದವಿ.
❖ GCSI & GCB ಬಿರುದುಗಳು ಪ್ರಾಪ್ತ
❖ ಮೈಸೂರಿನಲ್ಲಿ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ ತೀವ್ರ ಸ್ವರೂಪ ಪಡೆಯಿತು.
❖ 1947 ಸೆಪ್ಟೆಂಬರ್ ¼ ಅರಮನೆ ಸತ್ಯಾಗ್ರಹ/ಮೈಸೂರು ಚಲೋ ಚಳುವಳಿ ಆರಂಭ.
❖ 1947 ಸೆಪ್ಟೆಂಬರ್ 7ರಂದು ಜವಾಬ್ದಾರಿ ಸರ್ಕಾರ ಸ್ಥಾಪಿಸುವುದಾಗಿ ಘೋಷಣೆ.
❖ 1947 ಅಕ್ಟೋಬರ್ 24 ಜವಾಬ್ದಾರಿ ಸರ್ಕಾರ ಅಸ್ತಿತ್ವ ಮತ್ತು ಕೆ.ಸಿ. ರೆಡ್ಡಿ ನೇತೃತ್ವದಲ್ಲಿ ಹೊಸ ಮಂತ್ರಿಮಂಡಲ ರಚನೆ.
❖ ಮೈಸೂರು ಸಂಸ್ಥಾನದ ಪ್ರಥಮ ರಾಜ ಪ್ರಮುಖರಾದರು. (ರಾಜ್ಯಪಾಲ) 1956ರಲ್ಲಿ ಮಹಾರಾಜ ಪದವಿ ರದ್ದು.
❖ 1963 ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ವಿ.ವಿ.ಯಿಂದ ಡಿ.ಲಿಟ್ ಪದವಿ.
❖ 1973 ನವೆಂಬರ್ 1, ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾದಾಗ ಹಂಪೆಯಲ್ಲಿನ ಸಮಾರಂಭದಲ್ಲಿ ಜ್ಯೋತಿ ಬೆಳಗಿದರು.
❖ ಸ್ವತಃ ಕವಿ ವಿದ್ವಾಂಸ ಮತ್ತು ಪಾಶ್ಚಾತ್ಯ ಸಂಗೀತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು.

- **ಇವರ ಪ್ರಮುಖ ಕೃತಿಗಳು :**
  1. ದತ್ತಾತ್ರೇಯ ಮಾರ್ಗ ಮತ್ತು ಧ್ಯೇಯ (ಅತ್ಯುತ್ತಮ ಕೃತಿ)
  2. ಗೀತೆ ಮತ್ತು ಭಾರತೀಯ ಸಂಸ್ಕೃತಿ
  3. ಧರ್ಮ ಮತ್ತು ಮಾನವ

- **ಪ್ರಸಿದ್ಧ ಕೀರ್ತನೆಗಳು :**
  1. ಶ್ರೀ ಮಹಾಗಣಪತಿಂ ಭಜೇಹಂ
  2. ಲಂಬೋದರ ಪಾಹಿಮಾಂ
  3. ಸರಸ್ವತೀಂ ಭಗವತೀಂ ನಮಾಮ್ಯಹಂ
  4. ಪನ್ನಗಶಯನ ಪರಿಷಾಹಿಮಾರ
  5. ಚಿಂತಮಾಯಿ ಜಗದಂಬಾ
- 1974 ಸೆಪ್ಟೆಂಬರ್ 23 ಮರಣ

## ದಿವಾನರುಗಳು

### ದಿವಾನ್ ಪೂರ್ಣಯ್ಯ : (1799-1811)

- ಮೈಸೂರು ಸಂಸ್ಥಾನದ ಪ್ರಥಮ ದಿವಾನ
- ಹೈದರಾಲಿ ಮತ್ತು ಟಿಪ್ಪುವಿನ ಕಾಲದಲ್ಲಿ ಆಡಳಿತದಲ್ಲಿ ಸೇವೆ
- ಟಿಪ್ಪುವಿನ ಹಣಕಾಸಿನ ಮಂತ್ರಿಯಾಗಿ ಸೇವೆ
- ಇವರ ಕಾಲದಲ್ಲಿನ ಪ್ರಮುಖ ದಂಗೆಗಳು
  - 1799 ದೋಂಡಿಯ ವಾಘುನ ದಂಗೆ
  - 1805 ಐನೂರು ಪಾಳೇಗಾರನ ದಂಗೆ
  - 1805 ವೈನಾಡು ದಂಗೆ
  - 1805 ಚಿತ್ತೂರು ದಂಗೆ
  - 1806 ವೆಲ್ಲೂರು ದಂಗೆ
- 1799ರಲ್ಲಿ ಮೈಸೂರು ಸಂಸ್ಥಾನದ ವಿಸ್ತೀರ್ಣ 46,400ಚ.ಕಿ.ಮೀ. ಮತ್ತು 22 ಲಕ್ಷ ಜನಸಂಖ್ಯೆ
- ಆಂತರಿಕ ಶಾಂತಿಗಾಗಿ ಕಂದಾಚಾರ ಸೈನ್ಯಪಡೆ ರಚನೆ. (ಪ್ರತಿ ಕುಟುಂಬದಿಂದ ಒಬ್ಬೊಬ್ಬ ಸದಸ್ಯರು ಸೈನ್ಯಕ್ಕೆ ಕಡ್ಡಾಯ)
- ರೈತರಿಂದ ರೂಪುಗೊಂಡ ಕಂದಾಚಾರ ಪಡೆಯು ಪೊಲೀಸ್ ಅಧಿಕಾರಿಗಳಿಗೆ ಅಧೀನರಾಗಿ, ನೆರವು ನೀಡಬೇಕಿತ್ತು.
- ಶ್ರೀರಂಗಪಟ್ಟಣದಿಂದ ಮೈಸೂರಿಗೆ ರಾಜಧಾನಿ ವರ್ಗಾವಣೆ ಮಾಡಲಾಯಿತು.
- 1801ರಲ್ಲಿ ಸಂಪಂಗಿ ಕೆರೆ ನಿರ್ಮಾಣ
- ಶ್ರೀರಂಗಪಟ್ಟಣದಲ್ಲಿ ಕಾವೇರಿ ನದಿಗೆ ಸೇತುವೆ (ವೆಲ್ಲಸ್ಲಿ ಸೇತುವೆ)
- 1799-1810ರಲ್ಲಿ ಅವಧಿಯಲ್ಲಿ ಮಾರ್ಕ್ವಿಸ್ ವೆಲ್ಲಸ್ಲಿ ಆದೇಶದಂತೆ ಕರ್ನಲ್ ಮೆಕಂಜಿಯು ಮೈಸೂರು ರಾಜ್ಯದಲ್ಲಿ ನಕ್ಷೆ ಅಳೆಯುವ ಕಾರ್ಯವನ್ನು ಕೈಗೊಂಡ.
- 1808ರಲ್ಲಿ ಮೈಸೂರು ರಾಜ್ಯದ ನಿಖರವಾದ ನಕ್ಷೆ ತಯಾರು.
- ಪ್ರತ್ಯೇಕ ನ್ಯಾಯಾಂಗ ಇಲಾಖೆ ಸ್ಥಾಪನೆ 1825ರಲ್ಲಿ ಅದಾಲತ್ ನ್ಯಾಯಾಲಯಗಳು ಅಸ್ತಿತ್ವಕ್ಕೆ

**ಇವರ ಕಾಲದ ಬ್ರಿಟಿಷ್ ರೆಸಿಡೆಂಟ್‌ಗಳು :**

- ಕರ್ನಲ್ ಬ್ಯಾರಿಕ್ಲೋಸ್
- ಜೆ.ಎಚ್. ಪೈಲ್
- ಜೋಸೈವೆಬ್
- ಸರ್ ಜಾನ್‌ಮಾಲ್‌ಕಾಂ
- ಕರ್ನಲ್ ವಿಲ್ಕ್ಸ್
- ಅರ್ಥರ್ ಹೆಚ್. ಕೋಲ್
- ಲಕ್ಷ್ಮಣ ತೀರ್ಥ ನದಿಗೆ ಸಾಗರಕಟ್ಟೆ ಸಮೀಪ ಅಣೆಕಟ್ಟು
- ಕೃಷಿ ಅಭಿವೃದ್ಧಿಗೆ ರೈತರಿಗೆ ತಕ್ಕಾವಿ ಸಾಲ ನೀಡಿದ.
- 1811ರಲ್ಲಿ ದಿವಾನ ಹುದ್ದೆಯಿಂದ ನಿವೃತ್ತಿ ಮತ್ತು ಯಳಂದೂರನ್ನು ಜಹಗೀರಾಗಿ ಪಡೆದರು.
- 1812 ಮಾರ್ಚ್ 17, ನಿಧನ - ಕಾರ್ಯದಕ್ಷ, ಶ್ರೇಷ್ಠ ರಾಜಕಾರಣಪಟು ಎಂದು ಅರ್ಥರ್ ವೆಲ್ಲಸ್ಲಿಯಿಂದ ಗುಣಗಾನ.

**ಸಿ. ರಂಗಾಚಾರ್ಲು (1881-1883)**

- ರಾಜ್ಯ ಪುನರ್ದಾನದ ನಂತರ ಅಧಿಕಾರ ವಹಿಸಿಕೊಂಡ ಮೊದಲ ದಿವಾನರು
- 1881 ಅಕ್ಟೋಬರ್ 7 ದೇಶದಲ್ಲೇಪ್ರಥಮ ಬಾರಿಗೆ ಪ್ರಜಾಪ್ರತಿನಿಧಿ ಸಭೆ ಸ್ಥಾಪನೆ (144 ಸದಸ್ಯರು)
- 1881ರಲ್ಲಿ ಮೈಸೂರಿನಲ್ಲಿ ಮಹಾರಾಣಿ ಬಾಲಕಿಯರ ಪ್ರೌಢಶಾಲೆ ಸ್ಥಾಪನೆ.
- ನರಸಿಂಹ ಅಯ್ಯಂಗಾರ್‌ರವರು ಹೆಣ್ಣುಮಕ್ಕಳಿಗೆ ಶಾಲೆಗಳನ್ನು ತೆರೆದರು.
- 1882ರಲ್ಲಿ ಬೆಂಗಳೂರು-ಮೈಸೂರು ರೈಲ್ವೆಮಾರ್ಗ ಸ್ಥಾಪನೆ
- 1881ರಲ್ಲಿ ಜಾನ್ ಟೇಲರ್ ಅಂಡ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ಕೋಲಾರದಲ್ಲಿ ಚಿನ್ನದ ಗಣಿ ಕೆಲಸ ಆರಂಭಿಸಿದರು.
- ಇವರ ದಕ್ಷತೆಗೆ ಬ್ರಿಟಿಷ್ ಸರ್ಕಾರ - ಸಿ.ಐ.ಇ. ಬಿರುದು ನೀಡಿ ಗೌರವಿಸಿತು.
- ಆಂಗ್ಲರಿಗಾಗಿ - ಬೆಂಗಳೂರಿನಲ್ಲಿ 400 ಎಕರೆ ಪ್ರದೇಶ ನೀಡಲಾಯಿತು. ಅದೇ ಇಂದಿನ ವೈಟ್‌ಫೀಲ್ಡ್

**ಕೆ. ಶೇಷಾದ್ರಿ ಅಯ್ಯರ್ (1883-1901)**

- 1886ರಲ್ಲಿ ಕೃಷಿ ಮತ್ತು ಅಂಕಿ ಸಂಖ್ಯೆಗಳ ನಿರ್ದೇಶನಾಲಯ.
- 1888ರಲ್ಲಿ ಪ್ರಥಮ ಬಾರಿಗೆ ಮೈಸೂರಿನಲ್ಲಿ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನವನ್ನು ನಡೆಸಲಾಯಿತು. (ಇದು ಇಂದಿನ ದಸರಾ ವಸ್ತು ಪ್ರದರ್ಶನಕ್ಕೆ ಕಾರಣವಾಯಿತು)
- 1889ರಲ್ಲಿ ಮೈಸೂರು ಅಂಚೆ ವ್ಯವಸ್ಥೆಯನ್ನು ಬ್ರಿಟಿಷ್ ಅಂಚೆ ಪದ್ಧತಿಯೊಡನೆ ವಿಲೀನ
- 1889ರಲ್ಲಿ ಗುಬ್ಬಿ, ಹರಿಹರ, ಹಿಂದೂಪುರದವರೆಗೆ ರೈಲ್ವೆ ವಿಸ್ತರಣೆ ಹಾಗೂ ಬೀರೂರು, ಶಿವಮೊಗ್ಗ ರೈಲ್ವೆ
- 1890ರಲ್ಲಿ ಬಿ.ಎಲ್. ರೈಸ್ ನೇತೃತ್ವದಲ್ಲಿ ಪ್ರಾಚ್ಯ ಸಂಶೋಧನಾ ಇಲಾಖೆ ಸ್ಥಾಪನೆ.
- 1891ರಲ್ಲಿ ಮೈಸೂರು ನಂಜನಗೂಡು ಮಾರ್ಗ ನಿರ್ಮಾಣ
- ದಕ್ಷಿಣ ಮರಾಠ ಕಂಪನಿಗೆ ಮೈಸೂರು ರೈಲ್ವೆಯ ಹಸ್ತಾಂತರ
- 1894ರಲ್ಲಿ ಕೃಷಿ ಬ್ಯಾಂಕು ಯೋಜನೆ ಜಾರಿ

- 1894ರಲ್ಲಿ ಬ್ರೂಸ್‌ಫ್ರೂಟ್ ನೇತೃತ್ವದಲ್ಲಿ ಭೂಗರ್ಭ ಸರ್ವೇಕ್ಷಣಾ ಇಲಾಖೆ ಸ್ಥಾಪನೆ
- 1894ರಲ್ಲಿ ಮೈಸೂರು ಬಾಲ್ಯವಿವಾಹ ನಿಷೇಧ ಕಾಯ್ದೆ ಜಾರಿಗೆ.
- 1887ರಲ್ಲಿ ಕರ್ನಾಟಕ ಭಾಷೋಜ್ಜೀವಿನಿ ಸಭಾ ಸ್ಥಾಪನೆ
- ಬೆಂಗಳೂರಿನಲ್ಲಿ ಆರ್ಯಬಾಲಿಕಾ ಪಾಠಶಾಲೆ, ತುಮಕೂರಿನಲ್ಲಿ 'ದಿ ಎಂಪ್ರೆಸ್ ಗರ್ಲ್ಸ್ ಹೈಸ್ಕೂಲ್' ಸ್ಥಾಪನೆ (1897 ವಿಕ್ಟೋರಿಯಾ ರಾಣಿಯ ವಜ್ರಮಹೋತ್ಸವ ಜ್ಞಾಪಕಾರ್ಥ)
- 1901ರಲ್ಲಿ ಮೈಸೂರಿನ ಬಾಲಕಿಯರ ಹೈಸ್ಕೂಲ್ ಮಹಾರಾಣಿ ಕಾಲೇಜಾಗಿ ಪರಿವರ್ತನೆ
- ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ ಸ್ಥಾಪನೆ
- 1886ರಲ್ಲಿ ಮಿಷನರಿಗಳಿಂದ ಮಾರ್ಥಾಸ್ ಆಸ್ಪತ್ರೆ ಆರಂಭ
- ಬೆಂಗಳೂರಿನ ಅಕ್ಕಿಪೇಟೆ, ಬಳೇಪೇಟೆಯಲ್ಲಿ ಪ್ಲೇಗ್ ಹರಡಿದ್ದ ಕಾರಣ ಮಲ್ಲೇಶ್ವರಂ ಮತ್ತು ಚಾಮರಾಜಪಪೇಟೆ ಹೊಸ ಬಡಾವಣೆಗಳು ರಚನೆ (1898)
- 1890ರಲ್ಲಿ ಮೈಸೂರಿನಲ್ಲಿ ಓರಿಯಂಟಲ್ ಲೈಬ್ರರಿ (ಪ್ರಾಚ್ಯ ಗ್ರಂಥಾಲಯ ಸ್ಥಾಪನೆ)
- ಸ್ವಾಮಿ ವಿವೇಕಾನಂದರು ಚಿಕಾಗೋ ಸಮಾವೇಶದಲ್ಲಿ ಪಾಲ್ಗೊಳ್ಳಲು ಕಾರಣರಾದವರಲ್ಲಿ ಇವರು ಪ್ರಮುಖರು.
- ಮೈಸೂರಿನಲ್ಲಿ ಚಾಮರಾಜೇಂದ್ರ ಪ್ರಾಣಿ ಸಂಗ್ರಹಾಲಯ ಸ್ಥಾಪನೆ
- ಭೂವ್ಯಾಜ್ಯಗಳಿಗಾಗಿ ಲ್ಯಾಂಡ್ ರೆವಿನ್ಯೂ ಟ್ರಿಬ್ಯುನಲ್ ಸ್ಥಾಪನೆ
- ಮೈಸೂರು ರಾಜ್ಯ ನೌಕರರಿಗೆ ಜೀವ ವಿಮಾ ಯೋಜನೆ ಜಾರಿಗೆ
- 1891ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ ಆರಂಭ.

**ಇವರ ಕಾಲದಲ್ಲಿ ಜಾರಿಗೆ ಬಂದ ಪ್ರಮುಖ ಕಾಯ್ದೆಗಳು**

- ಮೈಸೂರು ಸಿವಿಲ್ ನ್ಯಾಯಾಲಯ ಕಾಯ್ದೆ - 1883
- ಮೈಸೂರು ಮುಖ್ಯ ನ್ಯಾಯಾಲಯ ಕಾಯ್ದೆ - 1884
- ಮೈಸೂರು ಭೂಕಂದಾಯ ಸಂಹಿತೆ - 1888
- ಮೈಸೂರು ಶಸ್ತ್ರಾಸ್ತ್ರ ನಿಯಂತ್ರಣ ಕಾಯ್ದೆ - 1894
- ಮೈಸೂರು ಶಿಶುವಿವಾಹ ನಿಷೇದ ಕಾಯ್ದೆ - 1894
- ಮೈಸೂರು ರೈಲ್ವೆ ಕಾಯ್ದೆ - 1894
- 1897ರಲ್ಲಿ ಮೈಸೂರು ಅರಮನೆ ನಿರ್ಮಾಣ ಕಾರ್ಯ ಆರಂಭ.
- 1897-98 ಚಿತ್ರದುರ್ಗದಲ್ಲಿ ಮಾರಿಕಣಿವೆ ಅಣೆಕಟ್ಟಿನ ನಿರ್ಮಾಣ ಕಾರ್ಯ ಆರಂಭ (ವಾಣಿವಿಲಾಸ ಸಾಗರ)
- 1896ರಲ್ಲಿ ಹೆಸರಘಟ್ಟ ಜಲಾಶಯದಿಂದ ಕೊಳವೆ ಮೂಲಕ ನಗರಕ್ಕೆ ಕುಡಿಯುವ ನೀರು ಪೂರೈಕೆ
- 1899/00 ಶಿವನಸಮುದ್ರ ಜಲವಿದ್ಯುತ್ ಕೇಂದ್ರ ಸ್ಥಾಪನೆ (ಏಷ್ಯಾದಲ್ಲೇ ಮೊದಲ ವಿದ್ಯುತ್ ಸ್ಥಾವರ)
- 1901ರಲ್ಲಿ ನಿವೃತ್ತಿ, ಬ್ರಿಟಿಷರಿಂದ CIE ಬಿರುದು

**ಪಿ.ಎನ್. ಕೃಷ್ಣಮೂರ್ತಿ (1901-1906)**

- ದಿವಾನ್ ಪೂರ್ಣಯ್ಯನವರ ಮೊಮ್ಮಗ
- 1902ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಿಂಹಾಸನಾರೋಹಣ

- ಸಹಕಾರ ಬ್ಯಾಂಕ್, ಸಹಕಾರಿ ಸಂಘಗಳು ಸ್ಥಾಪನೆ
- 1905ರಲ್ಲಿ ಬೆಂಗಳೂರಿನಲ್ಲಿ ಟಾಟ (ಭಾರತೀಯರು) ವಿಜ್ಞಾನ ಸಂಸ್ಥೆ ಸ್ಥಾಪನೆ
- 1905ರಲ್ಲಿ ಬೆಂಗಳೂರಿಗೆ ವಿದ್ಯುತ್, (ದೇಶದಲ್ಲೇ ಮೊದಲ ನಗರ)
- 1906ರಲ್ಲಿ ಒಕ್ಕಲಿಗರ ಸಂಘ ಸ್ಥಾಪನೆ

**ವಿ.ಪಿ. ಮಾಧವರಾಯ (1906-1909)**

- 1907 ವಿಧಾನಪರಿಷತ್ ಸ್ಥಾಪನೆ (Legislative Council (ನ್ಯಾಯ ವಿಧೇಕ ಸಭೆ) ಸ್ಥಾಪನೆ.
- 1908ರಲ್ಲಿ ನ್ಯೂಸ್ ಪೇಪರ್ಸ್ ರೆಗ್ಯುಲೇಷನ್ ಕಾಯ್ದೆ ಜಾರಿ ಮಾಡಿ ಪತ್ರಿಕಾ ಸ್ವಾತಂತ್ರ್ಯ ಮುಟ್ಟುಗೋಲು ಹಾಕಿ ಜನಪ್ರಿಯತೆ ಕಳೆದುಕೊಂಡರು.

**ಟಿ. ಆನಂದರಾವ್ (1909-1912)**

- ಮೈಸೂರು ಆರ್ಥಿಕ ಸಮ್ಮೇಳನ ಪ್ರಾರಂಭ
- ಕನ್ನಂಬಾಡಿ (KRS) ನಿರ್ಮಾಣ ಕಾರ್ಯ ಆರಂಭ (1911)
- ಮೈಸೂರು ಅರಮನೆ ನಿರ್ಮಾಣಕಾರ್ಯ ಪೂರ್ಣ (1912)
- ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಗಾಜಿನ ಮನೆ ನಿರ್ಮಾಣ (ಇಂಗ್ಲೆಂಡಿನ ಪ್ರಿನ್ಸ್ ಅಲ್ಬರ್ಟ್ ಬೆಂಗಳೂರಿಗೆ ಭೇಟಿ ನೀಡಿದ ನೆನಪಿಗಾಗಿ)
- ಮೈಸೂರು ಅರಸೀಕೆರೆ ರೈಲ್ವೆ ಮಾರ್ಗ ಆರಂಭ

**ಸರ್.ಎಂ. ವಿಶ್ವೇಶ್ವರಯ್ಯ (1912-1918)**

- ಆಧುನಿಕ ಮೈಸೂರಿನ ಶಿಲ್ಪಿ
- 1861 ಸೆಪ್ಟೆಂಬರ್ 15 ಚಿಕ್ಕಬಳ್ಳಾಪುರ ಜಿಲ್ಲೆ, ಮುದ್ದೇನಹಳ್ಳಿಯಲ್ಲಿ ಜನನ
- ಶ್ರೀನಿವಾಸಶಾಸ್ತ್ರಿ ಮತ್ತು ವೆಂಕಟಲಕ್ಷ್ಮಮ್ಮ ತಂದೆ ತಾಯಿಗಳು
- ಪೂರ್ವಿಕರು ಆಂಧ್ರದ ಕರ್ನೂಲು ಜಿಲ್ಲೆ, ಗಿದ್ದಲೂರು ತಾಲ್ಲೋಕಿನ ಮೋಕ್ಷಗುಂಡಂನಿಂದ ಮುದ್ದೇನಹಳ್ಳಿಗೆ ವಲಸೆ ಬಂದು ನೆಲೆಸಿದರು.
- ಪೂನಾದ ವಿಜ್ಞಾನ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ.
- ಬಾಂಬೆ ಸರ್ಕಾರದಲ್ಲಿ ಸಹಾಯಕ ಇಂಜಿನಿಯರ್ ಆಗಿ ವೃತ್ತಿ ಆರಂಭ.
- 1909ರಲ್ಲಿ ಮೈಸೂರಿನ ಚೀಫ್ ಇಂಜಿನಿಯರ್ ಆಗಿ ನೇಮಕ
- 1911ರಲ್ಲಿ ಕೃಷ್ಣರಾಜಸಾಗರ ಜಲಾಶಯ (ಕನ್ನಂಬಾಡಿ) ನಿರ್ಮಾಣ
- 1912ರಲ್ಲಿ ದಿವಾನರಾಗಿ ಅಧಿಕಾರ ಸ್ವೀಕಾರ
- 1913ರಲ್ಲಿ ಮೈಸೂರು ಬ್ಯಾಂಕ್ ಸ್ಥಾಪನೆ
- 1914ರಲ್ಲಿ ಕಾವೇರಿ ಜಲವಿದ್ಯುತ್ ಯೋಜನೆಯ 4ನೇ ಹಂತ ಆರಂಭ.
- 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು (ಬೆಂಗಳೂರು) ಸ್ಥಾಪನೆ.
- 1916ರಲ್ಲಿ ಮೈಸೂರು ವಿ.ವಿ. ಸ್ಥಾಪನೆ

- 1913ರಲ್ಲಿ ವೈಸ್ರಾಯಿ ಲಾರ್ಡ್ ಹಾರ್ಡಿಂಜ್ ಮೈಸೂರಿಗೆ ಭೇಟಿ, 1881ರ ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್ ಆಫ್ ಪವರ್ ಒಪ್ಪಂದ ರದ್ದು
- 1918ರಲ್ಲಿ ಲೋಕಲ್ ಬೋರ್ಡ್ ಮತ್ತು ಗ್ರಾಮ ಪಂಚಾಯ್ತಿ ಕಾಯ್ದೆ ಜಾರಿಗೆ
- 1917ರಲ್ಲಿ ಚನ್ನಪಟ್ಟಣದಲ್ಲಿ ರೇಷ್ಮೆ ಸಂಶೋಧನಾ ಕೇಂದ್ರ ಸ್ಥಾಪನೆ ಮತ್ತು ನಾಗೇನಹಳ್ಳಿ ಬಳಿ ಭತ್ತ ಮತ್ತು ಕಬ್ಬು ಬೆಳೆ ಸಂಶೋಧನಾ ಕೇಂದ್ರ

**ಸ್ಥಾಪನೆಯಾದ ಪ್ರಮುಖ ಕೈಗಾರಿಕೆಗಳು**

- ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆ, ಲೋಹದ ಕಾರ್ಖಾನೆ, ಸೀಸ ಹದಮಾಡುವ ಕಾರ್ಖಾನೆ
- ಕೇಂದ್ರೀಯ ಕೈಗಾರಿಕಾ ವರ್ಕ್‌ಷಾಪ್
- ಮೈಸೂರು ಗಂಧದೆಣ್ಣೆ ಕಾರ್ಖಾನೆ ಇತ್ಯಾದಿ
- 1914-18ರ ಮೊದಲ ಮಹಾಯುದ್ಧ ಸಂದರ್ಭದಲ್ಲಿ 50ಲಕ್ಷ ಧನಸಹಾಯ ಮತ್ತು ಮೈಸೂರು ಸೇವೆಯಲ್ಲಿ ಬ್ರಿಟಿಷರ ನೆರವಿಗೆ ಕಳುಹಿಸಲಾಯಿತು.
- ಅವರು ನೀಡಿದ ಆರ್ಥಿಕ ಮಂತ್ರ - 'ಕೈಗಾರಿಕೀಕರಣ ಇಲ್ಲವೆ ವಿನಾಶ'
- ವಾಣಿಜ್ಯ ಕೈಗಾರಿಕೆಗಳ ಸಮಸ್ಯೆಗಳ ಪರಿಹಾರಕ್ಕೆ ಮೈಸೂರು ಛೇಂಬರ್ ಆಫ್ ಕಾಮರ್ಸ್ ಮತ್ತು ಇಂಡಿಯನ್ ಛೇಂಬರ್ಸ್ ಆಫ್ ಕಾಮರ್ಸ್ ಸ್ಥಾಪನೆ

**ರಚಿಸಿದ ಕೃತಿಗಳು**

- ಪ್ಲಾನ್‌ಡ್ ಎಕಾನಮಿ ಫಾರ್ ಇಂಡಿಯಾ
- ರಿ ಕನ್‌ಸ್ಟ್ರಂಕ್ಟಿಂಗ್ ಇಂಡಿಯಾ
- ಎ ವಿಜನ್ ಆಫ್ ಪ್ರಾಸ್ಪರಸ್ ಮೈಸೂರ್
- ರ್‍ಯಾಪಿಡ್ ಡೆವಲಪ್‌ಮೆಂಟ್ ಆಫ್ ಇಂಡಸ್ಟ್ರೀಸ್
- ಮೆಮಾಯಿರ್ಸ್ ಆಫ್ ಮೈ ವರ್ಕಿಂಗ್‌ಲೈಫ್ (ಆತ್ಮಚರಿತ್ರೆ)
- 1917ರಲ್ಲಿ ಜಸ್ಟೀಸ್ ಲೆಸ್ಲಿ ಮಿಲ್ಲರ್ ಕಮಿಟಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗದ ರಚನೆ (ಮೀಸಲಾತಿಗೆ ಶಿಫಾರಸ್ಸು)
- ಮೀಸಲಾತಿ ವಿರೋಧಿಸಿ ದಿವಾನಗಿರಿಗೆ ರಾಜೀನಾಮೆ (1918)
- ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷರಾಗಿ ನೇಮಕ (1923)
- 1949ರಲ್ಲಿ ಭಾರತೀಯ ವಿಜ್ಞಾನ ಮಂದಿರದ ಅಧ್ಯಕ್ಷರಾಗಿ ಸೇವೆ.
- ಪ್ರಶಸ್ತಿಗಳು ಕೈಸರ್-ಏ-ಹಿಂದ್, ಕೆ.ಸಿ.ಐ., ಸರ್ ಪದವಿ 1955ರಲ್ಲಿ - ಭಾರತರತ್ನ
- 1862 ಏಪ್ರಿಲ್ 14 ಮರಣ
- ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರಿಗೆ ನೀರು ಪೂರೈಕೆ ಯೋಜನೆ
- 1940ರಲ್ಲಿ ಬೆಂಗಳೂರಿನಲ್ಲಿ ಹೆಚ್.ಎ.ಎಲ್. ಕಾರ್ಖಾನೆ ಸ್ಥಾಪನೆ.

**ದಿವಾನ್ ಕಾಂತರಾಜ್ ಅರಸ್ (1918-22)**

- ಪ್ರಥಮ ಬ್ರಾಹ್ಮಣೇತರ ದಿವಾನರು ಅಥವಾ ಪ್ರಥಮ ಹಿಂದುಳಿದ ವರ್ಗಗಳ ದಿವಾನರು
- ಹಿಂದುಳಿದ ವರ್ಗಗಳ ಹಿತರಕ್ಷಕ ಎಂಬ ಬಿರುದು

- ಹಿಂದುಳಿದ ವರ್ಗದವರಿಗೆ ಸರ್ಕಾರಿ ಹುದ್ದೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯತೆ ನೀಡಲಾಯಿತು.
- ಅಪೆಕ್ಸ್ ಬ್ಯಾಂಕ್ ಸ್ಥಾಪನೆ
- ಬಜೇಂದ್ರನಾಥ್ ಸೀಲ್ ಅಧ್ಯಕ್ಷತೆಯಲ್ಲಿ ಮೈಸೂರು ರಾಜ್ಯಾಂಗ ಸುಧಾರಣ ಸಮಿತಿ ರಚನೆ.

**ದಿವಾನ್ ಮಿರ್ಜಾ ಇಸ್ಮಾಯಿಲ್ (1926-1941)**

- 1927ರಲ್ಲಿ ಮೈಸೂರು ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳ ಸ್ಥಾಪನೆ
- 1927ರಲ್ಲಿ ವೈಸ್ರಾಯ್ ಲಾರ್ಡ್ ಇರ್ವಿನ್ ಮೈಸೂರಿಗೆ ಆಗಮನ
- 1927ರಲ್ಲಿ ಮೈಸೂರು ಜಿಲ್ಲಾ ಬೋರ್ಡ್ ಅಧಿನಿಯಮ ಜಾರಿ
- 1927ರಲ್ಲಿ ಮೈಸೂರಿಗೆ ಗಾಂಧಿ ಆಗಮನ ಬೆಂಗಳೂರಿನ ನಂದಿ ಬೆಟ್ಟದಲ್ಲಿ ವಿಶ್ರಾಂತಿ.
- 1927ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಸಿಂಹಾಸನಾರೋಹಣದ ರಜತ ಮಹೋತ್ಸವ
- 1928ರಲ್ಲಿ ಬೆಂಗಳೂರಿನ ಸುಲ್ತಾನ್ ಪೇಟೆಯಲ್ಲಿ ಗಣಪತಿ ಗಲಭೆಗಳು
- 1930-32ರಲ್ಲಿ ಲಂಡನ್ನಿನ ದುಂಡುಮೇಜಿನ ಸಮ್ಮೇಳನದಲ್ಲಿ ದಕ್ಷಿಣ ರಾಜ್ಯಗಳ ಪ್ರತಿನಿಧಿಯಾಗಿ ಭೇಟಿ
- ಇವರ ಕಾಲ ಸ್ವಾತಂತ್ರ್ಯ ಚಳವಳಿಯ ತೀವ್ರ ಸ್ವರೂಪದ ಕಾಲ
- 1938 ಏಪ್ರಿಲ್ 11 ಶಿವಪುರ ಧ್ವಜ ಸತ್ಯಾಗ್ರಹ
- 1939ರಲ್ಲಿ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ (ಮೈಸೂರು) ನಡೆಯಿತು.

**ಸ್ಥಾಪಿತ ಕೈಗಾರಿಕೆಗಳು**

a. ಭದ್ರಾವತಿ ಕಾಗದ ಮತ್ತು ಸಿಮೆಂಟ್ ಕಾರ್ಖಾನೆ
b. ಬೆಂಗಳೂರಿನ ಪಿಂಗಾಣಿ ಮತ್ತು ಗಾಜು ಕಾರ್ಖಾನೆ
c. ಬೆಂಗಳೂರು ವಿಮಾನ ಕಾರ್ಖಾನೆ (ಹೆಚ್.ಎ.ಎಲ್.)
d. ಶಿವಮೊಗ್ಗ - ಬೆಂಕಿಪೊಟ್ಟಣ ಕಾರ್ಖಾನೆ
e. ಬೆಳಗೊಳದ ರಾಸಾಯನಿಕ ಮತ್ತು ಗೊಬ್ಬರ ಕಾರ್ಖಾನೆ
f. ನಂಜನಗೂಡಿನ ಬದನವಾಳಿನ ಖಾದಿ ಉತ್ಪನ್ನ ಕೇಂದ್ರ
g. ಮೈಸೂರಿನ ಕೃಷ್ಣರಾಜೇಂದ್ರ ಮಿಲ್, ವಿದ್ಯುತ್ ಉಪಕರಣ ಕಾರ್ಖಾನೆ
h. ಮೈಸೂರು, ಹಾಸನ ಕೃಷಿ ಉಪಕರಣ ಕಾರ್ಖಾನೆ
i. ಮಂಡ್ಯ ಸಕ್ಕರೆ ಕಾರ್ಖಾನೆ ಮುಂತಾದವುಗಳು

- ಭಾರತದಲ್ಲೇ ಪ್ರಥಮ ಬಾರಿಗೆ ಗ್ರಾಮೀಣ ವಿದ್ಯುತ್ ಯೋಜನೆ ಜಾರಿಗೆ, 180 ಗ್ರಾಮಗಳು ವಿದ್ಯುತ್ ಸೌಲಭ್ಯ ಪಡೆದವು.
- ಕನ್ನಡ ಸಾಹಿತ್ಯ ಪರಿಷತ್ತಿಗೆ ನಿವೇಶನ ನೀಡಿಕೆ.
- ಕಾವೇರಿ ನದಿಗೆ ಇರ್ವಿನ್ ನಾಲೆ ನಿರ್ಮಾಣ (ಇಂದಿನ ಹೆಸರು ವಿಶ್ವೇಶ್ವರಯ್ಯ ನಾಲೆ)
- ಬೆಂಗಳೂರಿನಲ್ಲಿ ನಿಮ್ಹಾನ್ಸ್, ಮೈಸೂರಿನ ವಾಣಿವಿಲಾಸ ಹೆರಿಗೆ ಆಸ್ಪತ್ರೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ,ಕೋಲಾರದ ನರಸಿಂಹರಾಜ ಆಸ್ಪತ್ರೆ ಗೌರಿಬಿದನೂರು ಸರ್ಕಾರಿ ಆಸ್ಪತ್ರೆಗಳು ಸ್ಥಾಪಿತವಾದವು.

- ❖ ಬೆಂಗಳೂರಿನ ಜಕ್ಕೂರು ವಿಮಾನನಿಲ್ದಾಣ ಸ್ಥಾಪನೆ
- ❖ ಜೋಗದ ಬಳಿ ಶರಾವತಿ ನದಿಗೆ ಜಲವಿದ್ಯುತ್ ಕೇಂದ್ರ ಸ್ಥಾಪನೆ.
- ❖ ಜಗತ್ಪ್ರಸಿದ್ಧ ಬೃಂದಾವನ ನಿರ್ಮಾಣ
- ❖ 1941ರಲ್ಲಿ ದಿವಾನ್ ಹುದ್ದೆಗೆ ನಿವೃತ್ತಿ - ನಂತರ ಜೈಪುರದ ದಿವಾನರು
- ❖ ಜೈಪುರದಲ್ಲಿ ಪಿಲಾನಿ ಶಿಕ್ಷಣ ಸಂಸ್ಥೆ ಸ್ಥಾಪನೆ ನಂತರ ಹೈದರಾಬಾದಿನ ದಿವಾನರಾಗಿ ಸೇವೆ.
- ❖ 1959ರಲ್ಲಿ ನಿಧನ.
- ❖ ಬ್ರಿಟಿಷರಿಂದ ಸರ್ ಪದವಿ ಮತ್ತು ಕೆ.ಸಿ.ಐ.ಇ. ಬಿರುದು
- ❖ ಮಹಾರಾಜರಿಂದ - ಅಮೀನ್-ಉಲ್-ಮುಲ್ಕ್ ಬಿರುದು.

**ದಿವಾನ್ ನ್ಯಾಪತಿ ಮಾಧವರಾವ್ (1941-46)**

- ❖ ಪ್ರಥಮ ಬಾರಿಗೆ ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣಕ್ಕಾಗಿ ಸಾಲ ನೀಡುವ ಯೋಜನೆ ಜಾರಿ.
- ❖ ಶ್ರೀಸಾಮಾನ್ಯರೊಂದಿಗಿನ ಸಂಪರ್ಕ ಕಡಿಮೆ, ಹಾಗಾಗಿ ಜನಪ್ರಿಯ ದಿವಾನರಲ್ಲ.
- ❖ ಬೆಂಗಳೂರಿನಲ್ಲಿ ಸೆಂಚುರಿ ಕ್ಲಬ್ ಸ್ಥಾಪನೆ.

**ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ (1946-47)**

- ❖ ಕೊನೆಯ ದಿವಾನರು
- ❖ ಜವಾಬ್ದಾರಿ ಸರ್ಕಾರ ರಚನೆಗಾಗಿ ತೀವ್ರ ಚಳವಳಿ
- ❖ 1947 ಅಕ್ಟೋಬರ್ 24 ಜವಾಬ್ದಾರಿ ಸರ್ಕಾರ ಸ್ಥಾಪನೆ

## ಆಧುನಿಕ ಕರ್ನಾಟಕ

### ಕರ್ನಾಟಕ ಏಕೀಕರಣ ಚಳುವಳಿ -

**ಮುಖ್ಯಾಂಶಗಳು**

- ❖ ಕನ್ನಡ ಭಾಷಾ ರಾಜ್ಯ ಉದಯಕ್ಕೆ ಮೊದಲಿಗೆ ನಾಂದಿ ಹಾಕಿದವರು ಡೆಪ್ಯುಟಿ ಚನ್ನಬಸಪ್ಪ.
- ❖ 1890ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆ. (ಸ್ಥಾಪಕರು, ಹ.ರಾ. ದೇಶಪಾಂಡೆ)
- ❖ ಕನ್ನಡ ಕುಲ ಪುರೋಹಿತ ಎಂದು ಹೆಸರಾದ ಆಲೂರು ವೆಂಕಟರಾಯರು "ಕರ್ನಾಟಕ ಗತವೈಭವ" ಮತ್ತು "ಕರ್ನಾಟಕ ವೀರ ರತ್ನಗಳು" ಕೃತಿಯ ಮೂಲಕ ಕನ್ನಡಿಗರಲ್ಲಿ ಭಾಷೆ, ಸಂಸ್ಕೃತಿ, ಚರಿತ್ರೆ ಬಗ್ಗೆ ಅಭಿಮಾನ ಮೂಡಿಸಿ ಏಕೀಕರಣಕ್ಕೆ ಸ್ಫೂರ್ತಿ ನೀಡಿದರು.
- ❖ 1915ರಲ್ಲಿ ರಚನೆಯಾದ ಕನ್ನಡ ಸಾಹಿತ್ಯ ಪರಿಷತ್, 1916ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾದ ಕರ್ನಾಟಕ ಸಭಾಗಳು ಏಕೀಕರಣಕ್ಕೆ ಸ್ಫೂರ್ತಿ ನೀಡಿದವು.
- ❖ 1920ರಲ್ಲಿ ಧಾರವಾಡದಲ್ಲಿ ದಿವಾನ್ ವಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಪ್ರಥಮ ರಾಜ್ಯ ರಾಜಕೀಯ ಅಧಿವೇಶನ ನಡೆಯಿತು. ಇಲ್ಲಿ ತೆಗೆದುಕೊಂಡ ತೀರ್ಮಾನದಂತೆ 1920ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ

ಆಗ್ರಹ ಮಾಡಿದ್ದರಿಂದ ಕನ್ನಡಿಗರಿಗೆ ಪ್ರತ್ಯೇಕವಾದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (KPCC) ಸ್ಥಾಪನೆಗೆ ಅವಕಾಶ ದೊರೆಯಿತು. ಇದರ ಪ್ರಥಮ ಅಧ್ಯಕ್ಷರಾಗಿ ಕರ್ನಾಟಕದ ಕೇಸರಿ ಎಂದು ಹೆಸರಾದ ಗಂಗಾಧರರಾವ್ ದೇಶಪಾಂಡೆಯವರು ನೇಮಕವಾದರು.

- 1924-ಸಿದ್ಧಪ್ಪ ಕಂಬಳಿ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಪ್ರಥಮ ಏಕೀಕರಣ ಸಮ್ಮೇಳನ ನಡೆಯಿತು. ಉಯಿಲಗೋಳ ನಾರಾಯಣರಾಯರ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆಯನ್ನು ಇಲ್ಲಿ ಹಾಡಲಾಯಿತು.
- 1946ರಲ್ಲಿ ಬೊಂಬಾಯಿಯಲ್ಲಿ ಅಲ್ಲಿನ ಮುಖ್ಯಮಂತ್ರಿ ಬಿ.ಜಿ. ಖೇರ್ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಭೆ ನಡೆದಾಗ ಸರ್ದಾರ್ ಪಟೇಲ್‌ರವರು ಉದ್ಘಾಟನಾ ಭಾಷಣ ಮಾಡುತ್ತ "ಸ್ವತಂತ್ರ ಭಾರತದ ಮೊಟ್ಟಮೊದಲ ಕರ್ತವ್ಯವೆಂದರೆ ಭಾಷಾವಾರು ಪ್ರಾಂತ್ಯಗಳ ರಚನೆ" ಎಂದು ಘೋಷಿಸಿದರು.
- 1947ರಲ್ಲಿ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಮಹಾಸಮಿತಿ ರಚನೆಯಾಯಿತು.
- ಧಾರ್ ಸಮಿತಿ : 1948 ಜನವರಿಯಲ್ಲಿ ಭಾಷಾವಾರು ರಚನೆಯ ಸಾಧಕಬಾಧಕಗಳ ಬಗ್ಗೆ ಅಧ್ಯಯನ ಮಾಡಲು ಸಂವಿಧಾನಾ ರಚನಾ ಸಭೆಯು ಈ ಸಮಿತಿಯನ್ನು ನೇಮಿಸಿತು. 1948 ಡಿಸೆಂಬರ್‌ನಲ್ಲಿ ಇದು ವರದಿ ಸಲ್ಲಿಸಿ ಭಾಷಾವಾರು ರಚನೆಯನ್ನು ವಿರೋಧಿಸಿತು.
- ಧಾರ್ ಸಮಿತಿ ವರದಿಯಿಂದ ರೊಚ್ಚಿಗೆದ್ದ ಜನತೆಯನ್ನು ಸಮಾಧಾನ ಪಡಿಸಲು 1948 ಡಿಸೆಂಬರ್‌ನಲ್ಲಿ ಜೈಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕೈಗೊಂಡ ತೀರ್ಮಾನದಂತೆ ಈ ಸಮಸ್ಯೆ ಬಗೆಹರಿಸಲು ಜೆ.ವಿ.ಪಿ. ಸಮಿತಿಯನ್ನು ನೇಮಸಿತು.
- ಜೆ.ವಿ.ಪಿ. (ಜವಹರಲಾಲ್ ನೆಹರು, ವಲ್ಲಭಬಾಯಿಪಟೇಲ್ ಮತ್ತು ಪಟ್ಟಾಭಿಸೀತಾರಾಮಯ್ಯನವರ ನೇತೃತ್ವದ ಸಮಿತಿ) ಸಮಿತಿಯು 1949 ಏಪ್ರಿಲ್‌ನಲ್ಲಿ ವರದಿ ಸಲ್ಲಿಸಿ, ಆಂದ್ರ ರಚನೆಯನ್ನು ಮಾತ್ರ ಬೆಂಬಲಿಸಿ ಇತರ ಭಾಷಾವಾರು ಪ್ರಾಂತ್ಯಗಳ ನಿರ್ಮಾಣವನ್ನು ವಿರೋಧಿಸಿತು.
- 1951ರಲ್ಲಿ ಕೆ.ಆರ್. ಕಾರಂತ್ ಅಧ್ಯಕ್ಷತೆಯಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ ಸ್ಥಾಪನೆಯಾಯಿತು.
- 1952 ಅಕ್ಟೋಬರ್‌ನಲ್ಲಿ ಆಂಧ್ರಪ್ರದೇಶದ ನಿರ್ಮಾಣಕ್ಕಾಗಿ ಪೊಟ್ಟಿ ಶ್ರೀರಾಮುಲು 58 ದಿನಗಳ ಕಾಲ ಅಮರಣಾಂತ ಉಪವಾಸ ಕೈಗೊಂಡು ಡಿಸೆಂಬರ್ 15ರಂದು ಮರಣ ಹೊಂದಿದರು. ಆಂಧ್ರದಲ್ಲಿ ತೀವ್ರ ಗಲಭೆಗಳು ಆದಾಗ ನೆಹರುರವರು ಡಿಸೆಂಬರ್ 19ರಂದೇ ಸಂಸತ್ತಿನಲ್ಲಿ ಆಂಧ್ರ ರಚನೆಯನ್ನು ಘೋಷಿಸಿದರು.
- ಜಸ್ಟೀಸ್ ಕೆ.ಎನ್. ವಾಂಚೂ ಕಮಿಟಿ : ಈ ಸಮಿತಿಯನ್ನು ಆಂಧ್ರರಚನೆಗಾಗಿ ನೇಮಿಸಲಾಯಿತು. ಈ ಸಮಿತಿಯ ತೀರ್ಮಾನದಂತೆ ಬಳ್ಳಾರಿ ಮೈಸೂರು ಪ್ರಾಂತ್ಯಕ್ಕೆ ಸೇರ್ಪಡೆಯಾಯಿತು.
- ಕರ್ನಾಟಕ ರಾಜ್ಯ ರಚನೆಗಾಗಿ ಅಂದಾನಪ್ಪ ದೊಡ್ಡ ಮೇಟಿಯವರು ಧಾರವಾಡದ ತಮ್ಮ ಗ್ರಾಮ ಜಕ್ಕಲಿಯಲ್ಲಿ ಹಾಗೂ ಶಂಕರಗೌಡ ಅಳವಂಡಿಯವರು ಹುಬ್ಬಳ್ಳಿಯ ಅದರಗುಂಚಿಯಲ್ಲಿ ಉಪವಾಸ ಸತ್ಯಾಗ್ರಹ ಹೂಡಿದರು.
- 1953 ಡಿಸೆಂಬರ್ 29ರಂದು ಕೇಂದ್ರ ಸರ್ಕಾರವು ಅಂತಿಮವಾಗಿ ಫಜಲ್ ಅಲಿ ಅಧ್ಯಕ್ಷತೆಯಲ್ಲಿ ರಾಜ್ಯಗಳ ಪುನರ್ ವಿಂಗಡನಾ ಆಯೋಗವನ್ನು ರಚಿಸಿತು. ಹೆಚ್.ಎನ್. ಖುಂಜ್ರು ಮತ್ತು ಕೆ.ಎಮ್. ಪಣಿಕ್ಕರ್ ಈ ಆಯೋಗದ ಸದಸ್ಯರಾಗಿದ್ದರು.
- ಫಜಲ್ ಅಲಿ ಕಮಿಟಿಯ ವರದಿಯಂತೆ, 1956 ನವೆಂಬರ್ 1ರಂದು ನವ ಮೈಸೂರು ರಾಜ್ಯ ಉದಯವಾಯಿತು.

**ನವ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾದ ಪ್ರದೇಶಗಳು**

- ಬಳ್ಳಾರಿ
- ಬೊಂಬಾಯಿ ಪ್ರಾಂತ್ಯದಿಂದ - ಬೆಳಗಾವಿ (ಚಂದಗಡ ತಾಲ್ಲೋಕು ಹೊರತು ಪಡಿಸಿ) ಬಿಜಾಪುರ-ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು.
- ಮದ್ರಾಸ್ ಪ್ರಾಂತ್ಯದಿಂದ - ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ಮತ್ತು ಅಮಿನಿ ದ್ವೀಪಗಳನ್ನು ಬಿಟ್ಟು) ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು.
- ಕೊಡಗು
- ಹೈದ್ರಾಬಾದ್ ಪ್ರಾಂತ್ಯದಿಂದ - ಬೀದರ್ ಗುಲ್ಬರ್ಗ, ರಾಯಚೂರು.
- ಮುಖ್ಯಮಂತ್ರಿ ದೇವರಾಜ ಅರಸ್‌ರವರ ಕಾಲದಲ್ಲಿ 1973 ನವೆಂಬರ್ 1 ರಂದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು.

## ಕರ್ನಾಟಕ ಚರಿತ್ರೆ

- ಕರ್ನಾಟಕದ ಉಲ್ಲೇಖ ಮೊದಲಿಗೆ ದೊರೆಯುವುದು - ಮಹಾಭಾರತದ ಸಭಾಪರ್ವ ಮತ್ತು ಭೀಷ್ಮ ಪರ್ವಗಳಲ್ಲಿ
- ಮಹಾಭಾರತದಲ್ಲಿ ಕಂಡುಬರುವ ಕರ್ನಾಟಕ ಶಬ್ದಗಳು - ಮಹಿಷಕಾ (ಮೈಸೂರು) ಕುಂತಲ (ಉತ್ತರಭಾಗ) ಕರ್ನಾಟಕ (ದಕ್ಷಿಣಭಾಗ)
- ರಾಮಾಯಣದಲ್ಲಿನ - ಕಿಷ್ಕಿಂದೆ, ವೈಜಯಂತಿ, ರಟ್ಟಕಾ, ಮಹಿಷಕ ಹೆಸರುಗಳು ಕರ್ನಾಟಕ ರಾಜ್ಯವನ್ನು ಸೂಚಿಸುತ್ತದೆ. ಆದರೆ ಇದರಲ್ಲಿ ಕಾರ್ನಾಟಕ ಎಂಬ ಹೆಸರು ಬರುವುದಿಲ್ಲ.
- ರಾಮಾಯಣದ ವಾಲಿ, ಸುಗ್ರೀವ ಮತ್ತು ಆಂಜನೇಯ ಕನ್ನಡನಾಡಿನಲ್ಲಿ ಹುಟ್ಟಿದವರು.
- ಮಗದರು, ನಂದರು ಕುಂತಲ (ಕರ್ನಾಟಕ) ದೇಶವನ್ನು ಆಳಿದರು ಎಂಬ ಉಲ್ಲೇಖ - ಕಳಿಂಗದ ಶಾಸನಗಳಿಂದ ತಿಳಿದುಬರುತ್ತದೆ.
- ಟಾಲೆಮಿ - ಮಲಿಪ್ಪಾಲ (ಮಲ್ಪೆ) ಬಂದರನ್ನು ತನ್ನ ಗ್ರಂಥದಲ್ಲಿ ಸೂಚಿಸಿದ್ದಾನೆ.
- ಕ್ರಿ.ಶ. 2ನೇ ಶತಮಾನದ ಸಿಲಪ್ಪದಿಗಾರಂನಲ್ಲಿ ಕರುನಾಟರ್ ಶಬ್ದದ ಉಲ್ಲೇಖವಿದೆ.
- ❖ ಶೂದ್ರಕನ ಮೃಚ್ಛಕಟಿಕದಲ್ಲಿ ಕರ್ಣಾಟಕ ಎಂಬ ಶಬ್ದ ಎರಡು ಬಾರಿ ಬರುತ್ತದೆ.
- ವರಾಹಮಿಹಿರನ ಬೃಹತ್ ಸಂಹಿತೆಯಲ್ಲಿ, ಕರ್ಣಾಟಕ ಪ್ರಸ್ತಾಪವಿದೆ.
- ಮೊಹೊಂಜೋದಾರೋದಲ್ಲಿನ ಚಿತ್ರಲಿಪಿಯ ಆಧಾರದ ಮೇಲೆ ಕನ್ನಡದ ಪ್ರಾಚೀನತೆಯನ್ನು ಗುರುತಿಸಿದವರೆಂದರೆ ಫಾದರ್ ಹೆರಾಸ್.

## ಕರ್ನಾಟಕದಲ್ಲಿ ಆಳಿದ ರಾಜಮನೆತನಗಳು

### ಶಾತವಾಹನರು

- ಕರ್ನಾಟಕವನ್ನು ಆಳಿದ ಮೊದಲ ರಾಜ ಮನೆತನ.
- ರಾಜಧಾನಿ ಪೈತಾನ (ಪ್ರತಿಷ್ಠಾನ), ಲಾಂಛನ - ವರಾಹ

- ಮೌರ್ಯರ ಸಾಮಂತರಾಗಿದ್ದ ಇವರು ಅವರ ಪತನದೊಂದಿಗೆ ದಕ್ಷಿಣದಲ್ಲಿ ಅಧಿಕಾರಕ್ಕೆ ಬಂದು ಕ್ರಿ.ಶ. 230ರಲ್ಲಿ ಸಾಮ್ರಾಜ್ಯ ಸ್ಥಾಪಿಸಿ. ಕ್ರಿ.ಶ. 220ರ ತನಕ ಆಳಿದರು.
- ಇವರ ಮೂಲ ನಿವಾಸ - ಸಾತಹನಿಹಾರ "ಅಂದರೆ ಈಗಿನ ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಯ ಭಾಗ.
- ಇವರನ್ನು ಆಂಧ್ರಭೃತ್ಯ ಎನ್ನುವರು ಅಂದರೆ - ಮೌರ್ಯರ ಸೇವಕರಾಗಿದ್ದು, ಅಶೋಕನ ನಂತರ ದಕ್ಷಿಣಕ್ಕೆ ಬಂದು ಸ್ವತಂತ್ರ್ಯ ರಾಜ್ಯ ನಿರ್ಮಿಸಿದರೆಂದು ತಿಳಿದುಬರುತ್ತದೆ.
- ಚಿತ್ರದುರ್ಗ ಮತ್ತು ಚಂದ್ರವಳ್ಳಿಯಲ್ಲಿ ನಡೆದ ಭೂ ಸಂಶೋಧನೆಗಳು ಶಾತವಾಹನರ ಬಗ್ಗೆ ಹೆಚ್ಚು ಬೆಳಕು ಬೀರುತ್ತವೆ.
- ಶಾತವಾಹನರ ಕಾಲದ ನಾಣ್ಯಗಳು ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ದೊರೆತಿವೆ.
- ಶಾತವಾಹನರ ಅಧೀನರಾಗಿ - ಜಾಟರು (ಬನವಾಸಿ) ಬಾಣರು (ಪೂರ್ವ ಮೈಸೂರಿನ ಭಾಗ) ಅಳುಪರು (ಪಶ್ಚಿಮ ಘಟ್ಟ ಪ್ರದೇಶ) ಸೇಂದ್ರಕರು (ನಾಗರಬಂಡ) ಮತ್ತು ನಳರು (ಬಳ್ಳಾರಿ ಸುತ್ತಮುತ್ತ) ಅಳುತ್ತಿದ್ದರು.
- ಶಾತವಾಹನರ ನಂತರ ಕುಂತಲವನ್ನು ಆಳಿದವರೆಂದರೆ - ಚೂಟರು ನಂತರ ಕದಂಬರು ಮತ್ತು ಗಂಗರು ಆಳಿದರು.
- ಹಿರೇಹಡೆಗಲಿ ಶಾಸನದ ಪ್ರಕಾರ ಶಾತವಾಹನರ ಮೂಲ - ಶತಾಹನಿರಟ್ಟ (ಬಳ್ಳಾರಿ)
- ಅಶೋಕನ 12ನೇ ಶಾಸನವು ಇವರನ್ನು ಆಂಧ್ರಭೃತ್ಯರೆಂದು ಹೆಸರಿಸಿದೆ.

## ರಾಜಕೀಯ ಇತಿಹಾಸ

- ಸಿಮುಕ ಶಾತವಾಹನರ ಸಂತತಿಯ ಸ್ಥಾಪಕ
- ಮಗದದ ಕಣ್ವ ವಂಶದ ಕೊನೆಯ ರಾಜ ಸುಶರ್ಮನನ್ನು ಸೋಲಿಸಿದವನು ಸಿಮುಖ.
- ಇವನ ತಮ್ಮ - ಕನ್ಹ / ಕೃಷ್ಣನು-ನಾಸಿಕದಲ್ಲಿ ಬೌದ್ಧ ಗುಹಾಲಯ ನಿರ್ಮಿಸಿದ.
- ಗೌತಮಿಪುತ್ರನ ನಾಸಿಕ ಶಾಸನದಲ್ಲಿ ಸಿಮುಖನನ್ನು ಏಕಬ್ರಾಹ್ಮಣ ಎಂದು ಕರೆಯಲಾಗಿದ್ದು, ಕ್ಷತ್ರಿಯರ ದರ್ಪ ಮುರಿದವನೆಂದು ವರ್ಣಿಸಿದೆ.

### 1ನೇ ಶಾತಕರ್ಣಿ

- ಸಿಮುಖನ ಮಗ
- ಅಶ್ವಮೇಧ, ರಾಜಸೂಯಯಾಗ ಆಚರಿಸಿ, "ದಕ್ಷಿಣಪಥಪತಿ" (ದಕ್ಷಿಣಪಥ ಸಾರ್ವಭೌಮ) ಮತ್ತು ಅಪ್ರತಿಹತ ಎಂಬ ಬಿರುದುಗಳನ್ನು ಧರಿಸಿದ್ದ.
- ಇವನ ಮಡದಿ-ನಾಗನಿಕ (ನಾಯನಿಕ) ಇವಳ ಶಾಸನ-ನಾನಾಘಾಟ್ ಶಾಸನ.

### ಹಾಲ

- ಶಾತವಾಹನರ 17ನೇ ರಾಜ.
- ಲೀಲಾವಾಯಿ ಕೃತಿ - ಇವನ ಆಳ್ವಿಕೆ ಬಗ್ಗೆ ವರ್ಣನೆ ನೀಡುತ್ತದೆ.
- ಲೀಲಾವಾಯಿ ಕೃತಿ ಪ್ರಕಾರ - ಈತ ಸಿಂಹಳ (ಶ್ರೀಲಂಕಾ) ಗೆದ್ದು, ಅಲ್ಲಿನ ರಾಜನ ಮಗಳು ಲೀಲಾವತಿಯನ್ನು ಸಪ್ತಗೋದಾವರಿ ಭೀಮಂ ಅಥವಾ ದ್ರಾಕ್ಷಾರಾಮ ಎಂಬ ಸ್ಥಳದಲ್ಲಿ ವಿವಾಹವಾದ.

- ಈತನು ಪ್ರಾಕೃತದಲ್ಲಿ - ಗಾಥಸಪ್ತಶತಿ ಅಥವಾ ಶಟಾಸ್ತಿ ಎಂಬ ಕೃತಿ ಬರೆದಿದ್ದಾನೆ.
- ಕ್ರಿ.ಶ. 78ರ ಶಾಲಿವಾಹನ ಶಕ ವರ್ಷವನ್ನು ಈತ ಆರಂಭಿಸಿದ ಎಂಬುದು ಹಲವರ ಅಭಿಮತ (ಕುಶಾನರ ರಾಜ ಕಾನಿಷ್ಕ ಆರಂಭಿಸಿದ ಎಂಬ ಅಭಿಪ್ರಾಯವೂ ಇದೆ.)
- ಹಾಲನ ಆಸ್ಥಾನ ಕವಿ ಗುಣಾಢ್ಯನು ಪೈಶಾಚಿ ಭಾಷೆಯಲ್ಲಿ ಬೃಹತ್ಕಥಾ ಗ್ರಂಥ ರಚಿಸಿದ್ದಾನೆ. ಈ ಕೃತಿಯನ್ನು ಕ್ಷೇಮೇಂದ್ರನು ಸಂಸ್ಕೃತಕ್ಕೆ ಅನುವಾದಿಸಿದ್ದಾನೆ.
- ಹಾಲನ ನಂತರ ಶಕರು ಈ ಸಾಮ್ರಾಜ್ಯದ ಹಲವು ಭಾಗಗಳನ್ನು ವಶಪಡಿಸಿಕೊಂಡರು. ಶಕರ ಆಕ್ರಮಣದಿಂದಾಗಿ ಶಾತವಾಹನರು ಒಂದು ಶತಮಾನ ಕಾಲ ದುರ್ಬಲವಾದರು.

### ಗೌತಮಿ ಪುತ್ರ ಶಾತಕರ್ಣಿ : ಕ್ರಿ.ಶ. 106-130 / ಕ್ರಿ.ಶ. 70-95

- ಪ್ರಸಿದ್ಧ ರಾಜ, ಶಾತವಾಹನ ವೈಭವದ ಪುನರ್ ಸ್ಥಾಪಕ.
- ಇವನ ಕಾಲದಲ್ಲಿ ಶಾತವಾಹನರು ಪುನಃ ಪ್ರಬಲರಾದರು.
- ಶತ ಕ್ಷತ್ರಪ ನಹಪಾಣ ಮತ್ತು ಅವನ ಅಳಿಯ ಉಷವದತ್ತನನ್ನು ಕೊಂದು ಕ್ಷತ್ರಪ ವಂಶವನ್ನು ನಿರ್ಮೂಲನೆ ಮಾಡಿದ. ಈ ವಿಜಯದ ಸಂಕೇತವಾಗಿ ನಹಪಣನ ನಾಣ್ಯಗಳ ಮೇಲೆ ತನ್ನ ರಾಜ ಚಿಹ್ನೆಯನ್ನು ಪುನಃ ಮುದ್ರಿಸಿ ಆಚರಣೆಗೆ ತಂದ.
- ಈತನ ತಾಯಿ ಗೌತಮಿ ಬಾಲಶ್ರೀಯು ಕೆತ್ತಿಸಿರುವ ನಾಸಿಕ್ ಶಾಸನವು ಈತನನ್ನು ಶಕ, ಯವನ ಮತ್ತು ಪಹ್ಲವ ನಿರ್ಮೂಲನೆಂದು ವರ್ಣಿಸಿದೆ.
- ಈತನ ಬಿರುದು-ತ್ರೈಸಮುದ್ರ ತೋಯ ಪಿತಾವಾಹನ. (ನಾಸಿಕ ಶಾಸನದಲ್ಲಿ ಉಲ್ಲೇಖ)
- ಕ್ರಿ.ಶ. 150ರ ರುದ್ರಧಾಮನ್‌ನ ಜುನಾಘಡ್ ಶಾಸನದ ಪ್ರಕಾರ ಇವನ ಪ್ರದೇಶಗಳನ್ನು ಶಕದೊರೆ ರುದ್ರರಾಮನ್ ಪುನಃ ವಶಪಡಿಸಿಕೊಂಡನು.
- ತಾನು ಗೆದ್ದ ಕೆಲವು ಪ್ರದೇಶಗಳನ್ನು ಉಳಿಸಿಕೊಳ್ಳಲೋಸುಗ ರುದ್ರ ದಾಮನ್‌ನೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ.
- ನಾಸಿಕ್‌ನ (ಮಹಾರಾಷ್ಟ್ರ) ಜೋಗಲತಂಬಿಯಲ್ಲಿ ದೊರೆತಿರುವ ನಹಪಣನ ಬೆಳ್ಳಿಯ ನಾಣ್ಯಗಳ ಮೇಲೆ ಈತನ ಹೆಸರನ್ನು ಮುದ್ರಿಸಲಾಗಿದೆ.
- ಬ್ರಾಹ್ಮಣನಾಗಿದ್ದರೂ - ಬೌದ್ಧ ಶಿಲ್ಪಕಲಾ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ.
- ಇತರೆ ಬಿರುದುಗಳು - ವರವರ್ಣ ವಿಕ್ರಮ, ಚತುರ ವಿಕ್ರಮ, ಷಹಾರಾತವಂಶ ನಿರವಶೇಷಕರ.

### ವಾಶಿಷ್ಠೀಪುತ್ರ ಪ್ರುಲುಮಾಯಿ

- ಶಕದೊರೆ ರುದ್ರಧಾಮನ ಮಗಳನ್ನು ವರಿಸಿದ.
- ದಕ್ಷಿಣಪಥೇಶ್ವರ, ನವನಗರಸ್ವಾಮಿ ಇವನ ಬಿರುದುಗಳು
- ಗಿರ್ನಾರ್ (ಜುನಾಗಢ್) ಶಾಸನದ ಪ್ರಕಾರ - ರುದ್ರಧಾಮನನಿಂದ ಎರಡು ಬಾರಿ ಸೋತನು.
- ಮೊದಲ ಬಾರಿಗೆ ಆಂಧ್ರವನ್ನು ಗೆದ್ದ.
- ಅಮರಾವತಿ ಬೌದ್ಧ ಸ್ತೂಪ ನಿರ್ಮಾಣ ಮಾಡಿದ.
- ನವನಗರ / ಪ್ರತಿಷ್ಠಾಪನವನ್ನು ರಾಜಧಾನಿಯಾಗಿ ಮಾಡಿದ.

## ಶಾತವಾಹನರ ಕೊಡುಗೆಗಳು

### ಆಡಳಿತ

- ❖ ಮೌರ್ಯರ ಆಡಳಿತವನ್ನು ಮುಂದುವರಿಸಿಕೊಂಡು ಬಂದರು.
- ❖ ಶಾತವಾಹನರ ಪ್ರಾಂತ್ಯವನ್ನು ಅಹರಗಳೆಂದು ಕರೆಯುವರು.
- ❖ ಅಹರಗಳ ಮುಖ್ಯಸ್ಥ - ಅಮಾತ್ಯ
- ❖ ಪ್ರತಿ ಅಹರದಲ್ಲು "ನಿಗಮ" ಎಂಬ ಪಟ್ಟಣಗಳಿದ್ದವು.
- ❖ ಗೌತಮಿಪುತ್ರ ಶಾತಕರ್ಣಿ ಕಾಲದಲ್ಲಿ ವಿಷ್ಣುಪಾಲಿತ, ಶಿವಸ್ಕಂಧ, ದತ್ತ ಸ್ಯಾಮಕ ಮುಂತಾದವರು ಅಮಾತ್ಯರಾಗಿ ಸೇವೆ ಸಲ್ಲಿಸಿದ್ದರು.
- ❖ ಶಾತವಾಹನರ ಆಡಳಿತದಲ್ಲಿ ಸ್ತ್ರೀಯರು ಭಾಗವಹಿಸುತ್ತಿದ್ದರು.
- ❖ ಉದಾ : 1ನೇ ಶಾತಕರ್ಣಿಯ ರಾಣಿ ನಾಗನಿಕ ಮತ್ತು ಗೌತಮಿಪುತ್ರ ಶಾತಕರ್ಣಿಯ ತಾಯಿ ಗೌತಮಿಬಾಲಶ್ರೀ. 1ನೇ ಶಾತಕರ್ಣಿಯ ಮರಣದ ನಂತರ ಅವನ ಇಬ್ಬರು ಅಪ್ರಾಪ್ತ ವಯಸ್ಕರಾದ ವೇದಿಶ್ರೀ ಮತ್ತು ಸತಿಶ್ರೀ ಪಟ್ಟಕ್ಕೆ ಬಂದಾಗ ಅವನ ರಾಣಿ ನಯನಿಕ (ನಾಗನಿಕ) ಪ್ರತಿನಿಧಿಯಾಗಿ ರಾಜ್ಯಾಡಳಿತ ನಡೆಸಿದಳು.
- ❖ ಗ್ರಾಮೀಣ ಪ್ರದೇಶದಲ್ಲಿನ ಸೇವಾಧಿಕಾರಿಯನ್ನು ಗೌಳ್ಮಿಕ ಎನ್ನುವರು.
- ❖ ಪಟ್ಟಣಗಳ ಆಡಳಿತವನ್ನು "ನಿಗಮ ಸಭೆಗಳು" ನೋಡಿಕೊಳ್ಳುತ್ತಿದ್ದವು.
- ❖ ಗ್ರಾಮದ ಅಧಿಕಾರಿಗಳನ್ನು ಮಹಾ ಆರ್ಯಕರೆಂದು ಕರೆಯಲಾಗುತ್ತಿತ್ತು.

### ರಾಜ್ಯದ ಪ್ರಮುಖ ಆಡಳಿತಾಧಿಕಾರಿಗಳು

- ❖ ಭಾಂಡಗಾರಿಕ (ಉಗ್ರಾಣಾಧಿಕಾರಿ)
- ❖ ಹೇರಣಿಕ (ಹಣಕಾಸು ಅಧಿಕಾರಿ)
- ❖ ಲೇಖಕ (ರಾಜ್ಯ ಮುಖ್ಯ ಕಾರ್ಯದರ್ಶಿ)
- ❖ ನಿಬಂಧಕ (ದಾಖಲೆ ವ್ಯವಸ್ಥಾಪಕ)

### ಸಾಮಾಜಿಕ ಜೀವನ

- ❖ ಗ್ರೀಕರು, ಶಕರು, ಪಾರ್ಥಿನಯನ್ನರು ಮೊದಲಾದ ವಿದೇಶಿಯರು ಭಾರತಕ್ಕೆ ಆಗಮಿಸಿ ಭಾರತೀಕರಣಗೊಂಡು ಹಿಂದೂ ಹೆಸರನ್ನು ಪಡೆದು ಹಿಂದೂ ಮಹಿಳೆಯರನ್ನು ವಿವಾಹವಾದ್ದರಿಂದ ಮಿಶ್ರ ಜಾತಿಗಳು ಸೃಷ್ಟಿಯಾಗಲು ಕಾರಣವಾಯಿತು. ಹೀಗೆ ಜಾತಿ ಉಪಜಾತಿಗಳು ಉಂಟಾದರೂ ಜಾತಿ ವ್ಯವಸ್ಥೆ ಸಂಕೀರ್ಣವಾಗಿರಲಿಲ್ಲ ಇವುಗಳನ್ನು ವೃತ್ತಿಗೆ ಅನುಗುಣವಾಗಿ ವಿಭಜಿಸಲಾಯಿತು.
- ❖ ಅವಿಭಕ್ತ ಕುಟುಂಬಗಳು ಸಾಮಾನ್ಯವಾಗಿದ್ದವು.
- ❖ ಅಂತರ್ಜಾತಿ ವಿವಾಹಗಳು ಸಾಮಾನ್ಯವಾಗಿದ್ದವು.
- ❖ ಸವರ್ಣಿಯರು ಮತ್ತು ಶೂದ್ರರ ನಡುವಿನ ವಿವಾಹ ಸಂಬಂಧವನ್ನು "ವರ್ಣಸಂಕರ" (ಮಿಶ್ರ ವಿವಾಹ) ಎನ್ನಲಾಗುತ್ತಿತ್ತು.
- ❖ ಗೌತಮಿಪುತ್ರ ಶಾತಕರ್ಣಿಯು ವರ್ಣಸಂಕರವನ್ನು ನಿಷೇಧಿಸಿದ.
- ❖ ಸಮಾಜದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನವಿತ್ತು ಆದರೆ ಉಪನಯನ ದೀಕ್ಷೆ ಇರಲಿಲ್ಲ.

### ಆರ್ಥಿಕ ವ್ಯವಸ್ಥೆ

- ❖ ಕೃಷಿಯೇ ಮೂಲ ಕಸುಬು, 1/6 ಭಾಗ ಕಂದಾಯ ವಿಧಿಸಲಾಗಿತ್ತು.
- ❖ ಕೃಷ್ಣ-ಗೋದಾವರಿ ನದಿ ನೀರು-ಕೃಷಿಗೆ ಸಹಕಾರಿಯಾಗಿತ್ತು.
- ❖ ಉಪ್ಪಿನ ಉತ್ಪಾದನೆಯು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿತ್ತು.

### ವೃತ್ತಿ ಸಂಘಗಳು / ಶ್ರೇಣಿಗಳು

- ❖ ಇವುಗಳು ಸ್ವಾಯುತ್ತ ಸಂಸ್ಥೆಗಳಂತೆ ಕಾರ್ಯನಿರ್ವಹಿಸುತ್ತಿದ್ದವು.
- ❖ ಆಧುನಿಕ ಬ್ಯಾಂಕುಗಳಂತೆ ಕಾರ್ಯನಿರ್ವಹಿಸುತ್ತಿದ್ದವು.
- ❖ ಠೇವಣಿಗಳನ್ನು ಸ್ವೀಕರಿಸಿ, ನಿಗಧಿಯಾದ ದರದಲ್ಲಿ ಬಡ್ಡಿ ನೀಡುತ್ತಿದ್ದವು.
- ❖ ವ್ಯಾಪಾರ, ಕೈಗಾರಿಕೆಗಳ ಸ್ಥಾಪನೆಗೆ ಸಾಲದ ಹಣದ ಪೂರೈಕೆ ಮಾಡುತ್ತಿದ್ದವು.
- ❖ ಅನೇಕ ಆರ್ಥಿಕ, ಸಾಮಾಜಿಕ ಕಲ್ಯಾಣ ಕಾರ್ಯಗಳನ್ನು ನೆರವೇರಿಸುತ್ತಿದ್ದವು.
- ❖ ಶ್ರೇಣಿಧರ್ಮ ಎಂಬ ತಮ್ಮದೇ ಆದ ಕಾನೂನು ಸಂಹಿತೆಯನ್ನು ರಚಿಸಿಕೊಂಡು ಮೋಸ, ವಂಚನೆಗಳಿಗೆ ಅವಕಾಶವಿಲ್ಲದಂತೆ ವೃತ್ತಿಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದವು.
- ❖ ಅನಾಥರಿಗೆ, ದಾರಿಹೋಕರಿಗೆ, ಉಚಿತ ಊಟ ವಸತಿಯನ್ನು ನೀಡುತ್ತಿದ್ದವು.
- ❖ ಸಿದ್ಧಲಪುತ್ರನೆಂಬ ಶ್ರೀಮಂತ ಕುಂಬಾರನು 500 ಕುಂಬಾರರ ಶಾಲೆಗಳನ್ನು ಹೊಂದಿದ್ದು, ಗಂಗಾನದಿಯ ವಿವಿಧ ಬಂದರುಗಳಿಗೆ ಮಡಿಕೆಗಳನ್ನು ಸಾಗಿಸಲು ದೋಣಿಗಳನ್ನು ಹೊಂದಿದ್ದನು ಎಂಬ ವಿಚಾರ ವೃತ್ತಿ ಸಂಘಗಳ ಗಾತ್ರವನ್ನು ತಿಳಿಸುತ್ತದೆ.
- ❖ ವಿವಾಹಿತ ಸ್ತ್ರೀಯು ಬೌದ್ಧ ಧರ್ಮದಲ್ಲಿ ಸನ್ಯಾಸಿಯಾಗಿ ಸೇರ್ಪಡೆಯಾಗಬೇಕಾದರೆ ಆಕೆ ತನ್ನ ಪತಿಯ ಅಪ್ಪಣೆಯ ಜೊತೆಗೆ ಸಂಘದ ಅನುಮತಿಯನ್ನು ಸಹ ಪಡೆಯಬೇಕಿತ್ತು.
- ❖ ಶಕರಾಜ ನಹಪಣನ ಅಳಿಯ ಉಷವದತ್ತನು 200 ಕಹಪಣ ನಾಣ್ಯಗಳನ್ನು ಸ್ಥಿರಬಂಡವಾಳವನ್ನಾಗಿಟ್ಟು ಶೇ. 1ರ ಬಡ್ಡಿಯಂತೆ ಹಣವನ್ನು ಸಾಲವಾಗಿ ಕೊಡುತ್ತಿದ್ದ. ಮತ್ತು 1000 ಕಹಪಣಗಳನ್ನು ಇಟ್ಟು ಶೇ. 3 ರಿಂದ 4ರ ಬಡ್ಡಿಯಂತೆ 20 ಮಂದಿ ಬೌದ್ಧ ಭಿಕ್ಷುಗಳಿಗೆ ತಲಾ 12 ಕಹಪಣಗಳನ್ನು ವಸ್ತ್ರಗಳಿಗಾಗಿ ಕೊಡುತ್ತಿದ್ದ ಎಂದು ನಾಸಿಕ ಶಾಸನವು ಉಲ್ಲೇಖಿಸಿದೆ.

### ವ್ಯಾಪಾರ

- ❖ ರೋಮ್ ಮತ್ತು ಈಜಿಪ್ಟ್ ದೇಶಗಳೊಂದಿಗೆ ವಿದೇಶಿ ವ್ಯಾಪಾರ ಹೊಂದಿದ್ದರು.
- ❖ ರೋಮನ್ನರ ಚಿನ್ನದ ನಾಣ್ಯಗಳು - ಚಂದ್ರವಳ್ಳಿ, ಅರಿಕಮೇಡುವಿನಲ್ಲಿ ದೊರೆತಿವೆ.
- ❖ ಪ್ರಮುಖ ಬಂದರುಗಳು - ಸೋಪಾ, ಕಲ್ಯಾಣ, ಬ್ರೋಚ್.
- ❖ ಪ್ರಮುಖ ವ್ಯಾಪಾರ ಕೇಂದ್ರಗಳು - ಜುನ್ನಾರ, ಪೈಠಾಣ, ಅಮರಾವತಿ, ನಾಸಿಕ್ ವೈಜಯಂತಿ (ಬನವಾಸಿ) ಬಟ್ಕಳ, ಬಾದಾಮಿ.
- ❖ 2ನೇ ಪುಲುಮಾಯಿ ಕಾಲದಿಂದ ಚೀನ ಮತ್ತು ಜಪಾನ್ ದೇಶಗಳ ಸಂಗಡ ವ್ಯಾಪಾರ ಪ್ರಾರಂಭವಾಯಿತು.
- ❖ ರೋಮ್‌ಗೆ ರಫ್ತಾಗುತ್ತಿದ್ದ ಪ್ರಮುಖ ವಸ್ತುಗಳು - ಶ್ರೀಗಂಧ ವಸ್ತುಗಳು, ಆಭರಣಗಳು, ರತ್ನ ಮತ್ತು ವಜ್ರಗಳು, ಚಿನ್ನ ಮತ್ತು ಬೆಳ್ಳಿ ಆಭರಣಗಳು ಮಸ್ಲಿನ್‌ಬಟ್ಟೆ, ಮೆಣಸು, ಏಲಕ್ಕಿ.
- ❖ ಆಮದು ವಸ್ತುಗಳ - ಸತು, ಸೀಸ, ದ್ರಾಕ್ಷಾರಸ, ಗೋಮೇದಕ (ಟ್ರೋಸಾಜ್)
- ❖ ತಮಿಳುನಾಡಿನ ಪಾಂಡಿಚೇರಿ ಸಮೀಪವಿರುವ ಅರಿಕಮೇಡು ರೋಮನ್ನರ ಪ್ರಮುಖ ವ್ಯಾಪಾರ ಕೇಂದ್ರ.
- ❖ ಪೂರ್ವ ತೀರದ, ಧಾನ್ಯ ಕಟಕ ಪ್ರಮುಖ ಅಂತರ್ ದೇಶಿಯ ಮಾರುಕಟ್ಟೆ.

### ಚಲಾವಣೆಯಲ್ಲಿದ್ದ ನಾಣ್ಯಗಳು

- ❖ ಗದ್ಯಾಣ : ಸುವರ್ಣ (ಚಿನ್ನ)
- ❖ ಪಣ : ದಿನಾರ (ಚಿನ್ನ)

- ಕುಷಣ : (ಬೆಳ್ಳಿ)
- ಕರ್ಷಪಣ : (ತಾಮ್ರ ಮತ್ತು ಬೆಳ್ಳಿ)
- ನಾಣ್ಯಗಳ ಮೇಲಿರುವ ಚಿತ್ರಗಳು - ಆನೆ, ಕುದುರೆ, ಸಿಂಹ ಮತ್ತು ಬಾಣದ ಚಿಹ್ನೆಗಳು
- ನಾಣ್ಯಗಳ ತೂಕ 35 ರಿಂದ 560 ಗ್ರಾಂ.

### ಧರ್ಮ

- ಶಾತವಾಹನರು ವೈದಿಕ ಧರ್ಮದ ಅನುಯಾಯಿಗಳಾಗಿದ್ದು ವರ್ಣಾಶ್ರಮ ವ್ಯವಸ್ಥೆಯನ್ನು ಪಾಲಿಸುತ್ತಿದ್ದರು.
- ರಾಜರು ಯಜ್ಞಯಾಗಗಳನ್ನು ಮಾಡುತ್ತಿದ್ದರು.
- ಹಾಲನ ಗಾಥಸಪ್ತಶತಿ ಕೃತಿಯು - ಶಿವ ಮತ್ತು ಗೌರಿಯ ಸ್ತೋತ್ರದಿಂದ ಆರಂಭವಾಗುತ್ತದೆ.
- ಶಾತವಾಹನರ ಮಳವಳ್ಳಿ ಸ್ತಂಭ ಶಾಸನದಲ್ಲಿ ಭೂದಾನ (ಬ್ರಹ್ಮದೇಯದಾನ)ದ 8 ವಿಚಾರಗಳಿವೆ.
- ಭಾಗವತ ಧರ್ಮವು ಅಸ್ತಿತ್ವದಲ್ಲಿತ್ತು.
- ಬೌದ್ಧ ಧರ್ಮವು ಸಹ ದಕ್ಷಿಣ ಭಾರತದಲ್ಲಿ ಅಸ್ತಿತ್ವದಲ್ಲಿತ್ತು.
- ಜೈನ ಧರ್ಮದ ದಿಗಂಬರ ಗುರುವಾದ ಕುಂದಾ ಕುಂದಾಚಾರ್ಯರು ಶಾತವಾಹನ ರಾಜರ ಗುರುಗಳಾಗಿದ್ದರು.
- ಸಿಂಹ ಧ್ವಜ ಮತ್ತು ಧರ್ಮರೆಂಬ ಇಬ್ಬರು ವಿದೇಶಿಯರು (ಯವನರು / ಗ್ರೀಕರು) ಬೌದ್ಧ ಧರ್ಣ ಸ್ವೀಕರಿಸಿದ್ದರು.
- ಶಾತವಾಹನರಿಗಿಂತ ಮುಂಚೆಯೇ ಜೈನಧರ್ಮ ಇಲ್ಲಿ ಪ್ರವೇಶಿಸಿತ್ತು.

### ಸಾಹಿತ್ಯ

- ಇವರ ಕಾಲ ಪ್ರಾಕೃತ ಭಾಷೆಯ ಚಿನ್ನದ ಯುಗ
- ಮಹಾರಾಷ್ಟ್ರ ಪ್ರಾಕೃತವು ಶಾತವಾಹನರ ರಾಜ ಭಾಷೆ.

### ಪ್ರಮುಖ ಕೃತಿಕಾರರು ಮತ್ತು ಕೃತಿಗಳು

- ಕುಂದ ಕುಂದಾಚಾರ್ಯ-ಪ್ರಬಿತಸಾರ
- ದ್ವಾದಶ-ಪ್ರೇಕ್ಷಗ್ರಂಥ
- ರಾಯನಸಾರ, ಸಮಯಸಾರ, ಪ್ರವಚನಸಾರ
- ಗುಣಾಢ್ಯ : ಬೃಹತ್ಕಥಾ (ಪೈಶಾಚಿಭಾಷೆ)
- ಹಾಲ : ಗಾಥಸಪ್ತಶತಿ (ಷಟಾಸ್ತಿ)
- ಸರ್ವವರ್ಮ - ಕಾತಂತ್ರ ವ್ಯಾಕರಣ

### ಕಲೆ ಮತ್ತು ವಾಸ್ತುಶಿಲ್ಪ

- ಶಾತವಾಹನರ ಕಲಾ ಬೆಳವಣಿಗೆಯನ್ನು 3 ವಿಭಾಗಗಳಾಗಿ ವಿಂಗಡಿಸಬಹುದು.
- 1. ಶಿಲಾಕಟ್ಟಡಗಳು (ವಾಸ್ತುಶಿಲ್ಪ) 2. ಶಿಲ್ಪಕಲೆ 3. ಚಿತ್ರಕಲೆ

### ಶಿಲಾಕಟ್ಟಡಗಳಲ್ಲಿ 3 ವಿಧಗಳು

1. ಚೈತ್ಯಾಲಯಗಳು 2. ವಿಹಾರಗಳು 3. ಸ್ತೂಪಗಳು

### ಚೈತ್ರಾಲಯಗಳು : ಇವು ಬೌದ್ಧರ ಪ್ರಾರ್ಥನಾ ಮಂದಿರಗಳು

- ಬಾಜ, ಬೇಡ್ಸ, ನಾಸಿಕ್, ಅಜಂತಾದ 9 ಮತ್ತು 10ನೇ ಗುಹೆಗಳು
- ಕಾರ್ಲೆ, ಕೊಂಡಣ್ಣ, ಪೀತಲ್ ಕೋರ.

- **ವಿಹಾರಗಳು :** ಇವುಗಳು ಬೌದ್ಧ ಸನ್ಯಾಸಿಗಳ ವಾಸಸ್ಥಳಗಳು ಸಾಮಾನ್ಯವಾಗಿ ಪ್ರತಿ ಚೈತ್ಯಾಲಯ ಬಳಿ ಇವುಗಳು ಇರುತ್ತವೆ. ಇವುಗಳನ್ನು ಸಂಘರಾಮಗಳೆಂತಲೂ ಕರೆಯುವರು.
- ಅಜಂತಾದ 12 ಗುಹೆ ಶಾತವಾಹನರ ಅತಿ ಪ್ರಾಚೀನ ವಿಹಾರವಾಗಿದೆ.
- **ಸ್ತೂಪಗಳು :** ಬೌದ್ಧ ಸನ್ಯಾಸಿಗಳ ಸಮಾಧಿ ಸ್ಥಳಗಳು ಇವಾಗಿದೆ.

  ಉದಾ : ಕಾರ್ಲೆ, ಜಗ್ಗಯ್ಯಪೇಟೆ

  ಭಟ್ಟಿಪ್ರೋಲು

  ಅಮರಾವತಿ (ಅತಿದೊಡ್ಡ ಸ್ತೂಪ)

  ನಾಗಾರ್ಜುನಕೊಂಡ (ಪ್ರಮುಖ ಸ್ತೂಪ)

**ಚಿತ್ರಕಲೆ**

- ಅಜಂತಾದ 9 ಮತ್ತು 10ನೇ ಗುಹೆಗಳಲ್ಲಿ ಕಂಡು ಬರುತ್ತವೆ.
- ಕಲ್ಲವಗ್ಗ ಎಂಬ ಗ್ರಂಥದಲ್ಲಿನ 2 ಅಧ್ಯಾಯಗಳು - ಇವರ ಕಾಲದ ಚಿತ್ರಕಲೆಯನ್ನು ವರ್ಣಿಸುತ್ತವೆ.

## ಕದಂಬರು

- ಕರ್ನಾಟಕವನ್ನಾಳಿದ ಪ್ರಥಮ ಶುದ್ಧ ಕನ್ನಡ ರಾಜಮನೆತನ.
- ಕದಂಬರ ಸಮಕಾಲೀನ ರಾಜಮನೆತನ ಗಂಗರು (ಕದಂಬರು ರಾಜ್ಯದ ಪಶ್ಚಿಮದಲ್ಲಿ ಆಳಿದರೆ, ಗಂಗರು ಪೂರ್ವದಲ್ಲಿ ಆಳಿದರು)
- ರಾಜಧಾನಿ ಬನವಾಸಿ ಇದು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ವರದಾ ನದಿಯ ಎಡದಂಡೆ ಮೇಲಿದೆ.
- ಲಾಂಛನ - ಸಿಂಹ ಮತ್ತು ಧ್ವಜ - ವಾನರ / ಪಿಂಚಧ್ವಜ
- ಮೂಲ ಪುರುಷ - ತ್ರಿಲೋಚನ ಕದಂಬ
- ಮೊದಲ ಐತಿಹಾಸಿಕ ವ್ಯಕ್ತಿ ಮಾನವ್ಯಗೋತ್ರ, ಹಾರತಿಪುತ್ರ ವಂಶಕ್ಕೆ ಸೇರಿದ ವೀರಶರ್ಮ

**ಮಯೂರಶರ್ಮ / ಮಯೂರವರ್ಮ (ಕ್ರಿ.ಶ. 345-365)**

- ತಾಳಗುಂದದ ಶಾಸನದ ಪ್ರಕಾರ ಮಯೂರಶರ್ಮ ಕದಂಬ ವಂಶದ ಸ್ಥಾಪಕ.
- ಇವನ ತಂದೆ ಬಂಧುಷೇಣ - ತಾತ ವೀರಶರ್ಮ.
- ತನ್ನ ತಾತನೊಂದಿಗೆ ಕಂಚಿ ವಿದ್ಯಾಕೇಂದ್ರಕ್ಕೆ ವಿದ್ಯಾಭ್ಯಾಸಕ್ಕೆ ಹೋಗಿದ್ದಾಗ ಕಂಚಿಯ ಪಲ್ಲವ ದೊರೆ ಶಿವಸ್ಕಂದವರ್ಮನ ಸೈನ್ಯದಿಂದ ಅವಮಾನಿತಗೊಂಡು, ಪಲ್ಲವರನ್ನು ನಿರ್ಮೂಲನೆ ಮಾಡುವ ಪಣ ತೊಟ್ಟು, ಬ್ರಾಹ್ಮಣತ್ವ ತೊರೆದು ಕ್ಷಾತ್ರ ಧರ್ಮವನ್ನು ಸ್ವೀಕರಿಸಿದ, ಬಾಣರನ್ನು ಸೋಲಿಸಿ, ಬನವಾಸಿಯನ್ನು ರಾಜಧಾನಿಯಾಗಿ ಮಾಡಿ ರಾಜ್ಯ ಕಟ್ಟಿದ.
- ತಾಳಗುಂದ ಶಾಸನದ ಪ್ರಕಾರ ಇವನು 18 ಅಶ್ವಮೇಧಯಾಗ ಆಚರಿಸಿದ.
- ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ದೊರಕಿರುವ ಇವನ ಶಾಸನದ ಪ್ರಕಾರ ಉತ್ತರದ ತ್ರಿಕೂಟರು, ಅಭೀರರು, ಪಾರಿಯಾತ್ರಿಕರು, ಶಕರು ಮತ್ತು ಮೌಖರಿಯರನ್ನು ದಕ್ಷಿಣದ ಪಲ್ಲವರು, ಪುನ್ನಾಟರು ಮತ್ತು ಸೇಂದ್ರಕರನ್ನು ಸೋಲಿಸಿದನೆಂದು ತಿಳಿದುಬರುತ್ತದೆ. ತಾಳಗುಂದ ಬ್ರಾಹ್ಮಣರಿಗೆ 144ರ ಗ್ರಾಮಗಳನ್ನು ದತ್ತಿಯಾಗಿ ನೀಡಿದ.

**ಭಗೀರಥವರ್ಮ (ಕ್ರಿ.ಶ. 390-415)**

- ಮಯೂರವರ್ಮನ ಮೊಮ್ಮಗ.
- ಶಾಸನಗಳಲ್ಲಿ ಇವನನ್ನು ಕುಂತಳಾಧೀಶ್ವರನೆಂದು ಮತ್ತು ಕದಂಬ ಕುಲದ ಸಗರನೆಂದು ವರ್ಣಿಸಿವೆ.
- "ಭಗಿ" ಎಂಬ ನಾಮಾಂಕಿತದ ನಾಣ್ಯಗಳನ್ನು ಇವನು ಚಲಾವಣೆಗೆ ತಂದರು.
- ಭೋಜನ ಶೃಂಗಾರ ಪ್ರಕಾಶರ ಪ್ರಕಾರ - ಗುಪ್ತ ದೊರೆಯಾದ 2ನೇ ಚಂದ್ರಗುಪ್ತ ವಿಕ್ರಮಾದಿತ್ಯನು ಇವನ ಆಸ್ಥಾನಕ್ಕೆ ಕಾಳಿದಾಸನನ್ನು ಕಾರ್ಯಭಾರಿಯಾಗಿ ಕಳುಹಿಸಿದ ಎಂದು ಉಲ್ಲೇಖಿಸಿದೆ.
- (ಆದರೆ ಕೌಂತಳೇಶ್ವರ ದೌತ್ಯ ಕೃತಿ ರಚಿಸಿದ ಕಾಳಿದಾಸನ ಬೇರೆ ಎಂಬ ಅಭಿಪ್ರಾಯವಿದ್ದು - ಇವನ ರಾಯಭಾರಿಯಾಗಿ ಬಂದಿದ್ದನೆಂದೂ ಸಹ ಹೇಳಲಾಗುತ್ತದೆ)

**ಕಾಕುಸ್ಥವರ್ಮ : (ಕ್ರಿ.ಶ. 405-430) ಅಥವಾ 435-455)**

- ಕದಂಬರಲ್ಲಿ ಅತ್ಯಂತ ಶ್ರೇಷ್ಠ ಹಾಗೂ ಉದಾರವಾದಿ ದೊರೆ.
- ಶಾಂತಿವರ್ಮನ ತಾಳಗುಂದ ಶಾಸನವು ಇವನನ್ನು ಕದಂಬ ಕುಲಶಿರೋಮಣಿ, ಕೀರ್ತಿಸೂರ್ಯ ಅನರ್ಘ್ಯರತ್ನ ಎಂದು ವರ್ಣಿಸುತ್ತದೆ.
- ಅನ್ಯರಾಜ್ಯಗಳೊಂದಿಗೆ ತನ್ನ ಹೆಣ್ಣು ಮಕ್ಕಳನ್ನು ನೀಡಿ ವೈವಾಹಿಕ ಸಂಬಂಧಗಳನ್ನು ಬೆಳಸಿಕೊಂಡ ಅವರುಗಳೆಂದರೆ :
  - ಗುಪ್ತದೊರೆ 2ನೇ ಚಂದ್ರಗುಪ್ತನ ಮಗ ಕುಮಾರಗುಪ್ತ
  - ವಾಕಟಕ ದೊರೆ - ನರೇಂದ್ರ ಸೇನ
  - ಅಳುಪ ದೊರೆ - ಪಶುಪತಿ
  - ಗಂಗದೊರೆ - 2ನೇ ಮಾಧವ.
- ಧರ್ಮರಾಜ, ಧರ್ಮ ಮಹಾರಾಜ ಎಂಬ ಬಿರುದುಗಳನ್ನು ಧರಿಸಿದ್ದ.
- ತಾಳಗುಂದ (ಶಿವಮೊಗ್ಗ ಜಿಲ್ಲೆ)ದಲ್ಲಿ ಪ್ರಣವೇಶ್ವರ ಕೆರೆ ನಿರ್ಮಿಸಿ, ಅಲ್ಲಿ ಶಾಸನ ಕೆತ್ತಿಸಿದ.
- ಹಲಸಿ ಮತ್ತು ಹಲ್ಮಿಡಿ ಶಾಸನಗಳು ಇವನ ಸಾಧನೆಯನ್ನು ತಿಳಿಸುತ್ತವೆ.
- ಕನ್ನಡದ ಮೊದಲ ಶಾಸನ ಹಲ್ಮಿಡಿ ಶಾಸನವು (ಹಾಸನ ಜಿಲ್ಲೆಯಲ್ಲಿದೆ) ಇವನ ಕಾಲದ್ದು (ಕ್ರಿ.ಶ. 450) ಇದು 17 ಸಾಲುಗಳ ವಾಕ್ಯ ರಚನೆಯಿಂದ ಕೂಡಿದೆ.
- ಕ್ರಿ.ಶ. 425ರಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಿದ.
- ಇವನ ಮಗನಾದ ಶಾಂತಿವರ್ಮನು ಪ್ರಸಿದ್ಧ ತಾಳಗುಂದ ಶಾಸನವನ್ನು ತನ್ನ ಆಸ್ಥಾನದ ಕುಬ್ಜಕವಿಯಿಂದ ಬರೆಸಿದ.
- ಕಾಕುಸ್ಥ ವರ್ಮನ ಮೊಮ್ಮಗ ಅಂದರೆ - ಶಾಂತಿವರ್ಮನ ಮಗ. ಮೃಗೇಶವರ್ಮನ ಕಾಲದಲ್ಲಿ ಕದಂಬ ಸಾಮ್ರಾಜ್ಯ 3 ಭಾಗಗಳಾಗಿ ಒಡೆದು ಹೋಯಿತು. ಬನವಾಸಿಯಲ್ಲಿ ಮೃಗೇಶವರ್ಮ ಆಳಿದರೆ, ಶ್ರೀಪರ್ವತದಲ್ಲಿ ಕಾಕುಸ್ಥವರ್ಮನ ಮತ್ತೊಬ್ಬ ಮಗ, ಕೃಷ್ಣವರ್ಮ ಹಾಗೂ ಉಚ್ಚಂಗಿಯಿಂದ ಮತ್ತೊಬ್ಬ ಮಗ - ಕುಮಾರವರ್ಮ ಆಳಿದರು.
- ಮೃಗೇಶವರ್ಮ - ನ್ಯಾಯ ವಿತರಣೆಯಲ್ಲಿ ಯುದಿಷ್ಠರನೆಂಬ ಹೆಸರು ಪಡೆದಿದ್ದಾನೆ.
- ಮೃಗೇಶವರ್ಮನ ಕಾಲದಲ್ಲಿ ಹಲಸಿಯು ಕದಂಬರ 2ನೇ ರಾಜಧಾನಿಯಾಯಿತು.
- ರವಿವರ್ಮ (ಕ್ರಿ.ಶ. 485-530) ಕದಂಬರ ಕೊನೆಯ ಪ್ರಸಿದ್ಧ ರಾಜ.
- ರವಿವರ್ಮನ ಸಾವಿನ ನಂತರ ಈತನ ರಾಣಿ ಸಹಗಮನ ಅನುಸರಿಸಿದಳು. ಇದು ರಾಜ್ಯದಲ್ಲಿನ ಪ್ರಥಮ ಮಾಸ್ತಿ ಮರಣದ ಉಲ್ಲೇಖವಾಗಿದೆ (ಮಾಸ್ತಿಕಲ್ಲು)

**ಕದಂಬರ ಕಾಣಿಕೆಗಳು**

- ಆಡಳಿತದಲ್ಲಿ ಶಾತವಾಹನರ ಅನುಕರಣೆ.
- ಪಂಚಪ್ರಧಾನರೆಂಬ ಮಂತ್ರಿಪರಿಷತ್ತು ರಾಜನ ಸಹಾಯಕ್ಕೆ ಇತ್ತು.
- ಅವರುಗಳೆಂದರೆ : 1. ಮನೆವರ್ಗಡೆ (ಅರಮನೆ ವ್ಯವಹಾರ ನೋಡಿಕೊಳ್ಳುವ ಮಂತ್ರಿ)
  2. ಪ್ರಧಾನ (ಖಜಾನೆ ಅಧಿಕಾರಿ)
  3. ತಂತ್ರಪಾಲ (ವಿದೇಶಿ ವ್ಯವಹಾರ)
  4. ಪ್ರಮುಕಪಾಲ /ತಾಂಬೂಲ ಪಾರುಪತ್ಯಗಾರ (ಆಸ್ಥಾನದ ನಿಯಂತ್ರಣ)
  5. ಕಾರ್ಯದರ್ಶಿ
- ಕದಂಬರ ಪ್ರಾಂತ್ಯಗಳ ಸಣ್ಣ ವಿಭಾಗಗಳ ಮೇಲ್ವಿಚಾರಕರು - ಮನ್ನೆಯರು.
- ಚಾತುರ್ವರ್ಣ ವ್ಯವಸ್ಥೆ, ಅವಿಭಕ್ತ ಕುಟುಂಬ, ಪಿತೃಪ್ರಧಾನ ಕುಟುಂಬ, ಸ್ತ್ರೀಯರಿಗೆ ಸಾಕಷ್ಟು ಸ್ವಾತಂತ್ರ್ಯ ಸಮಾಜದ ಪ್ರಯೋಜನವಿತ್ತು.

**ಪ್ರಮುಖ ಲಕ್ಷಣಗಳು :**

- ಸರ್ವನಾಮಸ್ಯ, ತ್ರಿಭೋಗ, ತಾಳವೃತ್ತಿ ಇವು ಭೂಕಂದಾಯ 3 ವಿಧಗಳು.
- ಪ್ರಮುಖ ಬಂದರುಗಳು - ಮಂಗಳೂರು, ಹೊನ್ನಾವರ ಅಂಕೋಲ, ಚಾಲ್, ಗೋವಾ.
- ಇವರ ಪ್ರಸಿದ್ಧ ನಾಣ್ಯ - ಪದ್ಮಟಂಕ
- ಇವರು ವೈದಿಕ ಧರ್ಮ ಪರಿಪಾಲಕರು - ಜೈನ, ಬೌದ್ಧ ಧರ್ಮಕ್ಕೂ ಸಹ ಪ್ರೋತ್ಸಾಹ ನೀಡುತ್ತಿದ್ದರು.
- ಚಾಲುಕ್ಯರ ಕಾಲದಲ್ಲಿ ಭೇಟಿ ನೀಡಿದ್ದ ಚೀನಾದ ಹ್ಯೂಯನ್ ತ್ಸಾಂಗ್ ಬನವಾಸಿಯಲ್ಲಿ 10,000 ಬೌದ್ಧ ಭಿಕ್ಷುಗಳು ಇದ್ದರೆಂದು ತಿಳಿಸಿದ್ದಾನೆ.
- ಮಠಗಳು, ಅಗ್ರಹಾರ, ಘಟಿಕಸ್ಥಾನಗಳು ಪ್ರಮುಖ ವಿದ್ಯಾಕೇಂದ್ರಗಳು.
- ತಾಳಗುಂದ ಅಗ್ರಹಾರಕ್ಕೆ ಪ್ರಸಿದ್ಧಿಯಾಗಿತ್ತು ಹಾಗೆಯೇ ಬಳ್ಳಿಗಾವೆ, ಭಾಂಡನಪುರ, ಕುಪ್ಪಟೂರು ಮಠಗಳು ಪ್ರಸಿದ್ಧಿಯಾಗಿದ್ದವು. ಘಟಿಕಸ್ಥಾನಗಳು ಉನ್ನತ ವಿದ್ಯಾಭ್ಯಾಸ ಕೇಂದ್ರಗಳಾಗಿದ್ದವು.

**ಕಲೆ ಮತ್ತು ವಾಸ್ತುಶಿಲ್ಪ**

- ತಮ್ಮದೇ ಆದ ಕದಂಬ ಕಲಾಶೈಲಿಯನ್ನು ಸೃಷ್ಟಿಸಿದರು. ಮೆಟ್ಟಿಲಿನ ಆಕೃತಿಯ ಗೋಪುರಗಳು, ಚತುಷ್ಕೋನಾಕಾರದ ದೇವಾಲಯಗಳು. ಸ್ತಂಭಗಳಿಂದ ಕೂಡಿದ ದೇವಾಲಯಗಳು, ಪ್ರತ್ಯೇಕವಾಗಿರುವ ಗರ್ಭಗುಡಿ ಸುಖನಾಸಿ ಇವರ ವಾಸ್ತುಶೈಲಿ ಲಕ್ಷಣಗಳು.

**ಪ್ರಮುಖ ದೇವಾಲಯಗಳು**

- ತಾಳಗುಂದದ ಪ್ರಣವೇಶ್ವರ
- ಬನವಾಸಿಯ ಮಧುಕೇಶ್ವರ ಮತ್ತು ವರಾಹನರಸಿಂಹ ದೇವಾಲಯ
- ದೊಡ್ಡಗದ್ದವಳ್ಳಿಯ - ಲಕ್ಷ್ಮೀ ದೇವಾಲಯ

- ಮಿಡ್ನಾಪುರದ ಜೈನಬಸದಿ
- ಹಲಸಿಯ ಜೈನಬಸದಿ ಮತ್ತು ಕಲ್ಲೇಶ್ವರ (ತ್ರಿಕೂಟ) ಸುವರ್ಣೇಶ್ವರ ರಾಮೇಶ್ವರ, ಹತ್ತಿಕೇಶ್ವರ.
- ತಾಳಗುಂದ ಪ್ರಣವೇಶ್ವರ ಕದಂಬರ ಕುಲದೇವರು.
- ಬನವಾಸಿಯ ಮಧುಕೇಶ್ವರ ಕದಂಬರ ಮನೆದೇವರು.

## ಗಂಗರು

- ರಾಜಧಾನಿಗಳು : 1. ಕೋಲಾರ (ಕುವಲಾಲಾ) - ಮೊದಲ ರಾಜಧಾನಿ
  2. ತಲಕಾಡು (ತರ್ಡಿಪುರ) ಹರಿವರ್ಮನ ಕಾಲದಲ್ಲಿ
  3. ಮಾಕುಂದ (ಚನ್ನಪಟ್ಟಣ) ಭೂವಿಕ್ರಮ ಕಾಲದಲ್ಲಿ
  4. ಮನ್ನೆ / ಮಾನ್ಯಪುರ (ನೆಲಮಂಗಲ) (ಶ್ರೀಪುರುಷನ ಕಾಲದಲ್ಲಿ)
- ಲಾಂಛನ : ಮದಗಜ
- ಆಳ್ವಿಕೆ - ಸ್ವತಂತ್ರರಾಗಿ ಕ್ರಿ.ಶ. 350 ರಿಂದ 600ರವರೆಗೆ
- ಚಾಲುಕ್ಯರ ಸಾಮಂತರಾಗಿ ಕ್ರಿ.ಶ. 600-757
- ರಾಷ್ಟ್ರಕೂಟ ಸಾಮಂತರಾಗಿ ಕ್ರಿ.ಶ. 757-973
- ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಕ್ರಿ.ಶ. 973-999ರವರೆಗೆ
- ಇವರು ಆಳಿದ ಪ್ರದೇಶವನ್ನು ಗಂಗವಾಡಿ ಅಥವಾ ಗಂಗವಾಡಿ 96 ಸಾವಿರ ಎಂದು ಕರೆಯುವರು.
- ಗಂಗ ಮನೆತನ ಸ್ಥಾಪಕರು - ದಡಿಗ ಮತ್ತು ಮಾಧವರು
- ದಡಿಗ ಮತ್ತು ಮಾಧವರಿಗೆ ಗಂಗರ ರಾಜ್ಯ ಕಟ್ಟಲು ಪ್ರೇರೇಪಿಸಿದ ಜೈನ ಗುರುಗಳು - ಸಿಂಹನಂದಿ.
- ದಡಿಗನ ಮತ್ತೊಂದು ಹೆಸರು ಕೊಂಗಣಿವರ್ಮ

### ದುರ್ವಿನೀತ (ಕ್ರಿ.ಶ. 555-605)

- ಮೊದಲ ಪ್ರಸಿದ್ಧ ಗಂಗದೊರೆ.
- ಸ್ವತಃ ಶ್ರೇಷ್ಠ ವಿದ್ವಾಂಸನಾದ ಈತ ಭಾರವಿಯ ಕಿರಾತಾರ್ಜುನೀಯದ 15ನೇ ಸರ್ಗಕ್ಕೆ ಭಾಷ್ಯ / ವ್ಯಾಖ್ಯಾನ ಬರೆದಿದ್ದಾನೆ. ಹಾಗೆಯೇ ಗುಣಢ್ಯಾನ ಪೈಶಾಚಿಯ ಭಾಷೆಯ ಬೃಹತ್ಕಥಾವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾರೆ.
- ಶಬ್ದಾವತಾರ ಕೃತಿ ಬರೆದ ಪೂಜ್ಯಪಾದರು ದುರ್ವಿನೀತನ ಗುರುಗಳು.
- ಚಾಲುಕ್ಯ ದೊರೆ ವಿಜಯಾದಿತ್ಯನಿಗೆ ತನ್ನ ಮಗಳನ್ನು ನೀಡಿ ಅವರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ.

### ಶ್ರೀಪುರುಷ (ಕ್ರಿ.ಶ. 726-788)

- ಗಂಗದೊರೆಗಳಲ್ಲಿನ ಮತ್ತೊಬ್ಬ ಪ್ರಸಿದ್ಧ ಅರಸ.
- ಈತ ಪಲ್ಲವರು ಮತ್ತು ಚಾಲುಕ್ಯರ ನಡುವಿನ ಹೋರಾಟದಲ್ಲಿ ಚಾಲುಕ್ಯರ ಪಕ್ಷ ಸೇರಿ, ಪಲ್ಲವ ದೊರೆ ನಂದಿವರ್ಮನನ್ನು ಸೋಲಿಸಿ, ಪೆರ್ಮನಂದಿ ಎಂಬ ಬಿರುದು ಪಡೆದನು.

- ಇವನ ಕಾಲದಲ್ಲಿ ಪಲ್ಲವರಾಜ ನಂದಿವರ್ಮನು ಗಂಗನಾಡಿನ ಮೇಲೆ ಆಕ್ರಮಣ ಮಾಡಿ 'ಉದ್ರೋದಯ' ಎಂಬ ಅನರ್ಘರತ್ನವನ್ನು ಕೊಂಡೊಯ್ದನು.
- ಮಾಕುಂದದಿಂದ ಮಾನ್ಯಪುರಕ್ಕೆ ರಾಜಧಾನಿ ವರ್ಗಾವಣೆ ಮಾಡಿದ ಕಾರಣ ರಾಷ್ಟ್ರಕೂಟರ ಭೀತಿ.
- ಇವನ ಕಾಲದ ರಾಜ್ಯವನ್ನು ಗಂಗವಾಡಿ 96 ಸಾವಿರ ಎಂದು ಕರೆಯಲಾಗುತ್ತಿತ್ತು.
- ಸ್ವತಃ ವಿದ್ವಾಂಸನಾದ ಈತ ಸಂಸ್ಕೃತದಲ್ಲಿ "ಗಜಶಾಸ್ತ್ರ" ಎಂಬ ಗ್ರಂಥ ರಚಿಸಿದ್ದಾನೆ.

### ಎರಡನೇ ಶಿವಮಾರ (ಕ್ರಿ.ಶ. 788-81)

- ಶ್ರೀಪುರುಷನ ಮಗ ಈತ.
- ತನ್ನ ಆಳ್ವಿಕೆಯ ಹೆಚ್ಚಿನ ಸಮಯವನ್ನು ರಾಷ್ಟ್ರಕೂಟರ ಬಂಧನದಲ್ಲೇ ಕಳೆದನು.
- ಶ್ರೇಷ್ಠ ವಿದ್ವಾಂಸನಾದ ಈತ ಕನ್ನಡದಲ್ಲಿ "ಗಜ ಶತಕ" (ಗಜಷ್ಟಕ) ಮತ್ತು ಸಂಸ್ಕೃತದಲ್ಲಿ "ಗಜಮಾತ ಕಲ್ಪನ" ರಚಿಸಿದ್ದಾನೆ.
- ಶ್ರವಣಬೆಳಗೊಳಚಂದ್ರಪ್ರಭಾ ಬಸದಿ ಇವನ ನಿರ್ಮಾಣ.

### ನಾಲ್ಕನೇ ರಾಚಮಲ್ಲ (ಕ್ರಿ.ಶ. 975-986)

- ಗಂಗರ ಕೊನೆಯ ಪ್ರಸಿದ್ಧ ಅರಸ.
- ಇವನ ಪ್ರಸಿದ್ಧ ಮಂತ್ರಿ ಮತ್ತು ದಂಡನಾಯಕ ಚಾವುಂಡರಾಯ.
- ಚಾವುಂಡರಾಯನು 2ನೇ ಮಾರಸಿಂಹನ (ಕ್ರಿ.ಶ. 963-974) ಕಾಲದಿಂದಲೂ ಮಂತ್ರಿಯಾಗಿದ್ದನು.
- 4ನೇ ರಾಚಮಲ್ಲನ ತಂದೆ 2ನೇ ಮಾರಸಿಂಹನು ಶ್ರವಣಬೆಳಗೊಳದಲ್ಲಿ ಸಲ್ಲೇಖನ ವ್ರತ ಆಚರಿಸಿದರು.
- ಇವನ ಕಾಲದಲ್ಲಿ ದಂಗೆಯೆದ್ದ ಮದುರಚಾಯ್ಯನನ್ನು ಸದೆಬಡಿದು ಗಂಗರಾಜ್ಯ ರಕ್ಷಿಸಿದ ಚಾವುಂಡರಾಯನಿಗೆ "ಸಮರ ಪರಶುರಾಮ" ಎಂಬ ಬಿರುದು ನೀಡಿದರು.
- ಚಾವುಂಡರಾಯ ಕನ್ನಡದಲ್ಲಿ ಚಾವುಂಡರಾಯ ಪುರಾಣ ಅಥವಾ ತ್ರಿಷಷ್ಠಿಲಕ್ಷಣ ಮಹಾಪುರಾಣವನ್ನು ಮತ್ತು ಸಂಸ್ಕೃತದಲ್ಲಿ ಚರಿತ್ರಸಾರವನ್ನು ಬರೆದಿದ್ದಾನೆ.
- ಚಾವುಂಡರಾಯ ಶ್ರವಣಬೆಳಗೊಳದಲ್ಲಿ ಕ್ರಿ.ಶ. 981-982ರಲ್ಲಿ ಜಗದ್ವಿಖ್ಯಾತ ಬಾಹುಬಲಿ ಅಥವಾ ಗೊಮಟೇಶ್ವರ ವಿಗ್ರಹವನ್ನು ಕೆತ್ತಿಸಿದ. ಹಾಗೆಯೇ ಅಲ್ಲಿ ಚಾವುಂಡರಾಯ ಬಸದಿ ನಿರ್ಮಿಸಿದ್ದಾನೆ.

### ಭೂತುಗ - II

- ಕ್ರಿ.ಶ. 949ರ ತಕ್ಕೊಲಂ ಕದನದಲ್ಲಿ ರಾಷ್ಟ್ರಕೂಟ 3ನೇ ಕೃಷ್ಣನಿಗೆ ಸಹಾಯಕನಾಗಿ - ಚೋಳದೊರೆ ರಾಜ್ಯಾದಿತನನ್ನು ಕೊಂದು ಹಾಕಿದ.
- ಇವನ ಕಾಲದಲ್ಲಿ ಆತಕೂರಿನಲ್ಲಿ ಹಂದಿಯೊಂದಿಗೆ ಹೋರಾಡಿ ಸಾವನ್ನಪ್ಪಿದ. ನಾಯಿಯ ನೆನಪಿಗಾಗಿ ವೀರಗಲ್ಲನ್ನು ನಡೆಸಲಾಗಿದೆ.
- ಗಂಗರ ಕೊನೆಯ ದೊರೆ ರಕ್ಕಸಗಂಗನನ್ನು ಚೋಳ ದೊರೆ 1ನೇ ರಾಜೇಂದ್ರ ಚೋಳನು ಸೋಲಿಸಿ-ಗಂಗರಾಜ್ಯವನ್ನು ಆಕ್ರಮಿಸಿದ ಇದರೊಂದಿಗೆ ಗಂಗರ ಆಳ್ವಿಕೆ ಕೊನೆಯಾಯಿತು.

## ಗಂಗರ ಕೊಡುಗೆಗಳು

**ಕಲೆ ಮತ್ತು ವಾಸ್ತುಶಿಲ್ಪ**

- ಇವರ ವಾಸ್ತುಶಿಲ್ಪ ರಚನೆಯು ಪಲ್ಲವ ಮತ್ತು ಕದಂಬರ ಕಲಾಮಿಶ್ರಣವಾಗಿದೆ.
- ಕಂಬಗಳ ಅಡಿಯಲ್ಲಿ ಸಿಂಹಗಳ ಕೆತ್ತನೆ, ಪಿರಮಿಡ್ಡನ ರಚನೆಯ ಗೋಪುರ.
- ಚೌಕಾಕಾರದ ಕಂಬಗಳ ಕೆತ್ತನೆ, ಇವರ ವಾಸ್ತುಶಿಲ್ಪ ಶೈಲಿ ಲಕ್ಷಣಗಳು.

**ಪ್ರಮುಖ ದೇವಾಲಯುಗಳು**

- ತಲಾಕಾಡಿನ ಮರುಳೇಶ್ವರ ಮತ್ತು ಪಾತಳೇಶ್ವರ ದೇವಾಲಯ
- ನಂದಿಯ ಭೋಗ ನಂದೀಶ್ವರ
- ಬೇಗೂರಿನ ನಗರೇಶ್ವರ
- ಕೋಲಾರದ ಕೋಲಾರಮ್ಮನ ದೇವಾಲಯ
- ಮನ್ನೆಯ ಕಪಿಲೇಶ್ವರ
- ನರಸಮಂಗಲದ-ವಿಷ್ಣು ಮತ್ತು ಶಿವ ದೇವಾಲಯ
- ವರುಣದಲ್ಲಿನ-ಮಹಾಲಿಂಗೇಶ್ವರ ದೇವಾಲಯ

**ಜೈನ ಬಸದಿಗಳು**

- ಶ್ರವಣಬೆಳಗೊಳದಲ್ಲಿನ ಚಂದ್ರಗಿರಿ ಬೆಟ್ಟದಲ್ಲಿ 14 ಬಸದಿಗಳಿವೆ - ಇವುಗಳಲ್ಲಿ ಚಂದ್ರ, ಪ್ರಭಾ ಬಸದಿ, ಚಾವುಂಡರಾಯ ಬಸದಿ, ಪಾರ್ಶ್ವನಾಥ ಬಸದಿ ಪ್ರಮುಖವಾದವು.
- ಕಂಬದಹಳ್ಳಿಯಲ್ಲಿ ಪಂಚಕೂಟ ಜೈನ ಬಸದಿಗಳಿವೆ

## ಬಾದಾಮಿ ಚಾಲುಕ್ಯರು

- ಕರ್ನಾಟಕವನ್ನಾಳಿದ ಮೊಟ್ಟಮೊದಲ ವಿಶಾಲ ಸಾಮ್ರಾಜ್ಯ
- ಸ್ಥಾಪಕರು - ಜಯಸಿಂಹ ಮತ್ತು ರಣರಾಗ
- ರಾಜಧಾನಿ - ವಾತಾಪಿ (ಬಾದಾಮಿ)
- ಲಾಂಛನ - ವರಾಹ

**1ನೇ ಪುಲಿಕೇಶಿ (ಕ್ರಿ.ಶ. 540/547 ರಿಂದ 566/567)**

- ಚಾಲುಕ್ಯರ ನಿಜವಾದ ಸಂಸ್ಥಾಪಕ
- ಕದಂಬರ ಸಾಮಂತಿಕೆಯನ್ನು ಕಿತ್ತೊಗೆದು ಸ್ವತಂತ್ರ ಘೋಷಿಸಿದ ಮೊದಲ ಅರಸು
- ಬಾದಾಮಿಯನ್ನು ರಾಜಧಾನಿಯಾಗಿ ನಿರ್ಮಿಸಿದ.
- ಇವನ ಬಿರುದುಗಳು - ಶ್ರೀ ವಲ್ಲಭ, ಸತ್ಯಾಶ್ರಯ, ಧರ್ಮಮಹಾರಾಜ, ರಣವಿಕ್ರಮ.
- ಮಂಗಳೇಶನ ಮಹಾಕೂಟ ಸ್ತಂಭಶಾಸನದಲ್ಲಿ 'ಪ್ರಿಯತನುಜ' ಎಂದು ವರ್ಣನೆ.

- ಇವನ ರಾಣಿ ದುರ್ಲಬ ದೇವಿ ಮತ್ತು ಇಂದುಕಾಂತಿ
- ಮಕ್ಕಳು-ಕೀರ್ತಿವರ್ಮ ಮತ್ತು ಮಂಗಳೇಶ.

**1ನೇ ಕೀರ್ತಿವರ್ಮ : (ಕ್ರಿ.ಶ. 567-598)**

- ಕೊಡಚಿಯ ತಾಮ್ರಪಟದಲ್ಲಿ-ಕತ್ತಿಯರಸನೆಂದು ಇವನನ್ನು ಉಲ್ಲೇಖಿಸಿದೆ.
- ಮಹಾಕೂಟ ಸ್ತಂಭಶಾಸನವು ಇವರ ಸೈನಿಕ ದಿಗ್ವಿಜಯ ತಿಳಿಸುತ್ತದೆ.
- ಐಹೊಳೆ ಶಾಸನವು ಇವನನ್ನು "ನಳರ ಮೌರ್ಯರ" ಕದಂಬರ ಕಾಳರಾತ್ರಿ" ಎಂದು ವರ್ಣಿಸಿದೆ.
- ಬಾದಾಮಿಯ ವೈಷ್ಣವ ಗುಹಾಲಯ ಇವನ ಆಜ್ಞೆಯಂತೆ ನಿರ್ಮಾಣವಾಯಿತು.
- ಇವನ ಮಕ್ಕಳು-2ನೇ ಪುಲಿಕೇಶಿ, ವಿಷ್ಣುವರ್ಧನ, ಧಾರಾಶ್ರಯ, ಜಯಸಿಂಹ ಮತ್ತು ಬುದ್ಧವರಸ.
- ಬಳ್ಳಾರಿಯ ನಳರು, ಶಿವಮೊಗ್ಗದ ಸೇಂದ್ರಕರು, ಕೊಂಕಣದ ಮೌರ್ಯರು ಬನವಾಸಿ ಕದಂಬರು ಇವನಿಂದ ಸೋತರು.

**ಮಂಗಳೇಶ (ಕ್ರಿ.ಶ. 598-603)**

- ಕೀರ್ತಿವರ್ಮನ ತಮ್ಮ
- ಕ್ರಿ.ಶ. 602ರಲ್ಲಿ ಕಳಚೂರ್ಯರ ರಾಜ ಬುದ್ಧ ರಾಜನನ್ನು ಸೋಲಿಸಿ ಗುಜರಾತ್ ಮತ್ತು ಖಾಂದೇಶಗಳನ್ನು ಗೆದ್ದು ಉತ್ತರದಲ್ಲಿ ಮಹಾನದಿವರೆಗೆ ರಾಜ್ಯವನ್ನು ವಿಸ್ತರಿಸಿದ.
- ಸತತ 18 ಯುದ್ಧಗಳಲ್ಲಿ ಜಯಶಾಲಿ ವೀರನಾದ ರತ್ನಗಿರಿ ಸಮೀಪದ ರೇವತಿದ್ವೀಪದ ರಾಜ-ಸ್ವಾಮಿರಾಜರನನ್ನು ಸೋಲಿಸಿದ.
- ಬಾದಾಮಿ ಬೆಟ್ಟದಲ್ಲಿ ವೈಷ್ಣವ ಗುಹಾಲಯವನ್ನು ತನ್ನ ಅಣ್ಣ ಕೀರ್ತಿವರ್ಮನ ಆಣತಿಯಂತೆ ನಿರ್ಮಿಸಿದ.

**ಇಮ್ಮಡಿ ಪುಲಿಕೇಶಿ (ಕ್ರಿ.ಶ. 609-642)**

- ಬಾದಾಮಿ ಚಾಲುಕ್ಯರಲ್ಲಿ ಅತ್ಯಂತ ಪ್ರಸಿದ್ಧ ರಾಜ.
- ಕ್ರಿ.ಶ. 609ರಲ್ಲಿ ತನ್ನ ಚಿಕ್ಕಪ್ಪ ಮಂಗಳೇಶನನ್ನು ಕೊಂದು ಅಧಿಕಾರಕ್ಕೆ ಬಂದ.
- ಬಿರುದುಗಳು-ಪರಮೇಶ್ವರ, ಶ್ರೀ ಪೃಥ್ವಿವಲ್ಲಭ, ಪರಮಭಟ್ಟಾರಕ, ಸಾಹಸರಸಿಕ, ಸಮಸ್ತಭುವನಾಶ್ರಯ, ಶಿಲಾದಿತ್ಯ ಮಹಾರಾಜ.
- ಐಹೊಳೆ ಶಾಸನವು ಇವನ ದಿಗ್ವಿಜಯ ಮತ್ತು ಚಾಲುಕ್ಯ ಸಂತತಿಯ ಪೂರ್ಣಾಂಶದ ವಿವರಗಳನ್ನು ತಿಳಿಸಲು ಸಹಕಾರಿಯಾಗಿದೆ.
- ಐಹೊಳೆ ಶಾಸನವು ಐಹೊಳೆಯ ಮೆಗೂತಿ ಜಿನಾಲಯದ ಗೋಡೆಯ ಮೇಲೆ ಜೈನಕವಿ ರವಿಕೀರ್ತಿಯಿಂದ ರಚಿತವಾಗಿದೆ.
- ಐಹೊಳೆ ಶಾಸನವು ಕ್ರಿ.ಶ. 643ರಲ್ಲಿ ಸಂಸ್ಕೃತ ಭಾಷೆಯಲ್ಲಿ ಆದರೆ ಕನ್ನಡ ಬರಹದಲ್ಲಿ ಕೆತ್ತಲ್ಪಟ್ಟಿದೆ.
- ರವಿಕೀರ್ತಿಯು ತನ್ನನ್ನು ಕಾಳಿದಾಸ ಮತ್ತು ಭಾರವಿಗಳಿಗೆ ಹೋಲಿಸಿಕೊಂಡಿದ್ದಾನೆ.
- ಇಮ್ಮಡಿ ಪುಲಿಕೇಶಿಯಿಂದ ಸೋತವರು-ರಾಷ್ಟ್ರಕೂಟರಾದ ಅಪ್ಪಾಯಿಕ ಮತ್ತು ಗೋವಿಂದ, ಬನವಾಸಿಯ ಕದಂಬರು, ಚೇಳರು, ಜಾಟರು, ಮಾಳ್ವರು, ಗೂರ್ಜರು, ಚೇಳರು ಚೋರರು, ಪಾಂಡರು, ಕೊಂಕಣದ ಮೌರ್ಯರು, ಪಲ್ಲವರು ಕಳಿಂಗ ರಾಜ್ಯ ವೆಂಗಿರಾಜ್ಯ ಇತ್ಯಾದಿ.

- ಗುಜರಾತ್ ಅನ್ನು ಜಯಿಸಿ ಅಲ್ಲಿ ತನ್ನ ತಮ್ಮ ಜಯಸಿಂಹನನ್ನು ಮಾಂಡಲಿಕನನ್ನಾಗಿ ಮಾಡಿದ. ಹಾಗೆಯೇ ಪೂರ್ವದ ವೆಂಗಿಮಂಡಲವನ್ನು ಗೆದ್ದು ಮತ್ತೊಬ್ಬ ತಮ್ಮ ಕುಬ್ಜ ವಿಷ್ಣುವರ್ಧನನ್ನು ಅದರ ಮುಖ್ಯಸ್ಥನನ್ನಾಗಿ ಮಾಡಿದ ಮುಂದೆ ಕುಬ್ಜ ವಿಷ್ಣುವರ್ಧನ ಸ್ವತಂತ್ರ ವೆಂಗಿ ಚಾಲುಕ್ಯ ವಂಶಕ್ಕೆ ಅಸ್ತಿಬಾರ ಹಾಕಿದನು.
- ಇಮ್ಮಡಿ ಪುಲಿಕೇಶಿಯ ಅತ್ಯಂತ ಪ್ರಮುಖ ಯುದ್ಧವೆಂದರೆ ಉತ್ತರಾಪಥೇಶ್ವರನಾದ ಹರ್ಷವರ್ಧನ ವಿರುದ್ಧ ಕ್ರಿ.ಶ. 630-634ರಲ್ಲಿ ನಡೆಯಿತು.
- ಇಮ್ಮಡಿ ಪುಲಿಕೇಶಿ ಮತ್ತು ಹರ್ಷವರ್ಧನ ನಡುವಿನ ಯುದ್ಧವನ್ನು ಐಹೊಳೆ ಶಾಸನ ಮತ್ತು ಹೂಯಾನ್‌ತ್ಸಾಂಗ್ ಬರವಣಿಗೆಗಳು ತಿಳಿಸುತ್ತದೆ.
- ಇವರೀರ್ವರ ನಡುವಣ ಯುದ್ಧ ನರ್ಮದೆಯ ದಂಡೆಯಲ್ಲಿ ನಡೆಯಿತು.
- ಹರ್ಷವರ್ಧನ ಸೋತು, ಸ್ನೇಹಸಖ್ಯ ಬೆಳಸಿದ. ನರ್ಮದಾ ನದಿ ಇವರಿಬ್ಬರ ನಡುವಣ ಗಡಿಯಾಯಿತು.
- ಹರ್ಷವರ್ಧನನ ವಿರುದ್ಧ ಜಯದಿಂದಾಗಿ "ಪರಮೇಶ್ವರ" ಎಂಬ ಬಿರುದು ಧರಿಸಿದ.
- ಪರ್ಶಿಯಾದ ದೊರೆ ಖುಸ್ರು ಪುಲಿಕೇಶಿಯ ಆಸ್ಥಾನಕ್ಕೆ ಕಾರ್ಯಭಾರಿಯೊಬ್ಬನನ್ನು ಕಳುಹಿಸಿದ ಇದಕ್ಕೆ ಸಾಕ್ಷಿ ಅಜಂತಾದ ಗುಹೆಯಲ್ಲಿನ ಮತ್ತು ಅರಬ್ ಇತಿಹಾಸಕಾರ ತಬರಿಯ ದಾಖಲೆ
- ಪ್ರಸಿದ್ಧ ಚೀನಿಯಾತ್ರಿಕ ಹ್ಯೂಯಾನ್‌ತ್ಸಾಂಗ ಇವನ ಆಸ್ಥಾನಕ್ಕೆ ಬಂದಿದ್ದನು.
- ಈತ ಪಲ್ಲವ ದೊರೆ ಮಹೇಂದ್ರವರ್ಮನನ್ನು ಎರಡು ಭಾರಿ ಸೋಲಿಸಿದ.
- ಪಲ್ಲನ ದೊರೆ ಒಂದನೇ ನರಸಿಂಹವರ್ಮನು ಇಮ್ಮಡಿ ಪುಲಿಕೇಶಿಯನ್ನು ಪಾರಿಯಾತ್ರ, ಮಣಿಮಂಗಲ, ಸುರಮಾರ ಕದನಗಳಲ್ಲಿ ಸಂಪೂರ್ಣವಾಗಿ ಸೋಲಿಸಿದ. ಪಲ್ಲವರು ಕ್ರಿ.ಶ. 642ರಲ್ಲಿ ಬಾದಾಮಿಗೆ ಮುತ್ತಿಗೆ ಹಾಕಿದರು. ಪುಲಿಕೇಶಿ ಹೋರಾಡುತ್ತಲೇ ಮಡಿದ.
- ಇಮ್ಮಡಿ ಪುಲಿಕೇಶಿ ಸಾವಿನಿಂದ ಕ್ರಿ.ಶ. 642 ರಿಂದ 655 ರವರೆಗೆ 13 ವರ್ಷಗಳು ಪಲ್ಲವರು ಬಾದಾಮಿ ಮತ್ತು ಸಾಮ್ರಾಜ್ಯದ ದಕ್ಷಿಣ ಭಾಗಗಳನ್ನು ತಮ್ಮಲ್ಲಿ ಇಟ್ಟುಕೊಂಡಿದ್ದರು.
- ಇಮ್ಮಡಿ ಪುಲಿಕೇಶಿಯ ಮಕ್ಕಳು-ಆದಿತ್ಯವರ್ಮ, ಚಂದ್ರಾದಿತ್ಯ, 1ನೇ ವಿಕ್ರಮಾದಿತ್ಯ, ಜಯಸಿಂಹ.

### 1ನೇ ವಿಕ್ರಮಾದಿತ್ಯ (ಕ್ರಿ.ಶ. 655-682)

- ಪುಲಿಕೇಶಿಯ ಮೂರನೆ ಮಗನಾದ ಈತನು ಪಲ್ಲವರ ವಶವಾಗಿದ್ದ ಬಾದಾಮಿಯನ್ನು ಮತ್ತೆ ವಶಪಡಿಸಿಕೊಂಡು ಸಾಮ್ರಾಜ್ಯವನ್ನು ಮರಳಿ ಪಡೆದ.
- ಪಲ್ಲವ ದೊರೆಗಳಾದ ನರಸಿಂಹವರ್ಮ, ಮಹೇಂದ್ರವರ್ಮ-2 ಮತ್ತು ಪರಮೇಶ್ವರವರ್ಮ ಈ ಮೂವರ ವಿರುದ್ಧ ಹೋರಾಡಿದ.
- ಇವನ ಅತ್ತಿಗೆ ಅಂದರೆ ಚಂದ್ರಾದಿತ್ಯನ ಮಡದಿ ವಿಜಯಾಂಕಾ ಹೊರಡಿಸಿದ ನೆರೂರು ತಾಮ್ರ ಪಟವು ಈತನು ಪಟ್ಟವೇರಿದ ವರ್ಷ ಕ್ರಿ.ಶ. 655 ಎಂದು ತಿಳಿಸುತ್ತದೆ.
- ಗಂಗರ ಶಾಸನಗಳ ಪ್ರಕಾರ ಕ್ರಿ.ಶ. 670ರಲ್ಲಿ ಇವನು ಪಲ್ಲವ ಪರಮೇಶ್ವರವರ್ಮನನ್ನು ವಿಳಂದ ಎಂಬಲ್ಲಿ ಸೋಲಿಸಿ ಉಗ್ರೋದಯ ಎಂಬ ಕಂಠಿಹಾರವನ್ನು ಪಡೆದನು.
- ಇವನ ದಂಡೆಯಾತ್ರೆಗಳಿಗೆ ತನ್ನ ಮಗ ವಿನಯಾದಿತ್ಯ ಮತ್ತು ಮೊಮ್ಮಗ ವಿಜಯಾದಿತ್ಯ ನೆರವು ನೀಡಿದರು.
- ಇವನ ತಮ್ಮ ಗುಜರಾತಿನ ಮಾಂಡಲಿಕನಾದ ಜಯಸಿಂಹನು ಮೈತ್ರಿಕ ವಂಶದ ವಲ್ಲಭಿಯ ಅರಸನಾದ ವಜ್ಜವ ಅಥವಾ 3ನೇ ಶಿಲಾದಿತ್ಯನನ್ನು ಸೋಲಿಸಿದ್ದನು. ಇಮ್ಮಡಿಪುಲಿಕೇಶಿಯು ಕನೂಜಿನ ಹರ್ಷವರ್ಧನನ್ನು ಸೋಲಿಸಿದಷ್ಟೇ ಮಹತ್ವವನ್ನು ಈ ಘಟನೆಗೆ ನೀಡಲಾಗಿದೆ.

- ಇವನ ಸೋದರ ಚಂದ್ರಾದಿತ್ಯನ ರಾಣಿ ವಿಜಯಾಂಕ ಸಂಸ್ಕೃತ ಕವಿಯತ್ರಿ ಆಗಿದ್ದಳು ಜೊತೆಗೆ ಸತಾರಾ ಪ್ರದೇಶ ಮಾಂಡಳಿಕಳೂ ಆಗಿದ್ದಳು.
- **ಇವನ ಬಿರುದುಗಳು :-** ಶ್ರೀವಲ್ಲಭ, ರಾಣರಸಿಕ ಅನಿವಾರಿತ ರಾಜಮಲ್ಲ ಇತ್ಯಾದಿ.

### ವಿನಯಾದಿತ್ಯ (ಕ್ರಿ.ಶ. 682-696)

- 1ನೇ ವಿಕ್ರಮಾದಿತ್ಯ ಮಗನಾದ ಇವನ ಕನೂಜಿನ ದೊರೆ ಯಶೋವರ್ಮನನ್ನು ಸೋಲಿಸದನೆಂದು ಹೇಳಲಾಗಿದೆ.
- ತನ್ನ ತಂದೆಯಷ್ಟೇ ಪರಾಕ್ರಮಿಯಾಗಿದ್ದ ಈತನು ಪಲ್ಲವ, ಕಳಭ್ರ, ಕೇರಳ ಹೈಹಯರೊಡನೆ ಹೋರಾಡಿ ಪಾರಸಿಕ ಕಮೇರ (ಕಾಂಬೋಡಿಯ) ಮತ್ತು ಸಿಂಹಳದಿಂದ ಕಪ್ಪವನ್ನು ವಸೂಲಿ ಮಾಡಿದ.
- ಇವನು ಕಾಂಬೋಡಿಯಾದ ಮೇಲೂ ದಂಡೆತ್ತಿ ಹೋಗಿರಬಹುದೆಂದು ನಂಬಲಾಗಿದೆ.
- ಕ್ರಿ.ಶ. 692ರಲ್ಲಿ ಚೀನಾಕ್ಕೆ ಒಂದು ರಾಯಾಭಾರ ನಿಯೋಗವನ್ನು ಕಳುಹಿಸಿದ್ದನು.
- ಇವನ ಮೊದಲ ಮಗ ವಿಜಯಾದಿತ್ಯನು ಉತ್ತರ ಭಾರತದ ಮೇಲೆ ದಂಡೆತ್ತಿ ಹೋಗಿ ಕನೂಜಿನ ಯಶೋವರ್ಮನನ್ನು ಸೋಲಿಸಿದನು ಆದರೆ ಸೆರೆಸಿಕ್ಕಿದ, ಇದರಿಂದ ದುಃಖಿತಪ್ತನಾದ ವಿಜಯಾದಿತ್ಯ ಇದೇ ನೋವಿನಲ್ಲಿ ಸಾವನ್ನಪ್ಪಿದ. ಮುಂದೆ ವಿಜಯಾದಿತ್ಯ ಸೆರೆಯಿಂದ ತಪ್ಪಿಸಿಕೊಂಡು ಬಂದು ಪಟ್ಟಾಭಿಷಿಕ್ತನಾದ (ಕ್ರಿ.ಶ. 696-734).
- ವಿಜಯಾದಿತ್ಯನ ಎರಡನೇ ಮಗ ಅರಿಕೇಸರಿಯು ವೇಮುಲವಾಡದ ಚಾಲುಕ್ಯ ಮನೆತನದ ಸ್ಥಾಪಕ.

### ವಿಜಯಾದಿತ್ಯ (ಕ್ರಿ.ಶ. 696-764)

- ಚಾಲುಕ್ಯ ಸಾಮ್ರಾಜ್ಯದ ಪುನರ್ ಸ್ಥಾಪನೆಯ ಕಾರ್ಯದಲ್ಲಿ ತನ್ನ ತಾತ ವಿಕ್ರಮಾದಿತ್ಯನಿಗೆ ಮತ್ತು ತಂದೆ ವಿನಯಾದಿತ್ಯನಿಗೆ ನೆರವು ನೀಡಿದ್ದನು.
- ಬಾದಾಮಿಯಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದನು.
- ಪಟ್ಟದಕಲ್ಲಿನ ವಿಜಯೇಶ್ವರ ಅಥವಾ ಇಂದಿನ ಸಂಗಮೇಶ್ವರ ದೇವಾಲಯ ನಿರ್ಮಿಸಿದ.
- ಇವನ ಮಗಳಾದ ವಿಜಯ ಮಹಾದೇವಿ ಗಂಗದೊರೆ ಶ್ರೀಪುರುಷನನ್ನು ವಿವಾಹವಾದಳು.
- ಇವನ ಎರಡನೇ ಮಗ ಭೀಮನೆಂಬಾತನು ಕಲ್ಯಾಣಿ ಚಾಲುಕ್ಯರ ಮೂಲಪುರುಷನೆಂದು ಹೇಳಲಾಗುತ್ತದೆ.

### ಎರಡನೇ ವಿಕ್ರಮಾದಿತ್ಯ (ಕ್ರಿ.ಶ. 734-746)

- ವಿಜಯಾದಿತ್ಯನ ಮಗನಾದ ಇವನು ತನ್ನ ತಂದೆಯ ಕಾಲದಲ್ಲೇ ಕಂಚಿಯ ಮೇಲೆ ದಾಳಿ ಮಾಡಿದ, ನಂತರ ಕ್ರಿ.ಶ. 735ರಲ್ಲಿ ಕಂಚಿಗೆ ಮುತ್ತಿಗೆ ಹಾಕಿ ವಶಪಡಿಸಿಕೊಂಡನು. ಆದರೆ ಈತ ಹಿಂದೆ ಪಲ್ಲವರು ಬಾದಾಮಿಯನ್ನು ಸೂರೆಗೊಂಡಂತೆ ಕಂಚಿಯನ್ನು ಸೂರೆಮಾಡಲಿಲ್ಲ. ರಾಜಧಾನಿ ಕಂಚಿಗೆ ಯಾವುದೇ ಹಾನಿ ಮಾಡದೇ ಔದಾರ್ಯದಿಂದ ನಡೆದುಕೊಂಡು ಅಲ್ಲಿನ ರಾಜ ಸಿಂಹೇಶ್ವರ ಅಥವಾ ಕೈಲಾಸನಾಥ ದೇವಾಲಯಕ್ಕೆ ಅಪಾರ ಧನವನ್ನು ದಾನಮಾಡಿದನು.
- ಆ ದೇವಾಲಯದ ಕಂಬದ ಮೇಲೆ ತನ್ನ ವಿಜಯದ ಸ್ಮಾರಕವಾಗಿ ಕನ್ನಡ ಶಾಸನವೊಂದನ್ನು ಅವನು ಬರೆಸಿದ್ದಾನೆ.
- ಕಂಚಿಯ ಮೇಲಿನ ವಿಜಯದ ನೆನಪಿಗಾಗಿ ಈತನ ರಾಣಿಯರಾದ ಹೈಹಯ ವಂಶದ ಲೋಕಾಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯವರು ಪಟ್ಟದಕಲ್ಲಿನಲ್ಲಿ ಲೋಕೇಶ್ವರ ಮತ್ತು ತ್ರೈಲೋಕೇಶ್ವರ ದೇವಾಲಯವನ್ನು ನಿರ್ಮಿಸಿದರು.
- ಇವನು ಪಾಂಡ್ಯ, ಚೋಳ ಕಳಭ್ರರನ್ನು ಸೋಲಿಸಿ ದಕ್ಷಿಣದ ಮಹಾಸಾಗರದಲ್ಲಿ ಮಹಾಸ್ತಂಭವೊಂದನ್ನು ನಿರ್ಮಿಸಿದನೆಂದು ಕಂಚಿಯ ಶಾಸನ ತಿಳಿಸುತ್ತದೆ.

- ಇವನ ಕಾಲದ ಮತ್ತೊಂದು ಸಾಧನೆಯೆಂದರೆ ಗುಜರಾತಿನ ಮೇಲೆ ದಂಡೆತ್ತಿ ಬಂದ (ಕ್ರಿ.ಶ. 739) ಅರಬ್ಬರನ್ನು (ತೈಜಿಕರು) ಹಿಮ್ಮೆಟ್ಟಿಸಲಾಯಿತು. (ಗುಜರಾತಿನ ಮಂಡಲಕನಾದ ಅವನಿಜಾಶ್ರಯ ಪುಲಿಕೇಶಿಯು ಈ ಸಾಧನೆ ಮಾಡಿದ)

**೨ನೇ ಕೀರ್ತಿವರ್ಮ (ಕ್ರಿ.ಶ. 746-753)**

- ಎರಡನೇ ವಿಕ್ರಮಾದಿತ್ಯನ ಮಗನಾದ ಈತ ಬಾದಾಮಿ ಚಾಲುಕ್ಯರ ಕೊನೆಯ ರಾಜ.
- ಕಂಚಿಯ ದಂಡಯಾತ್ರೆಯ ಕಾಲದಲ್ಲಿ ತನ್ನ ತಂದೆಗೆ ನೆರವಾಗಿದ್ದನು.
- ಕ್ರಿ.ಶ. 753ರಲ್ಲಿ ರಾಷ್ಟ್ರಕೂಟ 1ನೇ ಕೃಷ್ಣನು ಈತನನ್ನು ಸಂಪೂರ್ಣವಾಗಿ ಸೋಲಿಸಿ ಬಾದಾಮಿ ಚಾಲುಕ್ಯ ಮನೆತನವನ್ನು ಅಂತ್ಯಗೊಳಿಸಿದನು.

**ಕೊಡುಗೆಗಳು (ಮುಖ್ಯಾಂಶಗಳು)**

- ಕದಂಬರು ಮತ್ತು ಗುಪ್ತರ ಆಡಳಿತದ ಉತ್ತಮ ಅಂಶಗಳನ್ನು ಪಡೆದು ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ರೂಪಿಸಿದ್ದರು.
- ಗುಪ್ತರ ಬಿರುದಾದ ರಾಜಾಧಿರಾಜ ಎಂಬ ಬಿರುದು ಧರಿಸಿದ್ದರು.
- ಆಡಳಿತದಲ್ಲಿ ರಾಜನಿಗೆ ಸಲಹೆ ನೀಡುತ್ತಿದ್ದ ವಿದ್ವಾಂಸ ಗುರುಗಳೆಂದರೆ ಇಮ್ಮಡಿ ಪುಲಿಕೇಶಿ ಕಾಲದಲ್ಲಿ ನಾಗವರ್ಧನಾಚಾರ್ಯರು, 1ನೇ ವಿಕ್ರಮಾದಿತ್ಯನ ಕಾಲದಲ್ಲಿ ಸುದರ್ಶನಚಾರ್ಯರು, 1ನೇ ಕೀರ್ತಿವರ್ಮನ ಕಾಲದಲ್ಲಿ ವ್ಯಾಘ್ರುಸ್ವಾಮಿ ಮುಂತಾದವರು.
- ಚಾಲುಕ್ಯರ ಸೇನೆಯನ್ನು "ಕರ್ಣಾಟ ಬಲ" ಎಂದು ಕರೆಯಲಾಗಿತ್ತು.
- ಯುದ್ಧದ ಆನೆಗಳಿಗೆ ಮಧ್ಯ ಕುಡಿಸಿ ಉತ್ತೇಜಿಸಲಾಗುತ್ತಿತ್ತೆಂದು ಹ್ಯೂಯನ್‌ತ್ಸಾಂಗ ತಿಳಿಸಿದ್ದಾನೆ.
- ರಾಜ್ಯಕ್ಕೆ ಆದಾಯದ ಮೂಲ ಭೂಕಂದಾಯವಾಗಿದ್ದು ಇದನ್ನು ಸಿದ್ದಾಯ ಎನ್ನುತ್ತಾರೆ.
- ಚಾಲುಕ್ಯರ ಸೇನಾ ಶಿಬಿರಗಳನ್ನು ವಿಜಯ ಸ್ಕಂದಾವಾರ ಎನ್ನುವರು.

**ಪ್ರಮುಖ ತೆರಿಗೆಗಳು**

- ಪಣ್ಣಾಯ / ಪನ್ನೆಯ - ವೀಳ್ಯದೆಲೆ ಮೇಲಿನ ಸುಂಕ
- ಹೇರ್ಜುಂಕ-ಭಾರದ ಮೇಲೆ ಅಥವಾ ಹೇರುಗಳ ಮೇಲಿನ ತೆರಿಗೆ.
- ಕಿರುಕುಳ-ವಸ್ತುಗಳ ಮೇಲಿನ ತೆರಿಗೆ.
- ಬೀರ್ಕೊಡೆ-ವ್ಯಾಪಾರದ ಮೇಲಿನ ತೆರಿಗೆ.
- ವಡ್ಡರಾವುಲ-ರಾಜನ ಪರಿವಾರದವರ ವೆಚ್ಚಕ್ಕಾಗಿ ಹಾಕುತ್ತಿದ್ದ ತೆರಿಗೆ.
- ಬಳ್ಳಾರಿಯ ಕುರುಗೋಡಿನಲ್ಲಿ ಭೂ ಅಳತೆಮಾಡುವ ಅಳತೆಗೋಲನ್ನು ಕೆತ್ತಲಾಗಿದೆ.
- ಚಾಲುಕ್ಯರ ನಾಣ್ಯಗಳನ್ನು ಮೊದಲಿಗೆ ಗದ್ಯಾಣ ಎಂತಲು ನಂತರ ವರಾಹಗಳೆಂದು ಕರೆಯಲಾಯಿತು (ಇವುಗಳ ತೂಕ 120 ಗ್ರೇನ)
- ಚಾಲುಕ್ಯರ ಪ್ರಮುಖ ಮಾಂಡಲಿಕ ಅರಸುಗಳೆಂದರೆ- ಗಂಗರು, ಅಳುಪರು, ಸೇಂದ್ರಕರು, ಬಾಣರು.
- ಗಣಿಕೆಯರು ಅಥವಾ ವೇಶ್ಯೆಯರು ಸಮಾಜದಲ್ಲಿ ಉತ್ತಮ ಸ್ಥಾನ ಹೊಂದಿದ್ದರು. - ದಾನಧರ್ಮಗಳಿಗೆ ಇವರು ಹೆಸರಾಗಿದ್ದರು.
- ವಿಜಯಾದಿತ್ಯನ ಪ್ರೇಯಸಿ ವೀಣಾಪೋಟಿಗಳ್ ಮಹಾಕೋಟೇಶ್ವರ ದೇವಾಲಯಕ್ಕೆ ಹಿರಣ್ಯಗರ್ಭದಾನವನ್ನು ಮಾಡಿದ್ದಳು.

- ಇವರ ಕಾಲದ ಪ್ರಮುಖ ವ್ಯಾಪಾರ ಶ್ರೇಣಿಯೆಂದರೆ - ಐಹೊಳೆ ಐನೂರ್ವರ್.
- ಚಾಲುಕ್ಯರು ಆರಂಭದಲ್ಲಿ ವೈಷ್ಣವರಾಗಿದ್ದು ಮುಂದೆ 1ನೇ ವಿಕ್ರಮಾದಿತ್ಯನ ಕಾಲದಿಂದ ಶೈವರಾದರು.
- ಇಮ್ಮಡಿ ಪುಲಿಕೇಶಿಯ ಸೇನಾನಿ ರವಿಕೀರ್ತಿ ಮತ್ತು ವಿಜಯಾದಿತ್ಯನ ಮಗಳು ಕುಂಕುಮದೇವಿ ಜೈನರಾಗಿದ್ದರು.
- ಕೌಮುದಿ ಮಹೋತ್ಸವದ ಕರ್ತೃ ವಿಜ್ಜಿಕ ಅಥವಾ ವಿಜಯಭಟ್ಟಾರಿಕೆ ಅಥವಾ ವಿಜಯಾಂಕ (ಚಂದ್ರಾದಿತ್ಯ ರಾಣಿ) ಎಂದು ಹೇಳಲಾಗುತ್ತದೆ. ಈಕೆಗೆ 'ಅಭಿನಯ ಸರಸ್ವತಿ' ಎಂಬ ಬಿರುತು ಇತ್ತು.

**ಕಲೆ ಮತ್ತು ವಾಸ್ತುಶಿಲ್ಪ**

- ಚಾಲುಕ್ಯರನ್ನು ಕರ್ನಾಟಕ ದೇವಾಲಯದ ವಾಸ್ತುಶಿಲ್ಪದ ಪ್ರವರ್ತಕರೆಂದು ವರ್ಣಿಸಲಾಗಿದೆ.
- ಚಾಲುಕ್ಯರು ಕಲಾಕ್ಷೇತ್ರಕ್ಕೆ ಮಹತ್ವಪೂರ್ಣ ಕೊಡುಗೆ ನೀಡಿದ್ದು 100ಕ್ಕೂ ಹೆಚ್ಚಿನ ಕಲಾ ರಚನೆಗಳು ಮಲಪ್ರಭಾ ಕಣಿವೆಯಲ್ಲಿ ಹರಡಿಕೊಂಡಿವೆ.
- ಹೊಸ ಕಲಾಶೈಲಿಯ ನಿರ್ಮಾಪಕರಾದ ಇತರ ಶೈಲಿಯನ್ನು ವೇಸರ ಶೈಲಿ ಅಥವಾ ಚಾಲುಕ್ಯ ಶೈಲಿಯೆಂದು ಕರೆಯಲಾಗುತ್ತದೆ. ಇದು ಉತ್ತರದ ನಾಗರಶೈಲಿ ಮತ್ತು ದಕ್ಷಿಣದ ದ್ರಾವಿಡ ಶೈಲಿಗಳ ಸಂಗಮ ಶೈಲಿಯಾಗಿದೆ.

**ಚಾಲುಕ್ಯರ ವೇಸರ ಶೈಲಿಯ ಲಕ್ಷಣಗಳು**

- ಚಿಕ್ಕದಾದ ಮತ್ತು ಸಾದಾ ತಳವಿನ್ಯಾಸ, ಕೆಲವು ದೇವಾಲಯಗಳಲ್ಲಿ ಲಾಳಾಕಾರದ ತಳವಿನ್ಯಾಸ. ಚೌಕಾಕಾರದ ಗರ್ಭಗುಡಿ ಮತ್ತು ಶಿಬಿರ
- ಸಭಾಮಂಟಪ, ಸುಕಾನಾಶಿ, ಮುಖಮಂಟಪ
- ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣಾ ಪಥವಿದೆ.
- ನದಿತೀರ, ಕೊಳ, ಬಾವಿ, ಗುಡ್ಡದ ಮೇಲೆ ನಿರ್ಮಾಣ.
- ಗೋಡೆಗಳು, ಮುಂಬಾಗಿಲು ಮತ್ತು ಛಾವಣಿ ಮೇಲೆ ಅಲಂಕೃತ ಕೆತ್ತನೆ, ಇತ್ಯಾದಿ.
- ಗುಜರಾತ್ ಮತ್ತು ವೆಂಗಿ ಚಾಲುಕ್ಯರ ಕಲೆಯ ಮೇಲು ಇವರ ಪ್ರಭಾವವಿದೆ.
- ಇವರ ದೇವಾಲಯದ ವಾಸ್ತುಶಿಲ್ಪದ ಪ್ರಯೋಗಗಳು ಮೊದಲು ಐಹೊಳೆಯಲ್ಲಿ ಪ್ರಾರಂಭವಾದವು.
- ಚಾಲುಕ್ಯರ ಕಲಾ ವಾಸ್ತು ರಚನೆಯನ್ನು ಗುಹಾಂತರ ದೇವಾಲಯಗಳು ಮತ್ತು ದೇವಾಲಯಗಳೆಂದು ವಿಂಗಡಿಸಬಹುದಾಗಿದ್ದು, ಗುಹಾಂತರ ದೇವಾಲಯಗಳು ಇವರ ಮೊದಲ ರಚನೆಗಳಾಗಿದೆ.
- ಡಾ. ಎಂ. ಶೇಷಾದ್ರಿಯವರು "ಚಾಲುಕ್ಯರು ರಾಕ್ಷಸರಂತೆ ಕಡಿದು ರತ್ನಗಾರರಂತೆ ಮುಗಿಸಿದ್ದಾರೆ" ಎಂದು ವರ್ಣಿಸಿದ್ದಾರೆ.

**ಗುಹಾಂತರ ದೇವಾಲಯಗಳು**

- **ಬಾದಾಮಿಯಲ್ಲಿ 4 ಗುಹಾಲಯಗಳಿವೆ. :** 1ನೆಯದು ಶೈವಗುಹೆ<br>2 ಮತ್ತು 3ನೆಯದು ವಿಷ್ಣುಗುಹೆಗಳು<br>4ನೆಯದು - ಜೈನಗುಹೆ

- **ಐಹೊಳೆಯಲ್ಲಿ 3 ಗುಹಾಲಗಳಿವೆ. :** 1ನೆಯದು ಜೈನ
  2ನೆಯದು ವಿಷ್ಣು
  3ನೆಯದು ಬೌದ್ಧಗುಹೆ

**ದೇವಾಲಯಗಳು**

- **ಐಹೊಳೆ :-** ಇಲ್ಲಿ 70ಕ್ಕೂ ಹೆಚ್ಚು ಚಾಲುಕ್ಯರ ದೇವಾಲಯಗಳು ರಚನೆಯಾಗಿದೆ.
- ಕಲಾವಿಮರ್ಶಕ ಪರ್ಸಿಬ್ರೌನ್ "ಐಹೊಳೆಯನ್ನು ಭಾರತೀಯ ದೇವಾಲಯದ ವಾಸ್ತುಶಿಲ್ಪದ ತೊಟ್ಟಿಲು" ಎಂದು ವರ್ಣಿಸಿದ್ದಾರೆ.

**ಇಲ್ಲಿನ ಪ್ರಮುಖ ದೇವಾಲಯಗಳೆಂದರೆ**

- ಲಡಾಖಾನ್ ದೇವಾಲಯ
- ಹುಚ್ಚಮಲ್ಲಿ ಗುಡಿ
- ದುರ್ಗಾ ದೇವಾಲಯ
- ಮಲ್ಲಿಕಾರ್ಜುನ ದೇವಾಲಯ
- ಜ್ಯೋತಿರ್ಲಿಂಗ ದೇವಾಲಯ
- ಮೇಗುತಿ ಜೈನ ದೇವಾಲಯ
- ಸಿದ್ಧೇಶ್ವರ ದೇವಾಲಯ
- ಶಿವ ದೇವಾಲಯ
- ಮೇಗುತ್ತಿ ಶಿವಾಲಯ
- ಕೊಂತಿ ಗುಡಿ
- ರಾಮಲಿಂಗ ದೇವಾಲಯ ಇತ್ಯಾದಿ.
- **ಪಟ್ಟದಕಲ್ಲು : ಇಲ್ಲಿ 10 ದೇವಾಲಯಗಳು ಕಂಡು ಬರುತ್ತದೆ.**

**ಪ್ರಮುಖ ದೇವಾಲಯಗಳೆಂದರೆ,**

- ಪಾಪನಾಥೇಶ್ವರ ದೇವಾಲಯ
- ವಿರೂಪಾಕ್ಷ (ಲೋಕೇಶ್ವರ) ದೇವಾಲಯ
- ಗಳಗನಾಥ ದೇವಾಲಯ
- ಚಂದ್ರಶೇಖರ
- ಸಂಗಮೇಶ್ವರ (ವಿಜಯೇಶ್ವರ) ದೇವಾಲಯ
- ಮಲ್ಲಿಕಾರ್ಜುನ (ತ್ರೈಲೋಕೇಶ್ವರ) ದೇವಾಲಯ
- ಕಾಡಸಿದ್ಧೇಶ್ವರ
- ಕಾಶಿವಿಶ್ವೇಶ್ವರ

❖ ಪರ್ಸಿಬ್ರೌನ್‌ರವರು ವಿರುಪಾಕ್ಷ ದೇವಾಲಯವನ್ನು ದ್ರಾವಿಡ ಶೈಲಿಯ ಅತ್ಯುತ್ತಮ ಕೃತಿ ಎಂದು ಬಣ್ಣಿಸಿದ್ದಾರೆ. ಇದನ್ನು ನಿರ್ಮಿಸಿದವಳು 2ನೇ ವಿಕ್ರಮಾದಿತ್ಯನ ರಾಣಿ ಲೋಕಮಹಾದೇವಿ.

## ಬಾದಾಮಿ

**ಇಲ್ಲಿನ ಪ್ರಮುಖ ದೇವಾಲಯಗಳೆಂದರೆ :**

❖ ಜಂಭುಲಿಂಗ ದೇವಾಲಯ ❖ ತ್ರಿಮೂರ್ತಿ ದೇವಾಲಯ

❖ ಬನಶಂಕರಿ ದೇವಾಲಯ ❖ ಮೇಗುತ್ತಿ ದೇವಾಲಯ

❖ ಮೇಲು ಶಿವಾಲಯ

**ಚಾಲುಕ್ಯರ ಕಾಲದ ಪ್ರಮುಖ ಶಿಲ್ಪಿಗಳು**

❖ ರೇವಡಿ ಓವಜ್ಜ

❖ ಅನಿವಾರಿತ ಗುಂಡ

❖ ನರಸೊಬ್ಬ-ಮುಂತಾದವರು

**ಚಿತ್ರಕಲೆ :**

❖ ಬಾದಾಮಿಯ ಒಂದು ಮತ್ತು ಎರಡನೇ ಗುಹೆಗಳಲ್ಲಿ ಹಾಗೂ ಅಜಂತಾದ ಒಂದನೇ ಗುಹೆಯಲ್ಲಿ ಇವರ ಚಿತ್ರಕಲೆಗಳನ್ನು ಕಾಣಬಹುದು.

❖ ಅಜಂತಾದ 1ನೇ ಗುಹೆಯಲ್ಲಿನ ವರ್ಣಚಿತ್ರದಲ್ಲಿ ಇಮ್ಮಡಿ ಪುಲಿಕೇಶಿಯು ಪರ್ಶಿಯಾದ ದೊರೆ ಖುಸ್ರುವಿನ ರಾಯಭಾರಿಯನ್ನು ಬರಮಾಡಿಕೊಳ್ಳುತ್ತಿರುವ ದೃಶ್ಯವಿದೆ.

❖ ಬಾದಾಮಿಯ 2ನೆಯ ಗುಹೆಯಲ್ಲಿ ನಾಲ್ಕು ಸುಂದರ ವರ್ಣ ಚಿತ್ರಗಳನ್ನು ಕಾಣಬಹುದು ಇವುಗಳನ್ನು ಸ್ಟೆಲ್ಲಾ ಕ್ರ್ಯಾಮರಿಶ್ ಎಂಬ ವಿದೇಶಿ ಮಹಿಳೆ ಪತ್ತೆ ಹಚ್ಚಿದಳು.

## ರಾಷ್ಟ್ರಕೂಟರು

❖ ರಾಜಧಾನಿ : ಮಾನ್ಯಖೇಟ (ಗುಲ್ಬರ್ಗದಲ್ಲಿದೆ)

❖ ಲಾಂಛನ : ಗರುಡ (ಮಾಳ್ವದ ಮಾನವಪುರದಲ್ಲಿನ ರಾಷ್ಟ್ರಕೂಟರ ಲಾಂಛನ ಸಿಂಹ)

❖ ರಾಷ್ಟ್ರಕೂಟರ ಬಗೆಗೆ ಇರುವ ಅತ್ಯಂತ ಪ್ರಾಚೀನ ದಾಖಲೆಯೆಂದರೆ ಅಶೋಕನ ಶಾಸನಗಳಲ್ಲಿ ಅವರನ್ನು ರಥಿಕರು ಅಥವಾ ರಟ್ಟರು ಎಂದು ಉಲ್ಲೇಖಿಸಿರುವುದು.

❖ ಮೊದಲು ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಕ್ರಿ.ಶ. 753ರಲ್ಲಿ ಸಾರ್ವಭೌಮ ಅಧಿಕಾರ ಸ್ಥಾಪಿಸಿದರು.

❖ ರಾಷ್ಟ್ರಕೂಟರ ಇತಿಹಾಸ ತಿಳಿಸುವ ಅರಬ್ ಪ್ರವಾಸಿಗರೆಂದರೆ ಸುಲೇಮಾನ್, ಆಲ್‌ಮಸೂದಿ, ಇಬ್ನ್‌ಹಾಕಲ್ ಮತ್ತು ಆಲ್‌ಇಸ್ತಾಖ್ರಿ

# ರಾಜಕೀಯ ಇತಿಹಾಸ

## ದಂತಿದುರ್ಗ (ಕ್ರಿ.ಶ. 753-756)

- ❖ ರಾಷ್ಟ್ರಕೂಟ ಸಾಮ್ರಾಜ್ಯ ಸ್ಥಾಪಕ.
- ❖ ತನ್ನ ಸಮನಗಡ ಶಾಸನದಲ್ಲಿ ಈತನು ಕರ್ಣಾಟ ಬಲವನ್ನು ಅಂದರೆ ಬಾದಾಮಿ ಚಾಲುಕ್ಯರ ಸೈನ್ಯವನ್ನು ಸೋಲಿಸಿದ್ದಾಗಿ ಹೇಳಿಕೊಂಡಿದ್ದಾನೆ.
- ❖ ಬಾದಾಮಿ ಚಾಲುಕ್ಯರ ಕೊನೆಯ ದೊರೆ 2ನೇ ಕೀರ್ತಿವರ್ಮನನ್ನು ಸೋಲಿಸಿ ಬಾದಾಮಿಯನ್ನು ವಶಪಡಿಸಿಕೊಂಡು ಸಾರ್ವಭೌಮತ್ವ ಸ್ಥಾಪಿಸಿದನು.
- ❖ ಪಲ್ಲವದೊರೆ 2ನೇ ನಂದಿವರ್ಮನಿಗೆ ತನ್ನ ಮಗಳಾದ ರೇವಾಳನ್ನು ಕೊಟ್ಟು ವಿವಾಹ ಮಾಡಿದನು.

## 1ನೇ ಕೃಷ್ಣ : (ಕ್ರಿ.ಶ. 756-774)

- ❖ ದಂತಿದುರ್ಗನ ಚಿಕ್ಕಪ್ಪನಾದ ಈತ ಚಾಲುಕ್ಯ 2ನೇ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸಿದ.
- ❖ ಎಲ್ಲೋರದಲ್ಲಿ ಕೈಲಾಸನಾಥ ದೇವಾಲಯ ನಿರ್ಮಿಸಿದುದು ಇವನ ಗಣ್ಯ ಸಾಧನೆ.
- ❖ ಅಕಾಲವರ್ಷ ಇವನ ಪ್ರಮುಖ ಬಿರುದು.
- ❖ ಎಲ್ಲೋರದ ಕೈಲಾಸನಾಥ ದೇವಾಲಯನ್ನು ವಿ.ಎ. ಸ್ಮಿತ್‌ರವರು ಭಾರತೀಯ ವಾಸ್ತುಶಿಲ್ಪದ ಅತ್ಯಂತ ಅಮೋಘ ಮತ್ತು ಅದ್ಭುತ ಕೃತಿ ಜಗತ್ತಿನ ಆಶ್ಚರ್ಯಗಳಲ್ಲಿ ಒಂದು" ಎಂದು ಶ್ಲಾಘಿಸಿದ್ದಾನೆ.

## ಧೃವ (ಕ್ರಿ.ಶ. 780-793)

- ❖ ರಾಷ್ಟ್ರಕೂಟರಲ್ಲಿ ಅತ್ಯಂತ ಪ್ರಸಿದ್ಧ ರಾಜ.
- ❖ ತನ್ನ ಅಣ್ಣ ಎರಡನೇ ಗೋವಿಂದನ ಕಾಲದಲ್ಲಿ (ಕ್ರಿ.ಶ. 774-780) ನಾಸಿಕ ಪ್ರದೇಶದ ಮಾಂಡಲಿಕನಾಗಿದ್ದನು).
- ❖ ಗಂಗದೊರೆ ಶಿವಮಾರನನ್ನು ಸೋಲಿಸಿ ಬಂದಿಸಿದ.
- ❖ ವೆಂಗಿ ದೊರೆ ನಾಲ್ಕನೇ ವಿಷ್ಣುವರ್ಧನನ್ನು ಸೋಲಿಸಿ ಅವನ ಮಗಳಾದ ಶೀಲಭಟ್ಟಾರಿಕೆಯನ್ನು ವಿವಾಹವಾದ.
- ❖ ಇವನ ಬಿರುದುಗಳು - ಧಾರಾವರ್ಷ, ಕಲಿವಲ್ಲಭ, ನಿರುಪಣ ಶ್ರೀವಲ್ಲಭ ನರೇಂದ್ರ ದೇವ ಇತ್ಯಾದಿ.
- ❖ ಉತ್ತರ ಭಾರತದ ಮೇಲೆ ದಿಗ್ವಿಜಯ ಕೈಗೊಂಡು ಕನೂಜಿನ ಇಂದ್ರಾಯುಧನನ್ನು ಸೋಲಿಸಿದ.
- ❖ ಕನೂಜಿನ ಅಧಿಪತ್ಯಕ್ಕಾಗಿ ತ್ರಿಕೋನ ಸ್ಪರ್ಧೆಯು ರಾಷ್ಟ್ರಕೂಟರು, ಗೂರ್ಜರ ಪ್ರತಿಹಾರರು ಮತ್ತು ಬಂಗಾಳದ ಪಾಲರ ನಡುವೆ ನಡೆಯಿತು.
- ❖ ಗೂರ್ಜರ ಪ್ರತಿಹಾರರ ಅರಸು ವತ್ಸಾರಾಜನನ್ನು ಝಾನ್ಸಿ ಕದನದಲ್ಲಿ ಸೋಲಿಸಿದನು.
- ❖ ಬಂಗಾಳದ ಪಾಲರಾಜ ಧರ್ಮಪಾಲನನ್ನು ಸಹ ಸೋಲಿಸಿದ.
- ❖ ಕರ್ಡಾ ಶಾಸನವು ಇವನ ಉತ್ತರದ ದಿಗ್ವಿಜಯಗಳ ಬಗ್ಗೆ ತಿಳಿಸುತ್ತದೆ. ಇವನ ಉತ್ತರದ ದಿಗ್ವಿಜಯಗಳಿಂದ ರಾಷ್ಟ್ರಕೂಟರ ಪ್ರತಿಷ್ಠೆ ಇಡೀ ಭಾರತದಲ್ಲಿ ಹೆಚ್ಚಿತು.
- ❖ ಧೃವನ ಮಕ್ಕಳು ಕರ್ಕ, ಕಂಬ 3ನೇ ಗೋವಿಂದ, ಇಂದ್ರ.

**ಮೂರನೇ ಗೋವಿಂದ (ಕ್ರಿ.ಶ. 793-814)**

- ❖ ತನ್ನ ತಂದೆ ಧ್ರುವನ ಕಾಲದಲ್ಲಿ ಗಂಗವಾಡಿಯಲ್ಲಿ ಆಳುತ್ತಿದ್ದನು.
- ❖ ಗಂಗ ಅರಸು 2ನೇ ಶಿವಮಾರನನ್ನು ಬಂಧನದಿಂದ ಬಿಡುಗಡೆ ಮಾಡಿದ.
- ❖ ಕ್ರಿ.ಶ. 800ರಲ್ಲಿ ಉತ್ತರ ಭಾರತದ ಕಡೆ ದಿಗ್ವಿಜಯ ಕೈಗೊಂಡು ಬಂದೇಲ್‌ಖಂಡದಲ್ಲಿ ಪ್ರತಿಹಾರ ರಾಜ -2ನೇ ನಾಗಭಟ್ಟನನ್ನು ಸೋಲಿಸಿದನು ಹಾಗೂ ಕನೂಜಿನ ಚಕ್ರಾಯುಧನು ಗೋವಿಂದನಿಗೆ ಶರಣಾದನು.
- ❖ "ಹಿಮಾಲಯದ ತಪ್ಪಲಿನ ಹಿಮ ಕರಗಿದ ನೀರನ್ನು ಗೋವಿಂದನ ಕುದುರೆಗಳು ಕುಡಿದವು ಅವನ ಗಜಗಳು ಗಂಗಾಜಲಪಾನ ಮಾಡಿದವು" ಎಂದು ಅಮೋಘುವರ್ಷನ ಸಂಜನ ತಾಮ್ರಶಾಸನವು ಇವನ ದಿಗ್ವಿಜಯವನ್ನು ಬಣ್ಣಿಸಿದೆ.
- ❖ ಶ್ರೀವಲ್ಲಭ, ನರೇಂದ್ರ, ಪ್ರಭೂತವರ್ಷ, ಜನವಲ್ಲಭ ಅನುಪಮ, ಕೀರ್ತಿನಾರಾಯಣ, ಜಗತ್ತುಂಗ, ತ್ರಿಭವನದವಳ, ಇವನ ಪ್ರಮುಖ ಬಿರುದುಗಳು.
- ❖ ಇವನ ರಾಜಧಾನಿ ಮಯೂರ ಬಂಡಿ (ಬಸವ ಕಲ್ಯಾಣದ ಬಳಿಯಿದೆ)

**ಅಮೋಘುವರ್ಷ ನೃಪತುಂಗ (ಕ್ರಿ.ಶ. 814-878)**

- ❖ ರಾಷ್ಟ್ರಕೂಟ ದೊರೆಗಳಲ್ಲೆಲ್ಲಾ ಅತ್ಯಂತ ಪ್ರಸಿದ್ಧ ರಾಜ.
- ❖ ಮೂರನೇ ಗೋವಿಂದನ ಮಗನಾದ ಇವನ ಮೊದಲ ಹೆಸರು ; ಶರ್ವ
- ❖ ಕ್ರಿ.ಶ. 800ದಲ್ಲಿ ಶ್ರೀಭವನ (ಗುಜರಾತಿನ ಸರ್‌ಭೋನ್)ದಲ್ಲಿ ಜನನ.
- ❖ ಈತ ಪಟ್ಟಕ್ಕೆ ಬಂದಾಗ 14 ವರ್ಷದವನು ಇವನ ದಾಯಾದಿ ಲಾಟರ ಮಾಂಡಲಿಕ ಕರ್ಕ ಸುವರ್ಣವರ್ಷನು -ಇವನ ರಕ್ಷಕನಾಗಿ ಇವನಿಗೆ ಎದುರಾದ ಸಮಸ್ಯೆಗಳನ್ನು ಬಗೆಹರಿಸಿದನು.
- ❖ ಗೋವಿಂದನಿಂದ ಬಿಡುಗಡೆಯಾಗಿದ್ದ ಗಂಗರಸ 2ನೇ ಶಿವಮಾರನು ಅಮೋಘುವರ್ಷನ ವಿರುದ್ಧ ಬಂಡಾಯ ಎದ್ದು 816ರ ಕಾಗೆಮೊಗೆಯೂರ ಯುದ್ಧದಲ್ಲಿ ಸಾವನ್ನಪ್ಪಿದನು ನಂತರ ಗಂಗರರಾಜ ರಾಚಮಲ್ಲನು ಅಮೋಘುವರ್ಷನ ಸೇನಾದಿ ಬಂಕೇಶನನ್ನು ರಾಜರಮಡು ಯುದ್ಧದಲ್ಲಿ ಸೋಲಿಸಿದನು.
- ❖ ವಿಂಗವಳ್ಳಿ ಕದನದಲ್ಲಿ ವೆಂಗಿ ಚಾಲುಕ್ಯ 2ನೇ ವಿಜಯಾದಿತ್ಯನನ್ನು ಸೋಲಿಸಿ ವೀರನಾರಾಯಣ ಎಂಬ ಬಿರುದು ಧರಿಸಿದ.
- ❖ ಇವನ ಸೇನಾನಿ ಬಂಕೇಶನು ಗಂಗರನ್ನು ಸೋಲಿಸಿ ತುಮಕೂರಿನ ಬಳಿಯ ಕೈದಾಳ ಕೋಟೆಯನ್ನು ವಶಪಡಿಸಿಕೊಂಡ.
- ❖ ಒಟ್ಟಾರೆ ಅಮೋಘುವರ್ಷನು ಶಾಂತಿಪ್ರಿಯ ದೊರೆ ತನ್ನ ನಾಲ್ವರು ಹೆಣ್ಣು ಮಕ್ಕಳನ್ನು ವಿವಾಹ ಮಾಡಿಸಿ ಪರರಾಜ್ಯಗಳೊಂದಿಗೆ ಶಾಂತಿಯುತವಾಗಿ ರಾಜ್ಯಭಾರ ಮಾಡಲು ಬಯಸಿದ. ತನ್ನ ಮಗಳು ಚಂದ್ರಬ್ಬಲಬ್ಬೆಯನ್ನು ಗಂಗರಾಜ ಕುಮಾರ 1ನೇ ಭೂತುಗನಿಗೆ, ಶೀಲ ಮಹಾದೇವಿ ಎಂಬ ಮಗಳನ್ನು ವೆಂಗಿಯ ವಿಜಯಾದಿತ್ಯನ ಮಗ ಎರಡನೇ ವಿಷ್ಣುವರ್ಧನನಿಗೆ, ಮತ್ತೊಬ್ಬ ಮಗಳಾದ ಸಮಖಳನ್ನು ಕಂಚಿಯ ಪಲ್ಲವದೊರೆ 3ನೇ ನಂದಿವರ್ಮನಿಗೂ ಹಾಗೂ ಇನ್ನೊಬ್ಬ ಮಗಳಾದ ರೇವಕ ನಿಮ್ಮಾಡಿಯನ್ನು ಗಂಗರ ನೀತಿಮಾರ್ಗ ಎರೆಗಂಗನಿಗೂ ಕೊಟ್ಟು ವೈವಾಹಿಕ ಸಂಬಂಧ ಬೆಳಸಿಕೊಂಡು ಶಾಂತಿಯುತ ಜೀವನ ನಡೆಸಿದ.
- ❖ ಇವನು ಹೊಸದಾಗಿ -ಮಾಳಖೇಡವನ್ನು ರಾಜಧಾನಿಯಾಗಿ ನಿರ್ಮಿಸಿದನು.
- ❖ ಇವನ ಸಂಜನ ಶಾಸನದ ಪ್ರಕಾರ ಇವನ ರಾಜ್ಯದಲ್ಲಿ 16 ಮಂಡಲಗಳಿದ್ದವು.
- ❖ ಈತನ ರಾಣಿಯರು - ಅಸಗವ್ವೆ, ಶಂಬಾ ಲೋಕೇತಿ.
- ❖ ಬಿರುದುಗಳು ; ನೃಪತುಂಗ, ಅತಿಶಯದವಳ, ರಟ್ಟಮಾರ್ತಾಂಡ, ಶ್ರೀವಲ್ಲಭ, ವೀರಾನಾರಾಯಣ.

- ಧಾರ್ಮಿಕ ಸಹಿಷ್ಣುವಾದ ಈತ ತನ್ನ ರಾಜ್ಯದಲ್ಲಿ ಬರಗಾಲ/ಕ್ಷಾಮ ಉಂಟಾದಾಗ ತನ್ನ ಎಡಗೈ ಹೆಬ್ಬೆರಳನ್ನು ಕತ್ತರಿಸಿ ಕೊಲ್ಲಾಪುರದ ಮಹಾಲಕ್ಷ್ಮಿಗೆ ಬಲನೀಡಿದನು.
- ಸ್ವತಃ ವಿದ್ವಾಂಸನಾದ ಇವನು ಸಂಸ್ಕೃತದಲ್ಲಿ "ಪ್ರಶ್ನೋತ್ತರ - ರತ್ನಮಾಲ" ಎಂಬ ಕೃತಿಯನ್ನು ರಚಿಸಿದ್ದಾನೆ.
- ಇವನ ಆಸ್ಥಾನಕವಿ ಶ್ರೀವಿಜಯನು ಕವಿರಾಜಮಾರ್ಗ ಎಂಬ ಕನ್ನಡದ ಪ್ರಥಮ ಕೃತಿಯನ್ನು ರಚಿಸಿದ್ದಾನೆ. (ಇದನ್ನು ಅಮೋಘವರ್ಷನೇ ರಚಿಸಿದ್ದಾನೆ ಎಂಬ ವಾದವಿದೆ ಹಾಗೆಯೇ ಶ್ರೀ ವಿಜಯನೇ ಅಮೋಘವರ್ಷ ಎಂತಲೂ ಹೇಳಲಾಗುತ್ತದೆ)
- ಕವಿರಾಜ ಮಾರ್ಗವು : ಕರ್ನಾಟಕದ ವಿಸ್ತಾರವನ್ನು ಹೊಗಳುತ್ತಾ - "ಕಾವೇರಿಯಿಂದ ಗೋದಾವರಿ ವರಮಿರ್ಪ ನಾಡದಾ ಕನ್ನಡದೊಳ್ ಬಾವಿಸಿದ ಜನಪದ" ಎಂದು ವರ್ಣಿಸಿದೆ.
- ಇವನ ಆಳ್ವಿಕೆ ಕಾಲದಲ್ಲಿ ತನ್ನ ಮಗ ಕೃಷ್ಣನು ದಂಗೆ ಎದ್ದಾಗ ತನ್ನ ಸೇನಾನಿ ಬಂಕೇಶನ ಮೂಲಕ ಅಡಗಿಸಿದನು.
- ಅರಬ್ ಪ್ರವಾಸಿಗ ಸುಲೈಮಾನ್ ಕ್ರಿ.ಶ. 851ರಲ್ಲಿ ಇವನ ರಾಜ್ಯವನ್ನು ಸಂದರ್ಶಿಸಿದ. ಅವನು ರಾಷ್ಟ್ರಕೂಟರ ಸಾಮ್ರಾಜ್ಯವು ಸಮಕಾಲೀನ ವಿಶ್ವದ ನಾಲ್ಕು ವಿಶಾಲ ಸಾಮ್ರಾಜ್ಯಗಳಲ್ಲಿ ಒಂದು ಎಂದು ವರ್ಣಿಸಿದ್ದಾನೆ. ಅವುಗಳೆಂದರೆ : ಪೂರ್ವದ ರೋಮನ್ ಸಾಮ್ರಾಜ್ಯ, ಅರಬ್ ಸಾಮ್ರಾಜ್ಯ (ಬಾಗ್ದಾದಿನ ಖಲೀಪನ ಸಾಮ್ರಾಜ್ಯ) ಮತ್ತು ಚೀನಾ ಸಾಮ್ರಾಜ್ಯ.
- ಪಂಚಮುಖಿಯವರು ಅಮೋಘವರ್ಷನನ್ನು ಅಶೋಕಮಹಾಶಯನಿಗೆ ಹೋಲಿಸಿದ್ದಾರೆ,
- ಇವನ ಆಸ್ಥಾನದಲ್ಲಿನ ಪ್ರಮುಖ ವಿದ್ವಾಂಸರುಗಳೆಂದರೆ - ವೀರಸೇನ ಜಿನಸೇನ, ಗುಣಭದ್ರ ಎಂಬ ಜೈನ ವಿದ್ವಾಂಸರು ವ್ಯಾಕರಣ ಶಾಕಟಾಯನ, ಗಣಿತಕಾರ, ಮಹಾವೀರಾಚಾರ್ಯ ಉಗ್ರಾದಿತ್ಯ, ಕುಮುದೆಂದು.
- ಜಿನಸೇನಾ ಚಾರ್ಯ - ಅಮೋಘವರ್ಷನ ಗುರುಗಳು. ಜಿನಸೇನರ ಕೃತಿಗಳು ಹರಿವಂಶ, ಆದಿಪುರಾಣ, ಜಯಧವಳ ಪಾರ್ಶ್ವಭ್ಯುದಯ.
- ಮಹಾವೀರಾಚಾರ್ಯರ ಕೃತಿಗಳು - ಗಣಿತಸಾರ ಸಂಗ್ರಹ.
- ಶಾಕಟಾಯನ ಕೃತಿ - ಶಬ್ದಾನುಶಾಸನ, ಅಮೋಘವೃತ್ತಿ.
- ಗುಣಭದ್ರನ ಕೃತಿ - ಉತ್ತರ ಪುರಾಣ
- ಉಗ್ರಾದಿತ್ಯನ ಕೃತಿ - ಕಲ್ಯಾಣಕಾರಕ
- ಕುಮದೇಂದು - ಸಿರಿಭುವಲಯ.

### 3ನೇ ಕೃಷ್ಣ (ಕ್ರಿ.ಶ. 939-966)

- ರಾಷ್ಟ್ರಕೂಟರ ಕೊನೆಯ ಪ್ರಸಿದ್ಧ ದೊರೆ.
- ಗಂಗರ ದೊರೆ ರಾಚಮಲ್ಲನನ್ನು ಅಧಿಕಾರದಿಂದ ಕೆಳಗಿಳಿಸಿ, ತನ್ನ ಸೋದರಿಯನ್ನು ವಿವಾಹವಾಗಿದ್ದ ಇಮ್ಮಡಿ ಭೂತುಗನನ್ನು ಸಿಂಹಾಸನಕ್ಕೆ ತಂದನು.
- ಕ್ರಿ.ಶ. 959ರಲ್ಲಿ ತಕ್ಕೊಳಂ ಕದನವು ರಾಷ್ಟ್ರಕೂಟ ದೊರೆ 3ನೇ ಕೃಷ್ಣ ಮತ್ತು ಚೋಳ ದೊರೆ 1ನೇ ಪರಾಂತಕನ ನಡುವೆ ನಡೆಯಿತು. ಈ ಕದನದಲ್ಲಿ 3ನೇ ಕೃಷ್ಣನ ಭಾವ ಗಂಗದೊರೆ 2ನೇ ಭೂತುಗನು ಚೋಳರ ಯುವರಾಜ ಅಂದರೆ ಪರಾಂತಕನ ಮಗ ರಾಜ್ಯಾದಿತ್ಯನನ್ನು ಕೊಂದು, ರಾಷ್ಟ್ರಕೂಟರಿಗೆ ವಿಜಯವನ್ನು ತಂದು ಕೊಟ್ಟನು.
- ರಾಮೇಶ್ವರದವರೆಗೆ ಯುದ್ಧ ಹೂಡಿದ 3ನೇ ಕೃಷ್ಣನು ಅಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನು.

- 3ನೇ ಕೃಷ್ಣನು - ಗಂಗರ ಮಾರಸಿಂಹನ (ಭೂತುಗನ ಮಗ) ನೇತೃತ್ವದಲ್ಲಿ ಉತ್ತರಕ್ಕೆ ಸೇನೆ ಕಳುಹಿಸಿ, ಗೂರ್ಜರ ಪ್ರತಿಹಾರರನ್ನು, ಪರಮಾರರನ್ನು ಸೋಲಿಸಿ ಅಲ್ಲಿಂದ ಕಪ್ಪವನ್ನು ಪಡೆದನು, ಈ ವಿಜಯದ ಸ್ಮಾರಕವಾಗಿ ಮಧ್ಯಪ್ರದೇಶದ ಜಬ್ಬಲ್‌ಪುರ ಬಳಿಯ ಜೂರಾದಲ್ಲಿ ಕೃಷ್ಣನು ಒಂದು ಕನ್ನಡ ಶಾಸನ ಕೆತ್ತಿಸಿದ - ಹಾಗೆಯೇ ಇಲ್ಲೇ ಸಮೀಪ ನೀಲಕಂಠಿ ಎಂಬ ಸ್ಥಳದಲ್ಲಿ ಇವನ ಸಂಸ್ಕೃತ ಶಾಸನವು ಇದೆ.
- ಇವನ ಬಿರುದುಗಳು - ಅಕಾಲವರ್ಷ, ಶ್ರೀವಲ್ಲಭ.
- ಕನ್ನರ, ಕಂದಾರ ಇವನ ಇತರೆ ಹೆಸರುಗಳು.
- ಇವನ ಆಸ್ಥಾನಕವಿ - ಪೊನ್ನ (ಪೊನ್ನನ ಬಿರುದುಗಳು ಉಭಯಕವಿ ಚಕ್ರವರ್ತಿ, ಕುರುಳ್ಗಳ ಸವಣ.)
- ಪೊನ್ನ ಕೃತಿಗಳು : ಶಾಂತಿ ಪುರಾಣ, ಭುವನೈಕ್ಯ, ರಾಮಾಭ್ಯುದಯ, ಜಿನಾಕ್ಷರಮಾಲೆ, ಗತ ಪ್ರತ್ಯಾಗಾತ.
- ಇವನ ನಂತರ ತಮ್ಮನಾದ ಖೊಟ್ಟಿಗ (ಕ್ರಿ.ಶ. 967-972) ಅಧಿಕಾರಕ್ಕೆ ಬಂದ. ಆದರೆ ಇವನ ಕಾಲದಲ್ಲಿ ಕ್ರಿ.ಶ. 972ರಲ್ಲಿ ಪರಮಾರರನು ಮಾನ್ಯಖೇಟವನ್ನು ಲೂಟಿ ಮಾಡಿದರು. ಈ ಸಂದರ್ಭದಲ್ಲಿ ಖೊಟ್ಟಿಗ ಅಸುನೀಗಿದ, ಅನಂತರ ಬಂದಂತಹ 2ನೇ ಕರ್ಕನನ್ನು ರಾಷ್ಟ್ರಕೂಟರ ಸಾಮಂತನಾದ ಇಮ್ಮಡಿ ತೈಲಪನು ಕ್ರಿ.ಶ. 973ರಲ್ಲಿ ಸೋಲಿಸಿ ರಾಷ್ಟ್ರಕೂಟರ ಆಳ್ವಿಕೆಯನ್ನು ಅಂತ್ಯಗೊಳಿಸಿದನು.
- ಮುಮ್ಮಡಿ ಕೃಷ್ಣನ ಮೊಮ್ಮಗ 4ನೇ ಇಂದ್ರನು ಕ್ರಿ.ಶ. 982ರಲ್ಲಿ ಸಲ್ಲೇಖನ ವ್ರತ ಕೈಗೊಂಡು ಅಸುನೀಗಿದ ಅಲ್ಲಿಗೆ ಇವರ ವಂಶ ಮುಕ್ತಾಯವಾಯಿತು.

**ರಾಷ್ಟ್ರಕೂಟರ ಕೊಡುಗೆಗಳು**

- ಆದಿಕವಿ ಪಂಪ-ರಾಷ್ಟ್ರಕೂಟರ ಸಾಮಂತ ವೇಮುಲವಾಡದ ಚಾಲುಕ್ಯ ದೊರೆ 2ನೇ ಅರಿಕೇಸರಿಯ ಆಸ್ಥಾನಕವಿ.
- ಪಂಪನ ಕೃತಿಗಳು : ಆದಿಪುರಾಣ, ವಿಕ್ರಮಾರ್ಜುನ ವಿಜಯ / ಪಂಪಭಾರತ.
- ಪಂಪನ ಬಿರುದುಗಳು : ಕವಿತಾ ಗುಣಾರ್ಣವ, ಸರಸ್ವತಿ ಮಣಿಹಾರ.
- ಉದ್ರಂಗ, ಉಪಾರಿಕ, ಭಾಗಾಕಾರ, ಈ ಕಾಲದ ತೆರಿಗೆಗಳು.
- ಸುವರ್ಣ, ದಮ್ಮ, ಕಲಂಜು, ಗದ್ಯಾಣ, ಕಾಸು ಮಂಜತಿ, ಅಕ್ಕರ ಈ ಕಾಲದ ನಾಣ್ಯಗಳು.
- ಇವರ ಕಾಲದ ಒಂದು ಪ್ರಮುಖ ಬೆಳವಣಿಗೆಯೆಂದರೆ ಪತ್ನಿಗೆ ಪತಿಯ ಆಸ್ತಿಯಲ್ಲಿ ಪಾಲು ನೀಡುವ ವ್ಯವಸ್ಥೆಯಿತ್ತು.
- ರಾಷ್ಟ್ರಕೂಟರು ವೈಧಿಕ ಧರ್ಮದ ಅನುಯಾಯಿಗಳು, ಆದರೂ ಎಲ್ಲಾ ಧರ್ಮಗಳಿಗೂ ಪ್ರೋತ್ಸಾಹ ನೀಡುತ್ತಿದ್ದರು.
- ಇವರ ಎಲ್ಲಾ ಶಾಸನಗಳು ಶಿವ ಮತ್ತು ವಿಷ್ಣು ಸ್ತುತಿಯಿಂದ ಪ್ರಾರಂಭವಾಗುತ್ತದೆ. ಡಾ. ಆಲ್ತೇಕರ್ ಪ್ರಕಾರ - ಕರ್ನಾಟಕದ ಜನಸಂಖ್ಯೆಯಲ್ಲಿ ಶೇ. 30ರಷ್ಟು ಜೈನರಿದ್ದರು.
- ಪ್ರಮುಖ ಶಿಕ್ಷಣ ಕೇಂದ್ರಗಳೆಂದರೆ - ಸಾಲೊಟಗಿ (ಬಿಜಾಪುರ) ಕಳಸ (ಧಾರವಾಡ) ಮತ್ತು ಮಾನ್ಯಖೇಟ (ಗುಲ್ಬರ್ಗ).
- ಈ ಕಾಲದ ಶಾಸನ ಕವಿಗಳು - ರುದ್ರಭಟ್ಟ, ನಾಗಭಟ್ಟ, ರಾಜರಾಜ, ಗಜಕುಶ.

**ಕಲೆ ಮತ್ತು ವಾಸ್ತುಶಿಲ್ಪ**

- ರಾಷ್ಟ್ರಕೂಟ ಪ್ರಮುಖ ಕಲಾ ಕೇಂದ್ರಗಳು ಎಲ್ಲೋರ ಮತ್ತು ಎಲಿಪೆಂಟಾ.
- ಎಲ್ಲೋರವು ವಿಶ್ವ ಪರಂಪರೆ ಪಟ್ಟಿಯಲ್ಲಿನ ಸ್ಥಳವಾಗಿದ್ದು ಇಲ್ಲಿ 34 ಗುಹಾಂತರ ದೇವಾಲಯಗಳಿವೆ.
- ಎಲ್ಲೋರದ ಜಗತ್ಪ್ರಸಿದ್ಧ ದೇವಾಲಯ-ಕೈಲಾಸನಾಥ ದೇವಾಲಯ.

- 1ನೇ ಕೃಷ್ಣನಿಂದ ನಿರ್ಮಿತವಾದ ಕೈಲಾಸನಾಥ ದೇವಾಲಯದ ವಿಸ್ತೀರ್ಣ - 276 x 154 ಅಡಿಗಳು ಉದ್ದಗಲ, 100 ಅಡಿ ಎತ್ತರ ಮತ್ತು 107 ಅಡಿ ಆಳ.
- ವಿ.ಎ. ಸ್ಮಿತ್‌ರವರ ಪ್ರಕಾರ ಈ ದೇವಾಲಯ ಜಗತ್ತಿನ ಮಹಾ ಅಚ್ಚರಿಗಳಲ್ಲಿ ಒಂದು.
- ಬೊಂಬಾಯಿ ಬಳಿಯ ಎಲಿಫೆಂಟಾ ರಾಷ್ಟ್ರಕೂಟರ ಮತ್ತೊಂದು ಕಲಾಕೇಂದ್ರ.
- ಎಲಿಫೆಂಟಾದ ಮೊದಲ ಹೆಸರು ಗೋವಕಪುರಿ / ಗೊರವಪುರಿ
- ಗೊರವಕಪುರಿಗೆ ಎಲಿಪೆಂಟಾ ಎಂದು ಹೆಸರು ನೀಡಿದವರು, ಪೋರ್ಚುಗೀಸರು.
- ಎಲಿಪೆಂಟಾದಲ್ಲಿ ಇವರ ಕಾಲದ 7 ಗುಹಾಲಯಗಳಿವೆ.
- ಎಲಿಪೆಂಟಾದಲ್ಲಿ ಇವರ ಅತ್ಯಂತದೊಡ್ಡ ಗುಹೆ ತ್ರಿಮೂರ್ತಿ ಗುಹೆ.
- (130 ಅಡಿ ಉದ್ದ ಮತ್ತು 129 ಅಡಿ ಅಗಲವಾಗಿದೆ)

## ಕಲ್ಯಾಣಿ ಚಾಲುಕ್ಯರು

- ರಾಜಧಾನಿ-ಕಲ್ಯಾಣ
- ಲಾಂಛನ-ವರಾಹ

## ರಾಜಕೀಯ ಇತಿಹಾಸ

- ಇಮ್ಮಡಿ ತೈಪಲ (ಕ್ರಿ.ಶ. 973-997)
- ಕಲ್ಯಾಣ ಚಾಲುಕ್ಯ ಮನೆತನದ ಸ್ಥಾಪಕ.
- ಇವನ ಬಿರುದುಗಳು - ಆಹವಮಲ್ಲ, ತ್ರೈಲೋಕ್ಯಮಲ್ಲ, ಗೂರ್ಜರ ಭಯಜ್ವರ.
- ಪ್ರಾರಂಭದಲ್ಲಿ ಈತ ರಾಷ್ಟ್ರಕೂಟ ಸಾಮ್ರಾಟ 3ನೇ ಕೃಷ್ಣನ ಸೇನಾನಿಯಾಗಿದ್ದನು.
- ನಂತರದಲ್ಲಿ ತರ್ದವಾಡಿಯ (ಇಂಡಿತಾಲೋಕ್ಕಿನ ತಡ್ಕೇವಾಡಿ) ಸಾಮಂತನಾಗಿ ನೇಮಕಗೊಂಡನು.
- ಮಾಳ್ವರ ಪರಮಾರ ದೊರೆ ಹರ್ಷಸೀಯಕನು ರಾಷ್ಟ್ರಕೂಟರ ಮಳಖೇಡವನ್ನು ಸೂರೆ ಮಾಡಿದ (ಕ್ರಿ.ಶ. 972) ಲಾಭ ಪಡೆದು, ತೈಲಪನು ರಾಷ್ಟ್ರಕೂಟರ 2ನೇ ಕರ್ಕನನ್ನು ಸೋಲಿಸಿ ಮಳಖೇಡದಲ್ಲಿ ಕಲ್ಯಾಣಿ ಸಾಮ್ರಾಜ್ಯ ಸ್ಥಾಪಿಸಿದ.
- ಮಳಖೇಡ ಇವನ ಕಾಲದಲ್ಲಿ ರಾಜಧಾನಿಯಾಗಿತ್ತು.
- ಇವನ ರಾಜ್ಯವನ್ನು ರಟ್ಟಸಾಡಿ ಏಳು ಕಾಲು ಲಕ್ಷ ಎಂದು ಕರೆಯಲಾಗಿತ್ತು.

**ಸತ್ಯಾಶ್ರಯ (ಕ್ರಿ.ಶ. 997-1008)**

- ಇಮ್ಮಡಿ ತೈಲಪನ ಮಗನಾದ ಈತನ ಬಿರುದುಗಳೆಂದರೆ - ಇರಿವಬೆಡಂಗ, ಅಕಲಂಕ ಚರಿತ.
- ಸಾಹಸಭೀಮ ವಿಜಯ / ಗದ್ದಾಯುದ್ಧ, ಅಜಿತಪುರಾಣ, ಚಕ್ರೇಶ್ವರ ಚರಿತಂ, ಪರಶುರಾಮ ಚರಿತಂ, ಕೃತಿಗಳ ಕರ್ತೃ ರತ್ನನ ಆಶ್ರಯದಾತ ಈತ.
- ಇವನ ಕಾಲದಲ್ಲಿ ಚೋಳ ರಾಜರುಗಳಾದ ರಾಜ ರಾಜ ಚೋಳ ಹಾಗೂ ರಾಜೇಂದ್ರನ ಜೊತೆ ತೀವ್ರ ಸೆಣಸಾಟ ಪ್ರಾರಂಭವಾಯಿತು.
- ಚೋಳರ ವಿರುದ್ಧದ ಹೋರಾಟದಲ್ಲಿ ಇವನ ತಮ್ಮ ದಸವರ್ಮ ಅಸುನೀಗಿದ.

**1ನೇ ಸೋಮೇಶ್ವರ (ಕ್ರಿ.ಶ. 1042-1068)**

- ❖ ಕಲ್ಯಾಣ ಚಾಲುಕ್ಯರ ಪ್ರಸಿದ್ಧ ರಾಜರುಗಳಲ್ಲಿ ಇವನೂ ಒಬ್ಬ
- ❖ ಇವನ ಕಾಲದಲ್ಲಿ ಕಲ್ಯಾಣ, ಚಾಲುಕ್ಯರ ರಾಜಧಾನಿಯಾಯಿತು.
- ❖ ಕ್ರಿ.ಶ. 1054ರ ಕೊಪ್ಪಳ ಕದನದಲ್ಲಿ ಚೋಳರನ್ನು ಸೋಲಿಸಿದ, ಈ ಕದನದಲ್ಲಿ ಚೋಳ ರಾಜಕುಮಾರ ರಾಜಾಧಿರಾಜ ಮಡಿದನು.
- ❖ ಕೊಪ್ಪಳ ಯುದ್ಧದ ಜಯದ ಸಂಕೇತವಾಗಿ ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ಅಣ್ಣಿಗೇರಿಯಲ್ಲಿ ದೇವಾಲಯವನ್ನು ನಿರ್ಮಿಸಿದ.
- ❖ ಕ್ರಿ.ಶ. 1064ರ ಕೂಡಲಸಂಗಮದ ಕದನದಲ್ಲಿ ಚೋಳರಿಂದ ಸೋಲನ್ನು ಅನುಭವಿಸಿದ.
- ❖ ಗುಣಪಡಿಸಲಾಗದ ರೋಗದಿಂದ ನರಳುತ್ತಿದ್ದ 1ನೇ ಸೋಮೇಶ್ವರನು ಕ್ರಿ.ಶ. 1068ರಲ್ಲಿ ಕುರುವತ್ತಿಯಲ್ಲಿ ತುಂಗಭದ್ರೆ ನದಿಯಲ್ಲಿ ಮುಳಗಿ ಆತ್ಮಹತ್ಯೆ ಮಾಡಿಕೊಂಡ.

**6ನೇ ವಿಕ್ರಮಾದಿತ್ಯ (ಕ್ರಿ.ಶ. 1076-1126)**

- ❖ ಕಲ್ಯಾಣ ಚಾಲುಕ್ಯರಲ್ಲೇ ಅತ್ಯಂತ ಶ್ರೇಷ್ಠ ದೊರೆ.
- ❖ 1ನೇ ಸೋಮೇಶ್ವರನ ಎರಡನೇ ಪುತ್ರನಾದ ಇವನಿಗೆ ತ್ರಿಭುವನಮಲ್ಲ. ಪೆರ್ಮಾಡಿ ದೇವ ಎಂಬ ಜನಪ್ರಿಯ ಬಿರುದುಗಳಿದ್ದವು.
- ❖ ಕ್ರಿ.ಶ. 1076ರಲ್ಲಿ ವಿಕ್ರಮಶಖ ಅಥವಾ ಚಾಲುಕ್ಯಶಕವನ್ನು ಪ್ರಾರಂಭಿಸಿದ.
- ❖ ಕ್ರಿ.ಶ. 1077ರಲ್ಲಿ ಧಾರಾ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಪರಮಾರ ದೊರೆ ಉದಯಾದಿತ್ಯವನ್ನು ಸೋಲಿಸಿ ಅಲ್ಲಿ ಒಂದು ವಿಜಯಸ್ತಂಭವನ್ನು ಸ್ಥಾಪಿಸಿದ.
- ❖ ಇವನ ಆಳ್ವಿಕೆಯ ಕಾಲದಲ್ಲಿ ಹೊಯ್ಸಳ ರಾಜ್ಯದ ಸಾಮಂತ ಅರಸ - ವಿಷ್ಣುವರ್ಧನ
- ❖ ಇವನ ವಿರುದ್ಧ ಹೊಯ್ಸಳ ದೊರೆ ವಿಷ್ಣುವರ್ಧನನು ಬಂಡೆದ್ದು ನೊಳಂಬವಾಡಿಯನ್ನು ಗೆದ್ದು ತುಂಗಭದ್ರೆಯನ್ನು ದಾಟಿ ಚಾಲುಕ್ಯರನ್ನು ಎದುರಿಸಿದ.
- ❖ ಕ್ರಿ.ಶ. 1118ರಲ್ಲಿ ಹೊಯ್ಸಳರ ಸೇನೆಗೂ ಮತ್ತು ಚಾಲುಕ್ಯರ ನಡುವೆ ಕನ್ನೆಗಾಲ ಕದನ ನಡೆಯಿತು. ವಿಷ್ಣುವರ್ಧನನ ಸೇನಾನಿ ಗಂಗರಾಜ ಈ ಕದನದಲ್ಲಿ ವಿಕ್ರಮನ ಸೇನೆಯನ್ನು ಸೋಲಿಸಿದ ಆದರೆ ಕ್ರಿ.ಶ. 1122ರಲ್ಲಿ ಹಲಸೂರು. ಹೊಸಬೀಡುಗಳಲ್ಲಿ ಹೊಯ್ಸಳರು ಸೋತರು ಪರಿಣಾಮ ವಿಷ್ಣುವರ್ಧನ ಇವನ ಸಾಮಂತನಾಗಿ, ವಿದೇಯನಾಗಿ ಇರಬೇಕಾಯಿತು.
- ❖ ಶ್ರೀಲಂಕಾಕ್ಕೆ ರಾಯಭಾರಿ ನಿಯೋಗವನ್ನು ಕಳುಹಿಸಿದ್ದನು.
- ❖ ಇವನ ನೆರವಿನಿಂದ ಬಿಹಾರದಲ್ಲಿ ನಾನ್ಯದೇವನೆಂಬ ಕನ್ನಡಿಗನು ಸೀಮಾ ರಾಮಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ಸಾಮ್ರಾಜ್ಯ ನಿರ್ಮಿಸಿದ.
- ❖ ಇವನ ನಂತರ ಅಧಿಕಾರಕ್ಕೆ ಬಂದ ಇವನ ಮಗ 2ನೇ ಜಗದೇಕ ಮಲ್ಲನು ಸಮರ್ಥನಾಗಿರಲಿಲ್ಲ. ಪರಿಣಾಮ ರಾಜ್ಯವು ಕುಸಿಯಿತು. ಮತ್ತು ಇವನ ಕಾಲದಲ್ಲಿ ಹೊಯ್ಸಳರು ಸಂಪೂರ್ಣ ಪ್ರಾಬಲ್ಯಕ್ಕೆ ಬಂದರು. ವೆಂಗಿ ಪ್ರದೇಶವು ಕೈಬಿಟ್ಟು ಹೋಯಿತು.
- ❖ ಜಗದೇಕ ಮಲ್ಲನ ಮರಣದ ನಂತರ ಅಸಮರ್ಥ ದೊರೆ ಮೂರನೇ ತೈಲಪ ಅಧಿಕಾರಕ್ಕೆ ಬಂದನು.
- ❖ 3ನೇ ತೈಲಪನ ಕಾಲದಲ್ಲಿ ಇವನ ಸಾಮ್ರಾಜ್ಯವನ್ನು ಉತ್ತರದಲ್ಲಿ ಸೇವುಣರು, ದಕ್ಷಿಣದಲ್ಲಿ ಹೊಯ್ಸಳರು ಕಬಳಿಸಿದರು.
- ❖ ಕ್ರಿ.ಶ. 1157ರಲ್ಲಿ 3ನೇ ತೈಲಪನ ಸಾಮಂತ ಮತ್ತು ದಂಡ ನಾಯಕನಾದ ಕಲಚೂರಿ ಬಿಜ್ಜಳನು ಕಲ್ಯಾಣವನ್ನು

ಆಕ್ರಮಿಸಿದ. ಪರಿಣಾಮವಾಗಿ ಕ್ರಿ.ಶ. 1157 ರಿಂದ 1183ರವರೆಗೆ ಸುಮಾರು 26ವರ್ಷಗಳ ಕಾಲ ಕಲಚೂರಿ ಮನೆತನದವರು ಕಲ್ಯಾಣದಲ್ಲಿ ಆಳ್ವಿಕೆ ನಡೆಸಿದರು.

- ❖ ಕ್ರಿ.ಶ. 1183ರಲ್ಲಿ 3ನೇ ತೈಲಪನ ಮಗನಾದ 4ನೇ ಸೋಮೇಶ್ವರನು ಕಲ್ಯಾಣವನ್ನು ಪುನಃ ಆಕ್ರಮಿಸಿ ಅಧಿಕಾರಕ್ಕೆ ಬಂದನು. ಆದರೆ ಕ್ರಿ.ಶ. 1186ರಲ್ಲಿ ಸೇವುಣರು ಕಲ್ಯಾಣವನ್ನು ಆಕ್ರಮಿಸಿ ಕಲ್ಯಾಣ ರಾಜಮನೆತನವನ್ನು ಅಂತ್ಯಗೊಳಿಸಿದರು.

## ಕೊಡುಗೆಗಳು

**ಮುಖ್ಯಾಂಶಗಳು :**

- ❖ ಆಡಳಿತದಲ್ಲಿ ಬಾದಾಮಿ ಚಾಲುಕ್ಯರನ್ನೇ ಅನುಕರಿಸಿದರು.
- ❖ ಚಾಲುಕ್ಯರ ಆಡಳಿತ ಕೇಂದ್ರೀಕೃತವಾಗಿರದೆ ಸಾಮಂತರಿಂದ ಆಳಲ್ಪಡುತ್ತಿತ್ತು.
- ❖ ಸಾಹಿತ್ಯ ಪೋಷಕನಾಗಿದ್ದ 6ನೇ ವಿಕ್ರಮಾದಿತ್ಯ ಆಸ್ಥಾನದ ವಿದ್ವಾಂಸರುಗಳೆಂದರೆ : ವಿಕ್ರಮಾಂಕ ದೇವಚರಿತ ಕೃತಿ ಬರೆದ, ಕಾಶ್ಮೀರಿ ಕವಿ ಬಿಲ್ಹಣ, ಮಿತಾಕ್ಷರ ಬರೆದ ವಿಜ್ಞಾನೇಶ್ವರ, ಧರ್ಮಾಮೃತ ಬರೆದ ನಯಸೇನ, ಕನ್ನಡದಲ್ಲಿ ಗೋವೈದ್ಯ (ಮೊದಲ ಪಶುವೈದ್ಯ ಕೃತಿ) ಕೃತಿ ರಚಿಸಿದವನು ಇವನ ಸೋದರ ಕೀರ್ತಿವರ್ಮ
- ❖ 6ನೇ ವಿಕ್ರಮಾದಿತ್ಯನ ದಂಡಾಧೀಶ ಮಹಾದೇವನು ಇಟಗಿಯಲ್ಲಿ ಪ್ರಸಿದ್ಧವಾದ ಮಹದೇವ ದೇವಾಲಯ ನಿರ್ಮಿಸಿದನು. ಇದನ್ನು 'ದೇವಾಲಯಗಳ ಚಕ್ರವರ್ತಿ' ಎಂದು ಕರೆಯಲಾಗಿದೆ.
- ❖ ಒಟ್ಟಾರೆ ಕರ್ನಾಟಕದ ಹಿರಿಮೆಯನ್ನು ದೇಶಾದ್ಯಂತ ಪ್ರಸರಿಸಿದ ಖ್ಯಾತಿ 6ನೇ ವಿಕ್ರಮಾದಿತ್ಯನದು.
- ❖ ವಿಕ್ರಮಾದಿತ್ಯನ ಪ್ರಧಾನ ರಾಣಿ ಚಾಂದಲದೇವಿ ನೃತ್ಯ ಸಂಗೀತ ಕಲೆಗಳಲ್ಲಿ ಪರಿಣತಳಾಗಿ ಅಭಿನವ ಸರಸ್ವತಿ ಎಂದು ಹೆಸರಾಗಿದ್ದಳು.
- ❖ 6ನೇ ವಿಕ್ರಮಾದಿತ್ಯನ ಮಗನಾದ 3ನೇ ಸೋಮೇಶ್ವರನು ಶಾಂತಿಪ್ರಿಯ ಅರಸ.
- ❖ ತ್ರಿಭುವನಮಲ್ಲ, ಭೂಲೋಕಮಲ್ಲ, ಸರ್ವಜ್ಞ ಚಕ್ರವರ್ತಿ ಮೊದಲಾದವು 3ನೇ ಸೋಮೇಶ್ವರನ ಬಿರುದುಗಳು.
- ❖ 3ನೇ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಹೊಯ್ಸಳ ವಿಷ್ಣುವರ್ಧನನು ಸ್ವತಂತ್ರ ಘೋಷಿಸಿಕೊಂಡ.
- ❖ 3ನೇ ಸೋಮೇಶ್ವರನ ಶ್ರೇಷ್ಠ ಸಂಸ್ಕೃತ ಕೃತಿ ಮಾನಸೋಲ್ಲಾಸ ಅಥವಾ ಅಭಿಲಾಷಿತಾರ್ಥ ಚಿಂತಾಮಣಿ (ಇದೊಂದು ಬೃಹತ್ ವಿಶ್ವಕೋಶ) ಇವನ ಇನ್ನೊಂದು ಕೃತಿ ವಿಕ್ರಮಾಂಕಾಭ್ಯುದಯ.
- ❖ ಕಲ್ಯಾಣಿ ಚಾಲುಕ್ಯರ ಸಾಮ್ರಾಜ್ಯವನ್ನು ಗಂಗವಾಡಿ 96ಸಾವಿರ, ಬನವಾಸಿ 12 ಸಾವಿರ, ನೊಳಂಬಾಡಿ 32ಸಾವಿರ ಇತ್ಯಾದಿಗಳಾಗಿ ವಿಭಜಿಸಲಾಗಿತ್ತು. (ಈ ಸಂಖ್ಯೆಗಳು ಗ್ರಾಮಗಳ ಸಂಖ್ಯೆಗಳನ್ನು ಸೂಚಿಸುತ್ತಿದ್ದವು).
- ❖ ಗದ್ಯಾಣ ದಮ್ಮ, ಕಲಂಜು,ಅಕ್ಕಿಂ ಕಾಸು ಇವರ ಕಾಲದ ಪ್ರಮುಖ ನಾಣ್ಯಗಲು.
- ❖ ಇವರ ಕಾಲದ ಪ್ರಮುಖ ಟಂಕ ಶಾಲೆಗಳೆಂದರೆ - ಲಕ್ಕುಂಡಿ (ಗದಗ) ಸುಂಡಿ (ಸೂರಿ), ಶಿವಮಲೆ (ಬಳ್ಳಾರಿಯ ಸಂಡೂರು)
- ❖ ಶೈವ ಮತ್ತು ವೈಷ್ಣವ ಜನಪ್ರಿಯ ಧರ್ಮಗಳು
- ❖ **ಈ ಕಾಲದಲ್ಲಿ ರಚನೆಯಾದ ಪ್ರಮುಖ ಸಾಹಿತ್ಯ ಕೃತಿಗಳೆಂದರೆ :**
  - ❖ ಅಜಿತನಾಥ ಪುರಾಣ, ಗದಾಯುದ್ಧ - ರನ್ನ
  - ❖ ಚಂದ್ರಪ್ರಭಾಚರಿತ ಮತ್ತು ಜಾತಕತಿಲಕ - ಶ್ರೀಧರಚಾರ್ಯ
  - ❖ ಪಂಚತಂತ್ರ - ದುರ್ಗಸಿಂಹ
  - ❖ ಸುಕುಮಾರಚರಿತ - ಶಾಂತರಾಜ

| | | |
|---|---|---|
| ❖ ಧರ್ಮಾಮೃತ | - | ನಯಸೇನ |
| ❖ ಕಾವ್ಯವಲೋಕ, ಭಾಷಭೂಷಣ, ಅಭಿಧಾನವಸ್ತು ಕೋಶ | - | 2ನೇ ನಾಗವರ್ಮ |
| ❖ ಮಿತಾಕ್ಷರಸಂಹಿತ | - | ವಿಜ್ಞಾನೇಶ್ವರ |
| ❖ ಮದನತಿಲಕ | - | ಚಂಡರಾಜ/ಚಂದ್ರರಾಜ |
| ❖ ಕರ್ನಾಟಕ ಕಾದಂಬರಿ, ಛಂದೋಬುದಿ | - | 1ನೇ ನಾಗವರ್ಮ |
| ❖ ಕರ್ನಾಟಕ ಕಲ್ಯಾಣಕಾರಕ | - | ಸೋಮನಾಥ ಜಗದ್ದಳ |
| ❖ ಗೋವೈದ್ಯ | - | ಕೀರ್ತಿವರ್ಮ |
| ❖ ಸಂಗೀತ ಮಯಸಾರ | - | ಸಾರ್ಶ್ವದೇವ |
| ❖ ವಿಕ್ರಮಾಂಕ ದೇವಚರಿತ | - | ಬಿಲ್ಹಣ (ಕಾಶ್ಮಿರ ಕವಿ) |

❖ ಈ ಕಾಲದ ಪ್ರಮುಖ ಬೆಳವಣಿಗೆಯೆಂದರೆ ವಚನ ಸಾಹಿತ್ಯ ಬೆಳೆದುದು. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಮೊದಲಾದವರು ಉದಯಿಸಿದರು.

**ಕಲೆ ಮತ್ತು ವಾಸ್ತುಶಿಲ್ಪ**

❖ ತಮ್ಮ ಪೂರ್ವಜರಾದ ಬಾದಾಮಿ ಚಾಲುಕ್ಯರ ಶೈಲಿಯನ್ನು ಅನುಕರಿಸಿದರು.

❖ ತಮ್ಮ ವಾಸ್ತುಶಿಲ್ಪ ಕಟ್ಟಡಗಳಿಗೆ ಮೃದುವಾದ ನೀಲಿ ಮಿಶ್ರಿತ ಕಪ್ಪು ಬಳಪದ ಕಲ್ಲನ್ನು ಉಪಯೋಗಿಸುತ್ತಿದ್ದರು.

**ಪ್ರಮುಖ ದೇವಾಲಯುಗಳು :**

| | | |
|---|---|---|
| ❖ ಇಟಗಿ | - | ಮಹದೇವ ದೇವಾಲಯ |
| ❖ ಲಕ್ಷೇಶ್ವರ | - | ಶಂಖಬಸದಿ, ತ್ರಿಕೂಟೇಶ್ವರ ದೇವಾಲಯ |
| ❖ ಲಕ್ಕುಂಡಿ | - | ವಿಶ್ವೇಶ್ವರ ದೇವಾಲಯ, ಬ್ರಹ್ಮ ದೇವಾಲಯ |
| ❖ ಗದಗ | - | ಸರಸ್ವತಿ,ಸೋಮೇಶ್ವರ, ತ್ರಿಕೋಟೇಶ್ವರ ದೇವಾಲಯ |
| ❖ ಉಣಕಲ್ಲು | - | ಚಂದ್ರಮೌಳಶ್ವೇರ ದೇವಾಲಯ |
| ❖ ಬಳ್ಳಿಗಾವೆ | - | ತ್ರಿಪುರಾಂತಕ ದೇವಾಲಯ, |
| ❖ ಕುರುವತ್ತಿ | - | ಮಲ್ಲಿಕಾರ್ಜುನ ದೇವಾಲಯ |
| ❖ ಸಾವಡಿ | - | ಕಲ್ಲೇಶ್ವರ ದೇವಾಲಯ |
| ❖ ಕುಕ್ಕನೂರು | - | ಕಲ್ಲೇಶ್ವರ, ನವಲಿಂಗೇಶ್ವರ ದೇವಾಲಯ |

## ಕಲ್ಯಾಣದ ಕಲಚೂರಿಗಳು

❖ ಕಲ್ಯಾಣಿ ಚಾಲುಕ್ಯರ ಸಾಮಂತರಾದ ಇವರು ಕ್ರಿ.ಶ. 1157ರಲ್ಲಿ ಅವರನ್ನು ಮೂಲೆಗುಂಪು ಮಾಡಿ ಅಧಿಕಾರಕ್ಕೆ ಬಂದು 26 ವರ್ಷಗಳ ಕಾಲ ಆಳಿದರು.

❖ ಇವರ ರಾಜ ಲಾಂಛನ - ನಂದಿ

- ಮೂಲತಃ ಮಧ್ಯಭಾರತದ ಕಾಲಿಂಜರ್‌ಗೆ ಸೇರಿದ ಇವರು ತಮ್ಮನ್ನು ಹೈಹಯರೆಂದು, ಚೇದಿ ಅರಸರೆಂದು ಕರೆದು ಕೊಂಡಿದ್ದಾರೆ.
- ಕಲಿಂಜರ ಪುರವರಾಧೀಶ್ವರ ಎಂಬ ಬಿರುದನ್ನು ಧರಿಸಿದ್ದರು.
- ಇವರ ಇತಿಹಾಸ ಉಚಿತ ಎಂಬ ರಾಜನಿಂದ ಆರಂಭವಾಗುತ್ತದೆ.
- ಕಲಚೂರಿ ರಾಜನಾದ ಜೋಗಮನ ಮಗಳನ್ನು ಕಲ್ಯಾಣಿ ಚಾಲುಕ್ಯರ ಅರಸ 6ನೇ ವಿಕ್ರಮಾದಿತ್ಯ ವರಿಸಿದ್ದ.
- ಜೋಗಮನ ಪುತ್ರನಾದ ಪೆರ್ಮಾಡಿಯು 6ನೇ ವಿಕ್ರಮಾದಿತ್ಯನ ಮಗಳಾದ ನಾಗಲಾದೇವಿಯನ್ನು ವಿವಾಹವಾಗಿದ್ದ.

**2ನೇ ಬಿಜ್ಜಳ**

- ಪೆರ್ಮಾಡಿ ಮತ್ತು ನಾಗದೇವಿಯ ಮಗ ಅಥವಾ 6ನೇ ವಿಕ್ರಮಾದಿತ್ಯ ಮೊಮ್ಮಗನಾದ 2ನೇ ಬಿಜ್ಜಳನು ಕಲಚೂರಿ ವಂಶದ ಅತ್ಯಂತ ಪ್ರಸಿದ್ಧರಾಜ, ಇವನು ಕಲ್ಯಾಣಿ ಚಾಲುಕ್ಯರನ್ನು ಮೂಲೆಗುಂಪು ಮಾಡಿ ಸ್ವತಂತ್ರ ಕಲಚೂರಿ ರಾಜ್ಯ ಸ್ಥಾಪಿಸಿದ.
- ತ್ರಿಭುವನಮಲ್ಲ, ನಿಶಾಂಕಮಲ್ಲ, ಶನಿವಾರ ಸಿದ್ದಿ ಕಾಲಚಾರ್ಯ ಚಕ್ರವರ್ತಿ ಇವನ ಬಿರುದುಗಳು.
- 2ನೇ ಬಿಜ್ಜಳನ ಮಂತ್ರಿ ಮತ್ತು ಭಂಡಾರದ ಅಧಿಕಾರಿಯೇ ವೀರಶೈವ ಧರ್ಮ ಪ್ರವರ್ತಕ ಬಸವಣ್ಣನವರು.
- ಇವನು ಮಂಗಳಾವಾಡದಿಂದ ಕಲ್ಯಾಣಕ್ಕೆ ರಾಜಧಾನಿ ಬದಲಾವಣೆ ಮಾಡಿದ.
- ಇವನ ಕಾಲದಲ್ಲಿ - ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿ ಉದಯಿಸಿತು.
- ಭಕ್ತಿ ಭಂಡಾರಿ ಬಸವಣ್ಣನವರು ಕಲ್ಯಾಣದಲ್ಲಿ ನಡೆದ ಕೆಲ ಘಟನೆಗಳಿಂದ (ಬಸವಣ್ಣನವರ ಅನುಯಾಯಿಗಳ ವಿರುದ್ಧ ಬಿಜ್ಜಳ ಕೈಗೊಂಡ ಕಠಿಮ ಕ್ರಮಗಳಿಂದ) ಮನನೊಂದು ಕಲ್ಯಾಣ ತ್ಯಜಿಸಿದ ಪರಿಣಾಮ ಕಲ್ಯಾಣ ಕ್ರಾಂತಿಗೆಮತ್ತು ಬಿಜ್ಜನ ಅಂತ್ಯಕ್ಕೆ ಇದು ಕಾರಣವಾಯಿತು. ಕ್ರಿ.ಶ. 1168ರಲ್ಲಿ ಬಿಜ್ಜಳ ಕೊಲ್ಲಲ್ಪಟ್ಟನು.
- ಕ್ರಿ.ಶ. 1184ರಲ್ಲಿ ಕಲ್ಯಾಣಿ ಚಾಲುಕ್ಯ ದೊರೆ 4ನೇ ಸೋಮೇಶ್ವರನ ಕಲಚೂರಿ ದೊರೆ ಸಿಂಘಣವನ್ನು ಸೋಲಿಸಿ ಪುನಃ ಕಲ್ಯಾಣವನ್ನು ಆಕ್ರಮಿಸಿದ ಪರಿಣಾಮ ಕಲಚೂರಿಗಳ 26 ವರ್ಷಗಳ ಆಳ್ವಿಕೆ ಅಂತ್ಯಕಂಡಿತು.

## ಹೊಯ್ಸಳರು

- ಕರ್ನಾಟಕವನ್ನಾಳಿದ ಅತ್ಯಂತಪ್ರಸಿದ್ಧ ರಾಜಮನೆತನವಿದು.
- ರಾಜಧಾನಿ - ದ್ವಾರಸಮುದ್ರ
- ಲಾಂಛನ - ಹುಲಿಯನ್ನು ಕೊಲ್ಲುತ್ತಿರುವ ವೀರ

## ರಾಜಕೀಯ ಇತಿಹಾಸ

- ಮೂಲಪುರುಷ - ಸಳ.
- ಮೂಲ ಸ್ಥಳ - ಶಶಾಕಪುರ ಅಥವಾ ಸೊಸೆವೂರು
- ಶಾಸನಗಳು ಇವರನ್ನು ಯದುವಂಶೀಯರೆಂದು, ದ್ವಾರಕೆಯಿಂದ ಬಂದವರೆಂದು ತಿಳಿಸುತ್ತವೆ.

❖ ಶಶಾಕಪುರದ ಸಳನು ಅಲ್ಲಿನ ವಾಸಂತಿಕದೇವಿಯ ದೇವಾಲಯದಲ್ಲಿ ಸುದಾತ್ತಚಾರ್ಯ ಎಂಬ ಜೈನ ಗುರುಗಳ ಹತ್ತಿರ ವ್ಯಾಸಂಗ ಮಾಡುವ ವೇಳೆ ಹುಲಿಯೊಂದು ಮೇಲೆರಗಿದಾಗ ಪೋಯ್‌ಸಳ ಎಂಬ ಗುರುವಿನ ಆಜ್ಞೆಯಂತೆ ಹುಲಿಯನ್ನು ಕೊಂದು ಶೌರ್ಯ ಮೆರೆದು, ಮುಂದೆ ಗುರುಗಳ ಅನುಗ್ರಹದಂತೆ ರಾಜ್ಯ ಕಟ್ಟಿದನು. ಗುರುವಿನ ಆಜ್ಞೆಯಾದ ಪೋಯ್‌ಸಳ ಹೊಯ್ಸಳ ಎಂದಾಯಿತು. ಹುಲಿಯನ್ನು ಕೊಲ್ಲುತ್ತಿರುವ ಸಳನ ಚಿತ್ರ ಲಾಂಛನವಾಯಿತು.

### ನೃಪಕಾಮ (ಕ್ರಿ.ಶ. 1006-1047)

❖ ಇತ್ತೀಚಿನ ದಾಖಲೆಗಳ ಪ್ರಕಾರ - ನೃಪಕಾಮನು ಹೊಯ್ಸಳವಂಶದ ಮೊದಲ ದೊರೆ (ಇವನೇ ಸಳ ಎಂಬ ವಾದವೂ ಇದೆ)

❖ ಪೆರ್ಮಾಡಿ, ರಾಜಮಲ್ಲ ಪೆರ್ಮಾಡಿ, ಮಲೆಪರೋಳ್‌ಗಂಡ, ಮಹಾಮಂಡಲೇಶ್ವರ ಇವನ ಬಿರುದುಗಳು.

### ವಿನಯಾದಿತ್ಯ (ಕ್ರಿ.ಶ. 1046/47-198)

❖ ನೃಪಕಾಮನ ಮಗನಾದ ಈತ ಕಲ್ಯಾಣ ಚಾಲುಕ್ಯರ ಜೊತೆ ವೈವಾಹಿಕ ಸಂಬಂಧ ಬೆಳೆಸಿದ್ದ, ತನ್ನ ಮಗಳು / ತಂಗಿ ಹೊಯ್ಸಳ ದೇವಿಯನ್ನು ಚಾಲುಕ್ಯರ 1ನೇ ಸೋಮೇಶ್ವರನು ವಿವಾಹವಾಗಿದ್ದನು.

❖ ಇವನ ಕಾಲದಲ್ಲಿ ಹೊಯ್ಸಳರು ಕಲ್ಯಾಣಿ ಚಾಲುಕ್ಯರ ಪ್ರಮುಖ ಸಾಮಂತರಾಗಿ ಏಳಿಗೆಗೆ ಬಂದರು.

❖ ಸೊಸೆವೂರಿನಿಂದ ಹಳೇಬೀಡಿಗೆ ರಾಜಧಾನಿ ವರ್ಗಾವಣೆ ಮಾಡಿ, ಅದಕ್ಕೆ ದ್ವಾರಾವತೀಪುರ ಎಂದು ಹೆಸರಿಸಿದ.

❖ ಅಂಗಡಿಯ ಜೈನಬಸದಿ, ತೊಣಚಿಯ ಬಸವೇಶ್ವರ ದೇವಾಲಯ, ಬಳ್ಳಿಗಾವೆಯ ಕೇದಾರೇಶ್ವರ ಮತ್ತು ತ್ರಿಪುರಾಂತಕ ದೇವಾಲಯಗಳನ್ನು ನಿರ್ಮಿಸಿದ.

### ಎರೆಯಂಗ (ಕ್ರಿ.ಶ. 1098-1102)

❖ ಸೊಸೆವೂರಿನಿಂದ ಬೇಲೂರು ಅಥವಾ ವೇಲಾಪುರಕ್ಕೆ ರಾಜಧಾನಿ ವರ್ಗಾಯಿಸಿದ ಎಂದು ಹೇಳಲಾಗುತ್ತದೆ.

❖ ಎರೆಯಂಗನಿಗೆ 1ನೇ ಬಲ್ಲಾಳ, ಬಿಟ್ಟಿಗ (ವಿಷ್ಣುವರ್ಧನ) ಮತ್ತು ಉದಯಾದಿತ್ಯ ಎಂಬ ಮೂವರುಮಕ್ಕಳು

### ವಿಷ್ಣುವರ್ಧನ (ಕ್ರಿ.ಶ. 1108-1152)

❖ ಎದೆಯಂಗನ ಎರಡನೇ ಮಗನಾದ ಇವನು ಹೊಯ್ಸಳರಲ್ಲೇ ಸರ್ವಶ್ರೇಷ್ಠ ಅರಸ.

❖ ವಿಷ್ಣವರ್ಧನ ಮೊದಲ ಹೆಸರು - ಬಿಟ್ಟಿದೇವ

❖ ರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಶ್ರೀ ವೈಷ್ಣವ ಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನನಾದ.

❖ ಚೋಳದೊರೆಗಳಾದ ರಾಜೇಂದ್ರ ಮತ್ತು 1ನೇ ಕುಲೋತ್ತುಂಗನ ಕಾಲದಲ್ಲಿ ತಲಕಾಡು ಒಳಗೊಂಡಂತೆ ಗಂಗಾವಾಡಿಯೆಲ್ಲವೂ ಚೋಳರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. 1116ರಲ್ಲಿ ವಿಷ್ಣುವರ್ಧನನು ತನ್ನ ಪ್ರಸಿದ್ಧ ದಂಡನಾಯಕ ಗಂಗರಾಜನೊಂದಿಗೆ ತಲಕಾಡಿಗೆ ಮುತ್ತಿಗೆ ಹಾಕಿ ಚೋಳರನ್ನು ಸೋಲಿಸಿ ತಲಕಾಡನ್ನು ಗೆದ್ದನು. ಪರಿಣಾಮ ಈತ ವೀರಗಂಗ ಮತ್ತು ತಲಕಾಡು ಗೊಂಡ ಎಂಬ ಬಿರುದು ಧರಿಸಿದ ಹಾಗೂ ಈ ವಿಜಯದ ಸ್ಮಾರಣಾರ್ಥವಾಗಿ, ತಲಕಾಡಿನಲ್ಲಿಕೀರ್ತಿ ನಾರಾಯಣ ದೇವಾಲಯ ಮತ್ತು ಬೇಲೂರಿನಲ್ಲಿ ವಿಜಯ ನಾರಾಯಣ ಅಥವಾ ಚನ್ನಕೇಶವ ದೇವಾಲಯಗಳನ್ನು ನಿರ್ಮಿಸಿದನು.

- ದಾವಣಗೆರೆಯಲ್ಲಿನ ಉಚ್ಚಂಗಿ ಪಾಂಡ್ಯದಿಂದ ನೊಳಂಭವಾಡಿಯನ್ನು ಗೆದ್ದು (1117) ನೊಳಂಬವಾಡಿಗೊಂಡ ಎಂಬ ಬಿರುದು ಧರಿಸಿದ.
- ದಕ್ಷಿಣದ ಕಂಚಿ, ರಾಮೇಶ್ವರದವರೆಗೂ ದಾಳಿಮಾಡಿ ಕಂಚಿಗೊಂಡ ಬಿರುದು ಧರಿಸಿದ.
- ಕ್ರಿ.ಶ. 1118ರ ಕಣ್ಣೆಗಾಲ (ಹಾಸನದ ಬಳಿಯಲ್ಲಿದೆ) ಕದನದಲ್ಲಿ 6ನೇ ವಿಕ್ರಮಾದಿತ್ಯನ ಸೈನ್ಯವನ್ನುಸೋಲಿಸಿದ.
- ಕ್ರಿ.ಶ. 1122ರ ಹೊಸಬೀಡು ಮತ್ತು ಹಲಸೂರು ಕದನಗಳಲ್ಲಿ ಚಾಲುಕ್ಯ ಸೇನಾಧಿಕಾರಿ ಅಚುಗಿಯಿಂದ ಸೋತನು.
- ಅದ್ವೈತಸಿದ್ಧಾಂತದಪ್ರವರ್ತಕ ರಾಮಾನುಜಾಚಾರ್ಯರು. ತಮಿಳುನಾಡನ್ನು (ಕುಲ್ಲೋತ್ತುಂಗಚೋಳನ ಕಿರುಕುಳದಿಂದ) ತೊರೆದು ಹೊಯ್ಸಳ ರಾಜ್ಯಕ್ಕೆ ಬಂದರು. ವಿಷ್ಣುವರ್ಧನ ಮತ್ತು ರಾಮಾನುಜರ ಭೇಟಿಯು ಕ್ರಿ.ಶ. 1116ರಲ್ಲಿ ತೊಣ್ಣೂರು ಬಳಿ ನಡೆಯಿತು.
- ವಿಷ್ಣುವರ್ಧನ ಪಟ್ಟದರಸಿ ನಾಟ್ಯರಾಣಿ ಶಾಂತಲಾದೇವಿ, ಮತ್ತು ಅವನ ನೆಚ್ಚಿನ ದಂಡನಾಯಕ ಗಂಗರಾಜ ಜೈನರಾಗಿದ್ದರು.
- ವಿಷ್ಣುವರ್ಧನನು ಶೈವ, ವೈಷ್ಣವ, ಜೈನ ಧರ್ಮಗಳಿಗೆ ಸಮಾನ ಪ್ರೋತ್ಸಾಹ ನೀಡಿದ್ದ.
- ವಿಷ್ಣುವರ್ಧನ ಆಶ್ರಯದಲ್ಲಿದ್ದ ಪ್ರಮುಖ ಶಿಲ್ಪಿಗಳು - ಬಳ್ಳಿಗಾವೆಯ ದಾಸೋಜ, ಚಾವಣ, ಗದಗಿನ ನಾಗೋಜ, ಜಕ್ಕಣ, ಚಿಕ್ಕಹಂಸ
- ವಿಷ್ಣುವರ್ಧನ ಆಶ್ರಯದಲ್ಲಿದ್ದ ವಿದ್ವಾಂಸರುಗಳಾದ ರಾಜಾದಿತ್ಯನು ಕ್ಷೇತ್ರ ಗಣಿತ, ಲೀಲಾವತಿ ಮತ್ತು ವ್ಯವಹಾರ ಗಣಿತಗಳನ್ನು ನಯಸೇನನು ಧರ್ಮಾಮೃತವನ್ನು, ರಾಮಾನುಜಾಚಾರ್ಯರು ವೇದಾಂತಸಾರ, ವೇದಾಂತದೀಪಿಕ, ವೇದಾಂತ ಸಂಗ್ರಹ ರಚಿಸಿದ್ದಾರೆ.
- ಇವನ ಬಿರುದುಗಳು - ವೀರನಾರಾಯಣ, ತಲಕಾಡುಗೊಂಡ, ನೊಳಂಬವಾಡಿಗೊಂಡ, ಕಂಚಿಗೊಂಡ, ವೀರರಂಗ ಸಾಹಸಭೀಮ, ಕದನ ಪ್ರಚಂಡ.

## 1ನೇ ನರಸಿಂಹ (ಕ್ರಿ.ಶ. 1152-1173)

- ವಿಷ್ಣುವರ್ಧನನ ಮಗನಾದ ಈತ ಪಟ್ಟಕ್ಕೆ ಬಂದಾಗ ಅಪ್ರಾಪ್ತಬಾಲಕನಾಗಿದ್ದ.
- ಗರುಡ ಎಂಬ ರಾಜಭಟರುಗಳ ನಿಷ್ಠೆ ಸೇವೆ ಮಾಡುವ ಗರುಡ ಪದ್ಧತಿ ಇವನ ಕಾಲದಲ್ಲಿ ಆರಂಭವಾಯಿತು. ರಾಜನೊಂದಿಗೆ ಅಥವಾ ರಾಜನ ಮರಣದ ಸುದ್ಧಿಯಿಂದ ಸ್ವಾಮಿಭಕ್ತಿ, ರಾಜನಿಷ್ಠೆಯಿಂದ ಮರಣವನ್ನುಪ್ಪುತ್ತಿದ್ದವರನ್ನು ಗರುಡರು ಎನ್ನುತ್ತಿದ್ದರು. ಇದು ಇವನಕಾಲದ್ದೊಂದು ವಿಶಿಷ್ಟ ಪದ್ಧತಿ.
- ಇವನನ್ನು ಚತುರ್ವಣಗಳ ರಕ್ಷಕನೆಂದು ಶಾಸನಗಳು ಉಲ್ಲೇಖಿಸಿವೆ.
- ಜನ್ನನ ತಂದೆಯಾದ ಸುಮಾನೋಬಾಣನ ಆಸ್ಥಾನದ ಕವಿ
- ಸ್ವತಃ ವಿದ್ವಾಂಸನಾದ ಈತ ಕನ್ನಡದಲ್ಲಿ ದೀಕ್ಷಾಬೋಧೆ ಕೃತಿಯನ್ನು ಮತ್ತು ಸಂಸ್ಕೃತದಲ್ಲಿ ಸದಾನಂದ ಚರಿತ್ರೆಯನ್ನು ಬರೆದಿದ್ದಾನೆ.
- ಗಿರಿಜಾ ಕಲ್ಯಾಣದ ಕರ್ತೃ ಹರಿಹರ ಇವನ ಕಾಲದವನು.

## ಇಮ್ಮಡಿ ಬಲ್ಲಾಳ (ಕ್ರಿ.ಶ. 1173-1220)

- ಹೊಯ್ಸಳರ ಸಮರ್ಥ ದೊರೆಗಳಲ್ಲಿ ಈತನೂ ಒಬ್ಬ.
- ಉಚ್ಚಂಗಿಯ ಪಾಂಡ್ಯರಾಜ ಕಾಮದೇವನನ್ನು ಸೋಲಿಸಿ ಗಂಡಬೇರುಂಡ, ಗಿರಿದುರ್ಗಮಲ್ಲ, ಶನಿವಾರಸಿದ್ಧಿ, ಬಿರುದುಗಳನ್ನು ಧರಿಸಿದ.

- ಕ್ರಿ.ಶ. 1190ರ ಸೊರಟೂರು ಕದನದಲ್ಲಿ ಸೇವುಣರ ರಾಜನಾದ 5ನೇ ಬಿಲ್ಲಮನನ್ನು ಸೋಲಿಸಿದ.
- ಗದಗಿನ ವೀರನಾರಾಯಣ ಮತ್ತು ತ್ರಿಕೂಟೇಶ್ವರ ದೇವಾಲಯಗಳಿಗೆ ದಾನ ದತ್ತಿ ನೀಡಿದ.
- ಮಹಾರಾಜಧಿರಾಜ, ರಾಜಪರಮೇಶ್ವರ,ಸಮಸ್ತ ಭುವನಾಶ್ರಯ, ಶ್ರೀ ಪೃಥ್ವಿವಲ್ಲಭ, ಪ್ರತಾಪಚಕ್ರವರ್ತಿ, ಪರಮಭಟ್ಟರಕ ಇವನಬಿರುದುಗಳು.
- ಚೋಳರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿ, ಚೋಳರಾಜ್ಯವನ್ನು ಮುತ್ತಿದ ಪಾಂಡ್ಯರನ್ನು ಸೋಲಿಸಿ 3ನೇ ರಾಜರಾಜ ಚೋಳನನ್ನು ಸಿಂಹಾಸನಕ್ಕೆ ತಂದು. "ಚೋಳ ರಾಜ್ಯ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದು ಪಡೆದನು.
- ಯಶೋಧರ ಚರಿತೆ, ಅನಂತನಾಥ ಪುರಾಣದ ಕರ್ತೃ ಕವಿಚಕ್ರವರ್ತಿ ಜನ್ನನು ಇವನ ಆಸ್ಥಾನಕವಿ.
- ರುದ್ರಭಟ್ಟ (ಜಗನ್ನಾಥವಿಜಯದ ಕರ್ತೃ), ಮತ್ತು ನೇಮಿಚಂದ್ರ (ನೇಮಿನಾಥ ಪುರಾಣದ ಕರ್ತೃ) ಇವನ ಕಾಲದ ವಿದ್ವಾಂಸರುಗಳು.
- ಹಳೇಬೀಡಿನ ಕೇದಾರೇಶ್ವರ ದೇವಾಲಯವನ್ನು ಈತ ನಿರ್ಮಿಸಿದ.
- ಕ್ರಿ.ಶ. 1220ರಲ್ಲಿ ಬಲ್ಲಾಳ ಮರಣ ಹೊಂದಿದಾಗ ಅವನ ನಿಷ್ಠ ಸೇವಕನಾದ ಕುವರಲಕ್ಷ್ಮಣ ಗರುಡ ಪದ್ಧತಿಯಂತೆ ಆತ್ಮಾಹುತಿ ಮಾಡಿಕೊಂಡ.

### 2ನೇ ನರಸಿಂಹ (ಕ್ರಿ.ಶ. 1220-1235)

- ಚೋಳ ರಾಜ್ಯವನ್ನು ಪುನಃ ರಕ್ಷಿಸಿ. 'ಚೋಳ ಕುಲ ರಕ್ಷಕ' ಎಂಬ ಖ್ಯಾತಿಗೆ ಒಳಗಾದ.
- ಶ್ರೀರಂಗದ ಹತ್ತಿರ ಕಾವೇರಿನದಿಯ ದಂಡೆಯ ಮೇಲಿನ ಕಣ್ಣಾನೂರಿನಲ್ಲಿ ಹೊಸ ರಾಜಧಾನಿಯನ್ನು ನಿರ್ಮಿಸಿದನು. ಇದು ಅವನ ದಕ್ಷಿಣದ ರಾಜಧಾನಿಯಾಯಿತು.
- ಸ್ವತಃ ವಿದ್ವಾಂಸನಾದ ಇವನಿಗೆ ಸರ್ವಜ್ಞ ಮತ್ತು ಸಾಹಿತ್ಯ ರತ್ನಾಕರ ಎಂಬ ಹೆಸರುಗಳಿದ್ದವು.
- ಹರಿಹರದ ಹರಿಹರೇಶ್ವರ, ಬೇಲೂರಿನ ಮೂಲಸಂಗಮೇಶ್ವರ ಭದ್ರಾವತಿಯ ಲಕ್ಷ್ಮೀನರಸಿಂಹ, ಹೆಗ್ಗರೆಯ ಕಲ್ಲೇಶ್ವರ ದೇವಾಲಯಗಳನ್ನು ನಿರ್ಮಿಸಿದ.

### ಸೋಮೇಶ್ವರ (ಕ್ರಿ.ಶ. 1235-1253)

- ಇವನು ರಾಜಧಾನಿಯನ್ನು ದ್ವಾರಸಮುದ್ರದಿಂದ ಕಣ್ಣಾನೂರಿಗೆ ವರ್ಗಾಯಿಸಿದ.
- ಸಾಮ್ರಾಜ್ಯವನ್ನು ಇಬ್ಭಾಗಿಸಿ ಕರ್ನಾಟಕದ ಭಾಗಗಳನ್ನು ತನ್ನ ಮಗ ಮೂರನೇ ನರಸಿಂಹನಿಗೆ ಮತ್ತು ತಮಿಳುನಾಡು ಪ್ರದೇಶಗಳನ್ನು ತನ್ನ ಕಿರಿಯ ಮಗ ರಾಮನಾಥರಲ್ಲಿ ಹಂಚಿದನು.

### 3ನೇ ಬಲ್ಲಾಳ (ಕ್ರಿ.ಶ. 1291-1343)

- ಭಾರತೀಯ ಇತಿಹಾಸದ ಶ್ರೇಷ್ಠ ಮತ್ತು ಆಕರ್ಷಕ ವ್ಯಕ್ತಿಯಾದ ಈತ ಹೊಯ್ಸಳರ ಕಡೆಯ ಪ್ರಸಿದ್ಧ ದೊರೆ.
- ಮುಸ್ಲೀಮರ ದಾಳಿಯಿಂದ ರಾಜ್ಯವನ್ನು ರಕ್ಷಿಸಿದ ಕೀರ್ತಿ ಈತನದು.
- ಇವನ ಕಾಲದಲ್ಲಿ ದೆಹಲಿಸುಲ್ತಾನ ಅಲ್ಲಾವುದ್ದಿನ್ ಖಿಲ್ಜಿಯ ಪ್ರಸಿದ್ಧ ದಂಡನಾಯಕ ಮಲ್ಲಿಕಾಫರನು ದ್ವಾರಸಮುದ್ರದ ಮೇಲೆ ದಾಳಿಮಾಡಿದ. ಬಲ್ಲಾಳ ರಾಜಧಾನಿಯಲ್ಲಿಲ್ಲದ ಸಮಯದಲ್ಲಿ ಅದು ಮಲ್ಲಿಕಾಫರನ ಸುಲಿಗೆಗೆ ತುತ್ತಾಯಿತು.

- ದ್ವಾರಸಮುದ್ರದಿಂದ ತಿರುವಣ್ಣಾಮಲೈಗೆ ರಾಜಧಾನಿಯನ್ನು ವರ್ಗಾಯಿಸಿದ.
- ಕ್ರಿ.ಶ. 1343ರಲ್ಲಿ ಮಧುರೈ ಸುಲ್ತಾನನ ವಿರುದ್ಧದ ಹೋರಾಟದಲ್ಲಿಅಸುನೀಗಿದ.
- 50 ವರ್ಷಕ್ಕೂ ಹೆಚ್ಚು ಕಾಲ ಆಳಿದ ಸಾವಿನ ನಂತರ ಅವನ ಮಗ ವೀರವಿರೂಪಾಕ್ಷ ಬಲ್ಲಾಳನಿಗೆ ಪಟ್ಟವಾಯಿತು. ಆದರೆ ಆತ ಕ್ರಿ.ಶ. 1346ರಲ್ಲಿ ತೀರಿಕೊಂಡ. ಅಲ್ಲಿಗೆ ಹೊಯ್ಸಳ ವಂಶ ಕೊನೆಯಾಯಿತು.

**ಕಲೆ ಮತ್ತು ವಾಸ್ತು ಶಿಲ್ಪ**

- ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿದ ಇವರು ತಮ್ಮದೇ ಆದ ಹೊಯ್ಸಳ ಕಲಾಶೈಲಿಯನ್ನು ಸೃಷ್ಟಿಸಿದರು.

**ಹೊಯ್ಸಳ ಶೈಲಿಯ ಪ್ರಮುಖ ಲಕ್ಷಣಗಳು :**

- ದೇವಾಲಯಗಳು ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟಗಳಲ್ಲಿ ರಚನೆ (ಗರ್ಭಗುಡಿಗಳ ಸಂಖ್ಯೆ ಆಧರಿಸಿ)
- ನಕ್ಷತ್ರಾಕಾರದ ತಳವಿನ್ಯಾಸ.
- ಎಲ್ಲಾ ದೇವಾಲಯಗಳು 4-5 ಅಡಿ ಎತ್ತರದ ಜಗತಿಯ ಮೇಲೆ ನಿರ್ಮಾಣ.
- ಪ್ರವೇಶದ್ವಾರದ ಬಾಗಿಲ ಮೇಲೆ ಸೂಕ್ಷ್ಮ ಕೆತ್ತನೆಗಳು ಮತ್ತು ಎರಡೂ ಬದಿಗಳಲ್ಲಿ ದ್ವಾರಪಾಲಕರನ್ನು ಕೆತ್ತಿರುವುದು.
- ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ನಯವಾದ ಹೊಳಪಿನ ಕಂಬಗಳು
- ಶಿಲಾ ಜಾಲಂದ್ರಗಳ ಕೆತ್ತನೆ.
- ಕಂಬ ಮತ್ತು ತೊಲೆಗಳ ಮೇಲೆ ಮದನಿಕಾ ವಿಗ್ರಹಗಳು.
- ಗರ್ಭಗೃಹ, ಸುಖನಾಸಿ ಮತ್ತು ನವರಂಗ ಹಾಗೂ ಮಹಾಮಂಟಪಗಳ ರಚನೆ. ಇತ್ಯಾದಿ

**ಪ್ರಮುಖ ದೇವಾಲಯಗಳು**

**ಬೇಲೂರು :**

- ಚನ್ನಕೇಶವ ದೇವಾಲಯ (ಕ್ರಿ.ಶ. 1178ರಲ್ಲಿ ನಿರ್ಮಾಣ)
- ಶಿಲ್ಪಿಗಳು ದಾಸೋಜ, ಚವಣ ಮತ್ತು ಚಿಕ್ಕಹಂಸರು. ಇದನ್ನು ಶಿಲೆಯಲ್ಲಿನಭಾವಗೀತೆ ಎನ್ನುವರು.
- ಕಪ್ಪೆಚೆನ್ನಿಗರಾಯ ದೇವಾಲಯ,
- ಮೂಲ ಸಂಗಮೇಶ್ವರ ದೇವಾಲಯ.

**ಹಳೇಬೀಡು :**

- ಹೊಯ್ಸಳೇಶ್ವರ ದೇವಾಲಯ : ಇದನ್ನು ಕ್ರಿ.ಶ. 1121ರಲ್ಲಿ 1ನೇ ನರಸಿಂಹನ ಆಜ್ಞೆಯಂತೆ ಅವನ ದಂಡಾಧೀಶ. ಕೇತಮಲ್ಲ ನಿರ್ಮಿಸಿದನು. ಇದರ ಮುಖ್ಯಶಿಲ್ಪ ಕೇದಾರೋಜ.
- ಪಾರ್ಶ್ವನಾಥ ಬಸದಿ
- ಕೇದಾರೇಶ್ವರ ದೇವಾಲಯ

- ಸೋಮನಾಥಪುರ - ಕೇಶವ ದೇವಾಲಯ
- ತಲಕಾಡು - ಕೀರ್ತಿನಾರಾಯಣ ದೇವಾಲಯ
- ಮೇಲುಕೋಟೆ - ಚಲುವನಾರಾಯಣ ದೇವಾಲಯ
- ತೊಂಡೂರು - ವೀರನಾರಾಯಣ ದೇವಾಲಯ
- ಗದಗ - ವೀರನಾರಾಯಣ ದೇವಾಲಯ
- ಬಂಕಾಪುರ - ವೀರನಾರಾಯಣ ದೇವಾಲಯ
- ಅರಸೀಕೆರೆ - ಬಲ್ಲಾಳೇಶ್ವರ ದೇವಾಲಯ
- ಶಿವಗಂಗೆ - ಗಂಗಾಧಾರೇಶ್ವರ ದೇವಾಲಯ
- ಅಮೃತಪುರ - ಅಮೃತಪುರೇಶ್ವರ ದೇವಾಲಯ
- ಮಾರಲೆ - ಸಿದ್ದೇಶ್ವರ ಮತ್ತು ಕೇಶವ ಗುಡಿ
- ಹುಲಿಯೂರು - ರಂಗನಾಥ ಮತ್ತು ಮಲ್ಲಿಕಾರ್ಜುನ ದೇವಾಲಯ
- ಶ್ರವಣಬೆಳಗೊಳ - ಸವತಿ ಗಂಧಾವರಣ ಮತ್ತು ಜಿನನಾಥ ಬಸದಿಗಳು

## ವಿಜಯನಗರದ ಸಾಮ್ರಾಜ್ಯ

- ಸನಾತನ ಹಿಂದೂಧರ್ಮ ಮತ್ತು ಸಂಸ್ಕೃತಿಯನ್ನು ಮುಸ್ಲೀಮರ ದಾಳಿಯಿಂದ ರಕ್ಷಿಸಿ, ಸುಮಾರು 2 ಶತಮಾನಗಳ ಕಾಲ ಆಳಿದ ಕೊನೆಯ ಹಿಂದೂ ಸಾಮ್ರಾಜ್ಯ.
- ಸುಮಾರು 7000ಕ್ಕಿಂತಲೂ ಹೆಚ್ಚಿನ ಶಾಸನಗಳು ಈ ಕಾಲಕ್ಕೆ ಸಂಬಂಧಿಸಿದ್ದು ಈ ಸಾಮ್ರಾಜ್ಯದ ಬಗ್ಗೆ ವಿಪುಲ ಮಾಹಿತಿಯನ್ನು ನೀಡುತ್ತವೆ.
- 1ನೇ ಹರಿಹರನ ಬಾಗೇಪಲ್ಲಿ ಶಾಸನವು (1336) ಈ ರಾಜ ಮನೆತನದ ಕಾಲನಿರ್ಣಯದ ಬಗ್ಗೆ ನಿರ್ದಿಷ್ಟ ಮಾಹಿತಿ ನೀಡುತ್ತದೆ.
- ಇವರ ಲಾಂಛನ - ವರಾಹ
- ಈ ಸಾಮ್ರಾಜ್ಯದ ಬಗ್ಗೆ ಬೆಳಕು ಚೆಲ್ಲುವ ರಾಬರ್ಟ್ ಸಿವೆಲ್‌ರವರ ಕೃತಿ - "ಮರೆತು ಹೋದ ಸಾಮ್ರಾಜ್ಯ" (A Forgotten Empire)
- ಸ್ಥಾಪಕರು ಹರಿಹರ ಮತ್ತು ಬುಕ್ಕರಾಯ
- ಹರಿಹರ, ಬುಕ್ಕರಾಯರಿಗೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪ್ರೇರಣೆ ನೀಡಿದವರು - ಶೃಂಗೇರಿ ಪೀಠದ ಜಗದ್ಗುರುಗಳಾದ ವಿದ್ಯಾರಣ್ಯರು.
- ಹರಿಹರ, ಬುಕ್ಕರಾಯ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಎಂಬುವವರು ಸಂಗಮನ ಐವರು ಮಕ್ಕಳು - ಇವರೇ ಈ ಸಾಮ್ರಾಜ್ಯವನ್ನು ಸಂಘಟಿಸಿದರು.
- **ವಿಜಯನಗರವನ್ನು ಆಳಿದ ಸಂತತಿಗಳು :**
  1. ಸಂಗಮ ಸಂತತಿ - (1336-1485)
  2. ಸಾಳುವ ಸಂತತಿ - (1485-1505)
  3. ತುಳುವ ಸಂತತಿ - (1505-1570)
  4. ಅರವೀಡು - (1570-1646)

# 1. ಸಂಗಮ ಸಂತತಿ (1336-1485)

**ಹರಿಹರ (1336-1356)**

- ❖ ವಿಜಯನಗರ ಸಾಮ್ರಾಜ್ಯದ ಸ್ಥಾಪಕ ಹರಿಹರ
- ❖ ಕ್ರಿ.ಶ. 1336 ಏಪ್ರಿಲ್ 16, ಹರಿಹರನ ಪಟ್ಟಾಭಿಷೇಕ ನಡೆಯಿತು.
- ❖ ಇವನ ಬಿರುದುಗಳು "ಪೂರ್ವ ಪಶ್ಚಿಮ ಸಮುದ್ರಾಧೀಶ್ವರ", "ಅರಿರಾಯ ವಿಭಾಡ", "ಭಾಷೆಗೆ ತಪ್ಪದ ರಾಯರ ಗಂಡ"
- ❖ ಹೊಯ್ಸಳರಲ್ಲಿ ಸೇನಾನಿಯಾಗಿದ್ದ ಈತ ಹೊಯ್ಸಳರ ದೊರೆ 3ನೇ ಬಲ್ಲಾಳನ ಸೋದರಳಿಯ. ಬಲ್ಲಪ್ಪನು ಹರಿಹರನ ಮಗಳನ್ನು ವಿವಾಹವಾಗಿದ್ದ.
- ❖ ಕ್ರಿ.ಶ. 1336ರಲ್ಲಿ ಪಶ್ಚಿಮ ಕರಾವಳಿಯ ಬಾರಕೂರಿನಲ್ಲಿ ಹರಿಹರನು ಒಂದು ಕೋಟೆಯನ್ನು ನಿರ್ಮಿಸಿದನು.
- ❖ ಕ್ರಿ.ಶ. 1340ರಲ್ಲಿ ಬಾದಾಮಿಯಲ್ಲಿ ಒಂದು ಕೋಟೆ ನಿರ್ಮಿಸಿದ.
- ❖ ಹೊಯ್ಸಳರ ಸಾಮಂತನಾಗೇ ಇದ್ದ ಹರಿಹರನು 3ನೇ ಬಲ್ಲಾಳನ (1343) ಸಾವಿನ ನಂತರ ಸ್ವತಂತ್ರನಾದ. ತುಂಗಭದ್ರೆಯ ದಕ್ಷಿಣದ ಕರ್ನಾಟಕ, ಆಂಧ್ರಪ್ರದೇಶಗಳ ಮೇಲೆ ಅವನ ಸ್ವಾಮ್ಯ ಸ್ಥಾಪಿತವಾಯಿತು.
- ❖ ಹರಿಹರನ ಸಹೋದರರುಗಳಾದ ಕಂಪಣ ನೆಲ್ಲೂರಿನಿಂದಲೂ, ಮುದ್ದಪ್ಪನು ಮುಳಬಾಗಿಲಿನಿಂದಲೂ, ಮಾದಪ್ಪ ಚಂದ್ರಗುತ್ತಿಯಿಂದಲೂ, ದ್ವಾರಸಮುದ್ರದ ಸುತ್ತಮುತ್ತಲ ಪ್ರದೇಶಗಳಲ್ಲಿ ಬುಕ್ಕನು ಅಧಿಕಾರ ನಡೆಸುತ್ತಿದ್ದರು.
- ❖ 1346ರ ಶೃಂಗೇರಿ ಪ್ರಕಾರ - ಐವರು ಸಂಗಮ ಸಹೋದರರು ಶೃಂಗೇರಿಯಲ್ಲಿ ಭಾರತಿ ತೀರ್ಥರಿಗೆ ದಾನವೊಂದನ್ನು ನೀಡಿದರು.
- ❖ ಇವನ ಕಾಲದಲ್ಲೇ ಕ್ರಿ.ಶ. 1347ರಲ್ಲಿ ಬಹಮನಿ ಸಾಮ್ರಾಜ್ಯ ಸ್ಥಾಪಿತವಾಯಿತು.

**1ನೇ ಬುಕ್ಕರಾಯ (ಕ್ರಿ.ಶ. 1356-1377)**

- ❖ ತನ್ನ ಅಣ್ಣ ಹರಿಹರನ ಕಾಲದಲ್ಲಿ ಯುವರಾಜನಾಗಿದ್ದು. ಸಾಮ್ರಾಜ್ಯ ಸ್ಥಾಪನೆಯಲ್ಲಿ ಅನುಪಮ ಸೇವೆ ಸಲ್ಲಿಸಿದ.
- ❖ ಇವನ ಆಳ್ವಿಕೆಯ ಪ್ರಮುಖ ಘಟನೆಯೆಂದರೆ, ಮಧುರೆಯ ಸುಲ್ತಾನನ್ನು ಸೋಲಿಸಿ ಅವರ ಆಳ್ವಿಕೆಯನ್ನು ಅಂತ್ಯಗೊಳಿಸಿದ್ದ ತನ್ನ ಮಗ ಕುಮಾರ ಕಂಪಣನು ಮಧುರೆಯ ಮೇಲೆ ನಡೆಸಿದ ದಾಳಿಯನ್ನು ಅವನ ಪತ್ನಿ ಗಂಗಾದೇವಿಯು 'ಮಧುರಾ ವಿಜಯಂ' ಗ್ರಂಥದಲ್ಲಿ ವರ್ಣಿಸಿದ್ದಾಳೆ.
- ❖ ಬಹಮನಿ ಸುಲ್ತಾನರ ನಡುವೆ ಕಲಹ ಇವನ ಕಾಲದಿಂದ ಆರಂಭವಾಯಿತು.
- ❖ ಕೃಷ್ಣ ಮತ್ತು ತುಂಗಭದ್ರಾ ನದಿಗಳ ನಡುವಿನ ರಾಯಚೂರು ದೋಆಬ್ ಪ್ರದೇಶವೇ ವಿಜಯನಗರ ಮತ್ತು ಬಹಮನಿಗಳ ನಡುವಿನ ಘರ್ಷಣೆಗೆ ಮೂಲ ಕಾರಣ.
- ❖ ಚೀನಾದ ಮಿಂಗ್ ಸಂತತಿಯ ಸಾಮ್ರಾಟರ ಆಸ್ಥಾನಕ್ಕೆ ಕ್ರಿ.ಶ. 1374ರಲ್ಲಿ ರಾಯಬಾರಿಗಳನ್ನು ಕಳುಹಿಸಿದ.
- ❖ ಹೊನ್ನಾಯಿ, ಗೌರಾಂಬಾ - ಇವನ ರಾಣಿಯರು.
- ❖ ಇವನ ಕಾಲದಲ್ಲಿ ವೇದಗಳ ಮೇಲಿನ ಭಾಷ್ಯ (ವೇದಾರ್ಥ ಪ್ರಕಾಶನ"ದ ಲೇಖನ ಕಾರ್ಯ ಸಾಯಣ ಮತ್ತು ಮಾಧವರ ನೇತೃತ್ವದಲ್ಲಿ ಆರಂಭವಾಯಿತು. ಅದಕ್ಕಾಗಿ ಇವನು "ವೈದಿಕ ಮಾರ್ಗ ಪ್ರವರ್ತಕ" ಎಂಬ ಬಿರುದನ್ನು ಧರಿಸಿದ.
- ❖ ಇವನ ಕಾಲದಲ್ಲಿ ಜೈನರಿಗೂ ಮತ್ತು ವೈಷ್ಣವರಿಗೂ ತೀವ್ರವಾದ ಕಲಹ ಆರಂಭವಾಯಿತು. ಇದನ್ನು ಪರಿಹರಿಸಿದ. ಇವನು ಅಲ್ಪ ಸಂಖ್ಯಾತ ಜೈನರನ್ನು ವೈಷ್ಣವರು ಗೌರವಿಸಬೇಕೆಂದು ಒಪ್ಪಿಸಿ 1386ರಲ್ಲಿ ಶ್ರವಣಬೆಳಗೊಳದ ಮಾಗಡಿ

ತಾಲ್ಲೂಕಿನ ಕಲ್ಲೆಹದಲ್ಲಿ ಶಾಸನಗಳನ್ನು ಕೆತ್ತಿಸಿದ.

- ತೆಲುಗು ವಿದ್ವಾಂಸನಾದ ನಾಚನ ಸೋಮನಾಥನಿಗೆ ಆಶ್ರಯ ನೀಡಿದ್ದ.

**2ನೇ ಹರಿಹರ (ಕ್ರಿ.ಶ. 1377-1404)**

- ಬುಕ್ಕನ ಎರಡನೇ ಮಗನಾದ ಈತನ ಕಾಲದಿಂದ ಹೊಸ ಯುಗ ಆರಂಭವಾಯಿತು. ಸಾರ್ವಭೌಮಯುಕ್ತವಾದ ಮಹಾರಾಜಾಧಿರಾಜ ಮತ್ತು ರಾಜಪರಮೇಶ್ವರ ಎಂಬ ಬಿರುದುಗಳನ್ನು ಧರಿಸಿದ ಮೊದಲ ವಿಜಯನಗರ ಅರಸ ಈತ.
- ಹೊನ್ನೆ ಹೊಳೆಯಿಂದ ಪೆನುಗೊಂಡದವರೆಗೆ ಕೃಷಿಗಾಗಿ ನೀರಾವರಿಕಾಲುವೆ ನಿರ್ಮಿಸಿದ.
- ವೇದಗಳ ಮೇಲಿನ ಭಾಷ್ಯ ರಚನಾಕಾರ್ಯ ಇವನ ಕಾಲದಲ್ಲಿ ಮುಕ್ತಾಯವಾಯಿತು. ಇದರಿಂದ ಇವನಿಗೆ ವೇದಮಾರ್ಗ ಸ್ಥಾಪನಾ ಚಾರ್ಯ ಎಂಬ ಬಿರುದು ಪ್ರಾಪ್ತವಾಯಿತು.
- ಕನ್ನಡ ಅಭಿಮಾನಿಯಾಗಿದ್ದ ಇವನಿಗೆ ಕರ್ನಾಟಕ ವಿದ್ಯಾ ವಿಲಾಸ ಎಂಬ ಬಿರುದು ಪ್ರಾಪ್ತವಾಯಿತು.

**1ನೇ ದೇವರಾಯ (ಕ್ರಿ.ಶ. 1406-1422)**

- ಒರಿಸ್ಸಾದ (ಕಳಿಂಗದ) ಗಜಪತಿಗಳ ವಿರುದ್ಧ ಘರ್ಷಣೆ ಆರಂಭವಾಯಿತು.
- ಮುದಗಲ್‌ನ ಅಕ್ಕಸಾಲಿಗನ ಮಗಳ ಮೇಲಿನ ಮೋಹಕ್ಕಾಗಿ ಅವಳನ್ನು ವರಿಸಲು ಬಹಮನಿ ಸುಲ್ತಾನ ಫಿರೋಜ್ ಷಹನ ವಿರುದ್ಧ ಹೋರಾಡಿದ.
- ತುಂಗಭದ್ರಾ ನದಿಗೆ ಅಣೆಕಟ್ಟು ನಿರ್ಮಿಸಿ, ಇಲ್ಲಿನ ಕಾಲುವೆಯಿಂದ ರಾಜಧಾನಿಗೆ ನೀರೊದಗಿಸುವ ಕಾರ್ಯ ಮಾಡಿದ. (ರಾಬರ್ಟ್ ಸಿವೆಲ್ ಇದನ್ನು ಭಾರತದ ನೀರಾವರಿ ಕಾಮಗಾರಿಗಳಲ್ಲಿ ಅದ್ಭುತ ನಿರ್ಮಾಣ ಎಂದಿದ್ದಾರೆ)
- ಹರಿಹರದ ಬಳಿ ಹರಿದ್ರಾ ನದಿಗೂ ಅಣೆಕಟ್ಟೆ ನಿರ್ಮಿಸಿ ನೀರಾವರಿ ಸೌಲಭ್ಯ ಒದಗಿಸಿದ.
- ಇವನ ಕಾಲದಲ್ಲಿ - ಇಟಲಿಯ ಪ್ರವಾಸಿಗ ನಿಕೊಲೊಕಾಂಟಿಯ ವಿಜಯನಗರಕ್ಕೆ ಭೇಟಿನೀಡಿದನು. (ಈತನು ರಾಜ್ಯದ ಸುತ್ತಳತೆ ಬಗ್ಗೆ ವಿವರಿಸಿದ್ದಾನೆ).

**2ನೇ ದೇವರಾಯ (ಕ್ರಿ.ಶ. 1424-1446)**

- ವಿಜಯನಗರ ಅರಸರುಗಳಲ್ಲಿ ಪ್ರಸಿದ್ಧನಾದೀತನ ಬಿರುದುಗಳೆಂದರೆ - ಪ್ರೌಢದೇವರಾಯ ಮತ್ತು ಗಜಬೇಂಟೆಕಾರ.
- ಮುಸ್ಲಿಂ ಸೈನಿಕರನ್ನು ತನ್ನ ಸೈನಿಕರಲ್ಲಿ ನೇಮಕ ಮಾಡಿಕೊಂಡು ಅರೇಬಿಯಾದಿಂದ ಒಳ್ಳೆಯ ತಳಿಯ ಕುದುರೆಗಳನ್ನು ತರಸಿಕೊಂಡು ಅಶ್ವಪಡೆಯನ್ನು ಬಲಗೊಳಿಸಿದ.
- ಇವನ ಕಾಲದಲ್ಲಿ ಗಜಪತಿ ದೊರೆ ಭಾನುದೇವನು ರಾಜಮಹೇಂದ್ರಿಗೆ ಮುತ್ತಿಗೆ ಹಾಕಿದಾಗ ಅಲ್ಲಿನ ದೊರೆಯ ಸಹಾಯಕ್ಕೆ ದಾವಿಸಿ, ಗಜಪತಿಗಳನ್ನು ಮತ್ತು ವೇಲಮರನ್ನು ಸೋಲಿಸಿ ರಾಜಮಹೇಂದ್ರಿಯಲ್ಲಿ ರೆಡ್ಡಿ ದೊರೆಯನ್ನು ಪುನಃ ಪ್ರತಿಷ್ಠಾಪಿಸಿದನು.
- ಒರಿಸ್ಸಾದ ಗಜಪತಿ ಭಾನುದೇವನ ಉತ್ತರಾಧಿಕಾರಿಯಾದ ಕಪಿಲೇಂದ್ರನು ಕ್ರಿ.ಶ. 1436 ಮತ್ತು ಕ್ರಿ.ಶ. 1443ರಲ್ಲಿ ರಾಜಮಹೇಂದ್ರಿಗೆ ಮುತ್ತಿಗೆ ಹಾಕಿದಾಗ ಅವನ ಸೈನ್ಯವನ್ನು ಸೋಲಿಸಿದ ಮತ್ತು ಆ ಮೂಲಕ ಆಂಧ್ರದಲ್ಲಿ ತನ್ನ ಸಾರ್ವಭೌಮತ್ವ ಸ್ಥಾಪಿಸಿದ.
- ತನ್ನ ಪ್ರಸಿದ್ಧ ದಂಡನಾಯಕ ಲಕ್ಕಣ್ಣದಂಡೇಶನು ಸಿಂಹಳದ ಮೇಲೆ ದಾಳಿಮಾಡಿ ವಿಜಯನಗರದ ಸಾರ್ವಭೌಮತ್ವವನ್ನು

ಒಪ್ಪಿಕೊಳ್ಳುವಂತೆ ಮಾಡಿ. ಕಪ್ಪವನ್ನು ವಸೂಲು ಮಾಡಿದ. ಈ ವಿಜಯದ ನೆನಪಿಗಾಗಿ ಲಕ್ಕಣ್ಣದಂಡೇಶನಿಗೆ ದಕ್ಷಿಣ ಸಮುದ್ರಾಧಿಪತಿ ಎಂಬ ಬಿರುದು ನೀಡಿ ಗೌರವಿಸಲಾಯಿತು.

- ಇವನ ಕಾಲದಲ್ಲಿ ಕ್ವಿಲಾನ್, ಕಲ್ಲಿಕೋಟೆ, ಬರ್ಮಾದ ಪೆಗು, ತೆನೆಸ್ಸೆರಿಂ ರಾಜ್ಯಗಳಿಂದಲೂ ಕಪ್ಪ ಸಂಗ್ರಹಿಸಲಾಯಿತು.
- ಕ್ರಿ.ಶ. 1443ರಲ್ಲಿ ಪರ್ಶಿಯಾದ ರಾಯಭಾರಿ ಅಬ್ದುಲ್ ರಜಾಕ್ ಇವನ ಆಸ್ಥಾನಕ್ಕೆ ಭೇಟಿನೀಡಿದ.
- ಅಬ್ದುಲ್ ರಜಾಕ್ "ವಿಜಯನಗರವನ್ನು ಕುರಿತು" ನೇತ್ರ ಪಟಲವು ಅಂತಹ ನಗರವನ್ನು ವಿಶ್ವದಲ್ಲೇ ಕಣ್ಣಲ್ಲೇ ಕಂಡಿಲ್ಲ ಮತ್ತು ಕಿವಿಗಳು ಇದಕ್ಕೆ ಸಮಾನವಾದುದನ್ನು ಜಗತ್ತಿನಲ್ಲಿ ಇನ್ನೊಂದು ಇದೆಯೆಂದು ಕೇಳಿಲ್ಲ. ಎಂದು ವರ್ಣಿಸಿದ್ದಾನೆ.
- ಸ್ವತಃ ವಿದ್ವಾಂಸನಾದ ಈತ "ಮಹಾನಾಟಕ ಸುಧಾನಿಧಿ" ಹಾಗೂ "ಬ್ರಹ್ಮ ಸೂತ್ರ ವೃತ್ತ" ಎಂಬ ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ.
- ಇವನ ಕಾಲದಲ್ಲಿ ವಚನ ಸಾಹಿತ್ಯ ಮತ್ತು ವೀರಶೈವ ಧರ್ಮವು ಪುನರುಜ್ಜೀವ ಗೊಂಡಿತು.
- ಇವನ ಕಾಲದ ಪ್ರಮುಖ ವಿದ್ವಾಂಸರುಗಳೆಂದರೆ - ತೆಲುಗು ಕವಿ ಶ್ರೀನಾಥ, ಚಾಮರಸ, ಕುಮಾರವ್ಯಾಸ, ಲಕ್ಕಣ್ಣ, ದಂಡನಾಥ.
- ತೆಲುಗು ಕವಿ ಶ್ರೀನಾಥನು ಆಸ್ಥಾನ ಪಂಡಿತ ಡಿಂಡಿಮನನ್ನು ವಾಗ್ವಾದದಲ್ಲಿ ಸೋಲಿಸಿದಾಗ ಅವನಿಗೆ ಕನಕಾಭಿಷೇಕ ಮಾಡಿ ಗೌರವಿಸಿದ.
- ಚಾಮರಸನ 'ಪ್ರಭುಲಿಂಗ ಲೀಲೆ' ಗ್ರಂಥವು ಈತನು ವೀರಶೈವ ಧರ್ಮಕ್ಕೆ ಮತಾಂತರ ಹೊಂದಿದ್ದನೆಂದು ತಿಳಿಸುತ್ತದೆ.
- ಪರಮತ ಸಹಿಷ್ಣುವಾದ ಈತ ತನ್ನ ಸಿಂಹಾಸನದ ಬಳಿ ಕುರಾನ್ ಪ್ರತಿಯೊಂದನ್ನು ಇರಿಸಿ ಗೌರವಿಸಿದ್ದನು. ಹಾಗೂ ರಾಜಧಾನಿಯಲ್ಲಿ ಮುಸ್ಲೀಮರಿಗೆ ಮಸೀದಿಯನ್ನು ನಿರ್ಮಿಸಿದ.
- ಹಂಪಿಯ ಹಜಾರ ರಾಮಸ್ವಾಮಿ ದೇವಾಲಯ ಇವನ ಕಾಲದಲ್ಲಿ ನಿರ್ಮಾಣವಾಯಿತು.

## ಸಾಳುವ ಸಂತತಿ (ಕ್ರಿ.ಶ. 1485-1491)

### ಸಾಳ್ವ ನರಸಿಂಹ (ಕ್ರಿ.ಶ. 1485-1491)

- ಸಾಳ್ವ ಸಂತತಿಯ ಸ್ಥಾಪಕನಾದ ಈತ ಚಂದ್ರಗಿರಿಯ ರಾಜ್ಯಪಾಲನಾಗಿದ್ದ.
- ಕ್ರಿ.ಶ. 1485ರಲ್ಲಿ ರಾಜ್ಯಾಪಹರಣ ಮಾಡಿ ಸಾಳ್ವಸಂತತಿಯನ್ನು ಸ್ಥಾಪಿಸಿದ.
- ತುಳುನಾಡನ್ನು ಗೆದ್ದು ಭಟ್ಕಳ, ಹೊನ್ನಾವರ, ಬಾರಕೂರು ಮತ್ತು ಮಂಗಳೂರು ಬಂದರುಗಳ ಮೂಲಕ ಕುದುರೆ ವ್ಯಾಪಾರವನ್ನು ಪುನಃ ಕುದುರಿಸಿ ಸೈನ್ಯದ ಕೋಟೆಯನ್ನು ಹೆಚ್ಚಿಸಿದನು.
- ಸಾಳ್ವ ನರಸಿಂಹನ ಅಪ್ರಾಪ್ತ ಮಕ್ಕಳು - ತಿಮ್ಮಭೂಪ ಮತ್ತು ಇಮ್ಮಡಿ ನರಸಿಂಹ
- ಸಾಳ್ವ ನರಸಿಂಹನು 1491ರಲ್ಲಿ ಸಾಯುವ ಮುನ್ನ ತನ್ನ ಅಪ್ರಾಪ್ತ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ದಂಡನಾಯಕನಾದ ತುಳುವ ನರಸನಾಯಕನಿಗೆ ವಹಿಸಿಕೊನೆಯುಸಿರೆಳೆದ.
- ನರಸಿಂಹನು ಸ್ವತಃ ವಿದ್ವಾಂಸನಾಗಿದ್ದು 'ರಾಮಾಭ್ಯುದಯಂ' ಎಂಬ ರಾಮ ಕಥಾ ಕಾವ್ಯವನ್ನು ಬರೆದಿದ್ದಾನೆ. (ಇದು ಅರುಣ ಗಿರಿನಾಥ ಡಿಂಡಿಮನ ಕೃತಿ ಎಂದೂ ಸಹ ಹೇಳಲಾಗುತ್ತದೆ.)
- ಸಾಳ್ವಾಭ್ಯುದಯದ ಕೃತಿಕಾರ ರಾಜನಾಥ ಡಿಂಡಿಮ ಇವನ ಆಶ್ರಿತ.
- ಮಾಧ್ವಸಂತನಾದ ಶ್ರೀಪಾದರಾಯರು ನರಸಿಂಹನಿಗೆ ನಿಕಟವರ್ತಿಗಳಾಗಿದ್ದರು.

## ತುಳುವ ಸಂತತಿ (ಕ್ರಿ.ಶ. 1503/05-1565)

- ತುಳುವ ನರಸ ನಾಯಕನಿಗೆ ತಿಪ್ಪಾಂಬಿಕೆ, ನಾಗಲಾಂಬಿಕೆ ಮತ್ತು ಓಬಲಾಂಬಿಕೆ ಎಂಬ ಮೂವರು ಪತ್ನಿಯರು, ತಿಪ್ಪಾಂಬಿಕೆಯ ಮಗ, ವೀರ ನರಸಿಂಹ, ನಾಗಲಾಂಬಿಕೆಯ ಮಗ ಕೃಷ್ಣದೇವರಾಯ, ಓಬಲಾಂಬಿಕೆಯ ಮಕ್ಕಳು ಅಚ್ಯುತರಾಯ ಮತ್ತು ಶ್ರೀರಂಗರಾಯ.
- ತುಳುವ ನರಸನಾಯಕನು ನರಸಿಂಹನ ಮಕ್ಕಳ ಪರವಾಗಿ ರಾಜ್ಯಭಾರ ಮಾಡುತ್ತಿದ್ದಾಗ ತಿಮ್ಮಭೂಪನನ್ನು ನರಸನಾಯಕನ ಮಂತ್ರಿ ತಿಮ್ಮರಸನು ಕೊಲೆಮಾಡಿಸಿದ. ನಂತರ 2ನೇ ನರಸಿಂಹ ಮತ್ತು ನರಸಾನಾಯಕರ ನಡುವೆ ವಿರಸ ಮೂಡಿದಾಗ ನರಸನಾಯಕ ಅವನನ್ನು ಪೆನುಗೊಂಡೆಯಲ್ಲಿ ಬಂಧಿಸಿ, ತಾನೇ ಅಧಿಕಾರ ರೂಢನಾಗಿ ನಂತರ ಕ್ರಿ.ಶ. 1503ರಲ್ಲಿ ಸಾವನ್ನಪ್ಪಿದ.
- ವೀರನರಸಿಂಹನು ತುಳುವ ವಂಶದ ಸ್ಥಾಪಕ (ಕ್ರಿ.ಶ. 1505-1509)
- ಕ್ರಿ.ಶ. 1505ರಲ್ಲಿ ಪೆನುಗೊಂಡೆಯಲ್ಲಿ ಬಂಧನದಲ್ಲಿದ್ದ ಸಾಳ್ವ ನರಸಿಂಹನ ಮಗ 2ನೇ ನರಸಿಂಹನನ್ನು ಕೊಲೆ ಮಾಡಿಸಿ ಸ್ವತಂತ್ರ ರಾಜನಾದ.
- ಭುಜಭಲರಾಯ ಎಂಬ ಹೆಸರು ಪಡೆದಿದ್ದ ಇವನು ಪೋರ್ಚುಗೀಸರ ಜೊತೆ ಸ್ನೇಹ ಬೆಳೆಸಿಕೊಂಡ. ಲೂಯಿ ಸೆಲ್ವಡಾರ್ ಎಂಬ ಪೋರ್ಚುಗೀಸ್ ಪಾದ್ರಿಯು ವೀರನರಸಿಂಹನನ್ನು ಸಂದರ್ಶಿಸಿ ಚರ್ಚುಗಳ ಸ್ಥಾಪನೆಗೆ ಅನುಮತಿ ಪಡೆದುಕೊಂಡನು.
- ವೀರನರಸಿಂಹನು ತನ್ನ ನಂತರ ತನ್ನ ಅಪ್ರಾಪ್ತ ಮಗನನ್ನು ಅಧಿಕಾರಕ್ಕೆ ತರುವ ಆಸೆಯಿಂದ ತನ್ನ ತಮ್ಮ ಕೃಷ್ಣದೇವರಾಯನ ಕಣ್ಣುಗಳನ್ನು ಕೀಳಿಸಲು ಆಜ್ಞಾಪಿಸಿದಾಗ ಮಂತ್ರಿ ತಿಮ್ಮರಸನು ಮೇಕೆ ಕಣ್ಣುಗಳನ್ನು ತೋರಿ, ಕೃಷ್ಣದೇವರಾಯನ ಕಣ್ಣುಗಳೇ ಎಂದು ಹೇಳಿ ನಂಬಿಸಿದ. ಅದೇ ಅತೃಪ್ತಿಯಿಂದ ಕ್ರಿ.ಶ. 1509ರಲ್ಲಿ ವೀರನರಸಿಂಹ ಸಾವನ್ನಪ್ಪಿದ. ನಂತರ ಕೃಷ್ಣದೇವರಾಯ ಅಧಿಕಾರಕ್ಕೆ ಬಂದ.

### ಶ್ರೀ ಕೃಷ್ಣದೇವರಾಯ (ಕ್ರಿ.ಶ. 1509-1530)

- ಕ್ರಿ.ಶ. 1509ರಲ್ಲಿ ಅಧಿಕಾರಕ್ಕೆ ಬಂದ ಇವನು ನರಸನಾಯಕನ ಎರಡನೇ ಪತ್ನಿ ನಾಗಲಾಂಬಿಕೆಯ ಮಗ.
- ವಿಜಯನಗರದ ಅರಸರುಗಳಲ್ಲಷ್ಟೇ ಅಲ್ಲದೆ ದಕ್ಷಿಣ ಭಾರತದ ಸರ್ವಶ್ರೇಷ್ಠ ದೊರೆ.
- ಕ್ರಿ.ಶ. 1510 ಜನವರಿ 24 ರಂದು ಕೃಷ್ಣದೇವರಾಯನ ಪಟ್ಟಾಭಿಷೇಕ ಸಮಾರಂಭ ನಡೆಯಿತು.
- ಕ್ರಿ.ಶ. 1510ರಲ್ಲಿ ಪೋರ್ಚುಗೀಸರ ವೈಸ್ರಾಯಿ ಆಲ್ಬುಕರ್ಕ್ ಬಿಜಾಪುರ ಸುಲ್ತಾನನಿಂದ ಗೋವಾವನ್ನು ವಶಪಡಿಸಿಕೊಳ್ಳಲು ಸಹಕರಿಸಿದ.
- ಕ್ರಿ.ಶ. 1512ರಲ್ಲಿ ದಂಗೆಯೆದ್ದ ಉಮ್ಮತ್ತೂರಿನ ಪಾಳೆಗಾರ ಗಂಗರಾಜನನ್ನು ಸೋಲಿಸಿ ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣಗಳನ್ನು ವಶಪಡಿಸಿಕೊಂಡ.
- ಕೃಷ್ಣದೇವರಾಯನ ಮೊದಲ ಸೈನಿಕ ದಿಗ್ವಿಜಯವು ಬೀದರಿನ ಸುಲ್ತಾನ ಮಹಮದ್ ಷಾ ಮತ್ತು ಬಿಜಾಪುರದ ಸುಲ್ತಾನ ಯೂಸುಫ್ ಆದಿಲ್ ಷಾನ ವಿರುದ್ಧ ನಡೆಯಿತು.
- "ಕೋವಿಲಕೊಂಡ ಕದನ"ದಲ್ಲಿ ಯೂಸುಫ್ ಆದಿಲ್ ಷಾ ಮಡಿದನು.
- ಬೀದರ್‌ಗೆ ಮುತ್ತಿಗೆ ಹಾಕಿದ ಕೃಷ್ಣದೇವರಾಯನು ಅಲ್ಲಿ ಪ್ರಧಾನಮಂತ್ರಿ ಅಮೀದ್ ಬರೀದ್‌ನಿಂದ ಬಂಧನಕ್ಕೆ ಒಳಗಾಗಿದ್ದ

ಎರಡನೇ ಮಹಮದ್‌ಷಾನನ್ನು ಬಂಧನದಿಂದ ಬಿಡಿಸಿ ಪುನಃ ಸಿಂಹಾಸನದಲ್ಲಿ ಕೂರಿಸಿದನು (ಕ್ರಿ.ಶ. 1514) ಇದರಿಂದಾಗಿ ಇವನಿಗೆ 'ಯವನರಾಜ್ಯ ಪ್ರತಿಷ್ಠಾಪನಾ ಚಾರ್ಯ' ಎಂಬ ಬಿರುದು ಪ್ರಾಪ್ತವಾಯಿತು.

❖ ಸಿಂಹಳ ಅಥವಾ ಶ್ರೀಲಂಕಾದಲ್ಲಿ ಸೈನಿಕರು ದಂಗೆಯೆದ್ದು ಅಲ್ಲಿನ ರಾಜ ವಿಜಯಬಾಹುವನ್ನು ಉಚ್ಚಾಟನೆ ಮಾಡಿದಾಗ ಕೃಷ್ಣದೇವರಾಯ ಅಲ್ಲಿನ ದಂಗೆಯನ್ನು ಅಡಗಿಸಿ ವಿಜಯಬಾಹುವಿನ ಮಗ ಭುವನೈಕ್ಯ ಬಾಹುವನ್ನು ಸಿಂಹಾಸನದ ಮೇಲೆ ಕೂರಿಸಿದನು.

### ಕೃಷ್ಣದೇವರಾಯನ ಬಿರುದುಗಳು

| | |
|---|---|
| ❖ ಕನ್ನಡ ರಾಜ್ಯ ರಮಾರಮಣ | ಆಂದ್ರಭೋಜ |
| ❖ ಕರ್ನಾಟಕ ರಾಜ್ಯ ಲಕ್ಷ್ಮೀ ಮನೋಹರ | ಯವನ ರಾಜ್ಯ ಸ್ಥಾಪನಾಚಾರ್ಯ |
| ❖ ಚತುಸ್ಸಮಯಂ | ಕರ್ನಾಟಕ ಕುಲತಿಲಕ |
| ❖ ಕರ್ನಾಟ ರಾಜ್ಯ ರಕ್ಷಾಮಣ | ಸಮುದ್ಧರಣರಾಯ |
| ❖ ಮಹಾರಾಜಾಧಿರಾಜ | ರಾಜ ಪರಮೇಶ್ವರಿ |
| ❖ ಮೂರು ರಾಯರ ಗಂಡ | ಆದಿರಾಯ |
| ❖ ಗಜಪತಿ ವಿಭಾಡ | ಪರರಾಯ ಭಯಂಕರ |
| ❖ ದುಷ್ಟ ಶಾರ್ದೂಲಮರ್ದನ | ರೋಷಕೃತ ಪ್ರತಿ ಪಾರ್ಥಿವ ಇತ್ಯಾದಿ. |

❖ ಒರಿಸ್ಸಾ ವಿಜಯದ ನಂತರ ಅದರ ನೆನಪಿಗಾಗಿ ಮಹಾನವಮಿ ದಿಬ್ಬವನ್ನು ನಿರ್ಮಿಸಿದ. ನವರಾತ್ರಿ ಉತ್ಸವದ ಸಂದರ್ಭದಲ್ಲಿ. ಇದರ ಮೇಲಿನಿಂದಲೇ ಕೃಷ್ಣದೇವರಾಯ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದ.

❖ ಕೃಷ್ಣದೇವರಾಯ ರಾಜ್ಯಾದ್ಯಂತ ವಿವಾಹ ತೆರಿಗೆಯನ್ನು ರದ್ದುಪಡಿಸಿದ.

❖ ಇವನ ಕಾಲ ಸಾಹಿತ್ಯ ಕ್ಷೇತ್ರದಲ್ಲಿ ಸುವರ್ಣಯುಗವಾಗಿತ್ತು.

❖ ಸ್ವತಃ ವಿದ್ವಾಂಸನಾದ ಕೃಷ್ಣದೇವರಾಯ - ತೆಲುಗಿನಲ್ಲಿ "ಅಮುಕ್ತಮೌಲ್ಯದ" ಮತ್ತು ಸಂಸ್ಕೃತದಲ್ಲಿ ಜಾಂಬವತಿ ಕಲ್ಯಾಣ, ರಸಮಂಜರಿ, ಉಷಾ ಪರಿಣಯ, ಮದಲಸ ಚರಿತೆ, ಜ್ಞಾನ ಚಿಂತಾಮಣಿ ಕೃತಿಗಳನ್ನು ರಚಿಸಿದ್ದಾನೆ.

❖ ಇವನ ಆಸ್ಥಾನದಲ್ಲಿ ಅಷ್ಟದಿಗ್ಗಜರು ಎಂಬ 8 ಮಂದಿ ಕವಿಗಳಿದ್ದರು. ಅವರುಗಳು ಮತ್ತು ಅವರ ಕೃತಿಗಳು.

❖ **ಕವಿಗಳು ಕೃತಿಗಳು**

| | |
|---|---|
| **1. ಅಲ್ಲಸಾನಿ ಪೆದ್ದಣ್ಣ** | - ಮನುಚರಿತ ಅಥವಾ ಸ್ವಾರೋಜಿ ಷಮನು ಸಂಭವಮು. (ಇವನ ಬಿರುದು - ಆಂದ್ರ ಕವಿ ಪಿತಾಮಹ.) |
| **2. ನಂದಿ ತಿಮ್ಮಣ್ಣ** | - ಪಾರಿಜಾತಾಪಹರಣಮು |
| **3. ತೆನಾಲಿ ರಾಮಕೃಷ್ಣ** (ಹಾಸ್ಯ ಚಕ್ರವರ್ತಿ) | - ಪಾಂಡುರಂಗ ಮಹಾತ್ಮೆ, ಹರಿಭಕ್ತಸಾರ, ಉದ್ಭಟರಾಧ್ಯ ಚರಿತಂ, ಘಟಿಕಾಚಲ ಮಹಾತ್ಮೆ. |
| **4. ದೂರ್ಜಟಿ** | - ಕೃಷ್ಣರಾಜ ವಿಜಯ, ಕಾಳಹಸ್ತೀಶ್ವರ ಶತಕಂ |
| **5. ಮಾದಯ್ಯಗಾರಿ ಮಲ್ಲಣ್ಣ** | - ರಾಜಶೇಖರ ಚರಿತಂ |
| **6. ರಾಮರಾಜ ಭೂಷಣ** | - ಕಾವ್ಯಾಲಂಕಾರ ಸಂಗ್ರಹಮು, ಹರಿಶ್ಚಿಂದ್ರ ನಳೋ ಪಾಖ್ಯಾಯನಂ, ನರಸಭೂಪಾಲಿಯಂ, ವಸುಚರಿತಂ |

**7. ಅಯ್ಯಾಲ ರಾಜು ರಾಮಭದ್ರ** - ರಾಧಾ ಮಾಧವ, ರಾಮಾಭ್ಯುದಯಂ, ಸಕಲ ಕಥಾಸಾರಸಂಗ್ರಹಂ

**8. ಪಿಂಗಳಿಸೂರಣ್ಣ** - ಕಲಾಪೂರ್ಣೋದಯಂ, ಗರುಡ ಪುರಾಣಂ, ಪ್ರಭಾವತಿ ಪ್ರದ್ಯುಮ್ನಮು, ರಾಘವ ಪಾಂಡವೀಯಮು.

- ಕುಮಾರವ್ಯಾಸನು ಅಪೂರ್ಣ ಮಾಡಿದ್ದ ಮಹಾಭಾರತದ ಕೊನೆಯ 8 ಪರ್ವಗಳನ್ನು ತಿಮ್ಮಣ್ಣ ಕವಿಯು ರಚಿಸಿದ ಅದು 'ಕರ್ನಾಟಕ ಕೃಷ್ಣರಾಯ ಭಾರತ ಕಥಾಮಂಜರಿ' ಎಂದು ಪ್ರಸಿದ್ಧಿ ಪಡೆದಿದೆ.
- ತನ್ನ ತಾಯಿ ನಾಗಲಾಂಬಿಕೆಯ ಹೆಸರಿನಲ್ಲಿ ನಾಗಲಾಪುರವನ್ನು ಮತ್ತು ತನ್ನ ರಾಣಿ ತಿರುಮಲಾದೇವಿಯ ಹೆಸರಿನಲ್ಲಿ ಹೊಸ ಪಟ್ಟಣ (ಹೊಸಪೇಟೆ) ಎಂಬ ನಗರ ನಿರ್ಮಿಸಿದ.
- ಹಂಪಿಯ ಕೃಷ್ಣಸ್ವಾಮಿ, ವಿಜಯ ವಿಠ್ಠಲ ಸ್ವಾಮಿ, ಹಜಾರ ರಾಮಸ್ವಾಮಿ, ಮಹಾನವಮಿ ದಿಬ್ಬ, ರಾಯ ಗೋಪುರಗಳು ಇವನ ನಿರ್ಮಾಣ.
- ಕೃಷ್ಣದೇವರಾಯನ ಪತ್ನಿಯರಾದ ತಿರುಮಲಾದೇವಿ ಮತ್ತು ಚಿನ್ನಾದೇವಿಯರು ಗಾಯಕಿಯರಾಗಿದ್ದರು.
- ಕೃಷ್ಣದೇವರಾಯನಿಗೆ ತಿರುಮಲ ಮತ್ತು ಕೃಷ್ಣದೇವರಾಯ ಎಂಬ ಇಬ್ಬರು ಗಂಡು ಮಕ್ಕಳು ಮತ್ತು ತಿರುಮಲಾಂಬೆ ಮತ್ತು ವೆಂಗಳಾಂಬಾ ಎಂಬ ಇಬ್ಬರು ಪುತ್ರಿಯರಿದ್ದರು.
- ತಿರುಮಲಾಂಬೆ ಎಂಬ ಮಗಳನ್ನು ಅರವೀಡು ಸಂತತಿಯ ರಾಮರಾಯನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಹಾಗೆಯೇ ವೆಂಗಳಾಂಬೆಯನ್ನು ರಾಮರಾಯನ ತಮ್ಮ ತಿರುಮಲನಿಗೆ ಮದುವೆ ಮಾಡಲಾಗಿತ್ತು.
- ಕ್ರಿ.ಶ. 1521ರಲ್ಲಿ ತಿರುಪತಿಗೆ ಭೇಟಿ ನೀಡಿದ ಸಂದರ್ಭದಲ್ಲಿ ತನ್ನ ಹಾಗೂ ತನ್ನ ರಾಣಿಯರಾದ ತಿರುಮಲಾದೇವಿ ಮತ್ತು ಚನ್ನದೇವಿಯ ಕಂಚಿನ ಮೂರ್ತಿಗಳನ್ನು ದೇವಸ್ಥಾನಕ್ಕೆ ನೀಡಿದ. ಅವುಗಳನ್ನು ಇಂದಿಗೂ ಕಾಣಬಹುದು.
- ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದವನು ಅವನ ಸಹೋದರ ಅಂದರೆ ಮಲತಾಯಿ ಓಬಲಾಂಬಿಕೆಯ ಮಗ ಅಚ್ಯುತರಾಯ (1530-1542).

**ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು**

| | ಪ್ರವಾಸಿಗರು | | ಅವಧಿ | | ವಿಜಯ ನಗರ ಅರಸ |
|---|---|---|---|---|---|
| 1. | ನಿಕೋಲೋ ಕಾಂಟಿ (ಇಟಲಿ) | - | 1420 | - | 1ನೇ ದೇವರಾಯ |
| 2. | ಅಬ್ದುಲ್ ರಜಾಕ್ (ಪರ್ಶಿಯಾ) | - | 1442-43 | - | 2ನೇ ದೇವರಾಯ |
| 3. | ನಿಕೆಟಿನ್ (ರಷ್ಯಾ) | - | 1468-70 | - | 2ನೇ ವಿರೂಪಾಕ್ಷರಾಯ |
| 4. | ಲುಡ್ವಿಕೊ ಡಿ ವಾರ್ಥಮಾ (ಇಟಲಿ) | - | 1505-07 | - | ನರಸಿಂಹ |
| 5. | ಟಾಮ್ ಪಿರೇಸ್ (ಪೋರ್ಚುಗಲ್) | - | 1512-15 | - | ಶ್ರೀಕೃಷ್ಣದೇವರಾಯ |
| 6. | ಡುರಾಂಟ್ ಬಾರ್ಬೋಸ್ (ಪೋರ್ಚುಗಲ್) | - | 1515-18 | - | ಶ್ರೀಕೃಷ್ಣದೇವರಾಯ |
| 7. | ಡೋಮಿಂಗೋ ಫಯಾಸ್ (ಪೋರ್ಚುಗಲ್) | - | 1520-21 | - | ಶ್ರೀಕೃಷ್ಣದೇವರಾಯ |
| 8. | ಫೆರ್ನೊವ್ ನ್ಯೂನಿಜ್ (ಪೋರ್ಚುಗಲ್) | - | 1534 | - | ಅಚ್ಯುತರಾಯ |
| 9. | ಗಾರ್ಸಿಯಾಡ ಓರ್ಟಾ (ಪೋರ್ಚುಗಲ್) | - | 1534 | - | ಅಚ್ಯುತರಾಯ |

| | | | | |
|---|---|---|---|---|
| 10. ಸಿಸಾರೋ ಫೆಡ್ರಿಕ್ (ಇಟಲಿ) | - | 1565-67 | - | ಸದಾಶಿವರಾಯ |
| 11. ಫೆರಿಸ್ತಾ (ಪರ್ಶಿಯಾ) | - | 1596 | - | 2ನೇ ವೆಂಕಟಾಪತಿ ದೇವರಾಯ |
| 12. ಪಿಟ್ರೋ ಡೆಲ್ಲಾವೆಲ್ಲಾ (ಇಟಲಿ) | - | 1623 | - | ರಾಮದೇವರಾಯ |

- ❖ ಅಳಿಯ ರಾಮರಾಯ - ಕ್ರಿ.ಶ. 1542-1570
- ❖ ಅಚ್ಯುತರಾಯನ ನಂತರ ಅಧಿಕಾರಕ್ಕೆ ಬಂದ ಒಂದನೇ ವೆಂಕಟನನ್ನು ಅಧಿಕಾರದ ಆಸೆಯಿಂದಾಗಿ - ಅಚ್ಯುತನ ಭಾವ ಮೈದುನನೇ ಆದ ಸಲಕ ತಿಮ್ಮನು ಕೊಂದು ಹಾಕಿದ. ಇದನ್ನು ಇಷ್ಟಪಡದ ರಾಮರಾಯ ಸಲಕ ತಿಮ್ಮನನ್ನು ಕೊಲೆಗೈಯ್ದು, ಅಚ್ಯುತರಾಯನ ಸೋದರ ಮಗ ಸದಾಶಿವರಾಯನನ್ನು ಅಧಿಕಾರಕ್ಕೆ ತಂದು, ಅವನ ಪ್ರತಿನಿಧಿಯಾಗಿ ಆಳಿದನು.
- ❖ ಕೃಷ್ಣದೇವರಾಯನ ಅಳಿಯನಾದ ಇವನು ಕ್ರಿ.ಶ. 1543-1551ರವರೆಗೆ ಪ್ರತಿನಿಧಿಯಾಗಿ ಆಳಿದರೆ, ನಂತರ ಕ್ರಿ.ಶ. 1551-65ರವರೆಗೆ ನೇರವಾಗಿ ಆಳ್ವಿಕೆ ಮಾಡಿದನು. ಮಲಬಾರ್ ಕರಾವಳಿ ತೀರದಲ್ಲಿ ಕ್ಯಾಥೋಲಿಕ್ಕರ ಮತಾಂತರ ನೀತಿಯನ್ನು ತಡೆಗಟ್ಟಿದನು.
- ❖ ಪೋರ್ಚುಗೀಸರ ಪೂರ್ವ ಕರಾವಳಿ ತೀರದ ಏಕೈಕ ವಸಾಹತು ನೆಲೆ ಸ್ಯಾನ್‌ಥೋಂ ಅನ್ನು ಆಕ್ರಮಿಸಿ ಅವರಿಂದ ಕಪ್ಪವನ್ನು ವಸೂಲು ಮಾಡಿದ.
- ❖ ಅಳಿಯ ರಾಮರಾಯ ಸದಾಶಿವರಾಯನನ್ನು ಕೈಗೊಂಬೆಯಾಗಿನ್ನಾಗಿ ಮಾಡಿಕೊಂಡು 1542-1565ರವರೆಗೆ ಸಾರ್ವಭೌಮನಾಗಿ ಮೆರೆದ.
- ❖ ಕೋದಂಡರಾಮ ಇವನ ಇನ್ನೊಂದು ಹೆಸರು.
- ❖ ಬ್ರಾಹ್ಮಣ ಅಧಿಕಾರಿಗಳನ್ನು ಕೈಬಿಟ್ಟು (ರಾಮಭಟ್ಟಯ್ಯ ಮತ್ತು ರಾಮಾಮಾತ್ಯರನ್ನು ಮಾತ್ರ ಉಳಿಸಿಕೊಂಡು) ಕ್ಷತ್ರಿಯರನ್ನು ಮತ್ತು ತೆಲುಗು ಚೋಳರನ್ನು ಆಡಳಿತದಲ್ಲಿ ಅಧಿಕಾರಿಗಳನ್ನಾಗಿ ನೇಮಕ ಮಾಡಿದ.
- ❖ ಮುಸ್ಲಿಂ ಸುಲ್ತಾನರ ಬಗ್ಗೆ ಹಿಂದಿನ ನೀತಿಯನ್ನು ಬಿಟ್ಟು ಅವರ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡಿದ.
- ❖ ದಖನ್ ಮುಸ್ಲಿಂ ಸುಲ್ತಾನರನ್ನು ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿ ಕಟ್ಟುವ ನೀತಿಯನ್ನು ಅನುಸರಿಸಿದ.
- ❖ ಇವನ ತಮ್ಮಂದಿರು ತಿರುಮಲ (ಮಂತ್ರಿ) ಮತ್ತು ವೆಂಕಟಾದ್ರಿಯರು (ಸೇನಾಧಿಕಾರಿ) ಇವನ ನೀತಿಗೆ ಬೆಂಬಲಿಸಿದರು.
- ❖ ಕ್ರಿ.ಶ. 1546ರಲ್ಲಿ ಪೋರ್ಚುಗೀಸ್ ವೈಸ್ರಾಯ್ ಜಾವೊಡಿ ಕ್ಯಾಸ್ಟ್ರೋನೊಂದಿಗೆ ವಾಣಿಜ್ಯ ಒಪ್ಪಂದ ಮಾಡಿಕೊಂಡ.
- ❖ ಸ್ಯಾಂಥೋಂನಲ್ಲಿ ಪೋರ್ಚುಗೀಸರ ಮತಾಂತರ ಹಾವಳಿಯನ್ನು ಹತ್ತಿಕ್ಕಿದ ಪರಿಣಾಮ ಪೋರ್ಚುಗೀಸರೊಂದಿಗಿನ ಸಂಬಂಧ ಹದಗೆಟ್ಟಿತು.
- ❖ 1559-1565ರವರೆಗೆ ಬೆಂಗಳೂರು ಸ್ಥಾಪಕ ಕೆಂಪೇಗೌಡರು ರಾಮರಾಯನಿಂದ ಬಂಧಿಯಾಗಿದ್ದನು.
- ❖ ತನ್ನ ಸೈನ್ಯದಲ್ಲಿ ಅಧಿಕ ಸಂಖ್ಯೆಯ ಮುಸ್ಲಿಂರನ್ನು ನೇಮಿಸಿಕೊಂಡನು.

**ತಾಳಿಕೋಟೆ ಯುದ್ಧ - 1565 ಜನವರಿ 23**

- ❖ ಅಳಿಯ ರಾಮರಾಯ ಮತ್ತು ದಕ್ಷಿಣದ ನಾಲ್ವರು ಮುಸ್ಲಿಂ ಸುಲ್ತಾನರ ನಡುವೆ ನಡೆಯಿತು.
- ❖ 1565 ಜನವರಿ 23, ಮಂಗಳವಾರದ ದಿನ ನಡೆದ ತಾಳಿಕೋಟೆ ಕದನವನ್ನು ರಕ್ಕಸ ತಂಗಡಿ ಎಂಥಲೂ ಹಾಗೂ ಬನ್ನಿಹಟ್ಟಿ ಕಾಳಗ ಎಂತಲೂ ಕರೆಯುವರು.
- ❖ ಕೃಷ್ಣಾನದಿಯಿಂದ ಉತ್ತರದ ದಂಡೆಯ ಮೇಲಿನ ರಕ್ಕಸ-ತಂಗಡಿ ಗ್ರಾಮಗಳ ನಡುವಿನ ಬಯಲು ಭೂಮಿಯಲ್ಲಿ ಈ ಯುದ್ಧ ಸಂಭವಿಸಿತು.

- ಅಳಿಯ ರಾಮರಾಯನ ವಿರುದ್ಧ ಒಗ್ಗೂಡಿದ ಸುಲ್ತಾನರುಗಳೆಂದರೆ - ಬಿಜಾಪುರದ ಅಲಿ ಆದಿಲ್ ಷಾ, ಅಹಮದ್ ನಗರದ ಹುಸೇನ್ ನಿಜಾಂಷಾ, ಗೋಲ್ಕೊಂಡದ ಇಬ್ರಾಹಿಂ ಕುತುಬ್ ಷಾ ಮತ್ತು ಬೀದರ್‌ನ ಅಲಿ ಬರೀದ್ ಷಾ.
- ಅಹ್ಮದ್ ನಗರದ ಹುಸೇನ್ ನಿಜಾಂಷಾ ರಾಮರಾಯನ ಶಿರವನ್ನು ಕತ್ತರಿಸಿ ಈಟಿಯ ಭರ್ಜಿಯಲ್ಲಿ ಸಿಕ್ಕಿಸಿ ಪ್ರದರ್ಶಿಸಿದ ಪರಿಣಾಮ ಸೈನಿಕರೆಲ್ಲಾ ದಿಕ್ಕಾ ಪಾಲಾಗಿ ಓಡಿದರು. ಲಕ್ಷಾಂತರ ಸೈನಿಕರನ್ನು ಹತ್ಯೆ ಮಾಡಲಾಯಿತು. ಹಿಂದೆಂದೂ ಕಾಣದ ಸಂಪತ್ತಿನ ಲೂಟಿ ನಡೆಯಿತು. ವಿಜಯನಗರ ಸಾಮ್ರಾಜ್ಯ ಪತನವಾಗಿ ಹಾಳು ಕೊಂಪೆಯಾಯಿತು.

## ಅರವೀಡು ವಂಶ - 1570-1640

**ತಿರುಮಲ - 1570-78**

- ತಾಳಿಕೋಟೆಯುದ್ಧ ಭೂಮಿಯಿಂದ ಪಲಾಯನ ಮಾಡಿದ ರಾಮರಾಯನ ತಮ್ಮ ತಿರುಮಲನು ಪೆನುಗೊಂಡೆಗೆ ಹೋಗಿ, ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಪ್ರಾರಂಭಿಸಿದ. ನಂತರ ಬಂಧಿಯಾಗಿದ್ದ ಸದಾಶಿವರಾಯನನ್ನು 1570ರಲ್ಲಿ ಕೊಲ್ಲಿಸಿ ಅರವೀಡು ಮನೆತನ ಸ್ಥಾಪಿಸಿದ.
- ತನ್ನ ಸಾಮ್ರಾಜ್ಯವನ್ನು ಮೂರು ವಿಭಾಗಗಳನ್ನಾಗಿ ಮಾಡಿ ತನ್ನ ಮೂವರು ಮಕ್ಕಳಲ್ಲಿ ಹಂಚಿದ. ಅದರಂತೆ ಹಿರಿಯ ಮಗ ಶ್ರೀರಂಗನಿಗೆ ತೆಲುಗು ಪ್ರದೇಶಗಳನ್ನು ವಹಿಸಿ ಪೆನುಗೊಂಡೆಯಿಂದ ಆಳುವಂತೆ ಮಾಡಿದ. 2ನೇ ಮಗ ರಾಮರಾಯನಿಗೆ ಕನ್ನಡ ಪ್ರದೇಶಗಳನ್ನು ವಹಿಸಿ ಕೊಡಲಾಯಿತು. ಈತ ಶ್ರೀರಂಗಪಟ್ಟಣ ಮೂಲಕ ಆಳಲು ಪ್ರಾರಂಭಿಸಿದ. 3ನೇ ಮಗ ವೆಂಕಟಪತಿಯು ತಮಿಳು ಪ್ರದೇಶಗಳನ್ನು ಚಂದ್ರಗಿರಿಯಿಂದ ಆಳುವಂತೆ ಮಾಡಲಾಯಿತು.

**ಅರವೀಡು ಸಂತತಿಯ ರಾಜರುಗಳು**

  - ತಿರುಮಲ - ಕ್ರಿ.ಶ. 1570-1578
  - 2ನೇ ಶ್ರೀರಂಗ - 1578-1586
  - 1ನೇ ವೆಂಕಟಪತಿ - 1585-1614
  - 3ನೇ ಶ್ರೀರಂಗ - 1614-1617
  - 2ನೇ ರಾಮದೇವ - 1617-1632
  - 2ನೇ ವೆಂಕಟಪತಿ - 1632-1642
  - 4ನೇ ಶ್ರೀರಂಗ - 1642-1681

- 4ನೇ ಶ್ರೀರಂಗನು ಅರವೀಡು ಮನೆತನದ ಮತ್ತು ವಿಜಯನಗರ ಸಾಮ್ರಾಜ್ಯದ ಕಟ್ಟಕಡೆಯ ದೊರೆ.
- ಮೊಗಲ್ ಸಾಮ್ರಾಟ ಔರಂಗಜೇಬನ ಆದೇಶದ ಮೇರೆಗೆ ಗೋಲ್ಕಂಡ ಮತ್ತು ಬಿಜಾಪುರ ಸುಲ್ತಾನರು ವಿಜಯನಗರ ಪ್ರದೇಶವನ್ನು ಆಕ್ರಮಿಸಿದರು. ಬಿಜಾಪುರ ದಂಡನಾಯಕ ಮುಸ್ತಾಫ್ ಖಾನ್ ವೆಲ್ಲೂರು ಮತ್ತಿತರ ದಕ್ಷಿಣ ಕೋಟೆಗಳನ್ನು ವಶಪಡಿಸಿಕೊಂಡ. ಗೋಲ್ಕಂಡ ದಂಡನಾಯಕ ಮೀರ್‌ಜುಮ್ಲಾನು ವಿನುಗೊಂಡ, ಉದಯಗಿರಿ ವಶಪಡಿಸಿಕೊಂಡನು. ಇದರಿಂದ ತನ್ನ ಅಸ್ತಿತ್ವ ಕಳೆದುಕೊಂಡು 4ನೇ ಶ್ರೀರಂಗನು ಅಲೆದಾಡುವಂತಾಯಿತು.

- 4ನೇ ಶ್ರೀರಂಗ ಅಲೆದಾಡುತ್ತಿದ್ದಾಗ ಕೆಳದಿ / ಇಕ್ಕೇರಿ ನಾಯಕ ಶಿವಪ್ಪನಾಯಕ ರಕ್ಷಣೆ ನೀಡಿ, ಅವನನ್ನು ಬೇಲೂರಿನಲ್ಲಿ ರಾಜನನ್ನಾಗಿ ಪ್ರತಿಷ್ಠಾಪಿಸಿದ. ಪುನಃ ತನ್ನ ಸಾಮ್ರಾಜ್ಯ ಮರಳಿ ಪಡೆಯಲು ನಡೆಸಿದ ಪ್ರಯತ್ನಗಳು ವಿಫಲವಾಗಿ ಕ್ರಿ.ಶ. 1681ರಲ್ಲಿ ಶ್ರೀರಂಗನು ಮರಣಹೊಂದಿದ. ಇವನೊಂದಿಗೆ ವಿಜಯನಗರದ ಕೊನೆಯ ಕೊಂಡಿಯು ಕಳಚಿಹೋಯಿತು. ಇದರಿಂದಾಗಿ ಹಲವಾರು ಚಿಕ್ಕಪುಟ್ಟ ಸಂಸ್ಥಾನಗಳು ಉದಯಿಸಿದವು.

## ಬಹುಮನಿ ಸಾಮ್ರಾಜ್ಯ

- ಸ್ಥಾಪನೆ - 1347
- ಸ್ಥಾಪಕ - ಅಲ್ಲಾವುದ್ದೀನ್ ಹಸನ್ ಗಂಗು ಬಹಮನ್ ಷಾ (1347-1358)
- ರಾಜಧಾನಿ - ಗುಲ್ಬರ್ಗ, ನಂತರ ಬೀದರ್

### 1ನೇ ಮಹಮ್ಮದ್ ಷಾ (ಕ್ರಿ.ಶ. 1358-1375)

- ವಿಜಯನಗರ ಮತ್ತು ತೆಲಂಗಾಣದ ವಿರುದ್ಧ ಯುದ್ಧಾರಂಭ
- ತೆಲಂಗಾಣದ ರಾಜ ಕಾಪಯ್ಯ ನಾಯಕನನ್ನು ಸೋಲಿಸಿ ಅವನಿಂದ ಗೋಲ್ಕಂಡ ಕೋಟೆಯನ್ನು ವಶಪಡಿಸಿಕೊಂಡನು.
- 1366ರ ಸಿರಗುಪ್ಪ ಕದನದಲ್ಲಿ 1ನೇ ಬುಕ್ಕರಾಯನನ್ನು ಸೋಲಿಸಿದ.
- ಗುಲ್ಬರ್ಗದಲ್ಲಿ ನಡೆದ ಸಮಾರಂಭದಲ್ಲಿ ರಂಜಿಸಿದ ದೆಹಲಿ ಸಂಗೀತಗಾರರಿಗೆ ಕೊಡಬೇಕಾದ ಸಂಭಾವನೆಯ ಹಣವನ್ನು ಬುಕ್ಕರಾಯನಿಂದ ಕೊಡಿಸಿದ.
- ಗುಲ್ಬರ್ಗಾದಲ್ಲಿ ಷಾ ಬಜಾರ್‌ಮಸೀದಿ ಮತ್ತು ಜಾಮೀಮಸೀದಿ (1367) ಗಳನ್ನು ನಿರ್ಮಿಸಿದ.

### 2ನೇ ಮಹಮ್ಮದ್ ಷಾ (ಕ್ರಿ.ಶ. 1378-1397)

- 1387ರಲ್ಲಿ ಉಂಟಾದ ಕ್ಷಾಮದ ಕಾಲದಲ್ಲಿ ಗುಜರಾತಿನಿಂದ ಧಾನ್ಯಗಳನ್ನು ತರಿಸಿ ಪ್ರಜೆಗಳನ್ನು ರಕ್ಷಿಸಿದ.
- ಪರ್ಶಿಯಾದ ಪ್ರಸಿದ್ಧ ಕವಿ ಹಫೀಜನನ್ನು ತನ್ನ ಆಸ್ಥಾನಕ್ಕೆ ಆಹ್ವಾನಿಸಿದ.
- ಇವನ ಕಾಲದ ಶ್ರೇಷ್ಠ ನ್ಯಾಯಾಧೀಶ (ಸದರ್ ಇ ಜಹಾನ್) - ಫಜಲ್ಲಾ.

### ಫಿರೋಜ್ ಷಾ (ಕ್ರಿ.ಶ. 1397-1422)

- 1387ರಲ್ಲಿ ಉಂಟಾದ ಕ್ಷಾಮದ ಕಾಲದಲ್ಲಿ ಗುಜರಾತಿನಿಂದ ಧಾನ್ಯಗಳನ್ನು ತರಿಸಿ ಪ್ರಜೆಗಳನ್ನು ರಕ್ಷಿಸಿದ.
- ಪರ್ಶಿಯಾದ ಪ್ರಸಿದ್ಧ ಕವಿ ಹಫೀಜನನ್ನು ತನ್ನ ಆಸ್ಥಾನಕ್ಕೆ ಆಹ್ವಾನಿಸಿದ.
- ಇವನ ಕಾಲದ ಶ್ರೇಷ್ಠ ನ್ಯಾಯಾಧೀಶ (ಸದರ್ ಇ ಜಹಾನ್) - ಫಜಲ್ಲಾ.

### ಫಿರೋಜ್ ಷಾ (ಕ್ರಿ.ಶ. 1397-1422)

- ದೌಲತ್ ಬಾದ್ನಲ್ಲಿ ಒಂದು ಜ್ಯೋತಿರ್ವೀಕ್ಷಣಾಲಯವನ್ನು ನಿರ್ಮಿಸಿದ.
- ಭೀಮಾನದಿ ದಡದಲ್ಲಿ ಫಿರೋಜಾಬಾದ್ ನಗರ ನಿರ್ಮಿಸಿದ.
- ಇವನ ಅಂತಃಪುರದಲ್ಲಿ ವಿವಿಧ ಭಾಷಾ ರಾಜ್ಯಗಳಿಗೆ ಸೇರಿದ 800 ಮಂದಿ ಸ್ತ್ರೀಯರಿದ್ದರು.

- ಕುರಾನನ್ನು ಪ್ರತಿ ಮಾಡಿ ಅದರಿಂದ ಬರುವ ಹಣದಿಂದ ತನ್ನ ವೈಯುಕ್ತಿಕ ಖರ್ಚನ್ನು ನಿಭಾಯಿಸುತ್ತಿದ್ದ.
- ಕ್ರಿ.ಶ. 1406ರಲ್ಲಿ ಮುದಗಲ್ಲಿನ ಅಕ್ಕಸಾಲಿಗನ ಮಗಳ ನಿಮಿತ್ತವಾಗಿ ಫಿರೋಜ್ ಷಾ ಮತ್ತು 1ನೇ ದೇವರಾಯನ ನಡುವೆ ಕಾಳಗ ನಡೆಯಿತು.
- ಕೊಂಕಣದ ಚೌಲ್ ಮತ್ತು ದಾಬೋರ್ ರೇವು ಪಟ್ಟಣಗಳನ್ನು ಅಭಿವೃದ್ಧಿಗೊಳಿಸಿದ.

**ಅಹಮದ್ ಷಾ (ಕ್ರಿ.ಶ. 1422-1436)**

- 1422ರಲ್ಲಿ ಗುಲ್ಬರ್ಗಾದಿಂದ ಬೀದರ್‌ಗೆ ರಾಜಧಾನಿ ವರ್ಗಾಯಿಸಿದನು.
- 'ವಲಿ' ಅಥವಾ ಸಂತ ದೊರೆ ಎಂದು ಹೆಸರಾಗಿದ್ದನು (ಸೂಫಿ ಸಂತ ಗೇಸುದರಾಜನ ಅನುಯಾಯಿಯಾಗಿದ್ದನು.)
- ಪರ್ಶಿಯಾದ ಕವಿ ಅಜರಿಯು ಇವನ ಆಸ್ಥಾನದಲ್ಲಿ 'ಬಹಮನ್ ನಾಮಾ' ಕೃತಿಯನ್ನು ರಚಿಸಿದನು.
- ತಖತ್‌ಮಹಲ್ ಮತ್ತು ಸೋಲಕಂಬ ಮಸೀದಿಗಳನ್ನು ನಿರ್ಮಿಸಿದ.
- ಇವನ ಕಾಲದಲ್ಲಿ ವಿದೇಶಿ ಮುಸ್ಲಿಂ ಶ್ರೀಮಂತರಾದ ಅಫಾಖಿ ಅಥವಾ ಪರ್ದೇಶಿ (ಷಿಯಾಪಂಥ) ಮತ್ತು ಸ್ಥಳೀಯ ಮುಸ್ಲೀಂ ಶ್ರೀಮಂತ ವರ್ಗವಾದ 'ದಕ್ಖನ್ನಿ' ಶ್ರೀಮಂತರ ನಡುವೆ (ಸುನ್ನಿ) ವೈಷಮ್ಯ ಬೆಳೆಯಿತು. ಇದು ಮುಂದೆ ಬಹಮನಿ ಸಾಮ್ರಾಜ್ಯ ಪತನಕ್ಕೆ ಕಾರಣವಾಯಿತು.

**ಎರಡನೇ ಅಲ್ಲಾವುದ್ದೀನ್ ಅಹಮದ್ (ಕ್ರಿ.ಶ. 1436-1458)**

- ಬೀದರನಲ್ಲಿ ವೈದ್ಯ ಚಿಕಿತ್ಸಾಲಯ ಸ್ಥಾಪಿಸಿದ.
- ದಖ್ಖನ್ನಿ ಮುಸ್ಲೀಂ ಶ್ರೀಮಂತರ ಚಾಡಿಮಾತಿಗೆ ಕಿವಿಗೊಟ್ಟು ಪರ್ದೇಶಿ ಮುಸ್ಲಿಂ ಶ್ರೀಮಂತ ವರ್ಗದವರನ್ನು ಕಗ್ಗೊಲೆ ಮಾಡಿಸಿದ. ಈ ಘಟನೆಯ ಚಾಕನ್‌ದುರಂತ ಎಂದೇ ಹೆಸರಾಗಿದೆ.

**ಅಲ್ಲಾವುದ್ದೀನ್ ಹುಮಾಯೂನ್ (ಕ್ರಿ.ಶ. 1458-1461)**

- ಕ್ರೂರ, ನಿರಂಕುಶ ಸುಲ್ತಾನ
- ಪರ್ದೇಶಿ ಶ್ರೀಮಂತರ ಬಣಕ್ಕೆ (ಪಿಯಾಬಣ) ಸೇರಿದ ಮಹಮ್ಮದ್ ಗವಾನನ್ನು ತನ್ನ ಮಂತ್ರಿಯಾಗಿ ನೇಮಕ ಮಾಡಿದನು.
- ಇತಿಹಾಸಕಾರ ಫೆರಿಸ್ತಾ ಇವನನ್ನು 'ಜಾಲಿಂ' ಅಂದರೆ ನಿರಂಕುಶ ಪ್ರಭು ಎಂದು ಕರೆದಿದ್ದಾನೆ.
- ಕ್ರಿ.ಶ. 1461ರಲ್ಲಿ ತನ್ನ ಸೇವಕನಿಂದಲೇ ಕೊಲೆಗೀಡಾದಾಗ ಜನತೆಗೆ ಇವನ ಸಾವು ಸಂತೋಷ ತಂದಿತು.
- ಇವನ ನಂತರ ಇವನ ಅಪ್ರಾಪ್ತ ಮಗ ನಿಜಾಂಷಹನನ್ನು ಅಧಿಕಾರಕ್ಕೆ ತಂದು ಪ್ರತಿನಿಧಿಯಾಗಿ ರಾಣಿ ನರ್ಗೀಸ್ ಬೇಗಂ ಆಳಿದಳು.
- 1463ರಲ್ಲಿ ನಿಜಾಂಷಹ ಮರಣ ಹೊಂದಿದಾಗ ಮಹಮ್ಮದ್ ಷಾ ಅಧಿಕಾರಕ್ಕೆ ಬಂದ. ಇವನು ಕೂಡ ಅಪ್ರಾಪ್ತನಾಗಿದ್ದು, 1463 ರಿಂದ 1482ರವರೆಗೆ ಆಳಿದನು. ಇವನ ಕಾಲದಲ್ಲಿ ಮಹಮದ್ ಗವಾನನು ಪ್ರಧಾನಮಂತ್ರಿಯಾಗಿ ಮತ್ತು ರಾಜ ಪ್ರತಿನಿಧಿಯಾಗಿ ಕರ್ತವ್ಯ ನಿಭಾಯಿಸಿದನು.

**ಮಹಮ್ಮದ್ ಗವಾನ್**

- 3ನೇ ಮಹಮದ್ ಷಾನ ಪ್ರಧಾನ ಮಂತ್ರಿ.
- ಪರ್ಶಿಯಾದಲ್ಲಿ ಕ್ರಿ.ಶ. 1411ರಲ್ಲಿ ಜನಿಸಿದ, ವ್ಯಾಪಾರಿಯಾಗಿ ಜೀವನ ಆರಂಭಿಸಿ, 42ನೇ ವಯಸ್ಸಿನಲ್ಲಿ ದೆಹಲಿಗೆ

ಬಂದು ಬೀದರಿನ ಪ್ರಸಿದ್ಧ ಸಂತನಾದ ಮಹಿಬುಲ್ಲಾ ಕಿರ್ಮಾನಿಯ ಕೀರ್ತಿಯನ್ನು ಮೆಚ್ಚಿ ಅವನನ್ನು ಭೇಟಿ ಮಾಡಲು ಬೀದರ್‌ಗೆ ಬಂದನು. ಆಗ ಬಹಮನಿ ಸುಲ್ತಾನ ಅಲ್ಲಾವುದ್ದೀನ್ ಇವನ ಪಾಂಡಿತ್ಯ, ಪ್ರಾಮಾಣಿಕತೆಯಿಂದ ಪ್ರಭಾವಿತನಾಗಿ ತನ್ನ ಸೇವೆಯಲ್ಲಿ ಸೇರಿಸಿಕೊಂಡ.

- ಕ್ರಿ.ಶ. 1463ರಿಂದ 1481ರವರೆಗೆ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ.
- 1466ರಲ್ಲಿ ಮಾಳ್ವದ ಸುಲ್ತಾನ ಮಹಮದ್ ಖಿಲ್ಜಿಯನ್ನು ಸೋಲಿಸಿ ಎಲಿಚಪುರ ಮತ್ತು ಮಾಹುಲ್‌ಗಳನ್ನು ಆಕ್ರಮಿಸಿದ.
- ಒರಿಸ್ಸಾದಲ್ಲಿನ ದಂಗೆಯನ್ನು ಅಡಗಿಸಿ ಅಲ್ಲಿದ್ದ ದೇವಾಲಯಗಳನ್ನು ನಾಶಗೊಳಿಸಿ "ಘಾಜಿ" ಎಂಬ ಬಿರುದು ಧರಿಸಿದ.
- ಪ್ರಾಂತ್ಯಗಳನ್ನು ಪುನರಚನೆ ಮಾಡಿ ರಾಜ್ಯವನ್ನು 8 ವಿಭಾಗಗಳಾಗಿ (ತರಫ್‌ಗಳಾಗಿ) ವಿಂಗಡಿಸಿದ.
- ಇವನ ಕಂದಾಯ ಮತ್ತು ಹಣಕಾಸಿನ ನೀತಿಗಳು ಅಕ್ಬರ್ ಮತ್ತು ತೋದರಮಲ್ಲನಿಗೆ ಮಾದರಿಯಾದವು ಎಂದು ಹೇಳಲಾಗುತ್ತದೆ.
- ಇವನ ಕಾಲದ ಪ್ರಾಂತ್ಯಾಡಳಿತ (ತರಫ್)ದ ಅಧಿಕಾರಿಗಳು ಈ ಕೆಳಕಂಡಂತೆ ಇದ್ದರು.
  - ತರಫ್‌ದಾರ (ರಾಜ್ಯಪಾಲ)
  - ಅನಿಫ್ (ಜಿಲ್ಲಾಧಿಕಾರಿ)
  - ಜಾಗಿರ್ದಾರ್ (ಪಾಳೆಗಾರ)
  - ಕಿಲೆದಾರ್ (ಕಿರು ಪ್ರಾಂತ್ಯಾಧಿಕಾರಿ)
  - ದೇಸಾಯಿ (ಹಿಂದೂ ಜಹಂಗೀರ್)
  - ಸರ್ ದೇಸಾಯಿ (ಹಿಂದೂ ಜಾಗೀರ್ದಾರ್)
  - ಕೊತ್ವಾಲ್ (ನಗರಾಧಿಕಾರಿ)
  - ಮುಕರಮ್ (ಗ್ರಾಮಾಧಿಕಾರಿ, ಗೌಡ)
- ಸ್ವತಃ ವಿದ್ವಾಂಸನಾದ ಗವಾನನ ಕೃತಿಗಳು - ರಿಯಾನ್ ಉಲ್ ಇನ್ಷಾ, ಮನ್ಜಿಯಲ್ ಇನ್ ಷಾ, ದಿವಾನ್ ಇ ಆಷರ್.
- ಕ್ರಿ.ಶ. 1472ರಲ್ಲಿ ಬೀದರ್‌ನಲ್ಲಿ ನಿರ್ಮಿಸಿದ ಮದರಾಸ ವಿದ್ಯಾಮಂದಿರ ಇವನ ಪ್ರಮುಖ ಕೊಡುಗೆ. ಈ ಕಾಲೇಜಿಗೆ 3000 ಗ್ರಂಥಗಳುಳ್ಳ ಒಂದು ಗ್ರಂಥ ಭಂಡಾರ ನಿರ್ಮಿಸಿ ಕೊಟ್ಟನು.
- ಕ್ರಿ.ಶ. 1470ರಲ್ಲಿ ಬೀದರ್ಗೆ ಭೇಟಿ ನೀಡಿದ ರಷ್ಯಾದ ಪ್ರವಾಸಿಗ ನಿಕಿಟಿನ್‌ನು ಬೀದರನ್ನು ಮಹಮ್ಮದೀಯ ಹಿಂದೂಸ್ಥಾನದಲ್ಲೇ ಪ್ರಮುಖ ಪಟ್ಟಣ ಎಂದು ಹೊಗಳಿದ್ದಾನೆ.
- ಬಹಮನಿ ಆಸ್ಥಾನದಲ್ಲಿ ಅಫಾಕಿ ಮುಸ್ಲೀಮರು ಗವಾನನ ನೇತೃತ್ವದಲ್ಲಿ ಪ್ರಬಲರಾದರು. ಇದನ್ನು ಸಹಿಸದ ದಖನ್ನೀ ಮುಸ್ಲೀಮರು ತೆಲಂಗಾಣದ ತರಫ್ದಾರ ಹಸನ್ ನಿಜಾಮ್ ಉಲ್ ಮುಲ್ಕ ಬಹ್ರೀಯ ನೇತೃತ್ವದಲ್ಲಿ ಒಂದಾದರು. ಗವಾನನ ಸಹಿ ಮುದ್ರೆಯನ್ನು ಅಪಹರಿಸಿ ಗವಾನನು ಬರೆದಂತೆ ಪತ್ರವೊಂದನ್ನು ತಯಾರು ಮಾಡಿ ಒರಿಸ್ಸಾದ ಗಜಪತಿಯು ಬಹಮನಿ ಮೇಲೆ ದಾಳಿ ಮಾಡುವಂತೆ ಪ್ರೇರೇಪಿಸುವ ಈ ಪತ್ರವನ್ನು ಸುಲ್ತಾನನಿಗೆ ನೀಡಿದರು. ಇದರಿಂದ ಕುಪಿತಗೊಂಡ ಸುಲ್ತಾನ 3ನೇ ಮಹಮ್ಮದ್ ಷಾ 1481 ರ ಏಪ್ರಿಲ್ 15 (ಜುಲೈ 5) ರಂದು ಗಲ್ಲು ಶಿಕ್ಷೆಗೆ ಗುರಿಪಡಿಸಿದ. ಆದರೆ ಸತ್ಯಾಂಶ ಗೊತ್ತಾದಾಗ ತನ್ನ ನಂಬಿಗಸ್ಥ ಗವಾನನ್ನು ಕಳೆದುಕೊಂಡ ಕೊರಗಿನಲ್ಲೇ ಸುಲ್ತಾನನು ಸಾವನ್ನಪ್ಪಿದ.

### ಬಹಮನಿ ಸಾಮ್ರಾಜ್ಯ ಪತನ ಮತ್ತು ಐದು ಷಾಹಿ ರಾಜ್ಯಗಳ ಉದಯ

- 3ನೇ ಮಹಮ್ಮದ್ ಷಾನ ಮರಣಾನಂತರ ಅವನ 12 ವರ್ಷದ ಮಗ ಷಹಾಬ್ ಉದ್ದಿನ್ ಮಹಮ್ಮದ್ ಸುಲ್ತಾನನಾದ (ಕ್ರಿ.ಶ. 1482-1518) ಇವನ ಅಸಮರ್ಥತೆಯಿಂದಾಗಿ ವಿವಿಧ ಪ್ರಾಂತ್ಯಗಳ ರಾಜ್ಯಪಾಲರು ಸ್ವತಂತ್ರರಾದರು. ಪರಿಣಾಮ ಬಹಮನಿ ಸಾಮ್ರಾಜ್ಯ ಒಡೆದು, ಐದು ಷಾಹಿರಾಜ್ಯಗಳು ಉದಯವಾದವು. ಅವುಗಳೆಂದರೆ -

| | ಷಾಹಿರಾಜ್ಯಗಳು | | ಸ್ಥಾಪಕರು |
|---|---|---|---|
| 1. | ಬಿಜಾಪುರದ ಆದಿಲ್ ಷಾಹಿ | - | ಯೂಸುಫ್ ಆದಿಲ್ ಷಾ |
| 2. | ಅಹಮದ್ ನಗರದ ನಿಜಾಮ್ ಷಾಹಿ | - | ಮಲ್ಲಿಕ್ ಅಹಮದ್ |
| 3. | ಬಿರಾರ್‌ನ ಇಮಾದಾ ಷಾಹಿ | - | ಇಮಾದ್ ಉಲ್-ಮುಲ್ಕ್ |
| 4. | ಗೋಲ್ಕಂಡದ ಕುತುಬ್ ಷಾಹಿ | - | ಕುತುಬ್-ಉಲ್-ಮುಲ್ಕ್ |
| 5. | ಬೀದರ್‌ನಲ್ಲಿ ಬರೀದ್ ಷಾಹಿ | - | ಅಲಿ ಬರೀದ್ (ಅಮೀರ್ ಅಲಿ) |

- ಈ ರಾಜ್ಯಗಳೆಲ್ಲವೂ 17ನೇ ಶತಮಾನದಲ್ಲಿ ಮೊಗಲರ ಆಕ್ರಮಣಕ್ಕೆ ಒಳಗಾಗಿ ಆ ಸಾಮ್ರಾಜ್ಯದ ಭಾಗಗಳಾದವು.

### ಬಹಮನೀಯ (ಬೀದರ್) ಕೊನೆಯ ಸುಲ್ತಾನರುಗಳು

- ನಾಲ್ಕನೇ ಅಹಮದ್ - ಕ್ರಿ.ಶ. 1518-1520
- ಅಲ್ಲಾ-ಉದ್-ದಿನ್ ಷಾ - 1520-1523
- ವಾಲಿಯಾ-ಉಲ್-ಷಾ - 1523-26
- ಕಲೀಂ-ಉಲ್ ಷಾ - 1526-1528

## ಬಿಜಾಪುರದ ಆದಿಲ್ ಷಾಹಿಗಳು (1489-1686)

### ಯೂಸೂಫ್ ಆದಿಲ್ ಷಾ - 1489-1510

- ಬಿಜಾಪುರದ ಆದಿಲ್ ಷಾಹಿ ವಂಶದ ಸ್ಥಾಪಕ
- ಇವನ ಕಾಲದಲ್ಲಿ ಪೋರ್ಚುಗೀಸರು ಆಗಮನ
- ಪೋರ್ಚುಗೀಸ್ ಗವರ್ನರ್ ಆಲ್ಬುಕರ್ಕನು, ಕ್ರಿ.ಶ. 1510ರ ಫೆಬ್ರವರಿಯಲ್ಲಿ ಇವನಿಂದ ಗೋವಾ ವಶಪಡಿಸಿಕೊಂಡ.
- ಇವನ ಸಮಕಾಲೀನ ವಿಜಯನಗರ ಅರಸ ಕೃಷ್ಣದೇವರಾಯನು (ಕ್ರಿ.ಶ. 1509-1529)
- 1510 ಸೆಪ್ಟೆಂಬರ್‌ನಲ್ಲಿ ಯೂಸುಫ್ ಆದಿಲ್ ಖಾನ್ ಮರಣ ಹೊಂದಿದ.

### 1ನೇ ಅಲಿ ಆದಿಲ್ ಷಾ (ಕ್ರಿ.ಶ. 1557-1580)

- ಇವನ ಕಾಲದ ಪ್ರಮುಖ ಘಟನೆಯೆಂದರೆ ವಿಜಯನಗರ ಸಾಮ್ರಾಜ್ಯದ ಪತನ.
- ಅಹಮ್ಮದ್ ನಗರದ ಸುಲ್ತಾನ ಸುಹೇನ್ ನಿಜಾಂ ಅಲಿಯ ಮಗಳಾದ ಚಾಂದ್‌ಬೀಬಿಯನ್ನು ವಿವಾಹವಾದ ಹಾಗೂ ತನ್ನ ತಂಗಿ ಹಾದಿಬೇಗಂಳನ್ನು ನಿಜಾಂಷಾನ ಮಗ ಮುಸ್ತಾಫನಿಗೆ ಕೊಟ್ಟು ವಿವಾಹ ಮಾಡಿದ. ಪರಿಣಾಮ ಈ ಎರಡು ಮನೆತನಗಳು ಒಂದಾದವು.

### 2ನೇ ಇಬ್ರಾಹಿಂ ಆದಿಲ್ ಷಾ (ಕ್ರಿ.ಶ. 1580-1626)

- ಇವನು ಅಧಿಕಾರಕ್ಕೆ ಬಂದಾಗ ಅಪ್ರಾಪ್ತನಾದ್ದರಿಂದ ಚಿಕ್ಕಮ್ಮ ಚಾಂದ್‌ಬೀಬಿ ಪ್ರತಿನಿಧಿಯಾದಳು.
- ಉದಾರಿ ದೊರೆಯಾದ ಈತ ಹಿಂದೂ ಪಕ್ಷಪಾತಿಯಾಗಿದ್ದು ತನ್ನ ಅರಮನೆಯ ಕೋಟೆಯ ಬಳಿ ನರಸಿಂಹ ದೇವಾಲಯವನ್ನು ನಿರ್ಮಿಸಿದನು.
- ಸಂಗೀತ ಪ್ರಿಯನಾದ ಇವನು ಕಿತಾಬ್ ಇ ನವರಸ ಎಂಬ ಶ್ರೇಷ್ಠ ಸಂಗೀತ ಕೃತಿ ರಚಿಸಿದ್ದಾನೆ.
- ಇವನನ್ನು ಜಗದ್ಗುರು ಬಾದ್‌ಷಾ ಎಂಬುದಾಗಿ ಕರೆಯಲಾಗಿದೆ.
- ದಕ್ಷಿಣದ ಭಾಷೆಗಳಾದ ಮರಾಠಿ, ಕನ್ನಡವನ್ನು ಪರ್ಶಿಯನ್ ಭಾಷೆಗೆ ಬದಲಾಗಿ ಆಡಳಿತದಲ್ಲಿ ಅಳವಡಿಸಿದ.
- ಫಿರೋಜ್, ಫೆರಿಸ್ತಾ ಇತಿಹಾಸಕಾರರು ಇವನ ಆಸ್ಥಾನದಲ್ಲಿದ್ದರು.

### ಮಹಮ್ಮದ್ ಆದಿಲ್ ಷಾ (ಕ್ರಿ.ಶ. 1626-1656)

- ಇವನ ಕಾಲದಲ್ಲಿ ಮೊಗಲ್ ಸಾಮ್ರಾಜ್ಯದ ಷಹಜಹಾನ್ ಬಿಜಾಪುರದ ಮೇಲೆ ದಾಳಿ ಮಾಡಿದ. ಈ ದಾಳಿಯ ಉದ್ದೇಶ ಷಿಯಾ ಪಂಥೀಯನಾದ ಇವನನ್ನು ಸುನ್ನೀ ಪಂಥಕ್ಕೆ ಬದಲಿಸುವುದಾಗಿತ್ತು ಎಂದು ಹೇಳಲಾಗಿದೆ.
- ಶಿವಾಜಿ ತಂದೆ ಷಹಜಿ ಬೋನ್ಸ್ಲೆಗೆ ಬೆಂಗಳೂರನ್ನು ಜಹಗೀರಾಗಿ ನೀಡಿದನು.
- ಜಗತ್ಪ್ರಸಿದ್ಧ ಬಿಜಾಪುರದ ಗೋಳಗುಮ್ಮಟ ಇವನ ಮಹಾನ್ ನಿರ್ಮಾಣ.
- ಜುಮ್ಮಾ ಮಸೀದಿ, ಸಾದರ್ ಮಹಲ್, ಅಸಾರ್‌ಮಹಲ್‌ಗಳೂ ಕೂಡ ಇವನ ರಚನೆ.
- ಗೋಳಗುಮ್ಮಟವು ಏಳು ಅಂತಸ್ತಿನ 4 ಮಿನಾರ್‌ಗಳನ್ನು ಸುತ್ತಲೂ ಹೊಂದಿದೆ. ಹೊರಗಡೆ ವ್ಯಾಸ 144 ಅಡಿಗಳು, ಒಳಗಡೆ ವ್ಯಾಸ - 124 ಅಡಿಗಳು. ಜಗತ್ಪ್ರಸಿದ್ಧ ಪಿಸುಮಾತಿನ ಗ್ಯಾಲರಿ ಇಲ್ಲಿಯೇ ಕಂಡು ಬರುವುದು. ಇದರ ಪ್ರಧಾನ ಶಿಲ್ಪಿ ಮಲ್ಲಿಕ್ ಸಂದಲ್, ಇದು ಇಂಡೋ ಸೆರಾಸನಿಕ್ ಶೈಲಿಯಲ್ಲಿದೆ.
- ಇವನ ನಂತರ ಬಂದವರು ಅಸಮರ್ಥರಾಗಿದ್ದು, ಕ್ರಿ.ಶ. 1672-1686ರವರೆಗೆ ಈ ಮನೆತನದ ಕೊನೆಯ ಸುಲ್ತಾನನಾಗಿ ಸಿಕಂದರ್ ಆದಿಲ್ ಷಾ ಆಳಿದ.
- ಕ್ರಿ.ಶ. 1686ರಲ್ಲಿ ಔರಂಗಜೇಬನು ಬಿಜಾಪುರದ ಮೇಲೆ ದಾಳಿ ಮಾಡಿ ಸಿಕಂದರ್ ಆದಿಲ್‌ಷಾನನ್ನು ಸೆರೆಹಿಡಿದು ಬಿಜಾಪುರವನ್ನು ಮೊಗಲ್ ಸಾಮ್ರಾಜ್ಯಕ್ಕೆ ಸೇರ್ಪಡೆ ಮಾಡಿಕೊಂಡನು.

## ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿ (ಕ್ರಿ.ಶ. 8 ರಿಂದ 14ನೇ ಶತಮಾನದವರೆಗೆ)

### ಶಂಕರಾಚಾರ್ಯ (ಕ್ರಿ.ಶ. 788-820)

- ಕ್ರಿ.ಶ. 788ರಲ್ಲಿ ಕೇರಳದ ಉತ್ತರ ತಿರುವಾಂಕೂರಿನ ಕಾಲಟಿಯಲ್ಲಿ ಜನನ.
- ಶಿವಗುರು ಮತ್ತು ಆರ್ಯಾಂಭ ತಂದೆ ತಾಯಿಗಳು (ನಂಬೂದರಿ ಶಿವ ಬ್ರಾಹ್ಮಣರು)
- ನರ್ಮದಾ ನದಿ ತೀರದಲ್ಲಿದ್ದ ಗೋವಿಂದ ಭಗವತ್ಪಾದರರು ಇವನ ಗುರುವಾಗಿದ್ದು, ಇವರಿಂದ ಸನ್ಯಾಸ ದೀಕ್ಷೆ ಪಡೆದರು.

shankaracharya

- ಕಾಶಿಯಲ್ಲಿನ ವಿಷ್ಣುಶರ್ಮ ಇವರ ಮೊದಲ ಶಿಷ್ಯ.
- ಭಾರತದ ಉದ್ದಗಲಕ್ಕೂ ಯಾತ್ರೆ - ಕಾಶ್ಮೀರ, ನೇಪಾಳ, ಬದರಿ, ಕಂಚಿ, ದ್ವಾರಕೆ, ಪುರಿಗಳನ್ನು ಸಂದರ್ಶಿಸಿ ಹೋದ ಕಡೆಗಳಲ್ಲೆಲ್ಲಾ ಮೀಮಾಂಸಕಾ, ನಯ್ಯಾಮಿಕ, ಕಪಾಲಿಕ, ಜೈನ, ಬೌದ್ಧ ಪಂಡಿತರೊಡನೆ ವಾದ ವಿವಾದ ನಡೆಸಿ ಅವರನ್ನು ಸೋಲಿಸಿದರು.
- ಮೀಮಾಂಸಕ ಕುಮಾರಿಲರ ಶಿಷ್ಯರಾದ ಮಂಡನ ಮಿಶ್ರ ಮತ್ತು ಅವರ ಪತ್ನಿ ಭಾರತೀದೇವಿಯರನ್ನು ವಾದದಲ್ಲಿ ಸೋಲಿಸಿ ಅವರನ್ನು ತಮ್ಮ ಶಿಷ್ಯರಾಗಿ ಸ್ವೀಕರಿಸಿದರು. ಶೃಂಗೇರಿ ಪೀಠದ ಪ್ರಥಮ ಆಚಾರ್ಯರಾದ ಸುರೇಶ್ವರಾಚಾರ್ಯರೇ ಮಂಡನಮಿಶ್ರರು ಎಂದು ಹೇಳಲಾಗಿದೆ.
- ಇವರು ಸ್ಥಾಪಿಸಿದ ಧರ್ಮ ಅದ್ವೈತ ಧರ್ಮ
- ತಮ್ಮ ಅದ್ವೈತ ಧರ್ಮ ಪ್ರಚಾರಕ್ಕಾಗಿ ಭಾತದ 4 ದಿಕ್ಕುಗಳಲ್ಲಿ ಚತುರ್ಮಠಗಳನ್ನು ಸ್ಥಾಪಿಸಿದರು. ಅವುಗಳೆಂದರೆ -

| ಚತುರ್ಮಠಗಳು | | ಪ್ರಥಮ ಆಚಾರ್ಯರು |
|---|---|---|
| 1. ಪೂರ್ವದ ಪುರಿಯಲ್ಲಿ ಗೋವರ್ಧನ ಪೀಠ | - | ಪದ್ಮಪಾದ |
| 2. ಪಶ್ಚಿಮದ ದ್ವಾರಕದಲ್ಲಿ ಕಾಳಿಮಠ | - | ಹಸ್ತಮಲಕ |
| 3. ಉತ್ತರದ ಬದರಿಯಲ್ಲಿ ಜ್ಯೋತಿರ್ಮಠ | - | ತೋಟಕಾಚಾರ್ಯ |
| 4. ದಕ್ಷಿಣದ ಶೃಂಗೇರಿಯಲ್ಲಿ ಶಾರದಾ ಪೀಠ | - | ಸುರೇಶ್ವರಾಚಾರ್ಯ |

**ಶಂಕರರ ಕೃತಿಗಳು**

- ಬ್ರಹ್ಮಸೂತ್ರ, ಉಪನಿಷತ್ತು ಮತ್ತು ಭಗವದ್ಗೀತೆಗಳ ಮೇಲೆ ಭಾಷ್ಯ.
- ಬಾದರಾಯಣ ಸೂತ್ರ
- ಗೀತಾಭಾಷ್ಯ, ಬ್ರಹ್ಮಸೂತ್ರ ಭಾಷ್ಯ.
- ವಿವೇಕ ಚೂಡಾಮಣಿ, ಶಿವಾನಂದ ಲಹರಿ, ಸೌಂದರ್ಯ ಲಹರಿ, ಆನಂದ ಲಹರಿ
- ವಿವೇಕ ಚೂಡಾಮಣಿ, ಭಜಗೋವಿಂದ ಸ್ತೋತ್ರ, ದಕ್ಷಿಣಾಮೂರ್ತಿ ಸ್ತೋತ್ರ.
- ಇವರ ಅದ್ವೈತ ಧರ್ಮದ ಮೇಲೆ ಬೌದ್ಧ ಧರ್ಮದ ಪ್ರಭಾವವನ್ನು ಕಾಣಬಹುದು. ಹಾಗೆಯೇ ವಜ್ರಯಾನ ಬೌದ್ಧ ಸಂಪ್ರದಾಯವನ್ನು ವಿರೋಧಿಸಿ ವೈಧಿಕ ಧರ್ಮದ ಪುನರುಜ್ಜೀವನಕ್ಕೆ ಶ್ರಮಿಸಿದರು.
- ಬೌದ್ಧರ ಮಾಯಾ ವಾದದ ಕಲ್ಪನೆಯನ್ನು ತಮ್ಮ ತತ್ವ ಪ್ರತಿಪಾದನೆಗೆ ಬಳಸಿಕೊಂಡಿದ್ದರಿಂದ ಇವರನ್ನು ಪ್ರಚ್ಛನ್ನ ಬೌದ್ಧ ಎಂಬುದಾಗಿ ಟೀಕಿಸಲಾಗಿದೆ.

**ಅದ್ವೈತ ಸಿದ್ಧಾಂತ**

- ಜೀವಾತ್ಮ ಮತ್ತು ಪರಮಾತ್ಮ ಎರಡೂ ಬೇರೆಯಲ್ಲ ಅದ್ವೈತಕ್ಕೆ ಅಡಿಗಲ್ಲು ಅಹಂ ಬ್ರಹ್ಮಾಸ್ಮಿ ಇವೆರಡರ ಐಕ್ಯತೇ ಅಂದರೆ ನಾನೇ ಬ್ರಹ್ಮ.

- ಬ್ರಹ್ಮ ಸತ್ಯಂ, ಜಗನ್ಮಿಥ್ಯಾ : ಜೀವೋಬ್ರಹ್ಮೈವ ನಾಪರ : ಇದರಲ್ಲಿ ಅದ್ವೈತದ ಸಾರಾಂಶವೆಲ್ಲಾ ಅಡಗಿದೆ.
- ಜಗವೇ ಸತ್ಯ ಉಳಿದುದೆಲ್ಲಾ ಮಾಯೆ.
- ಏಕದೇವತಾ ಆರಾಧನೆಯ ಕಲ್ಪನೆಗೆ ಇವರು ಒತ್ತು ಕೊಡಲಿಲ್ಲ ಬದಲಾಗಿ ಶಿವ, ವಿಷ್ಣು, ಸೂರ್ಯ, ಗಣೇಶ, ಕುಮಾರ ಶಕ್ತಿ ಈ ಆರು ದೇವತೆಗಳ ಸಾಮಾಜಿಕ ಆರಾಧನೆಗೆ ಅವರು ಮಹತ್ವ ನೀಡಿದರು. ಆದ್ದರಿಂದ ಇವರು "ಷಣ್ಮತ ಸ್ಥಾಪನಾ ಚಾರ್ಯ" ಎಂದು ಪ್ರಸಿದ್ಧರಾಗಿದ್ದಾರೆ.

**ರಾಮಾನುಜಾಚಾರ್ಯ (ಕ್ರಿ.ಶ. 1017-1137)**

**ಚನ್ನೈ ಸಮೀಪದ ಪೆರಂಬೂರಿನಲ್ಲಿ ಕ್ರಿ.ಶ. ೧೦೧೭ರಲ್ಲಿ ಜನನ.**

- ಕೇಶವ ದೀಕ್ಷಿತರು (ಕೇಶವ ಸೋಮಯಾಜಿ) ಮತ್ತು ಕಾಂತಿಮತಿ - ತಂದೆ ತಾಯಿಗಳು
- ಇವರ ಪ್ರಥಮ ಗುರುಗಳು - ಯಾದವ ಪ್ರಕಾಶ.
- ಹೆಂಡತಿ ಹೆಸರು ರಕ್ಷಾಂಬ
- ಯಮುನಾಚಾರ್ಯರ ಶಿಷ್ಯರಾದ ಮಹಾಪೂರ್ಣರಿಂದ ವೈಷ್ಣವ ದೀಕ್ಷೆ ಪಡೆದರು.
- ಮಹಾಪೂರ್ಣರ ಮಾರ್ಗದರ್ಶನದಲ್ಲಿ ಆಳ್ವಾರರ ಕೃತಿಗಳಾದ "ನಾಲಾಯಿರ ಪ್ರಬಂಧ"ಗಳ ಅಧ್ಯಯನ ಮಾಡಿದರು.
- ಯಮುನಾಚಾರ್ಯರ ಸಾವಿನ ನಂತರ ಶ್ರೀರಂಗನ ಪೀಠದ ಮಠಾಧಿಪತಿಗಳಾದರು.
- ಶೈವನಾದ ಚೋಳ ಅರಸ ಕುಲೋತ್ತುಂಗನ ಕಿರುಕುಳದಿಂದ ಬೇಸತ್ತ ಇವರು ಕರ್ನಾಟಕಕ್ಕೆ ಆಗಮಿಸಿದರು.
- ಕ್ರಿ.ಶ. 1098 ರಿಂದ 1122 ರವರೆಗೆ ಕರ್ನಾಟಕದಲ್ಲೇ ಉಳಿದರು.
- ಇವರ ಪ್ರಭಾವಕ್ಕೆ ಒಳಗಾದ ಹೊಯ್ಸಳ ದೊರೆ ವಿಷ್ಣುವರ್ಧನನ್ನು ವೈಷ್ಣವ ಧರ್ಮಕ್ಕೆ ಮತಾಂತರ ಮಾಡಿದರು.
- ಮೇಲುಕೋಟೆಯಲ್ಲಿ ಚೆಲುವನಾರಾಯಣಸ್ವಾಮಿಯನ್ನು ಪ್ರತಿಷ್ಠಾಪಿಸಿದರು.

**ಇವರ ಕೃತಿಗಳು**

- ವೇದಾಂತಸಾರ, ವೇದಾಂತದೀಪಿಕ, ವೇದಾಂತಸಂಗ್ರಹ, ಶ್ರೀಭಾಷ್ಯ, ಗೀತಭಾಷ್ಯ, ನಿತ್ಯಗದ್ಯ, ಶರಣಾಗತಿಗದ್ಯ, ಶ್ರೀವೈಕುಂಠಗದ್ಯ ಮುಂತಾದವು.

**ವಿಶಿಷ್ಟಾದ್ವೈತ**

**ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿನ ಪ್ರಧಾನ ಅಂಶಗಳೆಂದರೆ :**

-ಚಿತ್ ಅಥವಾ ಜೀವಾತ್ಮ

-ಅಚಿತ್ ಅಂದರೆ ಅಚೇತನ ಜಗತ್ತು ಮತ್ತು

- ಈಶ್ವರ ಅಥವಾ ಬ್ರಹ್ಮ

ಇವುಗಳಲ್ಲಿ ಈಶ್ವರ ಮಾತ್ರ ಸತ್ಯ, ಶಾಶ್ವತ, ಉಳಿದೆಲ್ಲವೂ ನಶ್ವರ, ಶಂಕರರ ಮಾಯವಾದವನ್ನು ಖಂಡಿಸಿದ ಇವರು ಬ್ರಹ್ಮ ಅಥವಾ ಈಶ್ವರನು ಸುಗುಣನೇ ಹೊರತು ನಿರ್ಗುಣ, ನಿರಾಕಾರನಲ್ಲ, ಎಂದು ಪ್ರತಿಪಾದಿಸಿದರು.

**ಮಧ್ವಾಚಾರ್ಯರು (ಕ್ರಿ.ಶ. 1238-1317) ಅಥವಾ (ಕ್ರಿ.ಶ. 1199-1276)**

- ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಇವರು ಕ್ರಿ.ಶ. 1199ರಲ್ಲಿ ಉಡುಪಿಯ ಬಳಿಯ ಪಾಜಕದ ಶಿವಳ್ಳಿಯಲ್ಲಿ ಜನಿಸಿದರು.
- ವಾಸುದೇವ ಇವರ ಹುಟ್ಟು ಹೆಸರು.
- ಮದ್ವಗೇಹ ಭಟ್ಟ ಮತ್ತು ವೇದಾವತಿ ಬಾಯಿ ಇವರ ತಂದೆತಾಯಿಗಳು.
- ಅನಂತೇಶ್ವರದ ಅದ್ವೈತ ಮಠಾಧಿಪತಿಗಳಾದ ಅಚ್ಯುತ ಪ್ರೇಕ್ಷಕರು ಇವರ ಗುರುಗಳು.
- ಸನ್ಯಾಸದೀಕ್ಷೆ ಸ್ವೀಕರಿಸಿ ಪೂರ್ಣಪ್ರಜ್ಞರೆಂಬ ಹೆಸರಿನಲ್ಲಿ ವೇದಾಧ್ಯಯನ ಆರಂಭಿಸಿದರು.
- ಅಚ್ಯುತ ಪ್ರೇಕ್ಷಕರಿಂದ ಆನಂದತೀರ್ಥ ಎಂಬ ಹೆಸರನ್ನು ಪಡೆದ ಇವರು ಮುಂದೆ ಮಧ್ವಾಚಾರ್ಯರೆಂದೇ ಪ್ರಸಿದ್ಧಿಯಾದರು.
- ಉಡುಪಿಯಲ್ಲಿ ವೈಷ್ಣವ ಮಠ ಸ್ಥಾಪಿಸಿದರು.
- ಹಾಗೂ ಶ್ರೀಕೃಷ್ಣನ ಎಂಟು ಮಂದಿ ಪತ್ನಿಯರ ನೆನಪಿಗಾಗಿ ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿದರು.

**ಅವುಗಳೆಂದರೆ :** 1. ಸೋದೆಮಠ 2. ಶಿರೂರು ಮಠ 3. ಕನೂರು ಮಠ 4. ಪೇಜಾವರ ಮಠ 5. ಪಲಿಮಾರು ಮಠ 6. ಆದಮಾರು ಮಠ 7. ಶ್ರೀಕೃಷ್ಣ ಮಠ 8. ಪುತ್ತಿಗೆ ಮಠ

**ಅವರ ಕೃತಿಗಳು :**

- ಗೀತಾಭಾಷ್ಯ, ಗೀತಾತಾತ್ಪರ್ಯ ನಿರ್ಣಯ, ಮಹಾಭಾರತ ತಾತ್ಪರ್ಯ ನಿರ್ಣಯ, ಭಾಗವತ ತಾತ್ಪರ್ಯ ನಿರ್ಣಯ, ವಿಷ್ಣು ತತ್ವ ನಿರ್ಣಯ, ಅಣುಭಾಷ್ಯ, ಬ್ರಹ್ಮಸೂತ್ರ ನ್ಯಾಯ ವಿವರಣೆ, ತತ್ವ ವಿವೇಕ, ತಂತ್ರಸಾರ, ಮಾಯಾವಾದಿ ಖಂಡನೆ, ಉಪಾವಾದಿ ಖಂಡನೆ, ಉಪಾವಾದಿ ಖಂಡನೆ, ಅನುವ್ಯಾಖ್ಯಾನ ಇತ್ಯಾದಿ.

**ದ್ವೈತ ಸಿದ್ಧಾಂತ**

- ಹರಿಯೇ ಬ್ರಹ್ಮ, ಜಗತ್ತು ಸತ್ಯ, ಜೀವಾತ್ಮ ಮತ್ತು ಪರಮಾತ್ಮರೊಳಗೆ ನಿಜವಾದ ಪ್ರತ್ಯೇಕತೆಯಿದೆ. ಜೀವಗಣವೆಲ್ಲಾ ಬ್ರಹ್ಮನ ಅನುಚರರು, ಇದರಲ್ಲಿ ಉಚ್ಛ, ನೀಚರೆಂಬ ಭಾವನೆಗಳುಂಟು, ಸ್ವಸ್ವರೂಪ ಸುಖಾನುಭವವೇ ಮುಕ್ತಿ. ಶ್ರೀಹರಿಯೇ ಎಲ್ಲಾ ವೇದಗಳಲ್ಲಿ ವರ್ಣಿಸಿದ ಮುಖ್ಯ ದೇವರು. ಒಟ್ಟಿನಲ್ಲಿ ಹರಿಯೇ ಪರಬ್ರಹ್ಮ ಹಾಗೂ ಜೀವಾತ್ಮ ಮತ್ತು ಪರಮಾತ್ಮ ಪ್ರತ್ಯೇಕವಾದವುಗಳು ಎರಡೂ ಒಂದಲ್ಲಿ ಎಂಬುದು ಈ ತತ್ವದ ತಿರುಳು.

**ಬಸವೇಶ್ವರ (1132-1168)**

- ಸ್ಥಾಪಿಸಿದ ಧರ್ಮ ಶಕ್ತಿ ವಿಶಿಷ್ಟಾದ್ವೈತ ಬಿಜಾಪುರ ಜಿಲ್ಲೆಯ ಬಾಗೇವಾಡಿ ಜನ್ಮಸ್ಥಳ.
- ಮಾದರಸ ಮತ್ತು ಮಾದಲಾಂಬಿಕೆ ತಂದೆ ತಾಯಿಗಳು.
- ಕೃಷ್ಣಾ, ಮಲಪ್ರಭಾ ನದಿಗಳ ಸಂಗಮಕ್ಷೇತ್ರ ಕಪ್ಪಡಿಯ ಕೂಡಲ ಸಂಗಮಕ್ಕೆ ಆಗಮನ ಇಲ್ಲಿನ ಶೈವ ಸಂತರಾದ ಜಾತವೇದ ಮುನಿಗಳಲ್ಲಿ ಶಿಷ್ಯರಾದರು.
- ಕ್ರಿ.ಶ. 1150-51ರಲ್ಲಿ ಬಸವಣ್ಣನವರು ಕೂಡಲ ಸಂಗಮದಿಂದ ಮಂಗಳವಾಡಕ್ಕೆ ಆಗಮಿಸಿದರು.
- ಭಕ್ತಿ ಭಂಡಾರಿ ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿ ನೇಮಕವಾದರು.

- ಬಿಜ್ಜಳನು ಮಂಗಳವಾಡದಿಂದ ಕಲ್ಯಾಣಕ್ಕೆ ರಾಜಧಾನಿಯನ್ನು ಸ್ಥಳಾಂತರ ಮಾಡಿದಾಗ ಕಲ್ಯಾಣ ನಗರವು ಬಸವಣ್ಣನವರ ಭಕ್ತಿಯ ಕಾರ್ಯಕ್ಷೇತ್ರವಾಯಿತು.
- ತನ್ನ ಸೋದರಮಾವ ಬಲದೇವ ಮಂತ್ರಿಯ ಮಗಳು ಗಂಗಲಾಂಬಿಕೆಯನ್ನು ವಿವಾಹವಾದರು.
- ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿ - ವಿದ್ವನ್ಮಣಿಗಳಾದ ಶಿವಶರಣರು ಒಂದೆಡೆ ಸೇರಿ ಸಾಮೂಹಿಕವಾಗಿ ಚರ್ಚಿಸಲು ಅವಕಾಶ ಮಾಡಿಕೊಟ್ಟರು.
- ಅನುಭವಮಂಟಪವನ್ನು ವಚನಮಂಟಪ, ಮಹಾಮನೆ, ಶಿವತತ್ವ ಗೋಷ್ಠಿ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ.
- ಪರಮ ವೈರಾಗ್ಯ ಚಕ್ರವರ್ತಿ ಎಂಬ ಹೆಸರು ಪಡೆದ ಬಳ್ಳಿಘಾವೆಯ ಅಲ್ಲಮಪ್ರಭು ಈ ಅನುಭವಮಂಟಪದ ಅಧ್ಯಕ್ಷರಾದರು.
- ಅನುಭವಮಂಟಪದಲ್ಲಿ ಕಿಡಿಯಾಗಿ ಕಾಣಿಸಿಕೊಂಡ ವೀರಶೈವ ಕ್ರಾಂತಿ ಪರಾಕಾಷ್ಠೆ ಮುಟ್ಟಿತು. ಅಂತರ್ಜಾತಿ ವಿವಾಹಗಳು ಸನಾತನಿಗಳ ಮನಸ್ಸನ್ನು ಕೆಡಿಸಿತು.
- ಸಂಪ್ರದಾಯಸ್ತರ ಚಾಡಿ ಮಾತಿಗೆ ಅರಸ ಬಿಜ್ಜಳ ಕಿವಿಗೊಟ್ಟು, ಪರಿಣಾಮ ಬಸವಣ್ಣ ಮತ್ತು ರಾಜನ ನಡುವೆ ಬಿರುಕು ಉಂಟಾಯಿತು. ಅಸ್ಪೃಶ್ಯ ಹರಳಯ್ಯ ಮತ್ತು ಮಧುವರಸರ ಕಣ್ಣುಗಳನ್ನು ಕೀಳಿಸುವ ಶಿಕ್ಷೆಯನ್ನು ಬಿಜ್ಜಳ ನೀಡಿದಾಗ ಬಸವಣ್ಣನವರು ಮಂತ್ರಿ ಸ್ಥಾನವನ್ನು ತ್ಯಜಿಸಿ ಕಲ್ಯಾಣದಿಂದ ಸಂಗಮಕ್ಕೆ ತೆರಳಿದರು.
- ಕಲ್ಯಾಣದಿಂದ ಬಸವಣ್ಣ ನಿರ್ಗಮಿಸಿದಾಗ ನೊಂದ ಅನುಯಾಯಿಗಳು ಬಿಜ್ಜಳನನ್ನು ಕೊಲೆ ಮಾಡಿದರು. ಈ ವಿಷಯ ತಿಳಿದ ಬಸವಣ್ಣನವರು ದುಃಖಿತರಾದರು ಹಾಗೂ ಅದೇ ನೋವಿನಲ್ಲೇ ಕೂಡಲ ಸಂಗಮದಲ್ಲಿ ಐಕ್ಯರಾದರು.